ಭಾನುವಾರ, ಅಕ್ಟೋಬರ್ 9, 2022 | ₹ 6.00 • www.prajavani.net /prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಪ್ರಚಾರ

ಮುಂಬೈನಲ್ಲಿ ಹಮ್ಮಿಕೊಂಡಿದ್ದ 'ಟ್ರಿಪ್ಲಿಂಗ್' ವೆಬ್ ಸರಣಿಯ ಪ್ರಚಾರ ಕಾರ್ಯಕ್ರಮದಲ್ಲಿ ನಟ ಮಾನ್ವಿ ಗಾಗ್ರೂ ಪಾಲ್ಗೊಂಡಿದ್ದರು



ಭಾನುವಾರ, ಅಕ್ಟೋಬರ್ 9, 2022 | ₹ 6.00 • www.prajavani.net /prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ

ಕಾಡುಗೊಲ್ಲರ ಗುಬ್ಬಗಳ ಅಪೂರ್ವ ಸಂಸ್ಕೃತಿಯೊಳಗೆ ಒಂದು ಯಾನ



ಭಾನುವಾರ, ಅಕ್ಟೋಬರ್ 9, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 279 | ಪುಟ 24
• www.prajavani.net
/prajavani.net @prajavani /prajavani http://bit.ly/Prajavani

ಪ್ರಜಾ ವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಬ್ಬಲಿಯು ನೀನಾದೆ ಮಗನೆ...

ಒಳನೋಟ

ಗೋಪಾಲಕರ ಅಳಲು

ಪ್ರತಿಕ್ರಿಯಿಸಿ: 9606038256
feedback@prajavani.co.in

• ಎಸ್.ರವಿಪ್ರಕಾಶ್


ತುಮಕೂರಿನ ರಸ್ತೆಯಲ್ಲಿ ಗಂಡು ಕರುಗಳು ಮತ್ತು ಎತ್ತುಗಳು

ಬೆಂಗಳೂರು: ಆಗಷ್ಟೇ ಹುಟ್ಟಿದ ಗಂಡು ಕರುಗಳು, ಹಾಲು ನೀಡಲಾರದ ವಯಸ್ಸಾದ ಹಸುಗಳು, ಹೊಲ ಉಳಲು ತಾಕತ್ತಿಲ್ಲದೇ ಬಡವಾದ ಎತ್ತುಗಳ ಸ್ಥಿತಿ ರಾಜ್ಯದಲ್ಲಿ ಈಗ 'ತಬ್ಬಲಿಯು ನೀನಾದೆ ಮಗನೆ'!

ಹೌದು, ಇವು ಹೆಬ್ಬುಲಿಯ ಬಾಯಿಗೆ ಹೋಗದೇ ಇದ್ದರೂ, ಕೆಲವು ಕಾಡು ಪಾಲಾಗುತ್ತಿವೆ. ಇನ್ನು ಕೆಲವು ಹೆದ್ದಾರಿಗಳಲ್ಲಿ ವಾಹನಗಳ ಚಕ್ರಗಳಿಗೆ ಸಿಕ್ಕಿ ಸಾಯುತ್ತಿವೆ. ಇನ್ನೂ ಕೆಲವು ಹೊಟ್ಟೆಗಿಲ್ಲದೆ ನರಳಿ ಇಹಲೋಕ ತ್ಯಜಿಸುತ್ತಿವೆ. ಹೀಗೆ ಸತ್ತ ಜಾನುವಾರುಗಳನ್ನು ಎತ್ತದ ಕಾರಣ ಹಾಗೇ ಕೊಳೆತು ಮಣ್ಣಾಗಿ ಹೋಗುತ್ತಿವೆ.

ರಾಜ್ಯದಲ್ಲಿನ ಜಾನುವಾರುಗಳ ಸ್ಥಿತಿ ಇದು. ಗೋಹತ್ಯೆ ನಿಷೇಧ ಜಾರಿಗೆ ಬಂದ ನಂತರವಂತೂ ಈ ಸ್ಥಿತಿ ಮತ್ತಷ್ಟು ಉಲ್ಬಣಿಸಿದೆ. ಕೃಷಿಯಲ್ಲಿ ಯಂತ್ರಗಳ ಬಳಕೆ ಹೆಚ್ಚಿದ ನಂತರ ಜಾನುವಾರುಗಳ ಬಳಕೆ ನೇಪಥ್ಯಕ್ಕೆ ಸರಿದಿದೆ. ಗಂಡು ಕರುಗಳನ್ನು ಎತ್ತುಗಳನ್ನಾಗಿ ಬಳಕೆ ಮಾಡುವುದೂ ಕಡಿಮೆ ಆಯಿತು. ಸೀಮೆ ಹಸುವಿನ ಗಂಡು ಕರು ಯಾವುದಕ್ಕೂ ಬಳಕೆಗೆ ಬರದ ಕಾರಣ ರೈತರು ಕಸಾಯಿಖಾನೆಗೆ ಒಯ್ಯಲು ಬರುತ್ತಿದ್ದವರಿಗೆ ಮಾರಾಟ ಮಾಡುತ್ತಿದ್ದರು. ಗೋಹತ್ಯೆ ನಿಷೇಧದಿಂದ ಈ ರೀತಿಯ ಕರುಗಳ ಮಾರಾಟಕ್ಕೂ ಕಡಿವಾಣ ಬಿದ್ದಿದೆ.

ದನಗಳ ಕೊಟ್ಟಿಗೆಯಲ್ಲಿ ಗಂಡು ಕರು ಹುಟ್ಟಿದರೆ ಯಾರಿಗೂ ಕಾಣದಂತೆ ರಾತ್ರೋ ರಾತ್ರಿ ಕಾಡಿಗೋ, ಊರಾಚೆಗೋ ಬಿಟ್ಟು ಬಂದು ಉಸ್ಸಪ್ಪಾ... ಎಂದು ನಿಟ್ಟುಸಿರು ಬಿಡುವ ಪ್ರವೃತ್ತಿ ರಾಜ್ಯದಲ್ಲಿ ಹೆಚ್ಚಾಗಿದೆ. ಆ ನತದೃಷ್ಟ ಎಳೆ ಗಂಡು ಕರುವಿನ ಹೊಟ್ಟೆಗೆ ಗುಟುಕು ತಾಯಿ ಹಾಲೂ ಸಿಗದೇ ಕಾಡಿನಲ್ಲೋ, ಹಾದಿ– ಬೀದಿಯಲ್ಲೋ ನರಳಿ ನರಳಿ ಸಾಯುತ್ತದೆ. 'ಗಂಡು ಕರುಗಳನ್ನು ಸಾಕುವಷ್ಟು ಆರ್ಥಿಕ ಸಾಮರ್ಥ್ಯ ನಮಗಿಲ್ಲ' ಎಂದು ಕೈಚೆಲ್ಲುತ್ತಾರೆ. ತಮ್ಮ ಅಸಹಾಯಕತೆ ತೋಡಿಕೊಳ್ಳುತ್ತಾರೆ. 'ಗೋ ಹತ್ಯೆ ನಿಷೇಧ ಕಾಯ್ದೆ ಜಾರಿಗೆ ತಂದ ಸರ್ಕಾರವೇ ನೋಡಿಕೊಳ್ಳಬೇಕು' ಎನ್ನುತ್ತಾರೆ.

> **ಮಲೆನಾಡಿನಲ್ಲಿ ಮೊದಲಿನಷ್ಟು ಅಲ್ಲದಿದ್ದರೂ ಈಗ ಸಣ್ಣ ಪ್ರಮಾಣದಲ್ಲಿ ರಾಸುಗಳ ವಹಿವಾಟು ನಡೆಯುತ್ತಿದೆ. ಇದೆಲ್ಲವೂ ಕೊಳ್ಳುವವರು, ಮಾರುವವರ ಹಾಗೂ ಪ್ರಮಾಣಪತ್ರ ನೀಡುವವರ ನಡುವಿನ ಸಂಪರ್ಕ ಅವಲಂಬಿಸಿದೆ**
> **ರವಿ,** ಕೃಷಿಕ, ಆನವಟ್ಟಿ, ಸೊರಬ ತಾಲ್ಲೂಕು

> **ಅಗತ್ಯವಿಲ್ಲದ, ವಯಸ್ಸಾದ ದನಗಳನ್ನು ಸಾಕುವುದು ಹೊರೆಯಷ್ಟೇ ಅಲ್ಲದೆ, ಸತ್ತಾಗ ಕಳೇಬರವನ್ನು ವಿಲೇವಾರಿ ಮಾಡುವುದೇ ದೊಡ್ಡ ಸವಾಲು**
> **ಸತ್ಯಪ್ಪ ಉಪ್ಪಾರ, ಸೋನು ಗೌಳಿ**
> ಗೌಳಿ ಸಮುದಾಯದ ಮುಖಂಡರು, ಹುಬ್ಬಳ್ಳಿ

4ನೇ ಪುಟ ನೋಡಿ

6 ಜಿಲ್ಲೆಗಳಲ್ಲಿ ಕೇವಲ 126 ಗೋವು ರಕ್ಷಣೆ !

ಗೋಹತ್ಯೆ ನಿಷೇಧದ ಮಸೂದೆಯನ್ನು ಅಂಗೀಕರಿಸುವ ಸಂದರ್ಭದಲ್ಲಿ ಎಲ್ಲ ಜಿಲ್ಲೆಗಳಲ್ಲೂ ತಲಾ ಒಂದು ಗೋಶಾಲೆಯನ್ನು ಸರ್ಕಾರದ ವತಿಯಿಂದಲೇ ಸ್ಥಾಪಿಸುವುದಾಗಿ ಹೇಳಿತ್ತು. 30 ರಿಂದ ಬಳಿಕ 100 ಕ್ಕೆ ಹೆಚ್ಚಿಸುವುದಾಗಿಯೂ ಘೋಷಿಸಿತ್ತು. ಸದ್ಯಕ್ಕೆ ಚಿಕ್ಕಮಗಳೂರು, ವಿಜಯಪುರ, ಹಾಸನ, ಮೈಸೂರು, ತುಮಕೂರು, ಕೋಲಾರ ಜಿಲ್ಲೆಗಳಲ್ಲಿ ಗೋಶಾಲೆಗಳನ್ನು ತೆರೆಯಲಾಗಿದೆ. ಇಲ್ಲಿ 126 ಹಸು/ಎತ್ತುಗಳಿಗೆ ಆಶ್ರಯ ನೀಡಲಾಗಿದೆ. ರಾಜ್ಯವ್ಯಾಪಿ ಗೋಶಾಲೆ ನಿರ್ಮಾಣಕ್ಕಾಗಿ ₹300 ಕೋಟಿ ಒದಗಿಸಿದ್ದು, ಈ ವರೆಗೆ ₹118 ಕೋಟಿ ಖರ್ಚಾಗಿದೆ. ನಾಲ್ಕು ಜಿಲ್ಲೆಗಳಲ್ಲಿ ಗೋಶಾಲೆಗಳ ನಿರ್ಮಾಣ ಕಾಮಗಾರಿ ಮುಕ್ತಾಯ ಹಂತದಲ್ಲಿದೆ. 20 ಜಿಲ್ಲೆಗಳಲ್ಲಿ ಗೋಶಾಲೆ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದೆ.

ಇನ್ನಷ್ಟು ಸುದ್ದಿಗಳು 4

ಟ್ರಕ್‌ಗೆ ಡಿಕ್ಕಿ ಹೊಡೆದು ಹೊತ್ತಿ ಉರಿದ ಬಸ್: 12 ಮಂದಿ ಸಾವು

ನಾಸಿಕ್ (ಪಿಟಿಐ): ಮುಂಬೈಗೆ ಹೊರಟಿದ್ದ ಖಾಸಗಿ ಬಸ್ಸೊಂದು ಸರಕು ಸಾಗಣೆಯ ಟ್ರಕ್‌ಗೆ ಡಿಕ್ಕಿಹೊಡೆದು, ಬಳಿಕ ಹೊತ್ತಿ ಉರಿದಿದೆ. ಇದರಿಂದಾಗಿ ಬಸ್‌ನಲ್ಲಿದ್ದ ಎರಡು ವರ್ಷದ ಮಗು ಸೇರಿ ಒಟ್ಟು 12 ಮಂದಿ ಪ್ರಯಾಣಿಕರು ಮೃತಪಟ್ಟಿದ್ದಾರೆ. 43 ಮಂದಿ ಗಾಯಗೊಂಡಿದ್ದಾರೆ.

'ಪೂರ್ವ ಮಹಾರಾಷ್ಟ್ರದ ಯವತ್‌ಮಾಲ್‌ನಿಂದ ಹೊರಟಿದ್ದ ಸ್ಲೀಪರ್ ಬಸ್, ನಾಸಿಕ್–ಔರಂಗಾಬಾದ್ ಹೆದ್ದಾರಿ ಮೂಲಕ ಮುಂಬೈನತ್ತ ತೆರಳುತ್ತಿತ್ತು. ಅದು ನಂದುರ್ ನಾಕಾದ ಮಿರ್ಚಿ ಹೋಟೆಲ್ ಬಳಿ ಶನಿವಾರ ಬೆಳಿಗ್ಗೆ 5.15ರ ಸುಮಾರಿಗೆ ಟ್ರಕ್‌ಗೆ ಡಿಕ್ಕಿ ಹೊಡೆದಿತ್ತು. ಬಳಿಕ ಬಸ್‌ನಲ್ಲಿ ಬೆಂಕಿ ಕಾಣಿಸಿಕೊಂಡಿತ್ತು. ನೋಡು ನೋಡುತ್ತಲೇ ಅದು ಹೊತ್ತಿ ಉರಿದಿತ್ತು' ಎಂದು ಪೊಲೀಸರು ತಿಳಿಸಿದ್ದಾರೆ.

'ಗಾಯಗೊಂಡವರ ಪೈಕಿ ಬಹುಪಾಲು ಮಂದಿಯನ್ನು ಚಿಕಿತ್ಸೆಗಾಗಿ ಜಿಲ್ಲಾ ಆಸ್ಪತ್ರೆಗೆ ದಾಖಲಿಸಲಾಗಿದೆ. ಕೆಲವರಿಗೆ ನಾಸಿಕ್‌ನ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಬೆಂಕಿ ಹೊತ್ತಿಕೊಳ್ಳುವ ಮುನ್ನ ಬಸ್, ಕಾರ್ಗೊ ವಾಹನವೊಂದಕ್ಕೂ ಡಿಕ್ಕಿ ಹೊಡೆದಿತ್ತು' ಎಂದು ಪೊಲೀಸ್ ಕಮಿಷನರ್ ಜಯಂತ್ ನಾಯಕ್‌ನವಾರೆ ಹೇಳಿದ್ದಾರೆ.

'ಬೆಂಕಿಯು ತೀವ್ರ ಸ್ವರೂಪದ್ದಾಗಿತ್ತು. ಹೀಗಾಗಿ ಬಸ್‌ನಲ್ಲಿದ್ದವರನ್ನು ರಕ್ಷಿಸಲು ಆಗಲಿಲ್ಲ. ಬೆಂಕಿಗೆ ಸಿಲುಕಿ ಪ್ರಯಾಣಿಕರು ಪ್ರಾಣ ಬಿಡುತ್ತಿದ್ದರೂ ಅಸಹಾಯಕರಾದೆವು' ಎಂದು ಪ್ರತ್ಯಕ್ಷದರ್ಶಿಗಳು ಬೇಸರ ವ್ಯಕ್ತಪಡಿಸಿದ್ದಾರೆ.

12ನೇ ಪುಟ ನೋಡಿ

ಚಿನಕುರಳಿ

ಪ್ರಕಾಶ್ ಶೆಟ್ಟಿ



ಖರ್ಗೆ–ತರೂರ್ ನೇರ ಸ್ಪರ್ಧೆ

ನವದೆಹಲಿ (ಪಿಟಿಐ): ರಾಜ್ಯಸಭಾ ಸದಸ್ಯ ಮಲ್ಲಿಕಾರ್ಜುನ ಖರ್ಗೆ ಮತ್ತು ತಿರುವನಂತಪುರ ಸಂಸದ ಶಶಿ ತರೂರ್ ಅವರು ಕಾಂಗ್ರೆಸ್ ಪಕ್ಷದ ಅಧ್ಯಕ್ಷ ಹುದ್ದೆಯ ಚುನಾವಣಾ ಕಣದಲ್ಲಿ ಅಂತಿಮವಾಗಿ ಉಳಿದುಕೊಂಡಿದ್ದಾರೆ ಎಂದು ಕಾಂಗ್ರೆಸ್ ಶನಿವಾರ ಪ್ರಕಟಿಸಿದೆ. ನಾಮಪತ್ರ ಹಿಂದಕ್ಕೆ ಪಡೆಯಲು ಶನಿವಾರ ಕೊನೆಯ ದಿನವಾಗಿತ್ತು.

ನೆಹರೂ–ಗಾಂಧಿ ಕುಟುಂಬದ ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಮತ್ತು ಪ್ರಿಯಾಂಕಾ ಗಾಂಧಿ ಅವರು ಪಕ್ಷದ ಅಧ್ಯಕ್ಷ ಹುದ್ದೆಗೆ ಸ್ಪರ್ಧಿಸದಿರಲು ನಿರ್ಧರಿಸಿದ್ದಾರೆ. 22 ವರ್ಷಗಳ ಬಳಿಕ ಈ ಕುಟುಂಬದ ಹೊರಗಿನವರೊಬ್ಬರು ಅಧ್ಯಕ್ಷ ಸ್ಥಾನಕ್ಕೆ ಏರಲು ವೇದಿಕೆ ಸಿದ್ಧವಾಗಿದೆ.

ಪ್ರತಿ ರಾಜ್ಯದ ರಾಜಧಾನಿಯಲ್ಲಿ ಇದೇ 17ರಂದು ಬೆಳಿಗ್ಗೆ 10ರಿಂದ ಸಂಜೆ 4ರವರೆಗೆ ಮತದಾನ ನಡೆಯಲಿದೆ. ಮತದಾನದ ಬಳಿಕ ಮತಪೆಟ್ಟಿಗೆಗಳನ್ನು ದೆಹಲಿಗೆ ತರಲಾಗುವುದು. ಇದೇ 19ರಂದು ಮತ ಎಣಿಕೆ ನಡೆಸಿ, ಅಂದೇ ಫಲಿತಾಂಶ ಪ್ರಕಟಿಸಲಾಗುವುದು ಎಂದು ಕಾಂಗ್ರೆಸ್‌ನ ಚುನಾವಣಾ ಪ್ರಾಧಿಕಾರದ ಅಧ್ಯಕ್ಷ ಮಧುಸೂದನ ಮಿಸ್ತ್ರಿ ತಿಳಿಸಿದ್ದಾರೆ.

ಕರ್ನಾಟಕದಲ್ಲಿ 'ಭಾರತ್ ಜೋಡೊ' ಯಾತ್ರೆ ನಡೆಯುತ್ತಿರುವ ಸ್ಥಳಕ್ಕೆ ಮತಪೆಟ್ಟಿಗೆ ಕಳುಹಿಸಲಾಗುವುದು. ಅಲ್ಲಿಯೇ ಮತಗಟ್ಟೆಯೊಂದನ್ನು ಸ್ಥಾಪಿಸಲಾಗುವುದು. ಚುನಾವಣೆಗೆ ಸಂಬಂಧಿಸಿ ಮಾರ್ಗಸೂಚಿಯನ್ನು ಪ್ರಕಟಿಸಲಾಗಿದೆ. ಅದನ್ನು ಎಲ್ಲರೂ ಅನುಸರಿಸಬೇಕು ಎಂದು ಅವರು ಹೇಳಿದ್ದಾರೆ.

ಇಬ್ಬರು ಅಭ್ಯರ್ಥಿಗಳಿಗೂ ಸಮಾನ ಅವಕಾಶ ಇದೆ. ಚುನಾವಣೆಯು ಏಕಮುಖವಾಗಿ ನಡೆಯಲಿದೆ ಎಂಬ ಕಳವಳ ಇಲ್ಲ. ಚುನಾವಣಾ ಪ್ರಕ್ರಿಯೆ ಕುರಿತು ಒಂದು ದೂರು ದಾಖಲಾಗಿದೆ ಎಂದು ಅವರು ತಿಳಿಸಿದರು. ಆದರೆ, ಅದು ಯಾರು ಕೊಟ್ಟ ದೂರು ಎಂಬುದನ್ನು ಬಹಿರಂಗಪಡಿಸಲಿಲ್ಲ. ಪಕ್ಷದ ಕೆಲವು ಪದಾಧಿಕಾರಿಗಳು ಖರ್ಗೆ ಅವರ ಪರವಾಗಿ ಬಹಿರಂಗವಾಗಿಯೇ ಪ್ರಚಾರ ನಡೆಸಿದ್ದರ ಬಗ್ಗೆ ತರೂರ್ ಅವರು ದೂರು ಕೊಟ್ಟಿದ್ದಾರೆ ಎಂದು ವರದಿಯಾಗಿದೆ.

ಕಾಂಗ್ರೆಸ್ ಕೇಂದ್ರ ಕಚೇರಿಯು ಸೇರಿದಂತೆ ದೇಶದಾದ್ಯಂತ 67 ಮತಗಟ್ಟೆಗಳನ್ನು ಸ್ಥಾಪಿಸಲಾಗುವುದು ಎಂದು ಮಿಸ್ತ್ರಿ ತಿಳಿಸಿದ್ದಾರೆ.


ಖರ್ಗೆ


ತರೂರ್

ಅಧ್ಯಕ್ಷರಾದವರು 'ರಿಮೋಟ್ ಕಂಟ್ರೋಲ್' ಆಗಿರಲ್ಲ: ರಾಹುಲ್

(ತುಮಕೂರು ವರದಿ): 'ಅಖಿಲ ಭಾರತ ಕಾಂಗ್ರೆಸ್ ಸಮಿತಿ(ಎಐಸಿಸಿ) ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿರುವ ಮಲ್ಲಿಕಾರ್ಜುನ ಖರ್ಗೆ ಮತ್ತು ಶಶಿ ತರೂರ್ ಇಬ್ಬರೂ ಸ್ವತಂತ್ರ ವ್ಯಕ್ತಿತ್ವ ಉಳ್ಳವರು. ಇಬ್ಬರಲ್ಲಿ ಯಾರೇ ಆಯ್ಕೆಯಾದರೂ ಅವರು ಯಾರ 'ರಿಮೋಟ್ ಕಂಟ್ರೋಲ್' ಅಡಿ ಕೆಲಸ ಮಾಡುವುದಿಲ್ಲ. ಈ ರೀತಿ ಹೇಳುವುದೇ ಅವರಿಗೆ ಅಪಮಾನ ಮಾಡಿದಂತೆ' ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಹೇಳಿದ್ದಾರೆ.

'ಭಾರತ್ ಜೋಡೊ' ಯಾತ್ರೆ ಸಂದರ್ಭದಲ್ಲಿ ತುರುವೇಕೆರೆ ತಾಲ್ಲೂಕಿನ ಅರಳೀಕೆರೆಪಾಳ್ಯದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು.

'ಎಐಸಿಸಿ ಅಧ್ಯಕ್ಷ ಸ್ಥಾನಕ್ಕೆ ಯಾರೇ ಆಯ್ಕೆಯಾದರೂ 'ಗಾಂಧಿ ಕುಟುಂಬ'ದ ರಿಮೋಟ್ ಕಂಟ್ರೋಲ್‌ನಲ್ಲಿ ಕೆಲಸ ಮಾಡುತ್ತಾರೆ' ಎಂಬ ವಿರೋಧ ಪಕ್ಷಗಳ ಆರೋಪವನ್ನು ಅವರು ತಳ್ಳಿ ಹಾಕಿದರು.

ಒಳ ಪುಟ


ರಷ್ಯಾ–ಕ್ರಿಮಿಯಾ ಸಂಪರ್ಕ ಸೇತುವೆ ಸ್ಫೋಟ: 3 ಸಾವು 12

'ಶೃಂಗೇರಿಯಲ್ಲಿ ಸಲಾಂ ಆರತಿ ನಿಲ್ಲಿಸಲು ಸಿದ್ಧ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶೃಂಗೇರಿ ಮಠದ ಆಡಳಿತ ಮಂಡಳಿ ಅಥವಾ ಧರ್ಮದರ್ಶಿಗಳಿಂದ ಕೋರಿಕೆ ಬಂದರೆ ಶೃಂಗೇರಿ ಶಾರದಾಂಬೆ ದೇವಸ್ಥಾನದಲ್ಲಿ ನಡೆಯುತ್ತಿರುವ ಟಿಪ್ಪು ಸುಲ್ತಾನ್ ಸಲಾಂ ಆರತಿ ಸ್ಥಗಿತಗೊಳಿಸಲು ರಾಜ್ಯ ಸರ್ಕಾರ ಸಿದ್ಧವಿದೆ ಎಂದು ಕಂದಾಯ ಸಚಿವ ಆರ್. ಅಶೋಕ ಹೇಳಿದರು.

ಸುದ್ದಿಗಾರರ ಜತೆ ಶನಿವಾರ ಮಾತನಾಡಿದ ಅವರು, 'ಶೃಂಗೇರಿಯಲ್ಲಿ ಸಲಾಂ ಆರತಿ ನಿಲ್ಲಿಸುವಂತೆ ಈವರೆಗೆ ಯಾವುದೇ ಮನವಿ ಬಂದಿಲ್ಲ. ಅಂತಹ ಬೇಡಿಕೆ ಬಂದರೆ ಸಲಾಂ ಆರತಿ ನಿಲ್ಲಿಸುತ್ತೇವೆ' ಎಂದು ಹೇಳಿದರು.

'ಟಿಪ್ಪು ಸುಲ್ತಾನ್ ಕನ್ನಡಿಗನಲ್ಲ. ಆತನ ಆಡಳಿತದ ಅವಧಿಯಲ್ಲಿ ರಾಜ್ಯದಲ್ಲಿ ಪರ್ಷಿಯನ್ ಭಾಷೆ ಬಳಸಲಾಗುತ್ತಿತ್ತು. ಆತ ಒಬ್ಬ ಮತಾಂಧನಾಗಿದ್ದ. ಮತಾಂತರ, ಕಗ್ಗೊಲೆಗಳನ್ನು ಮಾಡಿದ್ದ ಎಂಬುದನ್ನು ಇತಿಹಾಸ ಹೇಳುತ್ತದೆ' ಎಂದು ಹೇಳಿದರು.

'ಮೈಸೂರು ಮಹಾರಾಜರು ರಾಜ್ಯದ ಅಭಿವೃದ್ಧಿಗೆ ಸಾಕಷ್ಟು ಕೊಡುಗೆ ನೀಡಿದ್ದಾರೆ. ಈ ಕಾರಣದಿಂದ ಟಿಪ್ಪು ಎಕ್ಸ್‌ಪ್ರೆಸ್ ರೈಲಿನ ಹೆಸರನ್ನು ಬದಲಿಸಿ ಒಡೆಯರ್ ಎಕ್ಸ್‌ಪ್ರೆಸ್ ಎಂದು ನಾಮಕರಣ ಮಾಡಲಾಗಿದೆ. ಈ ನಿರ್ಧಾರ ಸ್ವಾಗತಾರ್ಹ' ಎಂದರು.

'ಸಿದ್ದರಾಮಯ್ಯ ನೂರು ರೈಲು ತರಿಸಿ ಬೇಕಿದ್ದರೆ ಜಿನ್ನಾ, ಘಜ್ನಿ, ಲಾಡೆನ್ ಹೆಸರಿಡಲಿ. ಅವರು ಅಧಿಕಾರಕ್ಕೆ ಬಂದಾಗ ಬೇಕಿದ್ದರೆ ಟಿಪ್ಪು ಹೆಸರಿಟ್ಟುಕೊಳ್ಳಲಿ. ಇತಿಹಾಸ ಗೊತ್ತಿದ್ದರೂ ಟಿಪ್ಪು ಮೇಲೆ ಅವರಿಗೆ ಏಕೆ ಅಷ್ಟು ಪ್ರೀತಿ' ಎಂದು ಪ್ರಶ್ನಿಸಿದರು.

> **ಕಂದಾಯ ಸಚಿವ ಆರ್. ಅಶೋಕ ಅವರು ಏನು ಹೇಳಿದ್ದಾರೆ, ಏನು ಪ್ರಸ್ತಾಪ ಮಾಡಿದ್ದಾರೆ ಎಂದು ಗೊತ್ತಿಲ್ಲ. ಶೃಂಗೇರಿ ಮಠಕ್ಕೂ ಅದಕ್ಕೂ ಏನು ಸಂಬಂಧ?.. ಇದ್ಯಾವುದೂ ಗೊತ್ತಿಲ್ಲ**
> **ವಿ.ಆರ್. ಗೌರಿಶಂಕರ**
> ಆಡಳಿತಾಧಿಕಾರಿ, ಶಾರದಾ ಪೀಠ, ಶೃಂಗೇರಿ

ಸಂಪುಟ ಸಭೆಯಲ್ಲಿ ನಿರ್ಧಾರ ● ನಾಗಮೋಹನದಾಸ್ ವರದಿ ಅಂಗೀಕಾರ

ಒಳ ಮೀಸಲಾತಿಗೂ ಪ್ರಕ್ರಿಯೆ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಶಿಷ್ಟ ಜಾತಿ (ಎಸ್.ಸಿ) ಮತ್ತು ಪರಿಶಿಷ್ಟ ಪಂಗಡಗಳಲ್ಲಿ (ಎಸ್.ಟಿ) ಒಳ ಮೀಸಲಾತಿಯನ್ನೂ ಅನುಷ್ಠಾನಕ್ಕೆ ತರಲು ಶನಿವಾರ ನಡೆದ ಸಂಪುಟ ಸಭೆಯಲ್ಲಿ ನಿರ್ಧರಿಸಲಾಗಿದ್ದು, ಈ ಕುರಿತ ಪ್ರಸ್ತಾವ ಸಿದ್ಧಪಡಿಸುವ ಜವಾಬ್ದಾರಿಯನ್ನು ಕಾನೂನು ಸಚಿವರು ಹಾಗೂ ಕಾನೂನು ಇಲಾಖೆಗೆ ವಹಿಸಲಾಗಿದೆ.

ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್ ಆಯೋಗದ ವರದಿಯ ಶಿಫಾರಸಿನಂತೆ ಎಸ್.ಸಿ ಮತ್ತು ಎಸ್.ಟಿ ಮೀಸಲಾತಿಯನ್ನು ಹೆಚ್ಚಿಸುವ ನಿರ್ಣಯವನ್ನು ಶುಕ್ರವಾರ ನಡೆದ ವಿಧಾನಮಂಡಲದ ಸದನ ನಾಯಕರ ಸಭೆಯಲ್ಲಿ ಕೈಗೊಳ್ಳಲಾಗಿತ್ತು. ಅದಕ್ಕೆ ಪೂರಕವಾಗಿ ಆಯೋಗದ ವರದಿಯನ್ನು ಅಂಗೀಕರಿಸಲು ನಡೆದ ಸಂಪುಟ ಸಭೆಯಲ್ಲಿ ಒಳ ಮೀಸಲು ಅನುಷ್ಠಾನದ ತೀರ್ಮಾನವನ್ನೂ ಕೈಗೊಳ್ಳಲಾಗಿದೆ.

ಸಭೆಯ ಬಳಿಕ ಪತ್ರಿಕಾಗೋಷ್ಠಿಯಲ್ಲಿ ವಿವರ ನೀಡಿದ ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ, 'ನಾಗಮೋಹನದಾಸ್ ಆಯೋಗದ ವರದಿಯನ್ನು ಯಥಾವತ್ತಾಗಿ ಒಪ್ಪಿಕೊಳ್ಳುವ ನಿರ್ಧಾರವನ್ನು ಸಂಪುಟ ಸಭೆ ಕೈಗೊಂಡಿದೆ. ಎ.ಜೆ. ಸದಾಶಿವ ಆಯೋಗದ ವರದಿಯ ಕುರಿತು ತಮ್ಮ ವರದಿಯಲ್ಲಿ ಉಲ್ಲೇಖಿಸಿರುವ ನಾಗಮೋಹನದಾಸ್ ಅವರು, ಪರಿಶಿಷ್ಟರಲ್ಲಿ ಒಳ ಮೀಸಲಾತಿ ಅನುಷ್ಠಾನ ಅಗತ್ಯ ಎಂದು ಶಿಫಾರಸು ಮಾಡಿದ್ದರು. ಆ ಕುರಿತೂ ತೀರ್ಮಾನ ಕೈಗೊಳ್ಳಲು ನಿರ್ಧರಿಸಲಾಯಿತು' ಎಂದರು.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಲೆಮಾರಿಗಳು ಹಾಗೂ ಅರೆ ಅಲೆಮಾರಿಗಳ ಅಭಿವೃದ್ಧಿಗೆ ಪ್ರತ್ಯೇಕ ನಿಗಮ ಸ್ಥಾಪನೆ ಸೇರಿದಂತೆ ನಾಗಮೋಹನದಾಸ್ ಆಯೋಗದ ಎಲ್ಲ ಶಿಫಾರಸುಗಳ ಅನುಷ್ಠಾನಕ್ಕೆ ನಿರ್ಧರಿಸಲಾಗಿದೆ ಎಂದು ಹೇಳಿದರು.

5ನೇ ಪುಟ ನೋಡಿ

ಬಲವಾದ ಆಧಾರಗಳಿವೆ: ಸಿ.ಎಂ

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮೀಸಲಾತಿ ಪ್ರಮಾಣವನ್ನು ಹೆಚ್ಚಿಸಲು ಬಲವಾದ ಆಧಾರಗಳಿವೆ. ಸಂವಿಧಾನದ ಪರಿಚ್ಛೇದ 9ರ ಅಡಿಯಲ್ಲಿ ಈ ನಿರ್ಧಾರ ರಕ್ಷಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

'ವಿಶೇಷ ಪ್ರಕರಣಗಳಲ್ಲಿ ಮೀಸಲಾತಿಯ ಪ್ರಮಾಣ ಶೇ 50ಕ್ಕಿಂತ ಹೆಚ್ಚಾಗಿರಬಹುದು ಎಂದು ಇಂದಿರಾ ಸಾಹ್ನಿ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ಹೇಳಿದೆ. ರಾಜ್ಯದಲ್ಲಿ ಎಸ್.ಸಿ ಮತ್ತು ಎಸ್.ಟಿ ಮೀಸಲಾತಿ ಹೆಚ್ಚಳವು ವಿಶೇಷ ಪ್ರಕರಣ ಎಂಬುದಕ್ಕೆ ನಾಗಮೋಹನದಾಸ್ ಆಯೋಗದ ವರದಿ ಸಮರ್ಥವಾದ ಆಧಾರಗಳನ್ನು ನೀಡುತ್ತದೆ' ಎಂದರು.

5ನೇ ಪುಟ ನೋಡಿ

ಉಚಿತ ಮಾನಸಿಕ ಆರೋಗ್ಯ ಶಿಬಿರ ನಾಳೆ

ಬೆಂಗಳೂರು: ಪ್ರಜ್ಞಾ ಬ್ರೈನ್ ಮೈಂಡ್ ಕ್ಲಿನಿಕ್ ಇದೇ ಸೋಮವಾರ ಬೆಳಿಗ್ಗೆ 11ರಿಂದ ಸಂಜೆ 7 ಗಂಟೆಯವರೆಗೆ ಉಚಿತ ಮಾನಸಿಕ ಆರೋಗ್ಯ ಶಿಬಿರವನ್ನು ಬನಶಂಕರಿ 3ನೇ ಹಂತದಲ್ಲಿರುವ ತನ್ನ ಕೇಂದ್ರದಲ್ಲಿ ಹಮ್ಮಿಕೊಂಡಿದೆ.

ಮಾನಸಿಕ ಸಮಸ್ಯೆಗಳಿಗೆ ತಜ್ಞವೈದ್ಯರೊಂದಿಗೆ ಸಮಾಲೋಚನೆ ನಡೆಸಬಹುದಾಗಿದೆ. ಮದ್ಯ, ಧೂಮಪಾನದಂತಹ ವ್ಯಸನದಿಂದ ಹೊರಬರಲು ಅಗತ್ಯ ಸಲಹೆ ಸೂಚನೆಗಳನ್ನು ನೀಡಲಾಗುತ್ತದೆ. ಅನಗತ್ಯ ಭಯ, ಖಿನ್ನತೆ ಸೇರಿ ವಿವಿಧ ಮಾನಸಿಕ ಸಮಸ್ಯೆಗಳಿಗೆ ಕೌನ್ಸೆಲಿಂಗ್ ಹಾಗೂ ಚಿಕಿತ್ಸೆ ಒದಗಿಸಲಾಗುವುದು. ಮಕ್ಕಳಲ್ಲಿನ ಮಾನಸಿಕ ಸಮಸ್ಯೆಗಳಿಗೆ ಪರಿಹಾರ ನೀಡಲಾಗುವುದು ಎಂದು ಕ್ಲಿನಿಕ್ ತಿಳಿಸಿದೆ.

ಆಸಕ್ತರು ಪ್ರಜ್ಞಾ ಬ್ರೈನ್ ಮೈಂಡ್ ಕ್ಲಿನಿಕ್, 281, 100 ಅಡಿ ರಿಂಗ್ ರಸ್ತೆ, 7ನೇ ಬ್ಲಾಕ್, ಬನಶಂಕರಿ 3ನೇ ಹಂತ ಈ ವಿಳಾಸಕ್ಕೆ ಭೇಟಿ ನೀಡಬಹುದು ಎಂದು ಪ್ರಕಟಣೆ ತಿಳಿಸಿದೆ.

ಸಂಪರ್ಕಕ್ಕೆ: 080 26692888, 26693788

ಚಿತ್ರೀಕರಣದಿಂದ ಧಕ್ಕೆ

ಮೇಲುಕೋಟೆ (ಮಂಡ್ಯ): ನಾಗಚೈತನ್ಯ ನಟನೆಯ 'ತ್ರಿ ನಾಟ್ ಟು' ತೆಲುಗು ಸಿನಿಮಾ ಚಿತ್ರೀಕರಣಕ್ಕಾಗಿ ಇಲ್ಲಿನ ಸುಂದರ ಸ್ಮಾರಕ ರಾಯಗೋಪುರವನ್ನು ಬಾರ್ ಆಗಿ ರೂಪಿಸಿರುವುದಕ್ಕೆ ನಾಗರಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಬೇಡಿಕೆ: 19ಕ್ಕೆ ಸಾರಿಗೆ ನೌಕರರಿಂದ ಧರಣಿ ಸತ್ಯಾಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವೇತನ ಪರಿಷ್ಕರಣೆ ಸೇರಿ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಇದೇ 19ರಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ನಿವಾಸದ ಎದುರು ಧರಣಿ ಸತ್ಯಾಗ್ರಹ ನಡೆಸಲಾಗುವುದು' ಎಂದು ಕರ್ನಾಟಕ ರಸ್ತೆ ಸಾರಿಗೆ ಮಜ್ದೂರ್ ಸಂಘ ಒಕ್ಕೂಟ ತಿಳಿಸಿದೆ.

ಶನಿವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಒಕ್ಕೂಟದ ಅಧ್ಯಕ್ಷ ಎಚ್. ಎಲ್. ವಿಶ್ವನಾಥ್, 'ಸಾರಿಗೆ ಇಲಾಖೆಯು 2016ರ ಬಳಿಕ ಕಾರ್ಮಿಕರ ವೇತನ ಹಾಗೂ ಭತ್ಯೆಯನ್ನು ಹೆಚ್ಚಳ ಮಾಡಿಲ್ಲ. ವೇತನ ಪರಿಷ್ಕರಣೆಗೆ ಸಂಬಂಧಿಸಿದಂತೆ ಹಲವು ಬಾರಿ ಮನವಿ ಸಲ್ಲಿಸಲಾಗಿತ್ತು' ಎಂದರು.

'ಆದರೆ, ಈವರೆಗೂ ಸರ್ಕಾರ ನಮ್ಮ ಬೇಡಿಕೆಗಳಿಗೆ ಸ್ಪಂದಿಸಿಲ್ಲ. ಆದ್ದರಿಂದ ಧರಣಿ ಸತ್ಯಾಗ್ರಹ ನಡೆಸಲು ನಿರ್ಧರಿಸಿದ್ದೇವೆ' ಎಂದು ಹೇಳಿದರು.

'ವೇತನವನ್ನು ಬಿಟ್ಟು ಬೇರೆ ಯಾವುದೇ ಭತ್ಯೆ ನೀಡಿಲ್ಲ. ಕೋವಿಡ್ ಸಂದರ್ಭದಲ್ಲಿ ಜೀವದ ಹಂಗು ತೊರೆದು ಸಾರ್ವಜನಿಕರಿಗೆ ಸೇವೆ ನೀಡಲಾಗಿದೆ. ಸರ್ಕಾರ ಈಗಲಾದರೂ ನಮ್ಮ ಬೇಡಿಕೆಗಳನ್ನು ಈಡೇರಿಸಬೇಕು. ಮುಷ್ಕರದ ವೇಳೆ ಅಮಾನತು ಮಾಡಲಾಗಿರುವ ಕಾರ್ಮಿಕರನ್ನು ಮರು ನೇಮಕ ಮಾಡಬೇಕು' ಎಂದು ಒತ್ತಾಯಿಸಿದರು.

ಆಸ್ಪತ್ರೆಯ ಕುರಿತು ಕಾನೂನು ಸೇವಾ ಪ್ರಾಧಿಕಾರಕ್ಕೆ ದೂರು • ಹೈಕೋರ್ಟ್ ನ್ಯಾಯಮೂರ್ತಿ ಬಿ.ವೀರಪ್ಪ ದಿಢೀರ್ ಭೇಟಿ

ಬೌರಿಂಗ್ ಆಸ್ಪತ್ರೆಯಲ್ಲಿ ಅವ್ಯವಸ್ಥೆಯ ದರ್ಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಬೌರಿಂಗ್ ಆಸ್ಪತ್ರೆಗೆ ಹೈಕೋರ್ಟ್ ನ್ಯಾಯಮೂರ್ತಿ ಬಿ.ವೀರಪ್ಪ ಅವರು ಶನಿವಾರ ದಿಢೀರ್ ಭೇಟಿ ನೀಡಿ, ಪರಿಶೀಲಿಸಿದರು.

ನ್ಯಾಯಮೂರ್ತಿಗೆ ಆಸ್ಪತ್ರೆ ಅವ್ಯವಸ್ಥೆಯ ದರ್ಶನವಾಯಿತು. ಅವ್ಯವಸ್ಥೆ ಕಂಡು ಸಿಬ್ಬಂದಿಯನ್ನು ತರಾಟೆಗೆ ತೆಗೆದುಕೊಂಡರು.

'ಚರ್ಮರೋಗ ವಿಭಾಗ'ಕ್ಕೆ ಭೇಟಿ ನೀಡಿದ ಅವರು, ವಿಭಾಗದ ಬಹುತೇಕ ವೈದ್ಯರು ರಜೆಯಲ್ಲಿರುವುದನ್ನು ಕಂಡು ಗರಂ ಆದರು.

ಆರು ಮಂದಿ ವೈದ್ಯರ ಪೈಕಿ ಐವರು ರಜೆಯಲ್ಲಿದ್ದಾರೆ. ಒಬ್ಬರು ಮಾತ್ರ ಕರ್ತವ್ಯ ನಿರ್ವಹಿಸುತ್ತಿದ್ದಾರೆ ಎಂಬ ಮಾಹಿತಿ ತಿಳಿದು, 'ಹೆಚ್ಚು ರೋಗಿಗಳು ಬಂದರೆ ಚಿಕಿತ್ಸೆ ನೀಡುವುದಾದರೂ ಹೇಗೆ' ಎಂದು ಪ್ರಶ್ನಿಸಿದರು.

'ಹಾಸಿಗೆಗಳೂ ಶುಚಿಯಾಗಿಲ್ಲ. ಸ್ವಚ್ಛತೆ ಮಾಡಿ ಎಷ್ಟು ದಿನ ಕಳೆಯಿತು?' ಎಂದು ತರಾಟೆಗೆ ತೆಗೆದುಕೊಂಡರು.

ಔಷಧ ಕೇಂದ್ರಕ್ಕೆ ಭೇಟಿ ನೀಡಿದ ನ್ಯಾಯಮೂರ್ತಿ, ಅಲ್ಲಿಯೂ ಅವ್ಯವಸ್ಥೆ ಕಂಡು ಆಕ್ರೋಶ ಹೊರಹಾಕಿದರು. ಸ್ಥಳದಲ್ಲಿದ್ದ ದೂಳು ಹಾಗೂ ಕಸ ಕಂಡು 'ನಿಮಗೆ ಆಗದಿದ್ದರೆ ನನಗೆ ಪೊರಕೆ ಕೊಡಿ. ನಾನೇ ಶುಚಿ ಮಾಡುತ್ತೇನೆ' ಎಂದು ಎಚ್ಚರಿಸಿದರು. ಶಸ್ತ್ರಚಿಕಿತ್ಸಾ ಕೊಠಡಿ ಹಾಗೂ ರಕ್ತನಿಧಿ ಘಟಕ ಸಹ ಪರಿಶೀಲಿಸಿದರು.

'ಸರ್ಕಾರವು ಪ್ರತಿ ವರ್ಷ ಆಸ್ಪತ್ರೆಗಳ ಸುಧಾರಣೆ ಅನುದಾನ ನೀಡುತ್ತಿದೆ. ಸಿಬ್ಬಂದಿಯನ್ನು ನೇಮಿಸುತ್ತಿದೆ. ಆದರೆ, ಆಸ್ಪತ್ರೆ ವ್ಯವಸ್ಥೆಯಲ್ಲಿ ಸುಧಾರಣೆ ಕಾಣಿಸುತ್ತಿಲ್ಲ. ಸರ್ಕಾರಿ ಆಸ್ಪತ್ರೆಗಳಲ್ಲಿ ಸ್ವಚ್ಛತೆ ಹಾಗೂ ಉತ್ತಮ ಚಿಕಿತ್ಸೆ ಲಭಿಸಿದರೆ ಮಾತ್ರ ರೋಗಿಗಳು ಬರುತ್ತಾರೆ. ಬಡವರಿಗೂ ಅನುಕೂಲ ಆಗಲಿದೆ. ಇಲ್ಲದಿದ್ದರೆ ಖಾಸಗಿ ಆಸ್ಪತ್ರೆಗೆ ತೆರಳುತ್ತಾರೆ' ಎಂದು ಸಿಬ್ಬಂದಿಗೆ ಎಚ್ಚರಿಕೆ ನೀಡಿದರು.

ಶಸ್ತ್ರಚಿಕಿತ್ಸಾ ವಿಭಾಗದ ವೈದ್ಯ ಕೆಂಪರಾಜು ಅವರಿಂದ ಕರ್ತವ್ಯನಿರತ ವೈದ್ಯರು, ಆಸ್ಪತ್ರೆಯಲ್ಲಿ ಸಿಬ್ಬಂದಿಯ ಮಾಹಿತಿ ಪಡೆದುಕೊಂಡರು.

'ರಾಜ್ಯ ಕಾನೂನು ಸೇವಾ ಪ್ರಾಧಿಕಾರಕ್ಕೆ ಆಸ್ಪತ್ರೆಯ ಅವ್ಯವಸ್ಥೆಯ ಬಗ್ಗೆ ದೂರುಗಳು ಬಂದಿದ್ದು, ಪರಿಶೀಲನೆ ನಡೆಸಿದ್ದೇನೆ. ಸ್ವಚ್ಛತೆ ಕೊರತೆ ಇದ್ದು, ಸರ್ಕಾರಕ್ಕೆ ವರದಿ ನೀಡಲಾಗುವುದು' ಎಂದು ವೀರಪ್ಪ ತಿಳಿಸಿದರು.

'ಇದು 750 ಹಾಸಿಗೆಯ ಆಸ್ಪತ್ರೆಯಾಗಿದ್ದು, ಹಲವು ವೈದ್ಯರು ರಜೆಯಲ್ಲಿ ಇದ್ದಾರೆ ಎಂದು ಸಿಬ್ಬಂದಿ ತಿಳಿಸಿದ್ದಾರೆ. ರಾಜ್ಯ ಸರ್ಕಾರವು ಹೆಚ್ಚು ಕಾಳಜಿ ವಹಿಸಬೇಕು. ವೈದ್ಯರು ಹಾಗೂ ಸಿಬ್ಬಂದಿಯ ಮಾಹಿತಿ ಕೇಳಿದ್ದೇನೆ. ಔಷಧವನ್ನು ಬಳಕೆ ಮಾಡಬೇಕು ಎಂದು ಸೂಚಿಸಿದ್ದೇನೆ. ಆಸ್ಪತ್ರೆ ಮುಖ್ಯಸ್ಥರು ಯಾರು ಎಂಬುದೇ ತಿಳಿದಿಲ್ಲ. ಮುಖ್ಯಸ್ಥರು ಬೆಳಿಗ್ಗೆಯಿಂದ ಸಂಜೆಯ ತನಕ ಕರ್ತವ್ಯ ನಿರ್ವಹಣೆ ಮಾಡಬೇಕು' ಎಂದು ತಾಕೀತು ಮಾಡಿದರು.



ನಗರದ ಬೌರಿಂಗ್ ಆಸ್ಪತ್ರೆಯಲ್ಲಿ ರೋಗಿಯ ಆರೋಗ್ಯವನ್ನು ಹೈಕೋರ್ಟ್ ನ್ಯಾಯಮೂರ್ತಿ ಬಿ. ವೀರಪ್ಪ ಅವರು ವಿಚಾರಿಸಿದರು — ಪ್ರಜಾವಾಣಿ ಚಿತ್ರ

'ವ್ಯತ್ಯಾಸ ಸರಿಪಡಿಸುತ್ತೇವೆ'

'ಬೌರಿಂಗ್ ಆಸ್ಪತ್ರೆಯಲ್ಲಿ ಸಣ್ಣಪುಟ್ಟ ವ್ಯತ್ಯಾಸಗಳಿವೆ. ಅದನ್ನು ಸರಿ ಪಡಿಸಿಕೊಳ್ಳುತ್ತೇವೆ' ಎಂದು ಆರೋಗ್ಯ ಸಚಿವ ಡಾ.ಕೆ.ಸುಧಾಕರ್ ತಿಳಿಸಿದರು.

ನ್ಯಾಯಾಧೀಶರ ಆಸ್ಪತ್ರೆ ಭೇಟಿ ಕುರಿತು ಪ್ರತಿಕ್ರಿಯಿಸಿದ ಅವರು, 'ಬೌರಿಂಗ್ ಆಸ್ಪತ್ರೆಯಲ್ಲಿ ಗುಣಮಟ್ಟದ ಚಿಕಿತ್ಸೆ ಲಭಿಸುತ್ತಿದೆ. 500 ಹಾಸಿಗೆಗಳ ಹೊಸ ಕಟ್ಟಡ ನಿರ್ಮಾಣ ಮಾಡುತ್ತಿದ್ದೇವೆ' ಎಂದು ತಿಳಿಸಿದ್ದಾರೆ.

ಕೆ.ಸಿ. ಜನರಲ್ ಆಸ್ಪತ್ರೆ: ಪ್ರಾರಂಭ ಆಗದ ಮಕ್ಕಳ ಘಟಕ

ಬೆಂಗಳೂರು: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಎರಡು ದಿನಗಳ ಹಿಂದೆ ಉದ್ಘಾಟಿಸಿದ್ದ ಕೆ. ಸಿ. ಜನರಲ್ ಆಸ್ಪತ್ರೆಯಲ್ಲಿನ ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆಯ ತೀವ್ರ ನಿಗಾ ಘಟಕ (ಐಸಿಯು) ಪೂರ್ಣ ಪ್ರಮಾಣದಲ್ಲಿ ಸಜ್ಜುಗೊಂಡಿಲ್ಲ. ಇದರಿಂದಾಗಿ ಈ ಘಟಕದಲ್ಲಿ ವೈದ್ಯಕೀಯ ಸೇವೆಗಳು ಪ್ರಾರಂಭವಾಗಿಲ್ಲ.

ಕಳೆದ ಗುರುವಾರ (ಅ.6) ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ 50 ಹಾಸಿಗೆಗಳ ಈ ಘಟಕವನ್ನು ಉದ್ಘಾಟಿಸಲಾಗಿತ್ತು. ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ 50 ಹಾಸಿಗೆಗಳ ಉಪಕೇಂದ್ರಕ್ಕೂ ಚಾಲನೆ ನೀಡಲಾಗಿತ್ತು. ಐಸಿಯು ಘಟಕದಲ್ಲಿ ವೈದ್ಯಕೀಯ ಉಪಕರಣಗಳ ಅಳವಡಿಕೆ ಕಾರ್ಯ ಪ್ರಗತಿಯಲ್ಲಿದೆ. ಅಗತ್ಯ ವೈದ್ಯರು ಹಾಗೂ ವೈದ್ಯಕೀಯ ಸಿಬ್ಬಂದಿಯ ನೇಮಕಾತಿ ಪ್ರಕ್ರಿಯೆ ನಡೆದಿಲ್ಲ. ಇದರಿಂದಾಗಿ ಈ ಘಟಕದಲ್ಲಿ ಸೇವೆ ಪ್ರಾರಂಭಿಸಲು ಇನ್ನಷ್ಟು ದಿನಗಳು ಬೇಕಾಗಲಿವೆ.

ಜಯದೇವ ಘಟಕವನ್ನು ₹ 15 ಕೋಟಿ ಹಾಗೂ ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆಯ ಘಟಕವನ್ನು ₹3.53 ಕೋಟಿ ವೆಚ್ಚದಲ್ಲಿ ಸ್ಥಾಪಿಸಲಾಗಿದೆ. ಈ ವೆಚ್ಚವನ್ನು ಸಂಸ್ಥೆಗಳ ಆಂತರಿಕ ಸಂಪನ್ಮೂಲಗಳಿಂದಲೇ ಭರಿಸಲಾಗಿದೆ.

'ಕೇಂದ್ರ ಸಂಸ್ಥೆಯಿಂದ ವೈದ್ಯಕೀಯ ಉಪಕರಣಗಳನ್ನು ಸ್ಥಳಾಂತರ ಮಾಡಲಾಗಿದೆ. 15 ವೈದ್ಯರು, 45 ಶುಶ್ರೂಷಕರ ನೇಮಕಾತಿಗೆ ಸರ್ಕಾರದಿಂದ ಅನುಮೋದನೆ ದೊರೆತಿದೆ. ಈ ತಿಂಗಳ ಅಂತ್ಯದ ಒಳಗಾಗಿ ವೈದ್ಯಕೀಯ ಸೇವೆಗಳನ್ನು ಪ್ರಾರಂಭಿಸಲಾಗುವುದು' ಎಂದು ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆಯ ನಿರ್ದೇಶಕ ಡಾ. ಸಂಜಯ್ ಕೆ.ಎಸ್. ತಿಳಿಸಿದರು.

ಉಪಕೇಂದ್ರದಲ್ಲಿ ಸೇವೆ

ಜಯದೇವ ಘಟಕವು ಶುಕ್ರವಾರದಿಂದಲೇ ಸೇವೆ ಪ್ರಾರಂಭಿಸಿದೆ. ಈ ಉಪಕೇಂದ್ರದಲ್ಲಿ ಎಕೋ, ಟಿಎಂಟಿ, ಕಾರ್ಡಿಯಾಕ್ ಕ್ಯಾಥ್ ಲ್ಯಾಬ್, ಆ್ಯಂಜಿಯೋಗ್ರಾಮ್, ಆ್ಯಂಜಿಯೋಪ್ಲಾಸ್ಟಿ, ಸ್ಟಂಟ್ ಮತ್ತು ಪೇಸ್ ಮೇಕರ್ ಅಳವಡಿಕೆ ಸೇರಿ ಹೃದಯ ಸಮಸ್ಯೆಗೆ ತುರ್ತು ಚಿಕಿತ್ಸೆ ದೊರೆಯಲಿದೆ. ಸಂಜೆ 5 ಗಂಟೆಯವರೆಗೂ ಹೊರರೋಗಿಗಳಿಗೆ ಚಿಕಿತ್ಸೆ ಒದಗಿಸುತ್ತಿದೆ.

'ಸಂಘರ್ಷ ಬಯಸುವ ಧರ್ಮ ಧರ್ಮವೇ ಅಲ್ಲ'

ಬೆಂಗಳೂರು: 'ಮನುಷ್ಯರ ಮಧ್ಯೆ ಸಂಘರ್ಷಕ್ಕೆ ಎಡೆ ಮಾಡಿಕೊಡುವ ಧರ್ಮ ಧರ್ಮವೇ ಅಲ್ಲ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅಭಿಪ್ರಾಯಪಟ್ಟರು.

ರಾಷ್ಟ್ರೀಯ ಬಸವ ಪ್ರತಿಷ್ಠಾನ ಆಯೋಜಿಸಿದ್ದ ಸರ್ವಧರ್ಮ ಸಂಸತ್ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಧರ್ಮಗಳು ಇರುವುದು ಮಾನವನ ಉದ್ಧಾರಕ್ಕಾಗಿಯೇ ಹೊರತು ಸಂಘರ್ಷಕ್ಕಾಗಿ ಅಲ್ಲ. ಇದನ್ನು ಅರ್ಥ ಮಾಡಿಕೊಂಡು ಮುನ್ನಡೆದರೆ ಸಮಾಜದಲ್ಲಿ ಶಾಂತಿ ನೆಲೆಸಲಿದೆ' ಎಂದರು.

'ಸಮಾಜದ ಎಲ್ಲಾ ಸಮಸ್ಯೆ ಮತ್ತು ಸವಾಲುಗಳಿಗೆ ಸುಲಭವಾದ ಪರಿಹಾರವನ್ನು ಬಸವಣ್ಣ ಕೊಟ್ಟಿದ್ದಾರೆ. ಆದರೆ, ಅದನ್ನು ಅರ್ಥ ಮಾಡಿಕೊಳ್ಳದೆ ನಾವು ದಾರಿ ತಪ್ಪುತ್ತಿದ್ದೇವೆ. ಧರ್ಮದ ಮೂಲ ಸಾರವನ್ನು ಅರ್ಥ ಮಾಡಿಕೊಳ್ಳಬೇಕಿದೆ' ಎಂದು ಹೇಳಿದರು.


ಮನುಷ್ಯರ ಮಧ್ಯದ ಸಂಬಂಧಗಳು ಕೆಡುತ್ತಿರುವ ಇಂತಹ ಸಂದರ್ಭದಲ್ಲಿ ಧರ್ಮ ಬೋಧನೆ ಮೂಲಕ ಮಾನವೀಯತೆ ಬೆಳೆಸುವ ಕೆಲಸಗಳು ಆಗಬೇಕಿದೆ. ಯಾವ ಸಮಾಜದಲ್ಲಿ ಕಾಯಕ ಶ್ರೇಷ್ಠ ಸ್ಥಾನ ಪಡೆಯುತ್ತದೆಯೋ ಅಂತಹ ಸಮಾಜದಲ್ಲಿ ಬಡತನ ಮತ್ತು ಅಜ್ಞಾನಕ್ಕೆ ಅವಕಾಶ ಇಲ್ಲ ಎಂದರು.

ಸಮ್ಮೇಳನ ಉದ್ಘಾಟಿಸಿದ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್.ಎನ್.ನಾಗಮೋಹನದಾಸ್, 'ಸಂವಿಧಾನವು ಕಾನೂನಿನ ಶಕ್ತಿಯನ್ನು ನೀಡಿದ್ದರೆ, ಧರ್ಮವು ನೈತಿಕತೆಯನ್ನು ಕಲಿಸುತ್ತದೆ. ಇತ್ತೀಚಿನ ದಿನಗಳಲ್ಲಿ ಧರ್ಮದಲ್ಲಿ ರಾಜಕಾರಣ ಬೆರೆತು ಕೋಮುವಾದಕ್ಕೆ ತಿರುಗಿದ್ದು, ಇದು ಸಾಕಷ್ಟು ಸಮಸ್ಯೆಗಳನ್ನು ತಂದೊಡ್ಡಿದೆ' ಎಂದು ಬೇಸರ ವ್ಯಕ್ತಪಡಿಸಿದರು.

ಸಾಣೇಹಳ್ಳಿ ತರಳಬಾಳು ಶಾಖಾ ಮಠದ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ, ಎಲ್ಲಾ ಧರ್ಮಗಳನ್ನೂ ಗೌರವಿಸುವುದು ತಮ್ಮನ್ನು ತಾವು ಗೌರವಿಸಿಕೊಂಡಂತೆ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು' ಎಂದರು.

ಗೌರಿಗದ್ದೆ ದತ್ತಾಶ್ರಮದ ವಿನಯ ಗುರೂಜಿ ಮಾತನಾಡಿ, 'ತಾಯಿಯನ್ನು ವೃದ್ಧಾಶ್ರಮದಲ್ಲಿ ಇರಿಸಿ, ನಾಯಿ ಸಾಕುವುದು ಧರ್ಮವಾಗುವುದಿಲ್ಲ. ತಾಯಿ–ತಂದೆಯೇ ದೇವರು ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು' ಎಂದರು.

ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ವಿ.ಗೋಪಾಲಗೌಡ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದರು. ನಾಗಮೋಹನದಾಸ್ ಅವರ 'ಭಾರತದ ಸಂವಿಧಾನ ಮತ್ತು ವಚನಗಳು' ಕೃತಿಯನ್ನು ಇದೇ ವೇಳೆ ಬಿಡುಗಡೆ ಮಾಡಲಾಯಿತು.



ಸರ್ವಧರ್ಮ ಸಮ್ಮೇಳನದಲ್ಲಿ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಮಾತನಾಡಿದರು. ನಿವೃತ್ತ ನ್ಯಾಯಮೂರ್ತಿಗಳಾದ ಎಚ್.ಎನ್.ನಾಗಮೋಹನದಾಸ್, ವಿ.ಗೋಪಾಲಗೌಡ, ಆಚಾರ್ಯ ಅರ್ಹತ್ ಜೀ ಕುಮಾರ್ ಮುನಿಗಳು ಇದ್ದರು

ಥಲಸ್ಸೇಮಿಯಾ ರೋಗಿಯ ಕನಸು ನನಸು

ದಿನದ ಮಟ್ಟಿಗೆ ವೈದ್ಯೆಯಾದ ಬಾಲಕಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಥಲಸ್ಸೇಮಿಯಾ ರೋಗದಿಂದ ಬಳಲುತ್ತಿರುವ 9 ವರ್ಷದ ಬಾಲಕಿ ಒಂದು ದಿನದ ಮಟ್ಟಿಗೆ ವೈದ್ಯೆಯಾಗಿ ಕಾರ್ಯನಿರ್ವಹಿಸಿ, ರೋಗಿಗಳ ಯೋಗಕ್ಷೇಮ ವಿಚಾರಿಸಿದ್ದಾಳೆ.

ವೈದ್ಯೆಯಾಗಬೇಕೆಂಬ ಬಾಲಕಿಯ ಕನಸನ್ನು ನಾರಾಯಣ ಹೆಲ್ತ್ ಸಿಟಿ ಆಸ್ಪತ್ರೆಯ ವೈದ್ಯರು ಸಾಕಾರ ಮಾಡಿದ್ದಾರೆ. ಕೇರಳದ ಇರುಟ್ಟಿ ತಾಲ್ಲೂಕಿನ ಫಾತಿಮಾ ಎ.ಕೆ. ಥಲಸ್ಸೇಮಿಯಾ ರೋಗದಿಂದ ಬಳಲುತ್ತಿದ್ದ ಬಾಲಕಿ. ಅಸ್ಥಿಮಜ್ಜೆ ಕಸಿಗೆ (ಬೋನ್ ಮ್ಯಾರೊ) ಒಳಗಾಗಿದ್ದ ಫಾತಿಮಾ, ತಪಾಸಣೆ ಸಂಬಂಧ ಆಸ್ಪತ್ರೆಗೆ ಭೇಟಿ ನೀಡಿದ್ದಳು. ಈ ವೇಳೆ ದೊಡ್ಡವಳಾದ ಮೇಲೆ ವೈದ್ಯೆಯಾಗುವ ಕನಸನ್ನು ವೈದ್ಯರ ಬಳಿ ವ್ಯಕ್ತಪಡಿಸಿದ್ದಳು.

ಬಾಲಕಿಯ ಕನಸನ್ನು ಸಾಕಾರಗೊಳಿಸಲು ನಿರ್ಧರಿಸಿದ ಆಸ್ಪತ್ರೆಯ ಆಡಳಿತ ಮಂಡಳಿ, ಪೀಡಿಯಾಟ್ರಿಕ್ ಹೆಮಟಾಲಜಿ, ಆಂಕಾಲಜಿ ಮತ್ತು ಬೋನ್ ಮ್ಯಾರೊ ಟ್ರಾನ್ಸ್‌ಪ್ಲಾಂಟೇಶನ್ ವಿಭಾಗದಲ್ಲಿ ವೈದ್ಯೆಯಾಗಿ ಕಾರ್ಯನಿರ್ವಹಿಸುವ ಅವಕಾಶ ನೀಡಿತು. ಬಿಳಿ ಕೋಟ್ ಧರಿಸಿದ ಬಾಲಕಿ, ಸ್ಟೆತೋಸ್ಕೋಪ್ ಹಿಡಿದು ಸಲಹಾ ವೈದ್ಯರ ತಂಡದ ಜತೆಗೆ ರೋಗಿಗಳನ್ನು ವಿಚಾರಿಸಿದಳು. ಈ ವೇಳೆ ವೈದ್ಯರು ಸ್ಟೆತೋಸ್ಕೋಪ್ ನೆರವಿನಿಂದ ರೋಗಿಗಳನ್ನು ತಪಾಸಣೆ ಮಾಡುವ ವಿಧಾನವನ್ನು ತಿಳಿಸಿದರು.

ರೋಗಿಗಳೊಂದಿಗೆ ಸಮಾಲೋಚನೆ: ಆಸ್ಪತ್ರೆಯ ಹೊರರೋಗಿ ವಿಭಾಗದಲ್ಲಿ ವೈದ್ಯರಿಗೆ ನೆರವಾದ ಬಾಲಕಿ, ಒಳರೋಗಿ ವಿಭಾಗದಲ್ಲಿ ರೋಗಿಗಳ ಜತೆಗೆ ಸಮಾಲೋಚನೆ ನಡೆಸಿದಳು.



ಡಾ. ಸುನಿಲ್ ಭಟ್ ಜತೆಗೆ ಫಾತಿಮಾ ಎ.ಕೆ.

'ಒಂದು ದಿನದ ಮಟ್ಟಿಗೆ ವೈದ್ಯೆಯಾಗಿ ಕಾರ್ಯನಿರ್ವಹಿಸಿರುವುದು ಖುಷಿ ನೀಡಿದೆ. ವೈದ್ಯರು ಯಾವ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಾರೆ ಎನ್ನುವುದನ್ನು ತಿಳಿದುಕೊಂಡೆ. ದೊಡ್ಡವಳಾದ ಬಳಿಕ ವೈದ್ಯೆಯಾಗಿ, ಬಡ ರೋಗಿಗಳ ಆರೈಕೆ ಮಾಡುತ್ತೇನೆ' ಎಂದು ಫಾತಿಮಾ ಎ.ಕೆ. ತಿಳಿಸಿದಳು.

ಆಸ್ಪತ್ರೆಯ ಬೋನ್ ಮ್ಯಾರೊ ಟ್ರಾನ್ಸ್‌ಪ್ಲಾಂಟೇಶನ್ ವಿಭಾಗದ ನಿರ್ದೇಶಕ ಡಾ. ಸುನಿಲ್ ಭಟ್, 'ಥಲಸ್ಸೇಮಿಯಾ, ಕ್ಯಾನ್ಸರ್ ಸೇರಿ ವಿವಿಧ ರೋಗಗಳ ಬಗ್ಗೆ ಬಹುತೇಕರಿಗೆ ತಪ್ಪು ಕಲ್ಪನೆಗಳಿವೆ. ಇದರಿಂದಾಗಿಯೇ ರೋಗಿಗಳು ಆತ್ಮಸ್ಥೈರ್ಯ ಕಳೆದುಕೊಳ್ಳುತ್ತಾರೆ. ಈ ರೀತಿಯ ನಡೆಗಳಿಂದ ರೋಗಿಗಳಲ್ಲಿ ಭರವಸೆ ತುಂಬಲು ಸಾಧ್ಯ' ಎಂದು ಹೇಳಿದರು.

ಸುದ್ದಿ 2 ನಿಮಿಷ

ಎಸ್‌ಎಸ್‌ಸಿ– ಕನ್ನಡಿಗರಿಗೆ ದ್ರೋಹ

ಬೆಂಗಳೂರು: 'ಕೇಂದ್ರ ಸರ್ಕಾರದ ಸ್ಟಾಫ್ ಸೆಲೆಕ್ಷನ್ ಕಮಿಟಿಯು (ಎಸ್‌ಎಸ್‌ಸಿ) 20 ಸಾವಿರ ಹುದ್ದೆಗಳ ನೇಮಕಾತಿಗೆ ಹಿಂದಿ ಹಾಗೂ ಇಂಗ್ಲಿಷ್‌ನಲ್ಲಿ ಮಾತ್ರ ಪರೀಕ್ಷೆ ನಡೆಸುತ್ತಿರುವುದು ಖಂಡನೀಯ. ಈ ಪರೀಕ್ಷೆಗಳನ್ನು ಕನ್ನಡದಲ್ಲಿ ಬರೆಯುವ ಅವಕಾಶ ನೀಡದೆ ಕನ್ನಡಿಗರಿಗೆ ದ್ರೋಹ ಎಸಗಲಾಗಿದೆ' ಎಂದು ಕರ್ನಾಟಕ ರಕ್ಷಣಾ ವೇದಿಕೆ ರಾಜ್ಯಾಧ್ಯಕ್ಷ ಟಿ.ಎ. ನಾರಾಯಣಗೌಡ ಆಕ್ರೋಶ ವ್ಯಕ್ತಪಡಿಸಿದ್ದಾರೆ.

'ರೈಲ್ವೆ, ಬ್ಯಾಂಕಿಂಗ್ ಸೇರಿ ಎಲ್ಲ ಪರೀಕ್ಷೆಗಳಲ್ಲೂ ಕನ್ನಡಿಗರಿಗೆ ಅನ್ಯಾಯವಾಗಿದೆ. ಎಸ್‌ಎಸ್‌ಸಿ ಪರೀಕ್ಷೆಗಳನ್ನೂ ಹಿಂದಿ ಹಾಗೂ ಇಂಗ್ಲಿಷ್‌ನಲ್ಲಿ ನಡೆಸುವ ಮೂಲಕ ರಾಜ್ಯದ ಗ್ರಾಮೀಣ ಭಾಗದ ಮಕ್ಕಳಿಗೆ ಅನ್ಯಾಯ ಮಾಡಲಾಗುತ್ತಿದೆ. ರಾಜ್ಯದಲ್ಲಿ ನಡೆಯುವ ಪರೀಕ್ಷೆಗಳನ್ನು ಕನ್ನಡದಲ್ಲಿ ನಡೆಸಿ, ಕನ್ನಡಿಗರಿಗೆ ಉದ್ಯೋಗ ನೀಡಲು ಏನು ಸಮಸ್ಯೆ? ಅನ್ಯ ರಾಜ್ಯದವರನ್ನು ಕರ್ನಾಟಕದಲ್ಲಿ ತುರುಕುವ ಪ್ರಯತ್ನ ಇದಲ್ಲವೆ' ಎಂದು ಪ್ರಶ್ನಿಸಿದ್ದಾರೆ.

'ಒಕ್ಕೂಟ ಸರ್ಕಾರ ಈಗ ನಡೆಸುತ್ತಿರುವ ಪರೀಕ್ಷೆಗಳನ್ನು ಕೂಡಲೇ ರದ್ದುಗೊಳಿಸಬೇಕು. ಕನ್ನಡ ಸೇರಿ ಎಲ್ಲ ಭಾಷೆಗಳಲ್ಲಿ ಪರೀಕ್ಷೆಗಳನ್ನು ಬರೆಯಲು ಅವಕಾಶ ನೀಡಬೇಕು. ಹೊಸದಾಗಿ ಅಧಿಸೂಚನೆ ಹೊರಡಿಸಿ, ಅರ್ಜಿ ಆಹ್ವಾನಿಸಬೇಕು. ಇಲ್ಲವಾದಲ್ಲಿ ಕರ್ನಾಟಕ ರಕ್ಷಣಾ ವೇದಿಕೆ ತೀವ್ರ ಸ್ವರೂಪದ ಹೋರಾಟ ಹಮ್ಮಿಕೊಳ್ಳಲಿದೆ' ಎಂದು ಪ್ರಕಟಣೆಯಲ್ಲಿ ಎಚ್ಚರಿಸಿದ್ದಾರೆ.



ವಿವಿಧೆಡೆ ವಿದ್ಯುತ್ ವ್ಯತ್ಯಯ

ಬೆಂಗಳೂರು: ಕೆ.ಪಿ.ಟಿ.ಸಿ.ಎಲ್‌ನಿಂದ ಅ.10ರಿಂದ 12ರ ತನಕ ನಿರ್ವಹಣಾ ಕಾರ್ಯ ಹಮ್ಮಿಕೊಂಡಿದ್ದು, ಕೆಲವು ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಲಿದೆ.

ಜಿ.ಎಸ್.ಪಾಳ್ಯ ಮುಖ್ಯರಸ್ತೆ, ಬಸವನಗರ, ಜಿ.ಎಸ್.ಪಾಳ್ಯ ಪ್ರದೇಶ, ಕೃಷ್ಣಾರೆಡ್ಡಿ ಲೇಔಟ್, ಸೆಮಿಕಾನ್ ಪಾರ್ಕ್, ಸತ್ಯಂ ಕಂಪ್ಯೂಟರ್, ಕೆಐಎಡಿಬಿ ಲೇಔಟ್, ಆ್ಯಕ್ಸಿಸ್ ಬ್ಯಾಂಕ್, ಫಿಡೆಲಿಟಿ ಫೈನಾನ್ಸ್ (ಬಿಪಿಒ), ಡಿ-ಲಿಂಕ್, ಎಚ್‌ಪಿ ಇಂಡೊ, ಆನಂದ ರೆಡ್ಡಿ ಲೇಔಟ್, ಸುನಿಕ್ ಘಟಕಗಳು, ಪಿಕ್ಸೆಲ್‌ಗಳು ಸಾಫ್ಟ್‌ವೇರ್, ಗ್ಲೋಬಲ್ ಟೆಕ್‌ಪಾರ್ಕ್, ಎಲೆಕ್ಟ್ರಾನಿಕ್ ಸಿಟಿ 2ನೇ ಹಂತ, ವೀರಸಂದ್ರ, ದೊಡ್ಡನಾಗಮಂಗಲ, ಅನಂತನಗರ, ಶಾಂತಿಪುರ, ಬಯೋಕಾನ್, ಟೆಕ್ ಮಹೀಂದ್ರ ಸೇರಿ ಸುತ್ತಮುತ್ತಲ ಪ್ರದೇಶದಲ್ಲಿ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ ಆಗಲಿದೆ. ದೂರುಗಳಿದ್ದರೆ ಗ್ರಾಹಕರು 1912ಗೆ ಕರೆ ಮಾಡಿ ತಿಳಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಸಮುದಾಯದ ಮೀಸಲಾತಿ ಹೆಚ್ಚಳಕ್ಕೆ ಒಕ್ಕಲಿಗ ಕ್ರಿಯಾ ಸಮಿತಿ ಆಗ್ರಹ

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: ಕೃಷಿ ಮತ್ತು ಹೈನುಗಾರಿಕೆ ಸೇರಿ ಕೃಷಿ ಉಪ ಕಸುಬುಗಳನ್ನೇ ನಂಬಿ ಬದುಕುತ್ತಿರುವ ಒಕ್ಕಲಿಗ ಸಮುದಾಯದಲ್ಲಿ ಬಹುತೇಕರು ಆರ್ಥಿಕವಾಗಿ ದುರ್ಬಲರಾಗಿದ್ದಾರೆ. ಪ್ರವರ್ಗ 3ಎ ನಲ್ಲಿ ಕೇವಲ ಶೇ 4ರಷ್ಟು ಮೀಸಲಾತಿ ಪಡೆಯುತ್ತಿರುವ ಒಕ್ಕಲಿಗ ಹಾಗೂ ಅದರ ಒಳಪಂಗಡ ಜಾತಿಗಳಿಗೆ ಹೆಚ್ಚಿನ ಮೀಸಲಾತಿ ನೀಡಬೇಕೆಂದು ಒಕ್ಕಲಿಗ ಕ್ರಿಯಾ ಸಮಿತಿ ಅಧ್ಯಕ್ಷ ಕೆ.ಜಿ. ಕುಮಾರ್ ರಾಜ್ಯ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಮನವಿಪತ್ರ ಸಲ್ಲಿಸಿದ ಒಕ್ಕಲಿಗರ ಕ್ರಿಯಾ ಸಮಿತಿ ತಂಡ, 'ಸಂವಿಧಾನ ತಿದ್ದುಪಡಿ ಮೂಲಕ ಶೆಡ್ಯೂಲ್ 9ರ ಅಡಿ ಎಸ್‌ಸಿ ಮತ್ತು ಎಸ್‌ಟಿ ಮೀಸಲಾತಿ ಹೆಚ್ಚಿಸಿರುವಂತೆ ಆರ್ಥಿಕವಾಗಿ ದುರ್ಬಲರೇ ಹೆಚ್ಚಿರುವ ಒಕ್ಕಲಿಗ ಸಮುದಾಯಕ್ಕೂ ಮೀಸಲಾತಿಯನ್ನು ಹೆಚ್ಚಿಸಬೇಕು. ಹಾಗೆಯೇ ನಗರ ಹಾಗೂ ಪಟ್ಟಣ ಪ್ರದೇಶಗಳ ಒಕ್ಕಲಿಗ ಸಮುದಾಯದವರಿಗೆ ಕೇಂದ್ರ ಸರ್ಕಾರ ರದ್ದುಗೊಳಿಸಿರುವ ಮೀಸಲಾತಿಯನ್ನು ಮತ್ತೆ ಮುಂದುವರಿಸಬೇಕು' ಎಂದು ಶಿಫಾರಸು ಮಾಡುವಂತೆ ಕೋರಿದೆ.

'ನಮ್ಮ ಬೇಡಿಕೆಗಳಿಗೆ ಸರ್ಕಾರ ಸ್ಪಂದಿಸದಿದ್ದಲ್ಲಿ ಉಗ್ರ ಹೋರಾಟ ಮಾಡಲಾಗುತ್ತದೆ' ಎಂದು ಕೆ.ಜಿ. ಕುಮಾರ್ ಹೇಳಿದ್ದಾರೆ.



ಕೆ.ಜಿ.ಕುಮಾರ್

ಓಲಾ, ಉಬರ್: ಮುಂದುವರಿದ ಆಟೊರಿಕ್ಷಾ ಸೇವೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಟೊರಿಕ್ಷಾ ಸೇವೆ ಸ್ಥಗಿತಗೊಳಿಸುವಂತೆ ಓಲಾ, ಉಬರ್ ಮತ್ತು ರ‍್ಯಾಪಿಡೊ ಕಂಪನಿಗಳಿಗೆ ಸಾರಿಗೆ ಇಲಾಖೆ ನೋಟಿಸ್ ನೀಡಿದ್ದರೂ, ಶನಿವಾರ ಈ ಕಂಪನಿಗಳ ಆ್ಯಪ್‌ಗಳಲ್ಲಿ ಆಟೊರಿಕ್ಷಾ ಸೇವೆ ಮುಂದುವರಿದಿತ್ತು.

ಸಾರಿಗೆ ಇಲಾಖೆಯ ನೋಟಿಸ್‌ಗೆ ಈ ಕಂಪನಿಗಳು ಯಾವುದೇ ಕಿಮ್ಮತ್ತು ನೀಡಿದಂತಿಲ್ಲ. ಆಟೊರಿಕ್ಷಾ ಸೇವೆ ಶನಿವಾರವೂ ಸರಾಗವಾಗಿ ನಡೆಯಿತು. ನೋಟಿಸ್ ನೀಡಿದ ಬಳಿಕವೂ ಸೇವೆ ಮುಂದುವರಿಸಿದರೆ ಅಂತಹ ಆಟೊರಿಕ್ಷಾಗಳನ್ನು ಜಪ್ತಿ ಮಾಡಲಾಗುವುದು ಎಂದು ಸಾರಿಗೆ ಸಚಿವರು ಹೇಳಿಕೆ ನೀಡಿದ್ದಾರೆ. ಆದರೆ, ನಗರದಲ್ಲಿ ಯಾವುದೇ ಆಟೊರಿಕ್ಷಾವನ್ನೂ ಜಪ್ತಿ ಮಾಡಿದ್ದು ಕಾಣಿಸಲಿಲ್ಲ.

ಅಲ್ಲದೇ ಎಂದಿನಂತೆ ದುಬಾರಿ ದರ ಕೂಡ ಮುಂದುವರಿದಿತ್ತು. ಎಂ.ಜಿ.ರಸ್ತೆಯಿಂದ ಕಾರ್ಪೊರೇಷನ್ ವೃತ್ತಕ್ಕೆ ಆಟೊರಿಕ್ಷಾದಲ್ಲಿ ಪ್ರಯಾಣ ದರ ₹108 ಇದ್ದರೆ, ಟ್ಯಾಕ್ಸಿ ಮಿನಿ ಪ್ರಯಾಣ ದರ ₹91 ಇತ್ತು. ಕಾರು ಪ್ರಯಾಣಕ್ಕಿಂತ ಆಟೊರಿಕ್ಷಾ ಪ್ರಯಾಣವೇ ದುಬಾರಿಯಾಗಿತ್ತು. ಯಾವುದೇ ಮಾರ್ಗದಲ್ಲಿ ಪ್ರಯಾಣಿಸಲು ಪ್ರಯತ್ನಿಸಿದರೂ ಆಟೊರಿಕ್ಷಾ ಪ್ರಯಾಣ ದರವೇ ಹೆಚ್ಚಿತ್ತು.

ಕಾನೂನುಬಾಹಿರ ಅಲ್ಲ: ರ‍್ಯಾಪಿಡೊ ಕಂಪನಿಯ ಯಾವುದೇ ಕಾರ್ಯಾಚರಣೆ ಕಾನೂನುಬಾಹಿರವಾಗಿಲ್ಲ ಎಂದು ಕಂಪನಿ ಸ್ಪಷ್ಟಪಡಿಸಿದೆ.

'ಸಾರಿಗೆ ಇಲಾಖೆಯಿಂದ ನಮಗೆ ನೋಟಿಸ್ ಬಂದಿದ್ದು, ನಿಗದಿತ ಸಮಯದೊಳಗೆ ನಾವು ಪ್ರತಿಕ್ರಿಯಿಸುತ್ತೇವೆ. ಆಟೊಟ್ಯಾಕ್ಸಿ ಪ್ರಯಾಣ ದರದಲ್ಲಿ ಹೆಚ್ಚುವರಿ ಹಣ ವಸೂಲಿ ಮಾಡಲಾಗುತ್ತಿದೆ ಎಂಬುದು ಸುಳ್ಳು ಆರೋಪ. ನಮ್ಮ ಎಲ್ಲಾ ದರಗಳು ಸರ್ಕಾರ ನಿರ್ಧರಿಸಿದ ದರಗಳಿಗೆ ಅನುಗುಣವಾಗಿದೆ. ಕಾನೂನು ಅಡಿಯಲ್ಲಿಯೇ ಸೇವೆ ಮುಂದುವರಿಯಲಿದೆ' ಎಂದು ವಿವರಿಸಿದೆ.

ಷರತ್ತು ಉಲ್ಲಂಘಿಸಿದರೆ ಜಪ್ತಿ

ಆ್ಯಪ್ ಆಧಾರಿತ ಟ್ಯಾಕ್ಸಿ ಸೇವೆ ಒದಗಿಸುತ್ತಿರುವ ಕಂಪನಿಗಳಿಗೆ ಪರವಾನಗಿ ನೀಡುವಾಗ ಕೆಲವು ಷರತ್ತುಗಳನ್ನು ವಿಧಿಸಲಾಗಿದ್ದು, ಅವುಗಳನ್ನು ಉಲ್ಲಂಘಿಸಿದರೆ ಕ್ರಮ ಕೈಗೊಳ್ಳಲಾಗುವುದು ಎಂದು ಸಾರಿಗೆ ಸಚಿವ ಬಿ.ಶ್ರೀರಾಮುಲು ಅವರು ತಿಳಿಸಿದರು.

ಆಟೊರಿಕ್ಷಾ ಸೇವೆ ಸ್ಥಗಿತಗೊಳಿಸುವಂತೆ ನೋಟಿಸ್ ನೀಡಿದ ಬಳಿಕವೂ ಸೇವೆ ಮುಂದುವರಿಸಿದ್ದರೆ ಅಂತಹ ವಾಹನಗಳನ್ನು ಜಪ್ತಿ ಮಾಡಲು ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಎರಡು–ಮೂರು ದಿನಗಳಲ್ಲಿ ಸಮಸ್ಯೆ ಬಗೆಹರಿಯಲಿದೆ ಎಂದು ಅವರು ಹೇಳಿದರು.



ಶಿವಸೇನಾ ಪಕ್ಷದ ಹೆಸರು, ಚಿಹ್ನೆ ಬಳಕೆ: ಚುನಾವಣಾ ಆಯೋಗ ಆದೇಶ

ಠಾಕ್ರೆ, ಶಿಂದೆ ಬಣಕ್ಕೆ ನಿರ್ಬಂಧ

ನವದೆಹಲಿ (ಪಿಟಿಐ): ಅಂಧೇರಿ ಪೂರ್ವ ವಿಧಾನಸಭಾ ಉಪಚುನಾವಣೆಯಲ್ಲಿ ಶಿವಸೇನಾ ಪಕ್ಷದ ಹೆಸರು ಮತ್ತು ಚಿಹ್ನೆ ಎರಡನ್ನೂ ಬಳಸದಂತೆ ಉದ್ಧವ್ ಠಾಕ್ರೆ ಮತ್ತು ಏಕನಾಥ ಶಿಂದೆ ಬಣಗಳಿಗೆ ಚುನಾವಣಾ ಆಯೋಗವು ಶನಿವಾರ ನಿರ್ಬಂಧ ವಿಧಿಸಿದೆ.

ಪ್ರತಿಸ್ಪರ್ಧಿ ಬಣಗಳು ಪ್ರತಿಪಾದಿಸಿದ ಹಕ್ಕುಗಳ ಕುರಿತು ಮನವಿಗೆ ಮಧ್ಯಂತರ ಆದೇಶ ನೀಡಿರುವ ಚುನಾವಣಾ ಆಯೋಗವು, ಸೋಮವಾರದೊಳಗೆ 3 ವಿಭಿನ್ನ ಪಕ್ಷದ ಹೆಸರುಗಳು ಮತ್ತು ಸೂಕ್ತ ಚಿಹ್ನೆಗಳನ್ನು ಸೂಚಿಸುವಂತೆ ಹೇಳಿದೆ.

'ಎರಡೂ ಪ್ರತಿಸ್ಪರ್ಧಿ ಗುಂಪುಗಳನ್ನು ಸಮತೋಲನದಲ್ಲಿರಿಸಲು ಮತ್ತು ಅವರ ಹಕ್ಕುಗಳು ಹಾಗೂ ಹಿತಾಸಕ್ತಿಗಳನ್ನು ರಕ್ಷಿಸಲು, ಆದ್ಯತೆಯ ಮೇರೆಗೆ, ಎರಡೂ ಗುಂಪುಗಳಿಗೆ ಶಿವಸೇನಾ ಪಕ್ಷದ ಹೆಸರು, ಚಿಹ್ನೆಯನ್ನು ಬಳಸಲು ಅನುಮತಿ ನೀಡುವುದಿಲ್ಲ' ಎಂದು ಆಯೋಗ ಹೇಳಿದೆ.

ಅಂಧೇರಿ ಪೂರ್ವ ವಿಧಾನಸಭಾ ಉಪಚುನಾವಣೆ ಸಮೀಪಿಸುತ್ತಿದ್ದಂತೆಯೇ ಶಿಂದೆ ಬಣವು ಪಕ್ಷದ ಬಿಲ್ಲು–ಬಾಣದ ಚಿಹ್ನೆಯನ್ನು ತನಗೆ ಹಂಚಿಕೆ ಮಾಡುವಂತೆ ಕೋರಿ ಶುಕ್ರವಾರ ಮನವಿ ಸಲ್ಲಿಸಿತ್ತು. ಇದರ ಬೆನ್ನಲ್ಲೇ ಶನಿವಾರ ಉದ್ಧವ್ ಠಾಕ್ರೆ ಬಣವೂ ಚಿಹ್ನೆ ಹಂಚಿಕೆಗೆ ಕೋರಿ ಮನವಿ ಸಲ್ಲಿಸಿತ್ತು.

'ಉಪಚುನಾವಣೆಯ ಎಲ್ಲಾ ಚುನಾವಣಾ ಹಂತಗಳು ಯಾವುದೇ ಗೊಂದಲ ಮತ್ತು ವಿರೋಧಾಭಾಸಗಳಿಂದ ಮುಕ್ತವಾಗಿರುವುದನ್ನು ಖಚಿತಪಡಿಸಿಕೊಳ್ಳಲು ಆಯೋಗವು ಬದ್ಧವಾಗಿದೆ' ಎಂದು ಮಧ್ಯಂತರ ಆದೇಶದಲ್ಲಿ ಆಯೋಗ ತಿಳಿಸಿದೆ.

ನ. 3ರಂದು ನಡೆಯಲಿರುವ ಉಪಚುನಾವಣೆಗೆ ನಾಮಪತ್ರ ಸಲ್ಲಿಸಲು ಇದೇ 14 ಕೊನೆಯ ದಿನಾಂಕವಾಗಿದೆ. ಶಾಸಕ ರಮೇಶ್ ಲಟ್ಕೆ ಅವರ ನಿಧನದಿಂದಾಗಿ ಉಪಚುನಾವಣೆ ಅನಿವಾರ್ಯವಾಗಿದ್ದು, ಲಟ್ಕೆ ಪತ್ನಿ ರುತುತಾ ಲಟ್ಕೆ ಅವರನ್ನು ಕಣಕ್ಕಿಳಿಸಲು ಉದ್ಧವ್ ಬಣ ನಿರ್ಧರಿಸಿದೆ. ಬೃಹನ್ ಮುಂಬೈ ಮಹಾನಗರ ಪಾಲಿಕೆ ಸದಸ್ಯ ಮುರ್ಜಿ ಪಟೇಲ್ ಅವರನ್ನು ಕಣಕ್ಕಿಳಿಸಲು ಶಿಂದೆ ಬಣ ನಿರ್ಧರಿಸಿದೆ. ಕಾಂಗ್ರೆಸ್, ಎನ್‌ಸಿಪಿ ಪಕ್ಷಗಳು ಠಾಕ್ರೆ ಬಣದ ಅಭ್ಯರ್ಥಿಗೆ ಬೆಂಬಲ ಸೂಚಿಸಲು ನಿರ್ಧರಿಸಿವೆ.

ಆಯೋಗದ ಅನ್ಯಾಯ– ಆದಿತ್ಯ ಠಾಕ್ರೆ: 'ಸದ್ಯಕ್ಕೆ ಪಕ್ಷದ ಹೆಸರು ಮತ್ತು ಚಿಹ್ನೆಯನ್ನು ಸ್ಥಗಿತಗೊಳಿಸುವ ಚುನಾವಣಾ ಆಯೋಗದ ನಿರ್ಧಾರಕ್ಕೆ ಶಿವಸೇನೆಯ ಏಕನಾಥ್ ಶಿಂದೆ ನೇತೃತ್ವದ ಬಣವೇ ಕಾರಣ' ಎಂದು ಮಹಾರಾಷ್ಟ್ರದ ಮಾಜಿ ಸಚಿವ ಆದಿತ್ಯ ಠಾಕ್ರೆ ಆರೋಪಿಸಿದ್ದು, ಆಯೋಗದ ಆದೇಶವು ಅನ್ಯಾಯದಿಂದ ಕೂಡಿದೆ ಎಂದೂ ದೂರಿದ್ದಾರೆ.

ಶಿವಸೇನಾ ಚಿಹ್ನೆ

ನಗರದಲ್ಲಿ ಇಂದು

ನಮ್ಮ ದಸರಾ: ಆಯೋಜನೆ: ಪಶುಪತಿನಾಥ್ ನೇಪಾಳೀ ಜನಕಲ್ಯಾಣ ಸಮಿತಿ, ಸ್ಥಳ: ಪೂರ್ಣಪ್ರಜ್ಞಾ ಸ್ಕೂಲ್, ನ್ಯೂ ತಿಪ್ಪಸಂದ್ರ, ಬೆಳಿಗ್ಗೆ 9

ಮಿಲಾದ್ ಉನ್ ನಬಿ–ಉಚಿತ ಸಸಿಗಳ ವಿತರಣೆ ಕಾರ್ಯಕ್ರಮ, ಅತಿಥಿಗಳು: ಸೈಯದ್ ಮೊಹಮ್ಮದ್ ಬಿಯರಿ, ಯು.ಎಸ್. ಮೊಯಿನುದ್ದೀನ್, ಮೌಲಾನಾ ಮಕ್ಸೂದ್ ಇಮ್ರಾನ್ ರಶಾದಿ, ಆಯೋಜನೆ: ಮೊಹಮ್ಮದ್ ಫಾರ್ ಮ್ಯಾನ್‌ಕೈಂಡ್, ಸ್ಥಳ: ಮಸ್ಜಿದ್ ಎ ಖಾದ್ರಿಯಾ, ಖುದ್ದೂಸ್ ಸಾಬ್ ಈದ್ಗಾ, ಬೆನ್ಸನ್ ಟೌನ್, ಬೆಳಿಗ್ಗೆ 9ರಿಂದ

ಅಂತರರಾಷ್ಟ್ರೀಯ ಮಹಿಳಾ ಮತ್ತು ಮಕ್ಕಳ ಸಾಧಕರ ಪ್ರಶಸ್ತಿ ಪ್ರದಾನ: ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಮುಖ್ಯ ಅತಿಥಿಗಳು: ಡಾ.ಸಿ.ಎನ್. ಅಶ್ವತ್ಥನಾರಾಯಣ, ರಾಜೇಂದ್ರ ಕುಮಾರ್ ಕಠಾರಿಯಾ, ಆಯೋಜನೆ: ಕಬ್ಬನ್ ಪಾರ್ಕ್ ನಡಿಗೆದಾರರ ಸಂಘ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಬೆಳಿಗ್ಗೆ 9ರಿಂದ ರಾತ್ರಿ 8ರ ವರೆಗೆ

ಸಂಸ್ಕೃತೋತ್ಸವ: ಸಾನ್ನಿಧ್ಯ: ಜಯೇಂದ್ರಪುರಿ ಸ್ವಾಮೀಜಿ, ಸಂಸ್ಕೃತ ಸೇವಾವ್ರತಿ ಪ್ರಶಸ್ತಿ ಪುರಸ್ಕಾರ: ಜಯಲಕ್ಷ್ಮೀ ಸಂಪತ್‌ಕುಮಾರ್, ಅಧ್ಯಕ್ಷತೆ: ಮುನಿರತ್ನ, ಮುಖ್ಯ ಅತಿಥಿಗಳು: ಪ್ರೊ. ವಿ. ಗಿರೀಶಚಂದ್ರ, ಜಿ.ಎಚ್. ರಾಮಚಂದ್ರ, ಮಹೇಂದ್ರ ಮುನೋತ್, ಮುಖ್ಯ ಭಾಷಣ: ವಿ.ಬಿ. ಆರತಿ, ಆಯೋಜನೆ: ಸಂಯಕ್ ಪ್ರತಿಷ್ಠಾನ, ಸ್ಥಳ ಮೀನಾಕ್ಷಿ ಕಲ್ಯಾಣ ಮಂಟಪ, ರಾಜರಾಜೇಶ್ವರಿ ನಗರ, ಬೆಳಿಗ್ಗೆ 10


52ನೇ ಸಂಗೀತ ಸಮ್ಮೇಳನ: ಉದ್ಘಾಟನೆ: ಗುರುರಾಜ ಕರಜಗಿ, ಗೌರವ ಅತಿಥಿಗಳು: ಉದಯ್ ಗರುಡಾಚಾರ್, ಎಂ.ಆರ್. ವಿ. ಪ್ರಸಾದ್, ಸಮ್ಮೇಳನಾಧ್ಯಕ್ಷತೆ: ವಿದ್ವಾನ್ ಡಿ. ಬಾಲಕೃಷ್ಣ, ಆಯೋಜನೆ ಹಾಗೂ ಸ್ಥಳ: ಬೆಂಗಳೂರು ಗಾಯನ ಸಮಾಜ, ಕೆ.ಆರ್. ರಸ್ತೆ, ಬೆಳಿಗ್ಗೆ 10



ಗುರುರಾಜ ಕರಜಗಿ

'ಚಲನಚಿತ್ರ ಮಾಧ್ಯಮದಲ್ಲಿ ಭಾಷಾ ಕೌಶಲ' ತರಬೇತಿ ಶಿಬಿರ: ಉದ್ಘಾಟನೆ: ಟಿ.ಎಸ್. ನಾಗಾಭರಣ, ಗೋಷ್ಠಿಗಳಲ್ಲಿ ಭಾಗವಹಿಸುವವರು: ಪಿ. ಶೇಷಾದ್ರಿ, ಶಶಾಂಕ್, ಎಂ.ಎಲ್. ಪ್ರಸನ್ನ, ಎಂ.ಎಸ್. ಶ್ರೀಧರಮೂರ್ತಿ, ಆಯೋಜನೆ: ಸಿನಿಫಮ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ವೀರಲೋಕ ಪ್ರಕಾಶನ, ಇನ್‌ಸ್ಟಿಟ್ಯೂಟ್ ಆಫ್ ಟ್ರಾನ್ಸ್‌ಲೇಷನ್ ಸ್ಟಡೀಸ್, ಸ್ಥಳ: ಬಿ.ಎಂ.ಶ್ರೀ. ಪ್ರತಿಷ್ಠಾನ, ಎನ್.ಆರ್. ಕಾಲೊನಿ, ಬೆಳಿಗ್ಗೆ 10.30

'ತೇಜೋ ತುಂಗಭದ್ರಾ–ಟ್ರಿಬ್ಯುಟರಿಸ್ ಆಫ್ ಟೈಮ್' (ವಸುಧೇಂದ್ರ ಅವರ 'ತೇಜೋ ತುಂಗಭದ್ರಾ'ದ ಅನುವಾದಿತ ಕೃತಿ) ಕುರಿತ ಚರ್ಚೆ: ಭಾಗವಹಿಸುವವರು: ವಸುಧೇಂದ್ರ, ಮೈತ್ರೇಯಿ ಕರ್ನೂರು, ನಿರ್ವಹಣೆ: ದೇವಿ ಯಶೋಧರನ್, ಆಯೋಜನೆ ಹಾಗೂ ಸ್ಥಳ: ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ (ಬಿಐಸಿ), ದೊಮ್ಮಲೂರು, ಬೆಳಿಗ್ಗೆ 11



ವಸುಧೇಂದ್ರ

ಭರತನಾಟ್ಯ ಪ್ರದರ್ಶನ: ವಿದ್ಯಾರಾಣಿ, ಉಪಸ್ಥಿತಿ: ಮಹೇಶ ಜೋಶಿ, ದೊಡ್ಡರಂಗೇಗೌಡ, ವಸುಂಧರಾ ದೊರೆಸ್ವಾಮಿ, ಆಯೋಜನೆ: ಡಾ.ಎಚ್.ಎಸ್.ಎಂ. ಪ್ರಕಾಶ್ ಮತ್ತು ಕುಟುಂಬ, ಸ್ಥಳ: ಶ್ರೀ ಜಯರಾಮ ಸೇವಾ ಮಂಡಳಿ, ಜಯನಗರ, ಸಂಜೆ 5.30


5ನೇ ವಾರ್ಷಿಕೋತ್ಸವ: ಉಪಸ್ಥಿತಿ: ವೈ.ಕೆ. ಸಂಧ್ಯಾ ಶರ್ಮಾ, ಪದ್ಮಿನಿ ಎಸ್. ಉಪಾಧ್ಯ, ದೇವಿಕಾ ಕೆ. ರಾಜಪ್ಪ, ಆಯೋಜನೆ: ಸಾಧನಾ ಡಾನ್ಸ್ ಸೆಂಟರ್, ಸ್ಥಳ: ಪದ್ಮಿನಿ ರಾವ್ ಪರಂಪರಾ ಕಲಾಕ್ಷೇತ್ರ, ಕತ್ರಿಗುಪ್ಪೆ, ಸಂಜೆ 6

ಮಹರ್ಷಿ ವಾಲ್ಮೀಕಿ ಜಯಂತಿ ಹಾಗೂ ಮಹರ್ಷಿ ವಾಲ್ಮೀಕಿ ಪ್ರಶಸ್ತಿ ಪ್ರದಾನ: ಬಸವರಾಜ ಬೊಮ್ಮಾಯಿ, ವಾಲ್ಮೀಕಿ ಪ್ರತಿಮೆಗೆ ಮಾಲಾರ್ಪಣೆ: ಬಿ. ಶ್ರೀರಾಮುಲು, ಉಪಸ್ಥಿತಿ: ಕೋಟ ಶ್ರೀನಿವಾಸ ಪೂಜಾರಿ, ಸಾನ್ನಿಧ್ಯ: ಪ್ರಸನ್ನಾನಂದಪುರಿ ಸ್ವಾಮೀಜಿ, ಆಯೋಜನೆ: ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಸ್ಥಳ: ಬ್ಯಾಂಕ್ವೆಟ್ ಹಾಲ್, ವಿಧಾನಸೌಧ, ಬೆಳಿಗ್ಗೆ 10.30



ಪ್ರಸನ್ನಾನಂದಪುರಿ ಸ್ವಾಮೀಜಿ

ದಾಸರ ಪದಗಳ ಸಿಂಚನ: ರಜನಿ ಗುರುರಾಜ್, ಆಯೋಜನೆ: ನಾದ ಸುರಭಿ ಸಂಗೀತ ಶಾಲೆ, ಸ್ಥಳ: ಶ್ರೀರಾಮ ಮಂದಿರ, ಸಂಜೆ 6.15



ಬೆಂಗಳೂರಿನ ವಿಧಾನಸೌಧದ ಕಚೇರಿಯಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಭೇಟಿಯಾದ ಕರ್ನಾಟಕ ಸಾಬೂನು ಹಾಗೂ ಮಾರ್ಜಕಗಳ ನಿಗಮ (ಕೆಎಸ್‌ಡಿಎಲ್) ಅಧ್ಯಕ್ಷ ಮಾಡಾಳ್ ವಿರೂಪಾಕ್ಷಪ್ಪ ಅವರು ಮುಖ್ಯಮಂತ್ರಿ ಪರಿಹಾರ ನಿಧಿಗೆ ನಿಗಮದಿಂದ ₹ 5 ಕೋಟಿ ಚೆಕ್ ಅನ್ನು ಹಸ್ತಾಂತರಿಸಿದರು. ಶಾಸಕ ರೇಣುಕಾಚಾರ್ಯ, ಕೆಎಸ್‌ಡಿಎಲ್ ವ್ಯವಸ್ಥಾಪಕ ನಿರ್ದೇಶಕ ಡಾ.ಮಹೇಶ್, ನಿರ್ದೇಶಕರಾದ ಮಲ್ಲಿಕಾರ್ಜುನ ಸಾಹುಕಾರ, ನಿವೇದಿತಾ ರಾಜು, ಶಿವಕುಮಾರ ಹುಡೇದ್ ಇದ್ದರು.

ಗೊಟ್ಟಿಗೆರೆ–ನಾಗವಾರ ಮೆಟ್ರೊ ರೈಲು ಮಾರ್ಗದ ಸುರಂಗ ಕಾಮಗಾರಿಗೆ ಅಡ್ಡಿ

ಕಸದ ಗುಂಡಿಯಲ್ಲಿ ಸಿಲುಕಿದ ಟಿಬಿಎಂ 'ರುದ್ರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೆಟ್ರೊ ರೈಲು ಮಾರ್ಗದ ಸುರಂಗ ಕೊರೆಯುವ ಕಾಮಗಾರಿಗೆ ಹಳೇ ಕಸದ ರಾಶಿಯೊಂದು ಅಡ್ಡಿಯಾಗಿದೆ. ಗೊಟ್ಟಿಗೆರೆ-ನಾಗವಾರ ಮಾರ್ಗದಲ್ಲಿ ಸುರಂಗ ಕೊರೆಯುತ್ತಿರುವ ಟಿಬಿಎಂ(ಸುರಂಗ ಕೊರೆಯುವ ಯಂತ್ರ) 'ರುದ್ರ' ಕಸದ ರಾಶಿಯಲ್ಲಿ ಸಿಲುಕಿಕೊಂಡಿದೆ.

ಈ ಮಾರ್ಗದಲ್ಲಿ ಡೈರಿ ವೃತ್ತದಿಂದ ನಾಗವಾರ ತನಕ 14 ಕಿಲೋ ಮೀಟರ್ ಸುರಂಗ ಮಾರ್ಗ ಕೊರೆಯಲಾಗುತ್ತಿದೆ. ಬನ್ನೇರುಘಟ್ಟ ರಸ್ತೆಯಲ್ಲಿ ಡೈರಿ ವೃತ್ತದಿಂದ ಲಕ್ಕಸಂದ್ರ ಕಡೆಗೆ 33 ಅಡಿ ಆಳದಲ್ಲಿ ಸುರಂಗ ಕೊರೆಯುತ್ತಿರುವ 'ರುದ್ರ' ಯಂತ್ರಕ್ಕೆ ಕಸದ ಗುಡ್ಡೆಯೊಂದು ಎದುರಾಗಿದೆ. ಹಳೇ ಚಪ್ಪಲಿಗಳು, ಪ್ಲಾಸ್ಟಿಕ್ ಖಾಲಿ ಚೀಲಗಳು, ಬಕೆಟ್ ಚೂರುಗಳು, ರಬ್ಬರ್ ಟೈರ್‌ಗಳು, ಮೂಳೆಗಳು ಯಂತ್ರಕ್ಕೆ ಸಿಲುಕಿಕೊಂಡಿವೆ.


ಬನ್ನೇರುಘಟ್ಟ ರಸ್ತೆಯಲ್ಲಿ ಸುರಂಗ ಮಾರ್ಗದ ಕಾಮಗಾರಿ ನಡೆಯುತ್ತಿರುವುದು
–ಪ್ರಜಾವಾಣಿ ಚಿತ್ರ/ರಂಜು ಪಿ.

ಯಂತ್ರದ ಕಾರ್ಯನಿರ್ವಹಣೆಗೆ ತೊಡಕಾದಾಗ ಕಟ್ಟರ್ ಹೆಡ್‌ಗಳ ಮೂಲಕ ನೋಡಿದ ಸಿಬ್ಬಂದಿಗೆ ಕಸದ ರಾಶಿ ಇರುವುದು ಗೊತ್ತಾಗಿದೆ. ಬಂಡೆ ಅಥವಾ ಮಣ್ಣನ್ನು ಸರಾಗವಾಗಿ ಸೀಳುವ ಸುರಂಗ ಕೊರೆಯುವ ಯಂತ್ರಕ್ಕೆ ರಬ್ಬರ್ ಟೈರ್‌ಗಳು ಅಡ್ಡಿಯಾಗುತ್ತಿವೆ. ಮೆಟ್ರೊ ಸುರಂಗ ಮಾರ್ಗದಲ್ಲಿ ಇದೇ ಮೊದಲ ಬಾರಿಗೆ ಕಸದ ರಾಶಿ ಎದುರಾಗಿದ್ದು, ಸಿಬ್ಬಂದಿಯಲ್ಲಿ ಅಚ್ಚರಿ ಮೂಡಿಸಿದೆ. ಯಂತ್ರ ಸಾಗುವ ವೇಗಕ್ಕೂ ಅಡ್ಡಿಯಾಗಿದ್ದು, ಸರಿಪಡಿಸಲು ಸಿಬ್ಬಂದಿ ಸಾಹಸ ಮುಂದುವರಿಸಿದ್ದಾರೆ.

1980ರ ದಶಕದಲ್ಲಿ ಈ ಜಾಗ ಕಲ್ಲುಗಣಿಗಾರಿಕೆ ಪ್ರದೇಶವಾಗಿದ್ದು, ಆ ಜಾಗವನ್ನು ಅಂದಿನ ನಗರ ಸ್ಥಳೀಯ ಸಂಸ್ಥೆ ಕಸ ಸುರಿಯುವ ತಾಣವಾಗಿ ಮಾಡಿಕೊಂಡಿತ್ತು. ನಗರ ಬೆಳೆದಂತೆ ಕಸ ಸುರಿಯುವುದು ನಿಲ್ಲಿಸಲಾಗಿದ್ದು, ಅದರ ಮೇಲೆ ಮರಳು ಮತ್ತು ಮಣ್ಣು ಸುರಿದು ತಾತ್ಕಾಲಿಕ ಕಟ್ಟಡಗಳನ್ನೂ ಜನ ನಿರ್ಮಿಸಿಕೊಂಡಿದ್ದಾರೆ.

ಯಂತ್ರ ಸಿಲುಕಿರುವ ಸ್ಥಳದಿಂದ ಸುಮಾರು 40 ಮೀಟರ್ ತನಕ ಕಸದ ರಾಶಿ ಇರಬಹುದು ಎಂದು ಸಿಬ್ಬಂದಿ ಅಂದಾಜಿಸಿದ್ದಾರೆ. ಸುರಂಗ ಕೊರೆಯುವಾಗ ಕಸ ಕುಸಿದು ಮೇಲ್ಭಾಗದ ತಾತ್ಕಾಲಿಕ ಕಟ್ಟಡಗಳಿಗೂ ಹಾನಿಯಾಗುವ ಸಾಧ್ಯತೆ ಇದ್ದು, ಸುರಕ್ಷತೆ ದೃಷ್ಟಿಯಿಂದ ಈ ಜಾಗದ ಮೇಲ್ಭಾಗದಲ್ಲಿರುವ ತಾತ್ಕಾಲಿಕ ಕಟ್ಟಡಗಳನ್ನು ಸ್ಥಳಾಂತರಿಸಲು ಕ್ರಮ ಕೈಗೊಳ್ಳಲಾಗಿದೆ. ಅವರೂ ಒಪ್ಪಿಗೆ ಸೂಚಿಸಿದ್ದಾರೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

'ಕಾಮಗಾರಿ ಮುಂದುವರಿಸಲು ಕ್ರಮ'

ಸುರಂಗ ಕೊರೆಯುವ ಕಾಮಗಾರಿ ಮುಂದುವರಿಸಲು ಅಗತ್ಯ ತಾಂತ್ರಿಕ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು ಬಿಎಂಆರ್‌ಸಿಎಲ್ ಮುಖ್ಯ ಸಾರ್ವಜನಿಕ ಸಂಪರ್ಕಾಧಿಕಾರಿ ಬಿ.ಎಲ್.ಯಶವಂತ ಚೌಹಾಣ್ ತಿಳಿಸಿದರು.

ಕಸ ಅಥವಾ ಇನ್ನಾವುದೇ ವಸ್ತುಗಳು ಸುರಂಗಕ್ಕೆ ಕುಸಿಯದಂತೆ ತಡೆ ಕಂಬಗಳನ್ನು ನಿರ್ಮಿಸಿ ಸುರಂಗ ಕೊರೆಯುವ ಕಾಮಗಾರಿ ಮುಂದುವರಿಸಲಾಗುವುದು ಎಂದರು.

ಈ ಎಲ್ಲಾ ಸುರಕ್ಷತಾ ಕ್ರಮಗಳಿಗೆ ಸಮಯ ಬೇಕಾಗಲಿದ್ದು, ಸುರಂಗ ಕಾಮಗಾರಿ ನಿಗದಿಗಿಂತ ಕೊಂಚ ವಿಳಂಬವಾಗುವ ಸಾಧ್ಯತೆ ಇದೆ ಎಂದು ಹೇಳಿದರು.


ಜೆಡಿಎಸ್ ಜನತಾ ಮಿತ್ರ ಕಾರ್ಯಕ್ರಮಕ್ಕೆ ಪೂರಕವಾಗಿ ಬ್ಯಾಟರಾಯನಪುರ ಕ್ಷೇತ್ರದ ಅಧ್ಯಕ್ಷ ಎನ್.ವೇಣುಗೋಪಾಲ್ ನೇತೃತ್ವದಲ್ಲಿ ನೂರಾರು ಕಾರ್ಯಕರ್ತರು ಸಾರಾಯಿಪಾಳ್ಯದಿಂದ ಥಣಿಸಂದ್ರ ವೃತ್ತದವರೆಗೆ ಪಾದಯಾತ್ರೆ ನಡೆಸಿದರು

ಜೆಡಿಎಸ್ ಮುಖಂಡರ ಪಾದಯಾತ್ರೆ

ಯಲಹಂಕ: ಜೆಡಿಎಸ್ ಜನತಾಮಿತ್ರ ಕಾರ್ಯಕ್ರಮಕ್ಕೆ ಪೂರಕವಾಗಿ ಬ್ಯಾಟರಾಯನಪುರ ಕ್ಷೇತ್ರದ ಜೆಡಿಎಸ್ ಅಧ್ಯಕ್ಷ ಎನ್.ವೇಣುಗೋಪಾಲ್ ನೇತೃತ್ವದಲ್ಲಿ ನೂರಾರು ಕಾರ್ಯಕರ್ತರು ಸಾರಾಯಿಪಾಳ್ಯದಿಂದ ಥಣಿಸಂದ್ರ ವೃತ್ತದವರೆಗೆ ಪಾದಯಾತ್ರೆ ನಡೆಸಿದರು.

ವೇಣುಗೋಪಾಲ್ ಮಾತನಾಡಿ, 'ರಾಜ್ಯದಲ್ಲಿ ಆಡಳಿತ ನಡೆಸುತ್ತಿರುವ ಭ್ರಷ್ಟ ಬಿಜೆಪಿ ಸರ್ಕಾರದ ವೈಫಲ್ಯಗಳಿಂದ ಜನರು ಸಂಕಷ್ಟ ಅನುಭವಿಸುತ್ತಿದ್ದಾರೆ. ದೇವೇಗೌಡರು ಪ್ರಧಾನಿಯಾಗಿದ್ದ ಅವಧಿಯಲ್ಲಿ ಈ ದೇಶ ಮತ್ತು ರಾಜ್ಯಕ್ಕೆ ನೀಡಿರುವ ಕೊಡುಗೆಗಳು ಹಾಗೂ ಕುಮಾರಸ್ವಾಮಿ ಅವರು ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ರಾಜ್ಯಕ್ಕೆ ನೀಡಿರುವ ಜನಪರ ಕಾರ್ಯಕ್ರಮಗಳ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವ ಉದ್ದೇಶದಿಂದ ಈ ಪಾದಯಾತ್ರೆ ಹಮ್ಮಿಕೊಳ್ಳಲಾಗಿದೆ' ಎಂದು ತಿಳಿಸಿದರು.

ಮುಖಂಡರಾದ ಆಂಜನೇಗೌಡ, ವಿ.ಸುರೇಶ್, ಸಯದ್ ಅನೀಫ್ ಬಾಬು, ಖಲೀಲ್-ಉಲ್ಲಾ, ಹರೀಶ್, ಗಜೇಂದ್ರ, ವಿಜಿ, ಗುರು, ಮುರುಗ ಉಪಸ್ಥಿತರಿದ್ದರು.

ವಿಧಾನಸೌಧಕ್ಕೆ ಕರೆ ಮಾಡಿ ಬೆದರಿಸಿದ್ದ ಎಂಜಿನಿಯರ್ ಬಂಧಿಸಿದ ಪೊಲೀಸರು

ಪತ್ನಿಯರು ದೂರವಾಗಿದ್ದಕ್ಕೆ ಬಾಂಬ್ ಬೆದರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸೌಧದಲ್ಲಿ ಬಾಂಬ್ ಇಟ್ಟಿರುವುದಾಗಿ ಹೇಳಿ ಕರೆ ಮಾಡಿ ಬೆದರಿಸಿದ್ದ ಆರೋಪದಡಿ ಪ್ರಶಾಂತ್ (40) ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ.

'ಹೊಸಪೇಟೆಯ ಪ್ರಶಾಂತ್, ನಗರದ ಸಾಫ್ಟ್‌ವೇರ್ ಕಂಪನಿಯೊಂದರಲ್ಲಿ ಎಂಜಿನಿಯರ್ ಆಗಿ ಕೆಲಸ ಮಾಡುತ್ತಿದ್ದ. ಹೆಬ್ಬಗೋಡಿಯಲ್ಲಿ ವಾಸವಿದ್ದ. ಈತ, ಎರಡು ಮದುವೆಯಾಗಿದ್ದ. ಇಬ್ಬರೂ ಪತ್ನಿಯರು ವಿಚ್ಛೇದನ ನೀಡಿ ದೂರವಾಗಿದ್ದರು. ಇದರಿಂದ ಮಾನಸಿಕವಾಗಿ ನೊಂದಿದ್ದ ಪ್ರಶಾಂತ್, ವಿಧಾನಸೌಧಕ್ಕೆ ಕರೆ ಮಾಡಿ ಬಾಂಬ್ ಬೆದರಿಕೆಯೊಡ್ಡಿದ್ದ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ವಿಧಾನಸೌಧದ ಮುಖ್ಯ ಕಾರ್ಯದರ್ಶಿ ಕಚೇರಿ ದೂರವಾಣಿ ಸಂಖ್ಯೆಯನ್ನು ಗೂಗಲ್ ಜಾಲತಾಣದ ಮೂಲಕ ತಿಳಿದುಕೊಂಡಿದ್ದ ಆರೋಪಿ, ಅದೇ ಸಂಖ್ಯೆಗೆ ಶುಕ್ರವಾರ (ಅ. 7) ಮೂರು ಬಾರಿ ಕರೆ ಮಾಡಿದ್ದ. 'ವಿಧಾನಸೌಧದಲ್ಲಿ ಬಾಂಬ್ ಇರಿಸಿದ್ದೇನೆ. ಸದ್ಯದಲ್ಲೇ ಸ್ಫೋಟವಾಗಲಿದೆ' ಎಂದಿದ್ದ. ಗಾಬರಿಗೊಂಡ ಕಚೇರಿ ಸಿಬ್ಬಂದಿ, ಠಾಣೆಗೆ ಮಾಹಿತಿ ನೀಡಿದ್ದರು' ಎಂದು ಮೂಲಗಳು ತಿಳಿಸಿವೆ.


ಪ್ರಶಾಂತ್

ಅಪರಾಧ ಸುದ್ದಿ

'ಮೊಬೈಲ್ ಸಂಖ್ಯೆ ಆಧರಿಸಿ ತನಿಖೆ ಆರಂಭಿಸಿದ್ದ ಪೊಲೀಸರ ತಂಡ, ಪರಪ್ಪನ ಅಗ್ರಹಾರ ಠಾಣೆ ವ್ಯಾಪ್ತಿಯಲ್ಲಿ ಆರೋಪಿ ಪ್ರಶಾಂತ್‌ನನ್ನು ಬಂಧಿಸಿದೆ. ಸದ್ಯ ಈತ ನ್ಯಾಯಾಂಗ ಬಂಧನದಲ್ಲಿದ್ದಾನೆ' ಎಂದು ಮೂಲಗಳು ಹೇಳಿವೆ.

ಕೆಲಸ ಬಿಟ್ಟಿದ್ದ ಆರೋಪಿ: 'ಮೊದಲ ಮದುವೆಯ ನಂತರ ಪ್ರಶಾಂತ್ ಪತ್ನಿ ಜೊತೆಗೆ ಜಗಳ ಮಾಡುತ್ತಿದ್ದ. ಹೀಗಾಗಿ, ಮೊದಲ ಪತ್ನಿ ವಿಚ್ಛೇದನ ನೀಡಿದ್ದರು. ಬಳಿಕ ಆರೋಪಿ, ಮತ್ತೊಂದು ಮದುವೆಯಾಗಿದ್ದ. ಎರಡನೇ ಪತ್ನಿಯೂ ಈತನ ಕಿರುಕುಳದಿಂದ ಬೇಸತ್ತು ವಿಚ್ಛೇದನ ನೀಡಿದ್ದರು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಕುಟುಂಬದವರೂ ಪ್ರಶಾಂತ್‌ನನ್ನು ದೂರ ಇಟ್ಟಿದ್ದರು. ಇದರ ನಡುವೆಯೇ ಆರೋಪಿ, ಏಳು ತಿಂಗಳ ಹಿಂದೆಯಷ್ಟೇ ಕೆಲಸ ಬಿಟ್ಟಿದ್ದ. ಒಂಟಿಯಾಗಿದ್ದ ಪ್ರಶಾಂತ್, ಮಾನಸಿಕ ಸಮಸ್ಯೆಗೆ ತುತ್ತಾಗಿರುವುದು ಮೇಲ್ನೋಟಕ್ಕೆ ಗೊತ್ತಾಗುತ್ತಿದೆ' ಎಂದು ಹೇಳಿವೆ.

ಹಗಲಿನಲ್ಲಿ ಮನೆ ಗುರುತು, ರಾತ್ರಿ ಕಳ್ಳತನ

ಬೆಂಗಳೂರು: ಸರಗಳವು ಹಾಗೂ ಮನೆಗಳಲ್ಲಿ ಕಳ್ಳತನ ಮಾಡುತ್ತಿದ್ದ ಇಬ್ಬರು ಆರೋಪಿಗಳನ್ನು ಕೆ.ಆರ್.ಪುರ ಪೊಲೀಸರು ಬಂಧಿಸಿದ್ದಾರೆ.

'ಗೋವಿಂದಪುರ ಟ್ಯಾನರಿ ರಸ್ತೆಯ ಕುಪ್ಪಸ್ವಾಮಿ ಲೇಔಟ್ ನಿವಾಸಿ ರಫೀಕ್ ಖಾನ್ ಅಲಿಯಾಸ್ ಟೀಕು (27) ಹಾಗೂ ಕೆ.ಜಿ.ಎಫ್ ಕ್ಯಾಸಂಬಳ್ಳಿಯ ವಿನಯ್ (20) ಬಂಧಿತರು. ಇವರಿಂದ ₹ 6.25 ಲಕ್ಷ ಮೌಲ್ಯದ 102 ಗ್ರಾಂ ಚಿನ್ನಾಭರಣ ಹಾಗೂ ದ್ವಿಚಕ್ರ ವಾಹನ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ನಗರದಲ್ಲಿ ಸುತ್ತಾಡುತ್ತಿದ್ದ ಆರೋಪಿಗಳು, ರಂಗೋಲಿ ಹಾಕಿರದ ಹಾಗೂ ಅಂಗಳದಲ್ಲಿ ಕಸ ಬಿದ್ದಿರುತ್ತಿದ್ದ ಮನೆಗಳನ್ನು ಗುರುತಿಸುತ್ತಿದ್ದರು. ಅದೇ ಮನೆಗಳಿಗೆ ರಾತ್ರಿ ಹೋಗಿ, ಬೀಗ ಮುರಿದು ಕಳ್ಳತನ ಮಾಡಿ ಪರಾರಿಯಾಗುತ್ತಿದ್ದರು. ಕೆ.ಆರ್.ಪುರ ಠಾಣೆ ವ್ಯಾಪ್ತಿಯ ಮನೆಯೊಂದರಲ್ಲಿ ಇತ್ತೀಚೆಗೆ ಕಳ್ಳತನ ಮಾಡಿದ್ದರು' ಎಂದು ತಿಳಿಸಿದರು.

'ದ್ವಿಚಕ್ರ ವಾಹನದಲ್ಲಿ ಓಡಾಡುತ್ತಿದ್ದ ಆರೋಪಿಗಳು, ರಸ್ತೆಯಲ್ಲಿ ಒಂಟಿಯಾಗಿ ಹೋಗುವ ಮಹಿಳೆಯರನ್ನು ಹಿಂಬಾಲಿಸಿ ಸರ ಕದಿಯುತ್ತಿದ್ದರು. ಈ ಬಗ್ಗೆಯೂ ಹಲವು ಠಾಣೆಯಲ್ಲಿ ಪ್ರಕರಣಗಳು ದಾಖಲಾಗಿದ್ದವು' ಎಂದು ಪೊಲೀಸರು ಹೇಳಿದರು.

'ದ್ವಿಚಕ್ರ ವಾಹನ ಕದ್ದಿದ್ದ ಆರೋಪಿಗಳು, ಅದರಲ್ಲೇ ಸೆ. 29ರಂದು ಅಯ್ಯಪ್ಪನಗರದಲ್ಲಿ ಹೊರಟಿದ್ದರು. ಅವರ ದ್ವಿಚಕ್ರ ವಾಹನ ತಡೆದು ಪರಿಶೀಲಿಸಲಾಗಿತ್ತು. ವಾಹನಕ್ಕೆ ಯಾವುದೇ ದಾಖಲೆ ನೀಡಿರಲಿಲ್ಲ. ಆರೋಪಿಗಳು ವಾಹನ ಕದ್ದಿದ್ದ ಸಂಗತಿ ತಿಳಿಯುತ್ತಿದ್ದಂತೆ ವಶಕ್ಕೆ ಪಡೆಯಲಾಯಿತು. ಠಾಣೆಗೆ ಕರೆತಂದು ವಿಚಾರಿಸಿದಾಗ, ಮತ್ತಷ್ಟು ಕಳ್ಳತನ ಪ್ರಕರಣಗಳನ್ನು ಬಾಯ್ಬಿಟ್ಟರು' ಎಂದು ಪೊಲೀಸರು ತಿಳಿಸಿದರು.



ಪ್ರಶಸ್ತಿ ಪ್ರದಾನ

ಲಯನ್ಸ್ ಇಂಟರ್‌ನ್ಯಾಷನಲ್ ಡಿಸ್ಟ್ರಿಕ್ಟ್ 317ಎ ನಗರದಲ್ಲಿ ಆಯೋಜಿಸಿದ ಕಾರ್ಯಕ್ರಮದಲ್ಲಿ ಶೇಷಾದ್ರಿಪುರ ಶಿಕ್ಷಣ ಸಂಸ್ಥೆಗಳ ಗೌರವ ಪ್ರಧಾನ ಕಾರ್ಯದರ್ಶಿ ವೂಡೇ ಪಿ. ಕೃಷ್ಣ ಅವರಿಗೆ 'ಡಾ.ಎಂ.ಸಿ. ಮೋದಿ ಸ್ಮಾರಕ ಮಾನವೀಯ ಪ್ರಶಸ್ತಿ'ಯನ್ನು ಪ್ರದಾನ ಮಾಡಲಾಯಿತು. ಜೆ. ಮಂಜುನಾಥ್, ಶೋಭಾ ಹಂಜಿ, ಡಾ. ಶಶಿಧರ್ ಗಂಜಿಗಟ್ಟಿ, ಡಾ. ಮಹೇಶ್ ಕುಕ್ರೇಜ, ಪ್ರಕಾಶ್ ಎಫ್. ಮದ್ವಾನಿ ಇದ್ದರು

ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ: ಆರೋಪಿ ಬಂಧನ

ವಿಡಿಯೊ ಚಿತ್ರೀಕರಿಸಿ ಬ್ಲ್ಯಾಕ್‌ಮೇಲ್ ಮಾಡುತ್ತಿದ್ದ ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹದಿನೇಳು ವರ್ಷದ ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ ಎಸಗಿ, ಅದರ ವಿಡಿಯೊ ಚಿತ್ರೀಕರಿಸಿಕೊಂಡು ಬ್ಲ್ಯಾಕ್‌ಮೇಲ್ ಮಾಡುತ್ತಿದ್ದ ಆರೋಪದಡಿ ದೇವರಾಜ್ (24) ನನ್ನು ಬ್ಯಾಟರಾಯನಪುರ ಪೊಲೀಸರು ಬಂಧಿಸಿದ್ದಾರೆ.

'ಸ್ಥಳೀಯ ನಿವಾಸಿ ದೇವರಾಜ್, ಪ್ಲೈವುಡ್ ಮಳಿಗೆಯೊಂದರಲ್ಲಿ ಕೆಲಸ ಮಾಡುತ್ತಿದ್ದ. ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆ (ಪೋಕ್ಸೊ) ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡು, ಈತನನ್ನು ಬಂಧಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಬಾಲಕಿಯನ್ನು ಪರಿಚಯ ಮಾಡಿಕೊಂಡಿದ್ದ ಆರೋಪಿ, ಹಲವು ಆಮಿಷವೊಡ್ಡಿ ಸಲುಗೆ ಬೆಳೆಸಿದ್ದ. ಬಾಲಕಿಯನ್ನು ಹಲವೆಡೆ ಸುತ್ತಾಡಿಸಿ, ಹಲವು ಬಾರಿ ಲೈಂಗಿಕ ದೌರ್ಜನ್ಯ ಎಸಗಿದ್ದನೆಂದು ಗೊತ್ತಾಗಿದೆ. ಈತನ ಕೃತ್ಯಕ್ಕೆ ಸ್ನೇಹಿತರೂ ಸಹಕಾರ ನೀಡಿದ್ದ ಆರೋಪವಿದೆ. ಸದ್ಯ ಸ್ನೇಹಿತರಿಬ್ಬರು ತಲೆಮರೆಸಿಕೊಂಡಿದ್ದಾರೆ' ಎಂದು ತಿಳಿಸಿವೆ.

'ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದ ಆರೋಪಿ, ಅದರ ವಿಡಿಯೊವನ್ನು ಮೊಬೈಲ್‌ನಲ್ಲಿ ಚಿತ್ರೀಕರಿಸಿಕೊಂಡಿದ್ದ. 'ನಿನಗೆ ಈಗ 17 ವರ್ಷ ವಯಸ್ಸು. 18 ವರ್ಷ ವಯಸ್ಸು ದಾಟಿದ ನಂತರ ನನ್ನನ್ನೇ ಮದುವೆಯಾಗಬೇಕು. ಇಲ್ಲದಿದ್ದರೆ, ವಿಡಿಯೊವನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಅಪ್‌ಲೋಡ್ ಮಾಡುತ್ತೇನೆ' ಎಂದು ಬೆದರಿಸಿದ್ದ. ಇದರಿಂದ ಹೆದರಿದ್ದ ಬಾಲಕಿ, ಪೋಷಕರಿಗೆ ವಿಷಯ ತಿಳಿಸಿದ್ದರು. ಬಳಿಕವೇ ಪೋಷಕರ ಜೊತೆ ಠಾಣೆಗೆ ಬಂದು ಬಾಲಕಿ ದೂರು ನೀಡಿದ್ದಾಳೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಐದು ವರ್ಷದ ಪ್ರೀತಿ: 'ನಾನು ಹಾಗೂ ಬಾಲಕಿ ಐದು ವರ್ಷದಿಂದ ಪ್ರೀತಿಸುತ್ತಿದ್ದೆವು. ಆಕೆ ಇತ್ತೀಚೆಗೆ ನನ್ನನ್ನು ದೂರ ಮಾಡಲಾರಂಭಿಸಿದಳು. ಅದಕ್ಕೆ ವಿಡಿಯೊ ಚಿತ್ರೀಕರಿಸಿಕೊಂಡು ಬ್ಲ್ಯಾಕ್‌ಮೇಲ್ ಮಾಡಿದೆ' ಎಂದು ಆರೋಪಿ ಹೇಳಿಕೆ ನೀಡಿರುವುದಾಗಿ ಮೂಲಗಳು ತಿಳಿಸಿವೆ.

ಇಬ್ಬರು ಪಿಎಸ್‌ಐ, 4 ಕಾನ್‌ಸ್ಟೆಬಲ್ ಅಮಾನತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕ್ರಿಕೆಟ್ ಬೆಟ್ಟಿಂಗ್ ನಡೆಸುತ್ತಿದ್ದ ಆರೋಪ ಹೊರಿಸಿ ಉದ್ಯಮಿಯೊಬ್ಬರನ್ನು ಬೆದರಿಸಿ ಹಣ ವಸೂಲಿ ಮಾಡಿದ್ದ ಆರೋಪದಡಿ ಸದಾಶಿವನಗರ ಠಾಣೆಯ ಇಬ್ಬರು ಪಿಎಸ್‌ಐ ಹಾಗೂ ನಾಲ್ವರು ಕಾನ್‌ಸ್ಟೆಬಲ್‌ಗಳನ್ನು ಸೇವೆಯಿಂದ ಅಮಾನತು ಮಾಡಲಾಗಿದೆ.

ಪೊಲೀಸ್ ಸಬ್ ಇನ್‌ಸ್ಪೆಕ್ಟರ್‌ಗಳಾದ (ಪಿಎಸ್‌ಐ) ಟಿ. ಬಸವರಾಜ್, ಡಿ.ಆರ್. ಮೋಹನ್‌ಕುಮಾರ್, ಕಾನ್‌ಸ್ಟೆಬಲ್‌ಗಳಾದ ಶಿವಕುಮಾರ್, ಪರಶುರಾಮ್ ಹಾಗೂ ನಾಗರಾಜ್ ಅಮಾನತಾದವರು.

'ಕೇಂದ್ರ ವಿಭಾಗ ವ್ಯಾಪ್ತಿಯ ಸದಾಶಿವನಗರ ಠಾಣೆಯ ಐವರು ಪೊಲೀಸರು, ಸೆಪ್ಟೆಂಬರ್‌ನಲ್ಲಿ ಈಶಾನ್ಯ ವಿಭಾಗಕ್ಕೆ ಹೋಗಿ ಉದ್ಯಮಿ ಯೋಗೇಶ್ ಎಂಬುವರನ್ನು ವಶಕ್ಕೆ ಪಡೆದಿದ್ದರು. ಕ್ರಿಕೆಟ್ ಬೆಟ್ಟಿಂಗ್‌ನಲ್ಲಿ ಭಾಗಿಯಾಗಿರುವುದಾಗಿ ಆರೋಪ ಹೊರಿಸಿ ಬೆದರಿಸಿದ್ದರು. ₹ 1 ಲಕ್ಷಕ್ಕೂ ಹೆಚ್ಚು ಮೊತ್ತ ವಸೂಲಿ ಮಾಡಿದ್ದರು' ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಘಟನೆಯಿಂದ ನೊಂದ ಯೋಗೇಶ್, ಈಶಾನ್ಯ ವಿಭಾಗದ ಡಿಸಿಪಿ ಅನೂಪ್ ಶೆಟ್ಟಿ ಅವರಿಗೆ ಲಿಖಿತ ದೂರು ನೀಡಿದ್ದರು. ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದ್ದ ಡಿಸಿಪಿ, ಯಲಹಂಕ ಉಪವಿಭಾಗದ ಎಸಿಪಿ ನೇತೃತ್ವದ ತಂಡದಿಂದ ತನಿಖೆ ಮಾಡಿಸಿದ್ದರು.'

'ಐವರು ಪೊಲೀಸರು ಹಣ ವಸೂಲಿ ಮಾಡಿರುವುದು ತನಿಖೆಯಿಂದ ಗೊತ್ತಾಗಿತ್ತು. ತನಿಖೆ ವರದಿಯನ್ನು ಕಮಿಷನರ್ ಪ್ರತಾಪ್ ರೆಡ್ಡಿ ಅವರಿಗೆ ಇತ್ತೀಚೆಗೆ ಸಲ್ಲಿಸಲಾಗಿತ್ತು. ಇದರ ಬೆನ್ನಲ್ಲೇ ಪೊಲೀಸರನ್ನು ಅಮಾನತು ಮಾಡಿ ಹೆಚ್ಚುವರಿ ಪೊಲೀಸ್ ಕಮಿಷನರ್ ಆದೇಶ ಹೊರಡಿಸಿದ್ದಾರೆ' ಎಂದು ತಿಳಿಸಿದರು.

'ಅಮಾನತಾಗಿರುವ ಪಿಎಸ್‌ಐ ಹಾಗೂ ಕಾನ್‌ಸ್ಟೆಬಲ್‌ಗಳು, ತಮ್ಮದಲ್ಲದ ಠಾಣೆ ವ್ಯಾಪ್ತಿಗೆ ಹೋಗಿದ್ದರು. ಈ ಬಗ್ಗೆ ಅಲ್ಲಿಯ ಪೊಲೀಸರಿಗೆ ಹಾಗೂ ವಿಭಾಗದ ಡಿಸಿಪಿ ಅವರಿಗೆ ಮಾಹಿತಿ ನೀಡಿರಲಿಲ್ಲ' ಎಂದು ಹೇಳಿದರು.

ಅಮಾನತು ಬಗ್ಗೆ ಪ್ರತಿಕ್ರಿಯಿಸಿದ ಕೇಂದ್ರ ವಿಭಾಗದ ಡಿಸಿಪಿ ಶ್ರೀನಿವಾಸ್ ಗೌಡ, 'ಕ್ರಿಕೆಟ್ ಬೆಟ್ಟಿಂಗ್ ದಾಳಿ ಸಂಬಂಧ ಐವರು ಪೊಲೀಸರನ್ನು ಅಮಾನತು ಮಾಡಲಾಗಿದೆ. ಅವರ ವಿರುದ್ಧ ಇಲಾಖೆ ವಿಚಾರಣೆ ನಡೆಯುತ್ತಿದೆ. ಸದ್ಯಕ್ಕೆ ಹೆಚ್ಚಿನ ಮಾಹಿತಿ ನೀಡಲಾಗದು' ಎಂದು ಕೇಂದ್ರ ವಿಭಾಗದ ಡಿಸಿಪಿ ಶ್ರೀನಿವಾಸ್‌ಗೌಡ ಹೇಳಿದರು.

ವಿಳಾಸ ತಿಳಿಸದಿದ್ದಕ್ಕೆ ಹಲ್ಲೆ: ಸೆರೆ

ಬೆಂಗಳೂರು: ತಾನು ಹುಡುಕುತ್ತಿದ್ದ ಯುವಕನ ಮನೆ ವಿಳಾಸ ತಿಳಿಸಲಿಲ್ಲವೆಂಬ ಕಾರಣಕ್ಕೆ ದೀಪಕ್ ರಾಜ್ ಎಂಬುವವರ ಮೇಲೆ ಹಲ್ಲೆ ಮಾಡಿದ್ದ ಆರೋಪದಡಿ ಮಂಜೇಶ್ ಎಂಬಾತನನ್ನು ಮಾಗಡಿ ರಸ್ತೆ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಕೆಎಚ್‌ಬಿ ಕಾಲೊನಿಯಲ್ಲಿ ಇತ್ತೀಚೆಗೆ ನಡೆದಿದ್ದ ಘಟನೆಯಲ್ಲಿ ದೀಪಕ್ ರಾಜ್ ಗಾಯಗೊಂಡಿದ್ದರು. ಅವರ ತಂದೆ ನೀಡಿದ್ದ ದೂರು ಆಧರಿಸಿ ಮಂಜೇಶ್‌ನನ್ನು ಬಂಧಿಸಲಾಗಿದೆ. ಈತನ ಸಹಚರರು ತಲೆಮರೆಸಿಕೊಂಡಿದ್ದಾರೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಆರೋಪಿ ಮಂಜೇಶ್, ಯುವತಿ ಹಿಂದೆ ಬಿದ್ದಿದ್ದ. ಆದರೆ, ಯುವತಿ ಬೇರೊಬ್ಬ ಯುವಕನನ್ನು ಪ್ರೀತಿಸುತ್ತಿದ್ದರು. ಯುವಕನ ಮೇಲೆ ಸಿಟ್ಟಾಗಿದ್ದ ಮಂಜೇಶ್, ಅವರ ಮೇಲೆ ಹಲ್ಲೆ ಮಾಡಲೆಂದು ಸಹಚರರ ಜೊತೆ ಕೆಎಚ್‌ಬಿ ಕಾಲೊನಿಗೆ ಹೋಗಿದ್ದ. ರಸ್ತೆ ಬದಿಯಲ್ಲಿ ಸ್ನೇಹಿತನ ಜೊತೆ ಮಾತನಾಡುತ್ತ ನಿಂತಿದ್ದ ದೀಪಕ್‌ಗೆ ವಿಳಾಸ ಕೇಳಿದ್ದ. ತಮಗೆ ಗೊತ್ತಿಲ್ಲವೆಂದು ದೀಪಕ್ ಹೇಳಿದ್ದರು. ಅಷ್ಟಕ್ಕೆ ಸಿಟ್ಟಾಗಿದ್ದ ಆರೋಪಿಗಳು, ಆಯುಧದಿಂದ ಹೊಡೆದು ಪರಾರಿಯಾಗಿದ್ದರು' ಎಂದೂ ಮೂಲಗಳು ತಿಳಿಸಿವೆ.

ಸುಲಿಗೆ–ಇಬ್ಬರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾಗಡಿ ರಸ್ತೆಯ ಸುಮನಹಳ್ಳಿ ಜಂಕ್ಷನ್‌ನಲ್ಲಿ ವ್ಯಕ್ತಿಯೊಬ್ಬರಿಗೆ ಚಾಕುವಿನಿಂದ ಇರಿದು ಸುಲಿಗೆ ಮಾಡಿದ್ದ ಇಬ್ಬರು ಆರೋಪಿಗಳನ್ನು ಕಾಮಾಕ್ಷಿಪಾಳ್ಯ ಪೊಲೀಸರು ಬಂಧಿಸಿದ್ದಾರೆ.

'ನರಸಿಂಹಪಾಳ್ಯ ನಿವಾಸಿ ಕಿಶೋರ್ (19) ಹಾಗೂ ಸುಧಾಕರ್ (19) ಎಂಬುವವರನ್ನು ಬಂಧಿಸಲಾಗಿದೆ. ಇವರಿಂದ ₹ 51 ಸಾವಿರ ಮೌಲ್ಯದ 4 ಮೊಬೈಲ್, ₹ 1,000 ನಗದು ಹಾಗೂ ಕೃತ್ಯಕ್ಕೆ ಬಳಸಿದ್ದ ಚಾಕು ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ದೂರುದಾರ ಸೂಫಿ ಅವರು ಜಂಕ್ಷನ್‌ನ ರಸ್ತೆಬದಿಯಲ್ಲಿ ನಿಂತು ಸಿಗರೇಟ್ ಸೇದುತ್ತಿದ್ದರು. ದ್ವಿಚಕ್ರ ವಾಹನದಲ್ಲಿ ಸ್ಥಳಕ್ಕೆ ಬಂದಿದ್ದ ಆರೋಪಿಗಳು, ಚಾಕು ತೋರಿಸಿ ಬೆದರಿಸಿದ್ದರು. ಮೊಬೈಲ್ ಹಾಗೂ ಪರ್ಸ್ ಕಿತ್ತುಕೊಳ್ಳಲು ಯತ್ನಿಸಿದ್ದರು. ಪ್ರತಿರೋಧವೊಡ್ಡಿದ್ದ ಸೂಫಿ, ಆರೋಪಿಗಳಿಂದ ತಪ್ಪಿಸಿಕೊಳ್ಳಲು ಮುಂದಾಗಿದ್ದರು.'


ಕಾಮಾಕ್ಷಿಪಾಳ್ಯ ಪೊಲೀಸರು ಆರೋಪಿಗಳಿಂದ ಜಪ್ತಿ ಮಾಡಲಾದ ಮೊಬೈಲ್, ನಗದು ಹಾಗೂ ಚಾಕು

'ಸಿಟ್ಟಾದ ಆರೋಪಿಗಳು, ಸೂಫಿ ಅವರಿಗೆ ಚಾಕುವಿನಿಂದ ಇರಿದಿದ್ದರು. ನಂತರ, ಮೊಬೈಲ್ ಹಾಗೂ ₹ 3,200 ನಗದು ಕಿತ್ತುಕೊಂಡು ಪರಾರಿಯಾಗಿದ್ದರು. ಈ ಸಂಬಂಧ ಪ್ರಕರಣ ದಾಖಲಾಗಿತ್ತು' ಎಂದು ತಿಳಿಸಿದರು.

'ಬಂಧಿತ ಆರೋಪಿಗಳು, ರಸ್ತೆಯಲ್ಲಿ ಒಂಟಿಯಾಗಿ ಓಡಾಡುವವರನ್ನು ಗುರಿಯಾಗಿಸಿಕೊಂಡು ಕೃತ್ಯ ಎಸಗುತ್ತಿದ್ದರು' ಎಂದು ಪೊಲೀಸರು ಹೇಳಿದರು.

ಪುಣೆ ರೇಸ್

ಜೂಲಿಯೆಟ್ ಗೆಲ್ಲುವ ನಿರೀಕ್ಷೆ

ಥ್ರೆಸ್ಪಿನ್ ಫಿಲ್ಲೀಸ್ ಅಂಡ್ ಮೇರ್ಸ್ ಸ್ಟೇಕ್ಸ್ ಭಾನುವಾರದ ಪುಣೆ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಜೂಲಿಯೆಟ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1.30ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಹಾಕ್ ಆಫ್ ದಿ ವಿಂಡ್ 2, ಸೆನ್ಸಿಬಿಲಿಟಿ 1, ಪೈರಸ್ 5
2ನೇ ರೇಸ್: ಅಲಿಸಿಯಾ 4, ಟೆರೆಸಿಟ 3, ಮಲ್ಟಿಸ್ಟಾರರ್ 5
3ನೇ ರೇಸ್: ಲಿಟ್ 2, ಡಾಲಿ ಸ್ವಿರ್ಲ್ 5, ಸೌಝಾ 8
4ನೇ ರೇಸ್: ಟೈರಾನ್ ಬ್ಲ್ಯಾಕ್ 3, ಔಟ್‌ಲ್ಯಾಂಡರ್ 2, ಡಿವೈನ್ ಥಾಟ್ಸ್ 4
5ನೇ ರೇಸ್: ಜೂಲಿಯೆಟ್ 2, ಫಾರೆಸ್ಟ್ ಫ್ಲೇಮ್ 1
6ನೇ ರೇಸ್: ಇಟ್ಸ್ ಮೈ ಟೈಮ್ 1, ಮುವಾರ ಪ್ರಿನ್ಸೆಸ್ 4, ಲೆಟೊ 2
7ನೇ ರೇಸ್: ಸ್ಯಾಂಡ್‌ಮ್ಯಾನ್ 1, ಕಾಗ್ನೊಸ್ಕೊ 3, ಸಿಫರ್ 4
8ನೇ ರೇಸ್: ಟ್ರೈಸ್ಟಾರ್ 4, ಮೈಸೇಲ್ಲಾ 2, ಬಿಟ್ವೀನ್ ಫ್ರೆಂಡ್ಸ್ 6

ಉತ್ತಮ ಬೆಟ್: ಹಾಕ್ ಆಫ್ ದಿ ವಿಂಡ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
4,5,6,7,8	5,6,7	6,7,8

ಬೆಂಗಳೂರಿನ ಯುವಕ ಮಧುಗಿರಿಯಲ್ಲಿ ನೀರುಪಾಲು

ಮಧುಗಿರಿ: ತಾಲ್ಲೂಕಿನ ಕಸಬಾ ವ್ಯಾಪ್ತಿಯ ಮೀನಗೊಂದಿ ರಂಗನಾಥ ಸ್ವಾಮಿ ದೇಗುಲ ಮೇಲ್ಭಾಗದ ಕಲ್ಯಾಣಿಯಲ್ಲಿ ಈಜಲು ಹೋಗಿ ಬೆಂಗಳೂರಿನ ಕಮಲಾ ನಗರದ ನಿವಾಸಿ ಆರ್.ಧನುಬಲರಾಮ್ (25) ಮೃತಪಟ್ಟಿದ್ದಾರೆ.

ಮೀನಗೊಂದಿ ರಂಗನಾಥ ಸ್ವಾಮಿ ದೇವಾಲಯಕ್ಕೆ ಧನುಬಲರಾಮ್ ಕುಟುಂಬ ಸಮೇತ ಭೇಟಿ ನೀಡಿದ್ದರು. ಅವರಲ್ಲಿ ನಾಲ್ಕು ಮಂದಿ ಬೆಟ್ಟದ ಮೇಲಿರುವ ಕಲ್ಯಾಣಿಯಲ್ಲಿ ಈಜಲು ತೆರಳಿದ್ದರು. ಧನುಬಲರಾಮ ನೀರಿನಲ್ಲಿ ಮುಳುಗಿ ಮೃತಪಟ್ಟಿದ್ದಾರೆ.


'ಸಾಹಿತ್ಯ ಕ್ಷೇತ್ರಕ್ಕೆ ಜೈನ ಸಾಹಿತಿಗಳ ಕೊಡುಗೆ ಅಪಾರ'

ಬೆಂಗಳೂರು: 'ಸಾಹಿತ್ಯ ಕ್ಷೇತ್ರಕ್ಕೆ ಜೈನ ಸಾಹಿತಿಗಳ ಕೊಡುಗೆ ಅಪಾರ' ಎಂದು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಹೇಶ ಜೋಷಿ ಹೇಳಿದರು.

ನಗರದಲ್ಲಿ ಶನಿವಾರ ಅಖಿಲ ಕರ್ನಾಟಕ ಜೈನ ಶಿಕ್ಷಕರ ವೇದಿಕೆಯಿಂದ ಆಯೋಜಿಸಿದ್ದ 13ನೇ ಜೈನ ಶಿಕ್ಷಕರ ರಾಜ್ಯ ಸಮಾವೇಶದಲ್ಲಿ ಅವರು ಮಾತನಾಡಿದರು.

'ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಜೈನ ಕವಿಗಳು ಕಿರೀಟ ಇದ್ದಂತೆ. ಅವರ ಕೊಡುಗೆಯನ್ನು ಸ್ಮರಣೆ ಮಾಡಿಕೊಳ್ಳಬೇಕಿದೆ' ಎಂದರು.

'ಆದಿ ಕಾಲದಿಂದಲೂ ಮೌಲ್ಯಾಧಾರಿತ ಶಿಕ್ಷಣಕ್ಕೆ ಕನ್ನಡ ನಾಡು ಹೆಸರಾಗಿದೆ. ಶಿಕ್ಷಣವು ಸಂಸ್ಕಾರ, ಸಂಸ್ಕೃತಿ ಹಾಗೂ ಆದರ್ಶ ಕಲಿಸುತ್ತಿದೆ. ಶಿಕ್ಷಕರು ವಿದ್ಯಾರ್ಥಿಗಳ ಬದುಕು ರೂಪಿಸುತ್ತಾರೆ. ಹಾಗೆಯೇ ಶಿಕ್ಷಕ ಸಮುದಾಯಕ್ಕೆ ಸಮಾಜವು ಗೌರವ ನೀಡುತ್ತಿದೆ' ಎಂದು ತಿಳಿಸಿದರು.


ನಗರದಲ್ಲಿ ಶನಿವಾರ ಅಖಿಲ ಕರ್ನಾಟಕ ಜೈನ ಶಿಕ್ಷಕರ ವೇದಿಕೆ ಆಯೋಜಿಸಿದ್ದ 13ನೇ ರಾಜ್ಯ ಸಮಾವೇಶದಲ್ಲಿ ಕರ್ನಾಟಕ ಜೈನ ಅಸೋಸಿಯೇಷನ್ ಅಧ್ಯಕ್ಷ ಬಿ. ಪ್ರಸನ್ನಯ್ಯ (ಎಡಬದಿ) ಸ್ಮರಣ ಸಂಚಿಕೆ ಬಿಡುಗಡೆ ಮಾಡಿದರು. ಮಹೇಶ ಜೋಷಿ, ಧರ್ಮಸ್ಥಳ ಸುರೇಂದ್ರ ಕುಮಾರ್, ಅನಿತಾ ಸುರೇಂದ್ರ ಕುಮಾರ್, ಅನಿಲ್ ಕುಮಾರ್ ಇದ್ದರು
–ಪ್ರಜಾವಾಣಿ ಚಿತ್ರ

ಕರ್ನಾಟಕ ಜೈನ್ ಅಸೋಸಿಯೇಷನ್ ಅಧ್ಯಕ್ಷ ಬಿ.ಪ್ರಸನ್ನಯ್ಯ ಮಾತನಾಡಿ, 'ಜೈನ ಶಿಕ್ಷಕರ 13 ಸಮ್ಮೇಳನಗಳನ್ನು ಯಶಸ್ವಿಯಾಗಿ ನಡೆಸಲಾಗಿದೆ. ವಕೀಲರು ಹಾಗೂ ಲೆಕ್ಕ ಪರಿಶೋಧಕರ ವೇದಿಕೆ ರಚಿಸಲಾಗಿದ್ದರೂ ಅವುಗಳು ಸಕ್ರಿಯವಾಗಲಿಲ್ಲ' ಎಂದು ವಿಷಾದಿಸಿದರು.

ವೇದಿಕೆ ಅಧ್ಯಕ್ಷೆ ಡಾ.ಪದ್ಮಿನಿ ನಾಗರಾಜು ಮಾತನಾಡಿ, 'ಕೋವಿಡ್ ಕಾಲದಲ್ಲಿ ಆನ್‌ಲೈನ್‌ನಲ್ಲೇ ಕಾರ್ಯಕ್ರಮ ನಡೆಸಲಾಗಿತ್ತು. ಬೆಳಗಾವಿ, ಮೈಸೂರು, ವಿಜಯಪುರ, ಜಮಖಂಡಿ, ಹೊಂಬುಜ, ಮೂಡುಬಿದಿರೆ ಸೇರಿದಂತೆ ವಿವಿಧೆಡೆ ಸಮಾವೇಶ ನಡೆಸಲಾಗಿತ್ತು' ಎಂದು ಹೇಳಿದರು.

ಅಮೋಘಕೀರ್ತಿ ಮಹಾರಾಜ ಹಾಗೂ ಅಮರಕೀರ್ತಿ ಮಹಾರಾಜ ಅವರು ನೇತೃತ್ವ ವಹಿಸಿದ್ದರು.

ಅಖಿಲ ಕರ್ನಾಟಕ ಜೈನ ಶಿಕ್ಷಕರ ವೇದಿಕೆ ಗೌರವಾಧ್ಯಕ್ಷ ಧರ್ಮಸ್ಥಳ ಸುರೇಂದ್ರಕುಮಾರ್, ಅನಿತಾ ಸುರೇಂದ್ರಕುಮಾರ್, ರಾಜ್ಯ ಕಾರ್ಯದರ್ಶಿ ನಾಗರಾಜ ಬ. ಮರೆಣ್ಣವರ ಹಾಜರಿದ್ದರು.

'ಮಿರ್ಜಿ ಅಣ್ಣಾರಾಯ ಪ್ರಶಸ್ತಿ' ಪ್ರದಾನ: ಮೂಡಬಿದರೆಯ ಮುನಿರಾಜ ರೆಂಜಾಳ ಅವರಿಗೆ ಮಿರ್ಜಿ ಅಣ್ಣಾರಾಯ ಪ್ರಶಸ್ತಿ ಪ್ರದಾನ ಮಾಡಲಾಯಿತು. ಪ್ರೊ.ಬಿ.ಪಿ.ವೀರೇಂದ್ರ ಕುಮಾರ್, ಡಾ.ಎಚ್.ಪಿ.ಮೋಹನ್‌ಕುಮಾರ್, ಡಿ.ಸುಜಲಾದೇವಿ, ವೀರಶ್ರೀ ಸಮಾಜೆ ಹಾಗೂ ತನುಜ ಜೈನ್ ಅವರಿಗೆ ಜ್ಞಾನಶ್ರೀ ಪ್ರಶಸ್ತಿ ಪ್ರದಾನ ಮಾಡಲಾಯಿತು.

'26/11 ದಾಳಿ ಸ್ಮರಣೆ: ಮುಂಬೈಯಲ್ಲಿ ಯುಎನ್‌ಎಸ್‌ಸಿ ಸಭೆ'

ವಿಶ್ವಸಂಸ್ಥೆ (ಪಿಟಿಐ): ವಿಶ್ವಸಂಸ್ಥೆ ಭದ್ರತಾ ಮಂಡಳಿಯ ಭಯೋತ್ಪಾದನಾ ನಿಗ್ರಹ ಸಮಿತಿಯ ಸಭೆಯು ಇದೇ ತಿಂಗಳ ಅಂತ್ಯದಲ್ಲಿಮುಂಬೈಯಲ್ಲಿನಡೆಯಲಿದೆ.

'2008ರ ನವೆಂಬರ್‌ನಲ್ಲಿ (26/11) ನಡೆದಿದ್ದ ಭಯೋತ್ಪಾದನಾ ದಾಳಿಯಲ್ಲಿ ಮೃತಪಟ್ಟವರ ಗೌರವಾರ್ಥ ಈ ಸಭೆಯನ್ನು ಮುಂಬೈ ಹಾಗೂ ನವದೆಹಲಿಯಲ್ಲಿ ಕ್ರಮವಾಗಿ ಅಕ್ಟೋಬರ್ 28 ಮತ್ತು 29ರಂದು ಆಯೋಜಿಸಲಾಗಿದೆ' ಎಂದು ವಿಶ್ವಸಂಸ್ಥೆಯ ಭಾರತದ ಶಾಶ್ವತ ರಾಯಭಾರಿ ರುಚಿರಾ ಕಾಂಬೋಜ್ ಶುಕ್ರವಾರ ಹೇಳಿದ್ದಾರೆ.

ಭಾರತವು ಪ್ರಸಕ್ತ ಸಾಲಿಗೆ ಭಯೋತ್ಪಾದನಾ ನಿಗ್ರಹ ಸಮಿತಿಯ ಅಧ್ಯಕ್ಷ ಸ್ಥಾನದಲ್ಲಿದೆ. ಮುಂಬೈ, ದೆಹಲಿಯಲ್ಲಿ ನಿಗದಿಯಾಗಿರುವ ವಿಶೇಷ ಸಭೆಯಲ್ಲಿ ಎಲ್ಲಾ 15 ಸದಸ್ಯ ರಾಷ್ಟ್ರಗಳ ರಾಜತಾಂತ್ರಿಕರು, ಇತರೆ ರಾಷ್ಟ್ರಗಳ ಪ್ರತಿನಿಧಿಗಳು ಪಾಲ್ಗೊಳ್ಳಲಿದ್ದಾರೆ.

ಈಶಾ ಕೇಂದ್ರದ ನಾಗ ಮಂಟಪ ಉದ್ಘಾಟಿಸಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ

'ಮಣ್ಣು ಉಳಿಸಿದರೆ ಸಂಸ್ಕೃತಿ ಉಳಿಸಿದಂತೆ'

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: ಆವಲಗುರ್ಕಿ ಸಮೀಪದ ಜಾಲಾರಿ ನರಸಿಂಹಸ್ವಾಮಿ ಬೆಟ್ಟದ ಬಳಿ ನಿರ್ಮಾಣಗೊಳ್ಳುತ್ತಿರುವ ಈಶಾ ಯೋಗ ಕೇಂದ್ರ ಜಾಗತಿಕ ಕೇಂದ್ರವಾಗಿ ಬೆಳೆಯಲಿದ್ದು ಸರ್ಕಾರ ಎಲ್ಲ ಸಹಕಾರ ನೀಡಲಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ತಾಲ್ಲೂಕಿನ ಆವಲಗುರ್ಕಿ ಗ್ರಾಮದ ಬಳಿಯ ಜಾಲಾರಿ ನರಸಿಂಹಸ್ವಾಮಿ ಬೆಟ್ಟದಲ್ಲಿ ಈಶಾ ಯೋಗ ಕೇಂದ್ರ ಶನಿವಾರ ಹಮ್ಮಿಕೊಂಡಿದ್ದ ನಾಗ ಮಂಟಪ ಉದ್ಘಾಟನಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಮಣ್ಣನ್ನು ಉಳಿಸಿದರೆ ಮಾನವನನ್ನು ಉಳಿಸಿದಂತೆ. ಆ ಕಾರಣದಿಂದ ಅವರ ಮಣ್ಣು ಉಳಿಸಿ ಅಭಿಯಾನಕ್ಕೆ ಸರ್ಕಾರ ₹100 ಕೋಟಿ ಕೊಟ್ಟಿದೆ. ಮತ್ತಷ್ಟು ಹಣ ನೀಡಲು ಸರ್ಕಾರ ಸಿದ್ಧವಿದೆ. ಚಿಕ್ಕಬಳ್ಳಾಪುರ ಜಿಲ್ಲೆಯ ರೈತರ ಆದಾಯವನ್ನು ಅವರು ದುಪ್ಪಟ್ಟು ಮಾಡಲು ಮುಂದಾಗಿದ್ದಾರೆ. ಭವಿಷ್ಯದಲ್ಲಿ ಅದನ್ನು ರಾಜ್ಯದಾದ್ಯಂತ ಪಸರಿಸಲಾಗುವುದು' ಎಂದು ಹೇಳಿದರು.


ಚಿಕ್ಕಬಳ್ಳಾಪುರ ತಾಲ್ಲೂಕಿನ ಆವಲಗುರ್ಕಿ ಗ್ರಾಮದ ಬಳಿಯ ಜಾಲಾರಿ ನರಸಿಂಹಸ್ವಾಮಿ ಬೆಟ್ಟದ ಬಳಿ ಈಶಾ ಯೋಗ ಕೇಂದ್ರ ಶನಿವಾರ ಹಮ್ಮಿಕೊಂಡಿದ್ದ ನಾಗ ಮಂಟಪ ಉದ್ಘಾಟನಾ ಕಾರ್ಯಕ್ರಮದಲ್ಲಿ ಜಗ್ಗಿ ವಾಸುದೇವ್ ಅವರು ಮಂಟಪದ ಬಗ್ಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ಸಚಿವ ಡಾ.ಕೆ. ಸುಧಾಕರ್ ಅವರಿಗೆ ವಿವರಣೆ ನೀಡಿದರು

'ಇಲ್ಲಿನ ನಾಗ ಪ್ರತಿಮೆಯಲ್ಲಿ ಸೃಷ್ಟಿಯ ಪರಿಕಲ್ಪನೆ ಬಿಂಬಿಸಿದ್ದಾರೆ. ನಾಗರಿಕತೆ ಬೆಳೆದು, ಪ್ರಗತಿ ಹೊಂದಿದ್ದೇವೆ. ಆದರೆ, ಸಂಸ್ಕೃತಿ ಏನಾಗಿದೆ ಎನ್ನುವ ಚಿಂತನೆ ಅವರದ್ದು. ನಾಗರಿಕತೆ ಬೆಳೆದಿದೆ. ಆದರೆ, ನಾವು ಏನಾಗಿದ್ದೇವೆ ಎನ್ನುವುದು ಸಂಸ್ಕೃತಿ' ಎಂದರು.

ಪಾಪಾಗ್ನಿ ಮಠದ ವೃಷಭಾನಂದ ಉಮೇಶ್ವರ ಸ್ವಾಮೀಜಿ, ನಿವೃತ್ತ ಪೊಲೀಸ್ ಅಧಿಕಾರಿ ಗೋಪಾಲ್ ಹೊಸೂರು, ಇಸ್ರೊ ಮಾಜಿ ಅಧ್ಯಕ್ಷ ಕಿರಣ್ ಕುಮಾರ್, ಜಿಲ್ಲಾಧಿಕಾರಿ ಎನ್.ಎಂ.ನಾಗರಾಜ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಿ.ಎಲ್. ನಾಗೇಶ್, ಆರ್.ಕೆ.ಶ್ರೀವಾಸ್ತವ್ ಇದ್ದರು.

'ರೈತರ ಆದಾಯ ಹೆಚ್ಚಿಸುವುದು ನಮ್ಮ ಉದ್ದೇಶ': 'ರೈತರ ಆದಾಯ ಹೆಚ್ಚಿಸುವುದು ನಮ್ಮ ಉದ್ದೇಶ. ಚಿಕ್ಕಬಳ್ಳಾಪುರದಲ್ಲಿ ರೈತ ಉತ್ಪಾದಕ ಗುಂಪು ಮಾಡಬೇಕು ಎನ್ನುವ ಆಲೋಚನೆ ಇದೆ. ಈಗಾಗಲೇ ದೇಶದ ಹಲವು ಕಡೆಗಳಲ್ಲಿ ರೈತ ಉತ್ಪಾದಕ ಗುಂಪು ರಚಿಸಿದ್ದೇವೆ. ಅಂತಹ ಕಡೆಗಳಲ್ಲಿ ರೈತರ ಆದಾಯ ಶೇ 800 ರಷ್ಟು ಹೆಚ್ಚಿದೆ' ಎಂದು ಜಗ್ಗಿ ವಾಸುದೇವ್ ಹೇಳಿದರು.

ಈದ್ ಮಿಲಾದ್: ಮದ್ಯ ಮಾರಾಟ ನಿಷೇಧ

ಬೆಂಗಳೂರು: ಈದ್ ಮಿಲಾದ್ ಹಬ್ಬದ ಅಂಗವಾಗಿ ನಗರದ ಕೆಲ ಪ್ರದೇಶಗಳಲ್ಲಿ ಭಾನುವಾರ ಮೆರವಣಿಗೆ ನಡೆಯಲಿದ್ದು, ಮುಂಜಾಗ್ರತಾ ಕ್ರಮವಾಗಿ ಮದ್ಯ ಮಾರಾಟ ನಿಷೇಧಿಸಿ ಪೊಲೀಸ್ ಕಮಿಷನರ್ ಪ್ರತಾಪ್ ರೆಡ್ಡಿ ಆದೇಶ ಹೊರಡಿಸಿದ್ದಾರೆ.

'ಹೆಣ್ಣೂರು, ಗೋವಿಂದಪುರ, ಕೆ.ಜಿ.ಹಳ್ಳಿ, ಡಿ.ಜೆ.ಹಳ್ಳಿ, ಬಾಣಸವಾಡಿ, ಪುಲಿಕೇಶಿನಗರ, ಶಿವಾಜಿನಗರ, ಕಮರ್ಷಿಯಲ್ ಸ್ಟ್ರೀಟ್ ಹಾಗೂ ಭಾರತಿನಗರ ಠಾಣೆ ವ್ಯಾಪ್ತಿಯಲ್ಲಿ ಮೆರವಣಿಗೆ ನಡೆಯಲಿದೆ. ಈ ಭಾಗದಲ್ಲಿ ಭಾನುವಾರ ಬೆಳಿಗ್ಗೆ 6 ಗಂಟೆಯಿಂದ ತಡರಾತ್ರಿ 1 ಗಂಟೆಯವರೆಗೆ ಮದ್ಯ ಮಾರಾಟ ನಿಷೇಧಿಸಲಾಗಿದೆ' ಎಂದು ಆದೇಶದಲ್ಲಿ ತಿಳಿಸಲಾಗಿದೆ. 'ಆದೇಶ ಉಲ್ಲಂಘಿಸಿದರೆ, ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು' ಎಂದು ಎಚ್ಚರಿಸಲಾಗಿದೆ.

ದಟ್ಟಣೆ: ಕಾಮಗಾರಿಗೆ ಗಡುವು

ಬೆಂಗಳೂರು: ಯಶವಂತಪುರ ವೃತ್ತದಿಂದ ಮಲ್ಲೇಶ್ವರದ ಮಾರಮ್ಮನ ಗುಡಿ ಸರ್ಕಲ್‌ವರೆಗೆ ವೈಟ್ ಟಾಪಿಂಗ್ ಕಾಮಗಾರಿ ನಡೆಯುತ್ತಿದ್ದು, ನ.1ರ ಒಳಗೆ ಮುಗಿಸಬೇಕು ಎಂದು ಸಚಿವ ಸಿ.ಎನ್.ಅಶ್ವತ್ಥನಾರಾಯಣ ಸೂಚಿಸಿದರು.

ಶನಿವಾರ ಕಾಮಗಾರಿ ಪರಿಶೀಲನೆ ನಡೆಸಿದ ಅವರು, 'ವಾಹನದ ದಟ್ಟಣೆಯ ರಸ್ತೆಗಳಲ್ಲಿ ಇದೂ ಒಂದು. ಮಾರಮ್ಮ ವೃತ್ತದಿಂದ ಯಶವಂತಪುರ ವೃತ್ತದವರೆಗೆ ಈಗಾಗಲೇ ಒಂದು ಬದಿಯ ವೈಟ್ ಟಾಪಿಂಗ್ ಕಾಮಗಾರಿ ಮುಗಿದು, ಸಾರ್ವಜನಿಕರು ಉಪಯೋಗಿಸುತ್ತಿದ್ದಾರೆ. ಈಗ ಇನ್ನೊಂದು ಬದಿಯಿಂದ ಈ ಕಾಮಗಾರಿ ನಡೆಸಲಾಗುತ್ತಿದೆ' ಎಂದರು.

ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ವಾರ್ಡ್ ನಂಬರ್ 36, 37 ಮತ್ತು 41ರಲ್ಲಿ ಕುಡಿಯುವ ನೀರು ಪೂರೈಕೆಗೆ 700 ಮಿಲಿ ಮೀಟರ್ ವ್ಯಾಪ್ತಿಯ ಕೊಳವೆಗಳನ್ನು ಹೊಸದಾಗಿ ಹಾಕಲಾಗುತ್ತಿದೆ. ಬಿಇಎಲ್‌ಗೆ ಸಂಪರ್ಕ ಕಲ್ಪಿಸುವ 300 ಮಿಲಿ ಮೀಟರ್ ವ್ಯಾಪ್ತಿಯ ಕೊಳವೆ ಹಾಕಲಾಗುತ್ತಿದೆ. ಈ ಕಾಮಗಾರಿಗಳು ಕೂಡ ಕ್ಷಿಪ್ರಗತಿಯಲ್ಲಿ ಮುಗಿಯಲಿವೆ ಎಂದು ತಿಳಿಸಿದರು.

ತಬ್ಬಲಿಯು ನೀನಾದೆ ಮಗನೆ...

ಒಂದನೇ ಪುಟದಿಂದ..

ಕರ್ನಾಟಕ ಜಾನುವಾರು ಹತ್ಯೆ ಪ್ರತಿಬಂಧಕ ಮತ್ತು ಸಂರಕ್ಷಣಾ ಅಧಿನಿಯಮ (ಗೋಹತ್ಯೆ ನಿಷೇಧ) ಜಾರಿ ಬಂದ ಬಳಿಕ ರಾಜ್ಯದ ಬಹುತೇಕ ಭಾಗಗಳಲ್ಲಿ ಈ ಸಮಸ್ಯೆಯು ಗಂಭೀರ ಸ್ವರೂಪ ತಾಳುತ್ತಿದೆ. ಈ ಸಮಸ್ಯೆ ಗಂಡು ಕರುಗಳಿಗೆ ಮಾತ್ರ ಸೀಮಿತವಾಗಿಲ್ಲ. ಹಾಲು ಕೊಡದ ಹಸುಗಳು, ವಯಸ್ಸಾದ ಎತ್ತು, ಎಮ್ಮೆ–ಕೋಣಗಳ ಸ್ಥಿತಿಯೂ ಅಷ್ಟೇ. ಎಷ್ಟೋ ಕಡೆಗಳಲ್ಲಿ ಇಂತಹ ಗಂಡು ಕರುಗಳು ಮತ್ತು ಹಸು– ಎತ್ತುಗಳು ಕಾಡು ಪ್ರಾಣಿಗಳ ಉದರ ಸೇರಿವೆ. ಇಲ್ಲವೇ ಎಲ್ಲೆಂದರಲ್ಲಿ ಹಸಿವಿನಿಂದ ಸತ್ತು ಹೋಗುತ್ತಿವೆ.

ಮಲೆನಾಡು ಭಾಗದಲ್ಲಿ ಕಾಡುಗಳು, ಹಾಡಿ, ಗುಡ್ಡಗಳು ಅಥವಾ ಘಾಟಿ ರಸ್ತೆಗಳತ್ತ ಗಂಡು ಕರುಗಳನ್ನು ಅಟ್ಟಿ ಬಂದರೆ, ಬಯಲು ಸೀಮೆಯಲ್ಲಿ ಸಂತೆಗಳಲ್ಲಿ, ನಿರ್ಜನ ಬಯಲು ಪ್ರದೇಶಗಳಲ್ಲಿ ಅಥವಾ ದೇವಸ್ಥಾನಗಳ ಬಳಿ ಗಂಡು ಕರುಗಳನ್ನು ಬಿಟ್ಟು ಹೋಗುತ್ತಿದ್ದಾರೆ. ಅವು ಅನಾಥವಾಗುತ್ತಿವೆ.

‘ಹೊಸದುರ್ಗ ತಾಲ್ಲೂಕು ಕುರುಬರ ಹಳ್ಳಿ ಗ್ರಾಮ ಪಂಚಾಯ್ತಿ ವ್ಯಾಪ್ತಿಯ ಗವಿರಂಗಾಪುರ ಮತ್ತು ಮೈಲಾರಪುರದಲ್ಲಿ ಪ್ರತಿ ಶನಿವಾರ ಸಂತೆ ನಡೆಯುತ್ತದೆ. ಈ ಸಂತೆಗೆ ಜಾನುವಾರುಗಳನ್ನು ಮಾರಾಟ ಮಾಡಲೆಂದು ಬರುವವರು ಮೂರು– ನಾಲ್ಕು ದಿನಗಳ ಎಳೆ ಕರುಗಳನ್ನು ತಂದು ಸಂತೆಯಲ್ಲೇ ಬಿಟ್ಟು ಹೋಗುತ್ತಾರೆ. ಒಂದೊಂದು ಸಲಕ್ಕೆ 20ರಿಂದ 30 ಕರುಗಳನ್ನು ಬಿಟ್ಟು ಹೋಗಿದ್ದೂ ಇದೆ. ಅವು ಹಸಿವಿನಿಂದ ಆರ್ತನಾದ ಮಾಡುವುದನ್ನು ಕೇಳಿ, ಬೇಸರವಾಗಿ ಅವುಗಳನ್ನು ತಂದು ಹಾಲು ಕುಡಿಸಿ, ಸಾಕಲು ಸಾಧ್ಯವೇ ಎಂದು ನೋಡಿದಾಗ ಬಹುತೇಕ ಕ್ರಮೇಣ ಸತ್ತೇ ಹೋದವು. ತಾಯಿ ಹಾಲು ಬಿಟ್ಟು ಬೇರೆ ಹಾಲು ಅವುಗಳಿಗೆ ಆಗುವುದಿಲ್ಲ’ ಎನ್ನುತ್ತಾರೆ ಸ್ಥಳೀಯರಾದ ಸುನೀಲ್ ಕುಮಾರ್.

‘ಈ ವಿಷಯವನ್ನು ಕುರುಬರಹಳ್ಳಿ ಗ್ರಾಮಪಂಚಾಯಿತಿ ಪಿಡಿಒ ಗಮನಕ್ಕೆ ತಂದೆವು. ಅವರೂ ಅನಾಥ ಕರುಗಳನ್ನು ತಂದು ಸಾಕುವ ಪ್ರಯತ್ನ ನಡೆಸಿದರು. ಆದರೆ, ಅದು ಫಲ ನೀಡಲಿಲ್ಲ. ಆ ಬಳಿಕ ಅವರು ಕರುಗಳನ್ನು ಸಂತೆಗಳಲ್ಲಿ ತಂದು ಬಿಡುವುದರ ವಿರುದ್ಧ ನೋಟಿಸ್ ಮೂಲಕ ಕಟುವಾದ ಎಚ್ಚರಿಕೆಯನ್ನು ನೀಡಿದ್ದೂ ಅಲ್ಲದೇ ವಾಟ್ಸ್ ಆ್ಯಪ್ ಮೂಲಕ ಸಂದೇಶವನ್ನೂ ರವಾನಿಸಿದರು. ಬಳಿಕ ಗಂಡು ಕರುಗಳನ್ನು ಅನಾಥವಾಗಿ ಬಿಟ್ಟು ಹೋಗುವುದು ನಿಯಂತ್ರಣಕ್ಕೆ ಬಂದಿತು. ಈ ರೀತಿ ತಂದು ಬಿಟ್ಟರೆ 7 ವರ್ಷ ಕಠಿಣ ಶಿಕ್ಷೆ ವಿಧಿಸಲಾಗುತ್ತದೆ ಎಂಬ ಎಚ್ಚರಿಕೆಯನ್ನೂ ನೀಡಿದರು’ ಎನ್ನುತ್ತಾರೆ.

‘ಸೀಮೆ ತಳಿಯ ಗಂಡು ಕರುಗಳು ಅಥವಾ ಎತ್ತುಗಳು ಯಾವುದೇ ಬಳಕೆಗೂ ಆಗುವುದಿಲ್ಲ. ಹಿಂದೆ ಮುಸ್ಲಿಮರು ಬಂದು ಗಂಡು ಕರುಗಳನ್ನು ತೆಗೆದುಕೊಂಡು ಹೋಗುತ್ತಿದ್ದರು. ಗೋಹತ್ಯೆ ನಿಷೇಧ ಕಾಯ್ದೆ ಜಾರಿಗೆ ಬಂದ ಮೇಲೆ ಅವರೂ ಹೆದರಿಕೆಯಿಂದ ಬರುತ್ತಿಲ್ಲ’ ಎನ್ನುತ್ತಾರೆ ಅದೇ ಗ್ರಾಮದ ರೈತ ಉದಯ್.

ಬೆಂಗಳೂರು ಸೇರಿದಂತೆ ಎಲ್ಲ ಪ್ರಮುಖ ನಗರಗಳಲ್ಲೂ ದನಗಳು ರಸ್ತೆ ಮಧ್ಯೆ ಬಂದು ವಾಹನಗಳ ಸಂಚಾರಕ್ಕೆ ಅಡ್ಡಿಯಾಗಿರುವುದು ಮಾತ್ರವಲ್ಲದೆ, ರಾತ್ರಿ ರಸ್ತೆಗಳಲ್ಲೇ ಮಲಗುವುದರಿಂದ ಅಪಘಾತಗಳು ಸಂಭವಿಸಿ ಗಂಡು ಕರುಗಳು ಸಾವನ್ನಪ್ಪುತ್ತಿರುವ ಪ್ರಕರಣಗಳೂ ನಡೆಯುತ್ತಿವೆ. ರಾಜ್ಯ ಮತ್ತು ರಾಷ್ಟ್ರೀಯ ಹೆದ್ದಾರಿಗಳಲ್ಲಿ ಇದು ಹೆಚ್ಚು. ಹೀಗಾಗಿ ಸಾರ್ವಜನಿಕರು ಜಾಗರೂಕತೆಯಿಂದ ವಾಹನಗಳನ್ನು ಓಡಿಸಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ.

ಉತ್ತರ ಕರ್ನಾಟಕ ಭಾಗದ ಗೌಳಿ ಸಮುದಾಯ ಸಂಕಷ್ಟಕ್ಕೆ ಸಿಲುಕಿದೆ. ತಮ್ಮ ಸಮುದಾಯದ ಸ್ಥಿತಿಯನ್ನು ಮುಂಡಗೋಡದ ಸಿದ್ದು ಥೋರತ್ ವಿವರಿಸುವುದು ಹೀಗೆ– ‘ನಮ್ಮ ಬದುಕಿನ ಭಾಗ ಮತ್ತು ಆರ್ಥಿಕತೆಯ ಮೂಲವಾಗಿದ್ದ ಹಸುಗಳ ಸಾಕಣೆ ಈಗ ಸವಾಲಾಗಿದೆ. ಆದಾಯ ತರುವ ಹಾಲು, ಗೊಬ್ಬರ ಮಾರಾಟ, ದನ– ಕರುಗಳ ಕೊಡು– ಕೊಳ್ಳುವಿಕೆ ಹಿಂದಿನಂತಿಲ್ಲ. ಸವಾಲುಗಳನ್ನು ಎದುರಿಸಲಾಗದವರು ಬೇರೆ ಕೆಲಸಗಳನ್ನು ನೋಡಿಕೊಳ್ಳುತ್ತಿದ್ದಾರೆ. ಕುಲ ಕಸುಬು ತೊರೆಯುವವರ ಸಂಖ್ಯೆಯೂ ಹೆಚ್ಚುತ್ತಿದೆ’.

ಮಂಡ್ಯ ಜಿಲ್ಲೆಯ ಕೆ.ಆರ್.ಪೇಟೆಯಲ್ಲಿ ವಿಶಿಷ್ಟ ಸಮಸ್ಯೆ ಎದುರಾಗಿದೆ. ಈ ತಾಲ್ಲೂಕಿನ ಸಂತೇಬಾಚಹಳ್ಳಿ ಅರಣ್ಯ ಪ್ರದೇಶದಲ್ಲಿರುವ ಗವಿ ರಂಗನಾಥ ದೇವಾಲಯಕ್ಕೆ ಭಕ್ತರು ತಂದು ಬಿಡುವ ಹರಕೆ ಕರುಗಳಿಗೆ ರಕ್ಷಣೆಯೇ ಇಲ್ಲವಾಗಿದೆ. ಕರುಗಳ ಮಾರಾಟ, ಹರಾಜು ಪ್ರಕ್ರಿಯೆ ಸ್ಥಗಿತಗೊಂಡಿರುವುದರಿಂದ ಪುಟಾಣಿ ಜೀವಗಳು ಕಾಡು ಪ್ರಾಣಿಗಳಿಗೆ ಆಹಾರವಾಗುತ್ತಿವೆ. ಗಂಡು ಕರುಗಳು ಹಾಲು ಹೆಚ್ಚು ಕುಡಿಯುತ್ತವೆ ಎಂಬ ಕಾರಣಕ್ಕೆ ಅರಣ್ಯದಲ್ಲಿ ಬಿಟ್ಟು ಹೋಗುವವರೂ ಇದ್ದಾರೆ. ಇಂತಹ ಕರುಗಳನ್ನು ಮುಜರಾಯಿ ಇಲಾಖೆ ಹರಾಜು ಹಾಕುತ್ತಿತ್ತು. ಗೋಹತ್ಯೆ ನಿಷೇಧ ಕಾಯ್ದೆ ಜಾರಿ ಬಂದ ನಂತರ ಹರಾಜು–ಮಾರಾಟ ನಿಂತು ಹೋಗಿದೆ.

ಶಿವಮೊಗ್ಗ ಜಿಲ್ಲೆಯ ಮಲೆನಾಡು ಭಾಗದ ಸಮಸ್ಯೆಯೇ ಬೇರೆ, ಕೆಲವು ಕಡೆಗಳಲ್ಲಿ ಗಂಡು ಕರುಗಳು ಮತ್ತು ಮುದಿ ಹಸುಗಳನ್ನು ಕಾಡಿಗೆ ಬಿಟ್ಟರೆ, ಇನ್ನು ಕೆಲವು ಕಡೆಗಳಲ್ಲಿ ಪೇಟೆಗೆ ಬರುವ ಹಸುಗಳು ಮತ್ತೆ ಹಳ್ಳಿಗೆ ಹೋಗುವುದಿಲ್ಲ.



ಸುಪ್ರಕಾಶ ಭಟ್ಟ, ಶಿವಮೊಗ್ಗ

ರೈತರೂ ಸುಮ್ಮನಾಗುತ್ತಾರೆ. ‘ಗಾಳಿ–ಮಳೆಯಿಂದ ರಕ್ಷಣೆಗೆ ಬಸ್ ನಿಲ್ದಾಣ, ಹಾಳು ಬಿದ್ದ ಕಟ್ಟಡಗಳು ಇವೆ. ಹಣ್ಣಿನಂಗಡಿ, ತರಕಾರಿ ಮಂಡಿ, ಹೋಟೆಲ್‌ಗಳ ತ್ಯಾಜ್ಯ, ವಾರದ ಸಂತೆಯ ತ್ಯಾಜ್ಯ ಸೇರಿದಂತೆ ಅವುಗಳಿಗೆ ಅಗತ್ಯವಿರುವ ಆಹಾರ ಲಭ್ಯವಿದೆ. ಹೊಸನಗರ ಪಟ್ಟಣದಲ್ಲಿಯೇ ಹೀಗೆ ಬಿಡಾಡಿಯಾಗಿ ಬಿಟ್ಟ 40 ರಿಂದ 50 ಹೋರಿಗಳು ಕಾಣಸಿಗುತ್ತವೆ’ ಎನ್ನುತ್ತಾರೆ ಸುಪ್ರಕಾಶ.

ರಾಜಧಾನಿ ಬೆಂಗಳೂರಿನಲ್ಲಿ ಚರ್ಮೋದ್ಯಮ ಬಹುತೇಕ ನಿಂತು ಹೋಗಿದೆ. ಗೋಹತ್ಯೆ ನಿಷೇಧ ಕಾಯ್ದೆ ಜಾರಿಗೂ ಮೊದಲೇ ಚರ್ಮೋದ್ಯಮ ಕುಸಿತ ಕಂಡಿತ್ತು. ಕೇಂದ್ರದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದ ಮೇಲೆ ವಿದೇಶಗಳಿಗೆ ಚರ್ಮದ ರಫ್ತು ಗಣನೀಯವಾಗಿ ಕುಸಿತವಾಗಿದೆ. ದೇಶಿ ಮಾರುಕಟ್ಟೆಯ ಬೇಡಿಕೆಗಿಂತಲೂ ವಿದೇಶಗಳಿಗೆ ರಫ್ತು ಮಾಡುವುದಕ್ಕಾಗಿ ಚರ್ಮವನ್ನು ಹದ ಮಾಡಲಾಗುತ್ತಿತ್ತು. ಬೆಂಗಳೂರಿನ ಟ್ಯಾನರಿ ರಸ್ತೆಯಲ್ಲಿ ನಡೆಯುತ್ತಿದ್ದ ಚರ್ಮದ ವಹಿವಾಟು ಈಗ ಬಹುತೇಕ ನಿಂತು ಹೋಗಿದೆ. ಆ ಕಸುಬನ್ನು ಆಶ್ರಯಿಸಿದ್ದವರು ಈಗ ಬೇರೆ– ಬೇರೆ ಉದ್ಯಮ ಅಥವಾ ಉದ್ಯೋಗಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

ಸರ್ಕಾರದ ಕ್ರಮವೇನು?

ರಾಜ್ಯದಲ್ಲಿ ಗಂಡು ಕರುಗಳು, ವಯಸ್ಸಾದ ಹಸು ಮತ್ತು ಕೋಣಗಳನ್ನು ಊರಿನ ಆಚೆಗೆ ಬಿಟ್ಟು ಬರುವ ಪ್ರಕರಣಗಳು ಹೆಚ್ಚಾಗಿವೆ. ಸರ್ಕಾರ ಸ್ಥಳೀಯ ಸಂಸ್ಥೆಗಳು, ಸ್ವಯಂ ಸೇವಾ ಸಂಸ್ಥೆಗಳು, ಪಶು ಇಲಾಖೆ ಸಿಬ್ಬಂದಿ ಮೂಲಕ ಸರ್ಕಾರಿ ಮತ್ತು ಖಾಸಗಿ ಗೋಶಾಲೆಗಳಲ್ಲಿ ರಕ್ಷಿಸುವ ಕೆಲಸ ಮಾಡುತ್ತಿದ್ದೇವೆ ಎಂದು ಪಶುಸಂಗೋಪನಾ ಸಚಿವ ಪ್ರಭು ಚವ್ಹಾಣ ‘ಪ್ರಜಾವಾಣಿ’ಗೆ ತಿಳಿಸುತ್ತಾರೆ.

ಭವಿಷ್ಯದಲ್ಲಿ ಗಂಡು ಕರುಗಳ ಸಂತತಿಯ ಮೇಲೆ ನಿಯಂತ್ರಣ ಸಾಧಿಸಲು ಈಗಾಗಲೇ ಸರ್ಕಾರದಿಂದ ರಿಯಾಯಿತಿ ದರದಲ್ಲಿ ಲಿಂಗ ನಿರ್ಧಾರಿತ ವೀರ್ಯ ನಳಿಕೆಗಳನ್ನು ನೀಡಲಾಗುತ್ತಿದೆ. ಇದರಿಂದ ಮುಂದಿನ ದಿನಗಳಲ್ಲಿ ಗಂಡು ಕರುಗಳ ಜನನ ಗಣನೀಯವಾಗಿ ಕಡಿಮೆಯಾಗುವುದಲ್ಲದೇ ಹೆಣ್ಣು ಕರುಗಳ ಜನನ ಹೆಚ್ಚಾಗಿ ಪಶುಪಾಲಕರಿಗೆ ವರದಾನವಾಗಲಿದೆ ಎಂದು ಹೇಳಿದ್ದಾರೆ.

100 ಗೋಶಾಲೆಯನ್ನು ಆರಂಭಿಸಿದ ಬಳಿಕ ಬೀಡಾಡಿ, ಅನುತ್ಪಾದಕ, ವಯಸ್ಸಾದ ಜಾನುವಾರುಗಳನ್ನು ಸಂರಕ್ಷಿಸುವುದಾಗಿ ಅವರು ಭರವಸೆ ನೀಡಿದ್ದಾರೆ.



ಬೆಂಗಳೂರಿನ ಟ್ಯಾನರಿ ರಸ್ತೆಯಲ್ಲಿ ಚರ್ಮದ ಅಂಗಡಿಗಳು ಈಗ ಮರಗೆಲಸದ ಅಂಗಡಿಗಳಾಗಿ ಪರಿವರ್ತನೆಗೊಂಡಿವೆ

ಕರಾವಳಿಯಲ್ಲಿ ತಗ್ಗಿದ ಅಕ್ರಮ ಸಾಗಣೆ

• ಪಿ.ವಿ.ಪ್ರವೀಣ್ ಕುಮಾರ್

ಮಂಗಳೂರು: ಕರಾವಳಿ ಮತ್ತು ಮಲೆನಾಡು ಪ್ರದೇಶಗಳಲ್ಲಿ ಗೋವುಗಳ ಅಕ್ರಮ ಸಾಗಣೆ ಕಡಿಮೆಯಾಗಿದೆ. ಗೋವುಗಳನ್ನು ಸಾಗಿಸುವವರ ಮೇಲೆ ಹಲ್ಲೆ ನಡೆಸುವ ಪ್ರಕರಣಗಳೂ ಕಡಿಮೆಯಾಗಿವೆ ಎನ್ನುತ್ತವೆ ಪೊಲೀಸ್ ಮೂಲಗಳು.

ಜಾನುವಾರುಗಳ ಅಕ್ರಮ ಸಾಗಾಟದ ಬಗ್ಗೆ ಕರಾವಳಿ ಜಿಲ್ಲೆಗಳಲ್ಲಿ ಈ ಹಿಂದೆ ತಿಂಗಳಲ್ಲಿ ಏನಿಲ್ಲವೆಂದರೂ ಹತ್ತಾರು ಪ್ರಕರಣಗಳು ದಾಖಲಾಗುತ್ತಿದ್ದವು. ಈಗ ಒಂದೆರಡು ಪ್ರಕರಣಗಳು ದಾಖಲಾದರೆ ಹೆಚ್ಚು. ರಾಜ್ಯದಲ್ಲಿ ಬೆಂಗಳೂರು, ಮಂಗಳೂರು ಮತ್ತು ಹುಬ್ಬಳ್ಳಿಯಲ್ಲಿ ಕಸಾಯಿಖಾನೆಗಳಿವೆ. ಮಂಗಳೂರಿನ ಕಸಾಯಿಖಾನೆ ಮುಚ್ಚಿ ಹೋಗಿರುವುದರಿಂದ ಗೋವು ಸಾಗಣೆ ಕಡಿಮೆಯಾಗಿದೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.

'ಮುಸ್ಲಿಮರು ದನದ ಮಾಂಸ ಸೇವಿಸುವುದು, ಅದು ಅಗ್ಗ ಎಂಬ ಕಾರಣಕ್ಕೆ. ಇತ್ತೀಚಿನ ದಿನಗಳಲ್ಲಿ ಗೋಮಾಂಸದ ದರ ಭಾರಿ ಪ್ರಮಾಣದಲ್ಲಿ ಹೆಚ್ಚಾಗಿದೆ. ಹಿಂದೆ ಕೆ.ಜಿ. ಗೋಮಾಂಸ ನೂರು ರೂಪಾಯಿ ಒಳಗೆ ಇತ್ತು. ಆದರೆ ಈಗ ಪ್ರತಿ ಕೆ.ಜಿಗೆ ₹ 300 ರಿಂದ ₹ 400 ದರ ಇದೆ. ಕೋಳಿ ಮಾಂಸದ ದರವು ಅದರ ಅರ್ಧಕ್ಕಿಂತಲೂ ಕಡಿಮೆ ಇದೆ' ಎಂದು ಮುಸ್ಲಿಂ ಮುಖಂಡರೊಬ್ಬರು ಅಭಿಪ್ರಾಯಪಟ್ಟರು.

'ಜಾನುವಾರು ಹತ್ಯೆ ನಿಷೇಧ ಕಾಯ್ದೆ ಜಾರಿಯಾಗುವ ಮುನ್ನ ಗೋವುಗಳ ಅಕ್ರಮ ಸಾಗಾಟ ರಾಜ್ಯದಾದ್ಯಂತ ಅವ್ಯಾಹತವಾಗಿ ನಡೆಯುತ್ತಿತ್ತು. ಹಾಗಾಗಿ ನಮ್ಮ ಸಂಘಟನೆಯ ಕಾರ್ಯಕರ್ತರು ಇದನ್ನು ತಡೆಯುವ ಬಗ್ಗೆ ಹೆಚ್ಚಿನ ಕಣ್ಣಿಟ್ಟಿದ್ದರು. ಈಗ ಗೋವುಗಳನ್ನು ಜೀವಂತವಾಗಿ ಸಾಗಿಸುವುದು ಕಡಿಮೆ. ಆದರೆ, ಅದರ ಬದಲು ಹಳ್ಳಿಗಳಲ್ಲಿ ಗೋವುಗಳನ್ನು ಕಡಿದು, ಮಾಂಸವನ್ನು ಸಾಗಾಟ ಮಾಡುವ ಹೊಸ ತಂತ್ರವನ್ನು ಗೋಹಂತಕರು ಕಂಡುಕೊಂಡಿದ್ದಾರೆ. ಇದನ್ನು ತಡೆಯುವುದಕ್ಕೆ ಅಧಿಕಾರಿಗಳು ಕಠಿಣ ಕ್ರಮ ಕೈಗೊಂಡಿಲ್ಲ’ ಎನ್ನುತ್ತಾರೆ ವಿಶ್ವ ಹಿಂದೂ ಪರಿಷತ್ತಿನ ಪ್ರಾಂತ ಕಾರ್ಯದರ್ಶಿ ಶರಣ್ ಪಂಪ್‌ವೆಲ್.

ನೆಲಕಚ್ಚಿದ ಚರ್ಮೋದ್ಯಮ

• ವಿಜಯ್‌ಕುಮಾರ್ ಎಸ್.ಕೆ.

ಬೆಂಗಳೂರು: ಬೇಡಿಕೆ ಇಲ್ಲದೆ ಮೊದಲೇ ಕುಸಿದಿದ್ದ ಚರ್ಮೋದ್ಯಮ, ಗೋಹತ್ಯೆ ನಿಷೇಧ ಬಳಿಕ ಮತ್ತಷ್ಟು ನೆಲ ಕಚ್ಚಿದೆ.

ಚರ್ಮೋದ್ಯಮದ ವಹಿವಾಟಿನೊಂದಿಗೇ ಬೆರೆತು ಹೋಗಿದ್ದರಿಂದಲೇ ಟ್ಯಾನರಿ ರಸ್ತೆ ಎಂದು ಖ್ಯಾತಿ ಪಡೆದಿದ್ದ ಈ ರಸ್ತೆಯಲ್ಲೀಗ ಚರ್ಮದ ವಹಿವಾಟೇ ಇಲ್ಲವಾಗಿದೆ. ಚರ್ಮದ ಮಂಡಿಯ ಚಿತ್ರಣವೇ ಬದಲಾಗಿದ್ದು, ಮಂಡಿಯಲ್ಲಿ ಚರ್ಮದ ಅಂಗಡಿಗಳನ್ನು ಹುಡುಕಾಡಬೇಕಾದ ಸ್ಥಿತಿ ಇದೆ. ಅಲ್ಲಿದ್ದ ಚರ್ಮದ ಅಂಗಡಿಗಳಲ್ಲಿ ಬಹುತೇಕವು ಈಗ ಮರಗೆಲಸದ ಅಂಗಡಿಗಳು, ಬಣ್ಣದ ಅಂಗಡಿ, ಗ್ಯಾರೇಜ್‌ಗಳಾಗಿ ಮಾರ್ಪಟ್ಟಿವೆ.

ಇಡೀ ಮಂಡಿಯ ಮೇಲ್ವಿಚಾರಣೆ ನಡೆಸುತ್ತಿದ್ದ ವಿಜಯಕುಮಾರ್ ಎಂಬುವರು ಈಗ ಸೆಕ್ಯೂರಿಟಿ ಕೆಲಸ ನೋಡಿಕೊಂಡಿದ್ದಾರೆ. ‘ದಿನಕ್ಕೆ ಐದಾರು ಲಾರಿ ಲೋಡ್‌ನಷ್ಟು ಚರ್ಮ ಇದೇ ಮಂಡಿಯಿಂದ ಚೆನ್ನೈಗೆ ಹೋಗುತ್ತಿತ್ತು. ಅಲ್ಲಿಂದ ವಿದೇಶಕ್ಕೆ ರಫ್ತಾಗುತ್ತಿತ್ತು. ಈಗ ಭಾರತದಿಂದ ಚರ್ಮ ರಫ್ತಾಗುತ್ತಿಲ್ಲ, ಚರ್ಮಕ್ಕೆ ಬೇಡಿಕೆಯೇ ಇಲ್ಲವಾಗಿದೆ. ಈಗ ತಿಂಗಳಿಗೆ ಎರಡು ಲಾರಿ ಲೋಡ್ ಚರ್ಮದ ವಹಿವಾಟು ನಡೆಯುವುದೂ ಕಷ್ಟ. ಗೋಹತ್ಯೆ ನಿಷೇಧವಾದ ಬಳಿಕವಂತೂ ದನ ಮತ್ತು ಎಮ್ಮೆ ಚರ್ಮದ ವಹಿವಾಟು ಸಂಪೂರ್ಣ ಸ್ಥಗಿತವಾಗಿದೆ’ ಎಂದು ವಿಜಯಕುಮಾರ್ ಹೇಳಿದರು.

‘ಒಂದು ದನದ ಚರ್ಮವನ್ನು ₹2 ಸಾವಿರ ತನಕ ಮಾರಾಟ ಮಾಡಿದ ಉದಾಹರಣೆ ಇದೆ. ಈಗ ₹100ಕ್ಕೂ ಕೇಳುವವರಿಲ್ಲ. ದನ ಅಥವಾ ಎಮ್ಮೆ ಚರ್ಮ ಕಂಡರೆ ಪೊಲೀಸರು ಪ್ರಕರಣ ದಾಖಲಿಸುತ್ತಾರೆ ಎಂಬ ಭಯವೂ ಇದೆ. ಆದ್ದರಿಂದ ಈ ಚರ್ಮದ ವ್ಯಾಪಾರಕ್ಕೂ ಯಾರೂ ಮನಸು ಮಾಡುತ್ತಿಲ್ಲ’ ಎಂದು ವಿವರಿಸಿದರು.

‘ಕೇಂದ್ರದಲ್ಲಿ ಬಿಜೆಪಿ ಸರ್ಕಾರ ಆಡಳಿತಕ್ಕೆ ಬಂದ ಬಳಿಕ ವಿದೇಶಕ್ಕೆ ಚರ್ಮ ರಫ್ತಾಗುತ್ತಿಲ್ಲ. ಕುರಿ ಮತ್ತು ಮೇಕೆಗಳ ಚರ್ಮಕ್ಕೂ ಬೆಲೆ ಇಲ್ಲ. ಒಂದು ಚರ್ಮಕ್ಕೆ ₹50 ದರ ಇರುವುದರಿಂದ ಮಂಡಿ ತನಕ ಚರ್ಮವೇ ಬರುವುದಿಲ್ಲ. ಬೇರೆ ಕೆಲಸ ಗೊತ್ತಿಲ್ಲದ ಕಾರಣ ಇದೇ ಕೆಲಸ ಮುಂದುವರಿಸಿದ್ದೇನೆ’ ಎಂದು ರಫೀಕ್ ಹೇಳಿದರು.




ಆಗುಂಬೆ ಘಾಟಿಯ ಕಾಡೊಳಗೆ ಬಿಟ್ಟಿರುವ ದನಗಳು

ವಾಲ್ಮೀಕಿ ಎಂಬ ಕರುಣಾಲಹರಿ

• ಎಸ್. ಸೂರ್ಯಪ್ರಕಾಶ ಪಂಡಿತ್

ನಮ್ಮ ದೇಶದ ಆದಿಕವಿ ವಾಲ್ಮೀಕಿ ಮಹರ್ಷಿ; ಅವನು ರಚಿಸಿದ ಮಹಾಕಾವ್ಯ ರಾಮಾಯಣ ನಮ್ಮ ಸಂಸ್ಕೃತಿಯ ಆದಿಕಾವ್ಯ.

ವಾಲ್ಮೀಕಿಯ ಹೆಸರು ಇಂದು ನಮಗೆ ಉಳಿದುಬಂದಿರುವುದೇ ರಾಮಾಯಣದಿಂದ. ಆದರೆ ಸ್ವಾರಸ್ಯ ಎಂದರೆ ರಾಮಾಯಣದಲ್ಲಿ ವಾಲ್ಮೀಕಿಯ ವೈಯಕ್ತಿಕ ಜೀವನದ ಬಗ್ಗೆ ಹೆಚ್ಚೇನೂ ಮಾಹಿತಿ ಸಿಗುವುದಿಲ್ಲ. ಬಾಲಕಾಂಡ ಮತ್ತು ಉತ್ತರಕಾಂಡಗಳಲ್ಲಿ ಸ್ವಲ್ಪ ವಿವರಗಳು ಸಿಗುತ್ತವೆ, ದಿಟ. ಆದರೆ ಅವುಗಳಿಂದ ಸಮಗ್ರ ಜೀವನವನ್ನು ಕಟ್ಟಿಕೊಳ್ಳಲು ನಮಗೆ ಸಾಧ್ಯವಾಗದು. ಹೀಗಿದ್ದರೂ ನಮಗೆ ವಾಲ್ಮೀಕಿ ಪೂಜ್ಯನಾಗಿದ್ದಾನೆ; ನಮ್ಮ ನಿತ್ಯಜೀವನದ ಅವಿಭಾಜ್ಯ ಅಂಗವಾಗಿದ್ದಾನೆ. ವ್ಯಕ್ತಿಯೊಬ್ಬನ ವಿವರಗಳ ನಮಗೆ ಗೊತ್ತಿಲ್ಲದಿದ್ದರೂ ಅವನು ನಮಗೆ ಪೂಜಾರ್ಹನಾಗಿದ್ದಾನೆ ಎಂಬುದು ನಿಜಕ್ಕೂ ವಿಚಾರಾರ್ಹ. ವಾಲ್ಮೀಕಿಗೆ ಗೌರವ ದೊರೆತಿರುವುದು ಅವನ ಕೃತಿಯಿಂದಲೇ ಹೌದು. ನಮಗೆ ವಾಲ್ಮೀಕಿಯ ಬದುಕಿನ ಬಗ್ಗೆ ಗೊತ್ತಿಲ್ಲದಿರಬಹುದು; ಆದರೆ ರಾಮಾಯಣವನ್ನು ಓದಿದರೆ ನಮಗೆ ಅವನ ಭವ್ಯ ವ್ಯಕ್ತಿತ್ವದ ಮಹಾದರ್ಶನವೇ ಆಗುತ್ತದೆ.



ಇಂದಿಗೂ ನಮ್ಮ ದೇಶದಲ್ಲಿ ರಾಮಾಯಣವು ಪಾರಾಯಣ ಗ್ರಂಥ. ಮಾತ್ರವಲ್ಲ, ಈ ಮಹಾಕಾವ್ಯ ನಮ್ಮ ಸಂಸ್ಕೃತಿಯನ್ನೂ ರೂಪಿಸಿದ ಮಹಾಕೃತಿ. ಈ ಕೃತಿಗೆ ಭಿತ್ತಿಯೇ ವಾಲ್ಮೀಕಿ ಮಹರ್ಷಿಯ ಮಹಾಪ್ರತಿಭೆ. ಇಲ್ಲಿ ಇನ್ನೊಂದು ಸ್ವಾರಸ್ಯವೂ ಉಂಟು. ವಾಲ್ಮೀಕಿಯಲ್ಲಿ ಅಡಗಿದ್ದ ಪ್ರತಿಭೆ ಅನಾವರಣಗೊಂಡದ್ದು ಅವನ ಅಂತರಂಗದಲ್ಲಿ ದಟ್ಟವಾಗಿ ನೆಲೆಯಾಗಿದ್ದ ಕಾರುಣ್ಯದಿಂದಲೇ ಎನ್ನುವುದೂ ಗಮನಾರ್ಹ. ಪುಟ್ಟ ಹಕ್ಕಿಯೊಂದರ ಅಳುವಿಗೆ ಕವಿಯಾದವನು ಮಹರ್ಷಿ ವಾಲ್ಮೀಕಿ; ಆ ಹಕ್ಕಿಯ ರೋದನದಲ್ಲಿ ಇಡಿಯ ಜಗತ್ತಿನ ಆಕ್ರಂದನವನ್ನು ಅವನು ಕೇಳಿದ. ಎಲ್ಲರ ಆಕ್ರಂದನದ ಧ್ವನಿಯಾಗಿ ಸೀತಾರಾಮರ ದುಃಖವನ್ನೂ ಕಷ್ಟವನ್ನೂ ನಿರೂಪಿಸಿದ. ಇಡಿಯ ರಾಮಾಯಣದ ಉದ್ದಕ್ಕೂ ನಮಗೆ ಕೇಳುವುದು ಆ ಹಕ್ಕಿಯ ರೋದನವೇ ಹೌದು; ಆ ಹಕ್ಕಿಯ ಗೋಳಾಟಕ್ಕೆ ಸ್ಪಂದಿಸಿದ ವಾಲ್ಮೀಕಿಯ ಕರುಣಾಲಹರಿಯನ್ನೇ ಹೌದು. ಕರುಣೆ ಎಂಬುದು ಮಹಾಮೌಲ್ಯವೇ ಹೌದು ಎಂಬುದನ್ನು ರಾಮಾಯಣ ಸ್ಥಿರಪಡಿಸಿದೆ.

ಯಾರೊಬ್ಬರ ಸಂತೋಷದ ಹದವನ್ನು ಇನ್ನೊಬ್ಬರು ಕೆಡಿಸುವುದು ಪಾಪಕಾರ್ಯ – ಎಂಬುದು ರಾಮಾಯಣ ನೀಡುತ್ತಿರುವ ಹಲವು ಸಂದೇಶಗಳಲ್ಲಿ ಒಂದು. ಆ ಒಂದು ಜೋಡಿಹಕ್ಕಿಗಳ ಸಂತೋಷವನ್ನು ಬೇಡನೊಬ್ಬ ನಾಶಗೊಳಿಸಿದ; ಸೀತಾರಾಮರ ಸಂತೋಷವನ್ನು ರಾಕ್ಷಸನೊಬ್ಬ ನಾಶಗೊಳಿಸಿದ. ಬೇಡನೊಬ್ಬನಿಗೆ ಬೇಟೆಯಾಡುವುದು ನಿಷೇಧವೇನಲ್ಲ. ಹೀಗೆಯೇ ಪುರುಷನೊಬ್ಬ ಹೆಣ್ಣನ್ನು ಬಯಸುವುದೂ ತಪ್ಪಲ್ಲ. ಆದರೆ ಬೇಟೆಗೂ ನಿಯಮಗಳಿವೆ; ಇರಬೇಕು. ಗಂಡು–ಹೆಣ್ಣಿನ ಬಯಕೆಗಳಿಗೂ ಕಟ್ಟುಪಾಡುಗಳಿವೆ; ಇರಬೇಕು. ಯಾವಾಗ ಬೇಟೆ ಸರಿ, ಯಾವಾಗ ತಪ್ಪು; ಯಾವ ಹೆಣ್ಣನ್ನು ಬಯಸಬಹುದು, ಯಾರನ್ನು ಬಯಸಬಾರದು – ಇಂಥ ಜಿಜ್ಞಾಸೆ ಜೀವನದಲ್ಲಿ ಮುಖ್ಯ. ಇಂಥ ಚಿಂತನೆಯನ್ನೇ ‘ಧರ್ಮ’ ಎಂದು ಸಂಸ್ಕೃತಿ ಒಕ್ಕಣಿಸುವುದು. ವಾಲ್ಮೀಕಿ ತನ್ನ ಕಾವ್ಯದ ಉದ್ದಕ್ಕೂ ನಡೆಸುವುದು ಇಂಥ ಧರ್ಮಜಿಜ್ಞಾಸೆಯನ್ನೇ ಹೌದು. ಆದರೆ ಇದು ಕೇವಲ ಬೇಟೆಗೂ ಬೇಟಕ್ಕೂ ಸೀಮಿತವಾಗಿಲ್ಲ; ನಮ್ಮ ಜೀವನದಲ್ಲಿ ಎದುರಾಗುವ ಎಲ್ಲ ವಿಧದ ಆಸೆ–ನಿರಾಸೆಗಳ ಸಂದರ್ಭಕ್ಕೂ ಒದಗುವಂಥ ಮೌಲ್ಯಮೀಮಾಂಸೆಯನ್ನು ರಾಮಾಯಣದಲ್ಲಿ ಕಾಣಬಹುದಾಗಿದೆ. ನಮ್ಮೆಲ್ಲರಿಗೂ ಎದುರಾಗುವ, ನಾವೆಲ್ಲರೂ ಬಯಸುವ ಜೀವನದ ಮಹಾಸಾಮಗ್ರಿಯನ್ನೇ ಶಾಸ್ತ್ರಗಳು ‘ಪುರುಷಾರ್ಥ’ ಎಂದು ಕರೆದಿರುವುದು. ವಾಲ್ಮೀಕಿ ಮಹರ್ಷಿಯು ರಾಮಾಯಣದಲ್ಲಿ ನಡೆಸಿರುವುದೇ ಈ ಪುರುಷಾರ್ಥಗಳ ಮೌಲ್ಯಮೀಮಾಂಸೆಯನ್ನು. ಧರ್ಮ, ಅರ್ಥ, ಕಾಮ ಮತ್ತು ಮೋಕ್ಷ – ಎಂಬ ನಾಲ್ಕು ಪುರುಷಾರ್ಥಗಳು ಯಾವುದೋ ‘ರಾಮಯಣಕಾಲ’ಕ್ಕೆ ಮಾತ್ರವೇ ಸಲ್ಲುವಂಥ ವಿವರಗಳಲ್ಲ; ಅವು ಅಂದಿನಿಂದ ಇಂದಿನವರೆಗೂ, ಒಟ್ಟು ಮಾನವಕುಲವನ್ನೇ ಆಳುತ್ತಿರುವ ಸಂಗತಿಗಳು. ಹೀಗಾಗಿಯೇ ರಾಮಾಯಣ ನಮಗೆ ಇಂದಿಗೂ ಆದರ್ಶವಾಗಿದೆ; ಅದರ ಕರ್ತೃ ವಾಲ್ಮೀಕಿ ಮಹರ್ಷಿ ಇಂದಿಗೂ ಪೂಜಾರ್ಹನಾಗಿದ್ದಾನೆ. ❖

ಆರು ಮಂದಿಗೆ ವಾಲ್ಮೀಕಿ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹರ್ಷಿ ವಾಲ್ಮೀಕಿ ಜಯಂತಿ ಅಂಗವಾಗಿ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿರುವ ಆರು ಮಂದಿಗೆ ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆಯಿಂದ ಪ್ರಸಕ್ತ ಸಾಲಿನ ಮಹರ್ಷಿ ವಾಲ್ಮೀಕಿ ಪ್ರಶಸ್ತಿ ನೀಡಿ ಗೌರವಿಸಲಾಗುವುದು ಎಂದು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವ ಬಿ. ಶ್ರೀರಾಮುಲು ತಿಳಿಸಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ವಿವರ ನೀಡಿದ ಅವರು, ‘ಬೆಂಗಳೂರಿನ ಕೆ.ಆರ್. ಪುರದ ಶ್ರೀ ಮಹರ್ಷಿ ವಾಲ್ಮೀಕಿ ಆದಿ ಗುರು ಪೀಠ– ಲವ ಕುಶ ಅನಾಥಾಲಯದ ಸಂಸ್ಥಾಪಕ ಎಲ್. ಮುನಿಸ್ವಾಮಿ (ಸಾಮಾಜಿಕ ಕ್ಷೇತ್ರ), ಚಿಕ್ಕಬಳ್ಳಾಪುರದ ಎನ್. ನಾಗಪ್ಪ (ಇತರ ಕ್ಷೇತ್ರ), ಧಾರವಾಡದ ಗಾಂಧಿ ಚೌಕ ನಿವಾಸಿ ನಾಗಪ್ಪ ಎಚ್. ಕೋಣಿ (ಇತರ ಕ್ಷೇತ್ರ), ಕೂಡ್ಲಿಗಿಯ ಆಜಾದ್ ನಗರ ನಿವಾಸಿ ಪಿ. ಪದ್ಮಾ (ಕಲಾ ಕ್ಷೇತ್ರ), ಮೈಸೂರಿನ ಸರಸ್ವತಿ ಪುರಂ ನಿವಾಸಿ ಸುಭಾಷ್ ಎಸ್.ಎಚ್. (ಸಾಮಾಜಿಕ ಕ್ಷೇತ್ರ) ಮತ್ತು ಬಳ್ಳಾರಿಯ ಬಸವನಕುಂಟೆ ನಿವಾಸಿ ಉಷಾರಾಣಿ (ಕಲೆ ಹಾಗೂ ಸಮಾಜ ಸೇವೆ) ಅವರನ್ನು ಮಹರ್ಷಿ ವಾಲ್ಮೀಕಿ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ’ ಎಂದರು.

ಬಳ್ಳಾರಿಯ ನಿವೃತ್ತ ಪ್ರಾಧ್ಯಾಪಕ ಡಾ.ಕಡ್ಲಬಾಳ ಪನ್ನಂಗಧರ ಅಧ್ಯಕ್ಷತೆಯ ಆಯ್ಕೆ ಸಮಿತಿಯು ಪುರಸ್ಕೃತರನ್ನು ಆಯ್ಕೆಮಾಡಿದೆ. ಪುರಸ್ಕೃತರಿಗೆ ತಲಾ ₹ 5 ಲಕ್ಷ ನಗದು ಮತ್ತು 20 ಗ್ರಾಂ. ಚಿನ್ನದ ಫಲಕ ನೀಡಿ ಗೌರವಿಸಲಾಗುವುದು. ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಭಾನುವಾರ ನಡೆಯುವ ವಾಲ್ಮೀಕಿ ಜಯಂತಿ ಸಮಾರಂಭದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರಶಸ್ತಿ ಪ್ರದಾನ ಮಾಡುವರು ಎಂದು ತಿಳಿಸಿದರು.

ಸಂಕ್ಷಿಪ್ತ ಸುದ್ದಿ

ಸಿಇಟಿ: ನಾಳೆ ಸೀಟು ವಿವರ ಪ್ರಕಟ

ಬೆಂಗಳೂರು: ಸಿಇಟಿ ರ‍್ಯಾಂಕಿಂಗ್ ಅನ್ವಯ ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ಸೋಮವಾರದಿಂದ (ಅಕ್ಟೋಬರ್ 10) ಪ್ರಕ್ರಿಯೆಗಳು ಆರಂಭವಾಗುತ್ತಿವೆ.

ಸೋಮವಾರ ಬೆಳಿಗ್ಗೆ 11ರ ನಂತರ ಕೋರ್ಸ್‌ವಾರು ಸೀಟು ಲಭ್ಯತೆ (ಸೀಟ್ ಮ್ಯಾಟ್ರಿಕ್ಸ್) ಹಾಗೂ ಶುಲ್ಕದ ವಿವರಗಳನ್ನು ಕರ್ನಾಟಕಪರೀಕ್ಷಾಪ್ರಾಧಿಕಾರ(ಕೆಇಎ)ತನ್ನವೆಬ್‌ಸೈಟ್‌ನಲ್ಲಿಪ್ರಟಿಸಲಿದೆ. ಅಭ್ಯರ್ಥಿಗಳು ಅ.10ರಿಂದ 12ರವರೆಗೆ ವೆಬ್‌ಸೈಟ್‌ನಿಂದ ಪರಿಶೀಲನಾ ಪಟ್ಟಿ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಅ.11ರ ಮಧ್ಯಾಹ್ನ 2ರಿಂದ 13ರಂದು ಸಂಜೆ 4ರ ಒಳಗೆ ಅರ್ಹ ಅಭ್ಯರ್ಥಿಗಳು ತಮ್ಮ ಇಚ್ಛೆಯ ಆಯ್ಕೆಗಳನ್ನು ಆದ್ಯತಾ ಕ್ರಮದಲ್ಲಿ ದಾಖಲಿಸಬಹುದು ಎಂದು ಕೆಇಎ ತಿಳಿಸಿದೆ.


ವ್ಯಾಸಂಗ ಪ್ರಮಾಣಪತ್ರ, ಕನ್ನಡ ಮಾಧ್ಯಮ ಇನ್ನಿತರ ದಾಖಲೆಗಳನ್ನು ಸಂಪೂರ್ಣವಾಗಿ ಸಲ್ಲಿಸದೇ ಇರುವ ಅಭ್ಯರ್ಥಿಗಳಿಗೆ ದಾಖಲೆ ಪರಿಶೀಲನೆಗೆ ಅ.11ರ ಬೆಳಿಗ್ಗೆ 9.30ಕ್ಕೆ ಕೆಇಎ ಕಚೇರಿಗೆ ಹಾಜರಾಗಲು ಅಂತಿಮ ಅವಕಾಶ ನೀಡಲಾಗಿದೆ.

10 ಕಲಾವಿದರಿಗೆ ‘ವರ್ಣಶ್ರೀ ಪ್ರಶಸ್ತಿ’

ಬೆಂಗಳೂರು: ಕರ್ನಾಟಕ ಲಲಿತಕಲಾ ಅಕಾಡೆಮಿಯು 2021–22ನೇ ಸಾಲಿನ ‘ವರ್ಣಶ್ರೀ ಪ್ರಶಸ್ತಿ’ ಪ್ರಶಸ್ತಿಗೆ 10 ಕಲಾವಿದರನ್ನು ಆಯ್ಕೆ ಮಾಡಿದೆ.

ಮಂಗಳೂರಿನ ವೀಣಾ ಶ್ರೀನಿವಾಸ್, ಬಾಗಲಕೋಟೆಯ ಪರಮೇಶ ಜೋಳದ, ರಾಯಚೂರಿನ ಪಿ.ಎ.ಬಿ. ಈಶ್ವರ, ಪುಣೆಯ ಕುಡಲಯ್ಯಾ ಹಿರೇಮಠ, ತುಮಕೂರಿನ ಅಶೋಕ ಕಲ್ಲಶೆಟ್ಟಿ, ವಿಜಯಪುರದ ನಂದಬಸಪ್ಪ ವಾಡೆ, ರಾಮನಗರದ ಕೆ.ಜಿ. ಲಿಂಗದೇವರು, ಮಡಿಕೇರಿಯ ಮಹೇಶ ಬಿ., ಹುಬ್ಬಳ್ಳಿಯ ಶಕುಂತಲಾ ವರ್ಣೇಕರ ಹಾಗೂ ಬಳ್ಳಾರಿಯ ಮಂಜುನಾಥ ಜಿ. ಅವರು ಆಯ್ಕೆಯಾಗಿದ್ದಾರೆ. ಪ್ರಶಸ್ತಿಯು ತಲಾ ₹ 25 ಸಾವಿರ ನಗದು ಒಳಗೊಂಡಿದೆ ಎಂದು ಅಕಾಡೆಮಿ ರಿಜಿಸ್ಟ್ರಾರ್ ಆರ್. ಚಂದ್ರಶೇಖರ್ ತಿಳಿಸಿದ್ದಾರೆ.

ಗುಂಡಣ್ಣ



25 ವರ್ಷಗಳ ಹಿಂದೆ

ಗುರುವಾರ, 9-10-1997

● ಮಿಗ್: ಭಾರತ – ರಷ್ಯಾ ಜಂಟಿ ಯೋಜನೆ

ಮಾಸ್ಕೊ, ಅಕ್ಟೋಬರ್ 8 (ಪಿಟಿಐ)– ಅತ್ಯಾಧುನಿಕ ‘ಮಿಗ್–ಎಟಿ’ ಯುದ್ಧ ವಿಮಾನವನ್ನು ಜಂಟಿಯಾಗಿ ಉತ್ಪಾದಿಸುವ ರಷ್ಯಾದ ಆಹ್ವಾನಕ್ಕೆ ಭಾರತ ತನ್ನ ಒಪ್ಪಿಗೆ ಸೂಚಿಸಿತು.

ಜಂಟಿಯಾಗಿ ಯುದ್ಧವಿಮಾನ ತಯಾರಿಸುವ ಆಹ್ವಾನವನ್ನು ಮಿಗ್ ವಿಮಾನ ನಿರ್ಮಾಣ ಘಟಕದ ನಿರ್ದೇಶಕ ಗ್ರಿಗೊರಿ ನೆಮೊವ್, ರಕ್ಷಣಾ ಸಚಿವ ಮುಲಾಯಂ ಸಿಂಗ್ ಯಾದವ್ ಅವರಿಗೆ ನೀಡಿದರು. ಭಾರತ ಮತ್ತು ರಷ್ಯಾ ನಡುವಿನ ದೀರ್ಘಕಾಲದ ರಕ್ಷಣಾ ಸಹಕಾರ ಒಪ್ಪಂದದ ಹಿನ್ನೆಲೆಯಲ್ಲಿ ಭಾರತ ಈ ಆಹ್ವಾನ ವನ್ನು ಪರಿಗಣಿಸುವುದು ಎಂದು ಯಾದವ್ ಹೇಳಿದರು.

50 ವರ್ಷಗಳ ಹಿಂದೆ

ಸೋಮವಾರ, 9-10-1972

● ತ್ರಿಭಾಷಾ ಸೂತ್ರದ ಅನುಮೋದನೆಗೆ ಪ್ರಧಾನಿ ಕರೆ

ಇಂದುಚಾಚಾನಗರ, ಅಕ್ಟೋಬರ್ 8– ತ್ರಿಭಾಷಾ ಸೂತ್ರವನ್ನು ದೇಶದಾದ್ಯಂತ ಅಂಗೀಕರಿಸಬೇಕೆಂದು ಇಂದು ಇಲ್ಲಿ ಒತ್ತಾಯಪಡಿಸಿದ ಪ್ರಧಾನಮಂತ್ರಿ ಇಂದಿರಾ ಗಾಂಧಿ ಅವರು ಇಂಗ್ಲೀಷ್ ಭಾಷಾ ವಿರೋಧಿಗಳೆಲ್ಲರಿಗೂ ಛೀಮಾರಿ ಹಾಕಿದರು.

‘ಇಂಗ್ಲಿಷ್ ಭಾಷೆಯ ಮಹತ್ವವನ್ನು ಒಪ್ಪಿಕೊಳ್ಳದಿದ್ದರೆ ದೇಶವು ನಾನಾ ಕ್ಷೇತ್ರಗಳಲ್ಲಿ, ಅದರಲ್ಲೂ ಮುಖ್ಯವಾಗಿ ವಿಜ್ಞಾನ ಹಾಗೂ ತಾಂತ್ರಿಕ ಜ್ಞಾನದಲ್ಲಿ ಹಿಂದುಳಿಯುವುದು’ ಎಂದು ಅವರು ಯುವಕ ಕಾಂಗ್ರೆಸ್ಸಿಗರ ಸಭೆಯಲ್ಲಿ ಮಾತನಾಡುತ್ತ ಎಚ್ಚರಿಕೆ ನೀಡಿದರು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಭಾನುವಾರ ಅಕ್ಟೋಬರ್ 9, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಆಶ್ವಯುಜ ಶುಕ್ಲ ಪೂರ್ಣಿಮಾ ಗಂ. 26-25, ನಕ್ಷತ್ರ: ಉತ್ತರಾಭಾದ್ರಾ ಗಂ. 16-21 ಯೋಗ: ಧ್ರುವ ಗಂ. 18-36, ಕರಣ: ವಿಷ್ಟಿ ಗಂ. 15-00, ಕನ್ಯಾ ಮಾಸದ 22 ನೇ ದಿನ.
ರಾಹುಕಾಲ : ಸಾಯಂಕಾಲ 04-30 – 06:00 ಸೂರ್ಯೋದಯ : 06-24 ಸೂರ್ಯಾಸ್ತ : 06-12 ಮುಸ್ಲಿಂ ದಿನಾಂಕ: 12 ರಬಿಉಲ್ಲಾವಲ್ ದಿನ ವಿಶೇಷ: ಭೂಮಿ ಹುಣ್ಣಿಮೆ, ಮಹರ್ಷಿ ವಾಲ್ಮೀಕಿ ಜನ್ಮದಿನ, ಮಿಲಾದ್-ಉನ್-ನಬಿ ಅಥವಾ ಈದ್-ಎ-ಮಿಲಾದ್ (ಮುಸ್ಲಿಂ)
ಅದೃಷ್ಟ ಸಂಖ್ಯೆ : 5, 7

ಮೇಷ: ಮನೆಯಲ್ಲಿನ ಕಿರಿಯರಿಗಾಗಿ, ಮಕ್ಕಳ ಸಂತೋಷಕ್ಕಾಗಿ ಹೆಚ್ಚಿನ ಖರ್ಚು ವೆಚ್ಚ. ಪತ್ರಿಕಾ ವರದಿಗಾರರಿಗೆ ಕೆಲಸದಲ್ಲಿನ ದಕ್ಷತೆಯಿಂದ ಹೆಚ್ಚಿನ ಯಶಸ್ಸನ್ನು ಕಾಣುವರು. ಸುಗಂಧ ದ್ರವದ ವ್ಯಾಪಾರಿಗಳಿಗೆ ಆಶಾದಾಯಕ ದಿನ.

ವೃಷಭ: ವಸ್ತ್ರ ವಿನ್ಯಾಸಗಾರರಿಗೆ ವಿಶೇಷ ಪರಿಣಿತಿ ಅಗತ್ಯವೆನಿಸಲಿದೆ. ಹೆಚ್ಚಿನ ಪರಿಶ್ರಮದಿಂದ ಕೊರತೆಯನ್ನು ಹೋಗಲಾಡಿಸಿಕೊಳ್ಳಬಹುದು. ಕುಟುಂಬಕ್ಕೆ ಸಂಬಂಧಿಸಿದಂತೆ ಶುಭ ವಾರ್ತಾ ಶ್ರವಣದ ಭಾಗ್ಯ ಒದಗಿಬರುವುದು.

ಮಿಥುನ: ವಿದ್ಯಾರ್ಥಿಗಳ ಅಧ್ಯಯನದಲ್ಲಿ ಹೆಚ್ಚಿನ ಪ್ರಗತಿ ಹಿರಿಯರ ಅಥವಾ ಗುರುಗಳ ಸಲಹೆಗಳನ್ನು ಸ್ವೀಕಾರದಿಂದ ಕಂಡುಬರಲಿದೆ. ಉದ್ಯೋಗಾಕಾಂಕ್ಷಿಗಳಿಗೆ ಪ್ರಭಾವೀ ವ್ಯಕ್ತಿಗಳ ಆಶ್ವಾಸನೆಯಿಂದ ಹೆಚ್ಚಿನ ಸಮಾಧಾನ ಸಿಗಲಿದೆ.

ಕರ್ಕಾಟಕ: ವೃತ್ತಿರಂಗದಲ್ಲಿ ರಚನಾತ್ಮಕ ಕಾರ್ಯಗಳ ನಿರ್ವಹಣೆಯಿಂದ ಮುಂದಿನ ಅಭಿವೃದ್ಧಿಗೆ ಹೆಚ್ಚಿನ ಅವಕಾಶಗಳು ಲಭ್ಯ. ಬಹಳ ದಿನಗಳಿಂದ ಸ್ಥಗಿತಗೊಂಡ ಕಾರ್ಯಕ್ಕೆ ಪುನಃ ಚಾಲನೆ ದೊರೆತು ಸಂತಸ ಹೊಂದುವಿರಿ.

ಸಿಂಹ: ಪೆಟ್ರೋಲಿಯಂ ಉತ್ಪನ್ನಗಳ ಮಾರಾಟದಿಂದ ಹೆಚ್ಚಿನ ಆದಾಯ, ಸಾಗಾಣಿಕೆಯಲ್ಲಿ ಸಣ್ಣಪುಟ್ಟ ಸಮಸ್ಯೆಗಳೂ ಕಾಡಬಹುದು. ಮದುವೆ ಮುಂತಾದ ವಿಷಯಗಳತ್ತ ಗಮನಹರಿಸುವಂತೆ ಮನೆಯವರಿಂದ ಒತ್ತಡ.

ಕನ್ಯಾ: ರಾಜಕೀಯ ವಲಯದಲ್ಲಿ ನಿರೀಕ್ಷಿತ ಕೆಲಸ ಕಾರ್ಯಗಳು ಸರಾಗವಾಗಿ, ಸಮರ್ಪಕವಾಗಿ ನೆರವೇರುವುದು. ಧವಸ ಧಾನ್ಯಗಳ ವ್ಯಾಪಾರಸ್ಥರು ಎಚ್ಚರಿಕೆಯಿಂದಿದ್ದರೆ ಬಂಡವಾಳದ ಮೂಲಧನ ಕಾಪಾಡಿಕೊಳ್ಳಲು ಸಾಧ್ಯ.

ತುಲಾ: ಯಾವುದೇ ಗೊಂದಲಗಳಿಗೆ ಒಳಗಾಗದೇ ನಿಮ್ಮ ನಿಲುವು ಸ್ಪಷ್ಟಪಡಿಸಿಕೊಂಡಲ್ಲಿ ಗೆಲುವು ನಿಮ್ಮದಾಗಲಿದೆ. ಹೂಡಿಕೆ ವಿಚಾರದಲ್ಲಿ ಆಳವಾಗಿ ಯೋಚಿಸಿ ತೀರ್ಮಾನ ಕೈಗೊಳ್ಳುವಂತೆ ಮಿತ್ರರಿಂದ ಸಲಹೆ ಬರುವುದು.

ವೃಶ್ಚಿಕ: ಕೈಗೆಟಕುವ ಕಾರ್ಯವೊಂದು ನಿಮ್ಮ ಸತತ ಪ್ರಯತ್ನದಿಂದ ಆಶ್ಚರ್ಯಕರ ರೀತಿಯಲ್ಲಿ ಥಟ್ಟನೆ ಸಿದ್ಧಿಸಬಹುದು. ವೈಯಕ್ತಿಕ ವಿಚಾರಗಳಲ್ಲಿ ಸೃಷ್ಟಿಯಾದ ಸಣ್ಣಪುಟ್ಟ ಬದಲಾವಣೆಯಿಂದ ಮಾನಸಿಕ ನೆಮ್ಮದಿ ಕಳೆದುಕೊಳ್ಳುವಿರಿ.

ಧನು: ಉತ್ತಮ ಅವಕಾಶಗಳು ನಿಮ್ಮೆಡೆಗೆ ಬರಲಿದೆ. ಅದನ್ನು ಪ್ರಯೋಜನಾಕಾರಿಯಾಗಿ ಉಪಯೋಗಿಸಿಕೊಳ್ಳಿ. ಸಾಲ ತೆಗೆದುಕೊಂಡ ಹಣ ಹಿಂದುರುಗಿಸುವ ಬಗ್ಗೆ ಯೋಚಿಸಿ. ದುರ್ಗಾಪರಮೇಶ್ವರಿಯ ಸ್ತೋತ್ರ ಪಠಿಸುವುದರಿಂದ ಶುಭ.

ಮಕರ: ಮಾತಿನಿಂದ ಕಾರ್ಯ ಸಾಧಿಸುವ ನಿಮ್ಮ ಗುಣದಿಂದ ಅನುಕೂಲಕರ ವಾತಾವರಣವನ್ನು ಕಾಣುವಿರಿ. ಆರ್ಥಿಕ ಸ್ಥಿತಿಯು ನಾನಾ ರೀತಿಯಲ್ಲಿ ಅವನತಿಯ ಹೊಂದುವ ಪರಿಸ್ಥಿತಿ ಗೋಚರಕ್ಕೆ ಬರಬಹುದು, ಜಾಗ್ರತೆವಹಿಸಿ.

ಕುಂಭ: ಸಂಘ ಸಂಸ್ಥೆಗಳ ವಿಚಾರವನ್ನು ಮುಕ್ತವಾಗಿ ಚರ್ಚಿಸಿ, ಕೆಲಸಗಳನ್ನು ಕಾರ್ಯರೂಪಕ್ಕೆ ತರುವುದು ಉತ್ತಮ. ಏಕಮುಖಿ ನಿರ್ಧಾರಗಳಿಂದ ಕತ್ತರಿಗೆ ಸಿಲುಕುವ ಸ್ಥಿತಿ ಸಾಧ್ಯತೆ. ಸಗಟು ವ್ಯಾಪಾರಿಗಳಿಗೆ ಒಳ್ಳೆಯ ಸಮಯ.


ಮೀನ: ಸಂಗಾತಿಯೊಂದಿಗೆ ಸ್ನೇಹದಿಂದ ವರ್ತಿಸಿದರೆ ಭಿನ್ನಾಭಿಪ್ರಾಯ ಮೂಡುವ ಅವಕಾಶ ತಪ್ಪುವುದು. ರೇಷ್ಮೆ ಬೆಳೆಗಾರರಿಗೆ ಹೆಚ್ಚಿನ ಕೆಲಸ. ಬಹುಜನರ ಒಡನಾಟದಿಂದ ಬಲ, ವಿಶ್ವಾಸ, ಪ್ರೀತಿ ಪಡೆಯುವಂತಾಗಲಿದೆ.

ಪದಬಂಧ 5103

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ನಡುವೆ ಪಾದವನ್ನಿರಿಸಿ ತಪ್ಪು ಹೊರಿಸುವುದು (4)
3.ಪರವಾಗಿ ದಾರ ಹಿಡಿದವ ಗೊತ್ತು ಹಚ್ಚುವವನು (4)
5.ತಾರ ನುಡಿಸಿದ ತಂತಿ ವಾದ್ಯ (3)
7. ಬೇರೆಯವರ ಹಣ (4)
9.ಪುಂಡಾಡಿಕೆ ಮಾಡುವವ ತಿರುಗಿದ್ದಾನಲ್ಲಾ? (2)
10.ವರ್ಣನೆಯಲ್ಲಿರುವ ಬಣ್ಣ (2)
11.ವಾರದ ಕೊನೆಗೆ ಧರಿಸಿದ ಯಜ್ಞೋಪವೀತ(4)
14.ಸಂತನಿಂದ ಮುಂದುವರೆದ ವಂಶ (3)
16.ಗರತಿ ಸೇರಿರುವ ಇಯತ್ತೆ (4)
17.ಅಳತೆಗೆ ಮೀರಿದ ಸ್ಥಿತಿ (4)

ಮೇಲಿಂದ ಕೆಳಕ್ಕೆ
1.ಆಲದ ಮರಕ್ಕೊರಗಿರುವವ ಬಲು ಸೋಮಾರಿ! (3)
2.ಸಡಗರದಿಂದ ಆಚರಿಸಿದ ನಾಡಹಬ್ಬ (3)
3.ಈ ಪರಿ ಹಾರವನ್ನಿಟ್ಟು ಹೋಗಲಾಡಿಸುವುದು (4)
4.ರಜದಲ್ಲಿ ಕಳೆದ ಇರುಳು (3)
6.ಹುಂಜ ಕೂಗಿದಾಗ ಕಾಣಿಸಿದ್ದು ನಕ್ಷತ್ರಗಳ ಗುಂಪು (4)
7.ದರವಿದ್ದಾಗ ಕಾಣಿಸಿದ ಮಡಿಕೆ (3)
8.ಅದೇ ತಾನೆ ಕಡೆದ ಬೆಣ್ಣೆ (4)
12.ವಾಚನ ಮಾಡುತ್ತಿರುವ ಬೃಹಸ್ಪತಿ (4)
13.ಪಾಂಡಿತ್ಯ ತೋರುತ್ತಿರುವ ವಿದ್ವಾಂಸ (3)
14.ಸಂಗಾತಿ ಹೇಳಿದ ವಿಷಯ (3)
15.ತಿರುಬೋಕಿ ಹಿಡಿದಿರುವ ಭಿಕ್ಷುಕ (3)



5102ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಬಳಗ 4.ಒಮ್ಮತ
6.ಹಯವದನ 7.ರವಿ
9.ಕಡ 10.ಕಾಡು
11.ಚಿವಾ 12.ವಾರ
13.ಟಆ 18.ನಯವಂಚಕ
19.ನಡುಕ 20.ರಿವಾಜು
ಮೇಲಿಂದ ಕೆಳಕ್ಕೆ:
1.ಬಡಿವಾರ 2.ಗಹನ
3.ಕವನ 4.ಒನಪು
5.ತಡಬಡ 8.ವಿಕಾರ
9.ಕವಾಟ 12.ವಾತಾಯನ
14.ಆಜುಬಾಜು 15.ಶುನಕ
16.ಲವಂಗ 17.ಮಂಕರಿ

ಸುಡೊಕು 5489

9	2			5		8	4	
			3		9			1
	4			1			5	7
	3	2		9		7		6
			1		2		9	
7	9			3		2	1	
3	1		9		5		7	
				8		1	6	9
	6	9			1		3	8

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5488 ಸುಡೊಕು

4	2	1	3	8	9	5	6	7
8	7	9	1	5	6	4	2	3
3	6	5	4	2	7	9	8	1
6	8	7	5	9	4	3	1	2
2	1	4	7	6	3	8	5	9
5	9	3	8	1	2	6	7	4
9	3	2	6	7	8	1	4	5
1	4	8	2	3	5	7	9	6
7	5	6	9	4	1	2	3	8

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಕರ್ನಾಟಕದಲ್ಲಿ ಮುಂದಿನ ಬಾರಿ ನಮ್ಮದೇ ಸರ್ಕಾರ: ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ವಿಶ್ವಾಸ

‘ಅಧಿಕಾರಕ್ಕೆ ಬಂದ ನಂತರ ಸಿ.ಎಂ ನಿರ್ಧಾರ’

ಪ್ರಜಾವಾಣಿ ವಾರ್ತೆ

ತುಮಕೂರು: ‘ಮುಂದಿನ ವರ್ಷ ನಡೆಯಲಿರುವ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಬಹುಮತದೊಂದಿಗೆ ಗೆಲುವು ಸಾಧಿಸಲಿದ್ದು, ರಾಜ್ಯದಲ್ಲಿ ನಮ್ಮದೇ ಪಕ್ಷದ ಸರ್ಕಾರ ಅಧಿಕಾರಕ್ಕೆ ಬರಲಿದೆ. ಪಕ್ಷದ ವೇದಿಕೆಯಲ್ಲಿ ಮುಖ್ಯಮಂತ್ರಿ ಯಾರಾಗಬೇಕು ಎಂಬುದನ್ನು ನಿರ್ಧರಿಸಲಾಗುತ್ತದೆ. ಸಮರ್ಥರೊಬ್ಬರು ಮುಖ್ಯಮಂತ್ರಿ ಆಗುತ್ತಾರೆ’ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಹೇಳಿದರು.

ಭಾರತ್ ಜೋಡೊ ಯಾತ್ರೆ ಶನಿವಾರ ಜಿಲ್ಲೆ ಪ್ರವೇಶಿಸಿದ ನಂತರ ತುರುವೇಕೆರೆ ತಾಲ್ಲೂಕಿನ ಅರಳೀಕೆರೆಪಾಳ್ಯದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು.



ತುರುವೇಕೆರೆ ತಾಲ್ಲೂಕಿನ ಮಾಯಸಂದ್ರದ ಟಿ.ಬಿ ಕ್ರಾಸ್‌ನಿಂದ ಶನಿವಾರ ಆರಂಭವಾದ ಭಾರತ್ ಜೋಡೊ ಯಾತ್ರೆಯಲ್ಲಿ ರಾಹುಲ್ ಗಾಂಧಿ ಜೊತೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಸಿದ್ದರಾಮಯ್ಯ ಹೆಜ್ಜೆ ಹಾಕಿದರು

‘ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತರಲು ಎಲ್ಲಾ ನಾಯಕರು ಒಟ್ಟಾಗಿ ಕೆಲಸ ಮಾಡುತ್ತಿದ್ದಾರೆ. ರಾಜ್ಯ ನಾಯಕರ ನಡುವೆ ಯಾವುದೇ ತಿಕ್ಕಾಟ, ಭಿನ್ನಮತವಿಲ್ಲ. ನಮ್ಮದು ಸರ್ವಾಧಿಕಾರಿ ಮನಸ್ಥಿತಿಯ ಪಕ್ಷವಲ್ಲ. ಎಲ್ಲರ ಭಾವನೆ, ಅಭಿಪ್ರಾಯಗಳಿಗೆ ಅವಕಾಶವಿದೆ’ ಎಂದರು.

‘ಬಿಜೆಪಿ ಸರ್ಕಾರದ ಶೇ 40ರಷ್ಟು ಕಮಿಷನ್ ಭ್ರಷ್ಟ ವ್ಯವಸ್ಥೆ, ಬೆಲೆ ಏರಿಕೆ, ನಿರುದ್ಯೋಗ ಸಮಸ್ಯೆಗಳನ್ನು ಜನರ ಮುಂದಿಟ್ಟು ಚುನಾವಣೆ ಎದುರಿಸುತ್ತೇವೆ. ಈ ಮೂರು ಪ್ರಮುಖ ಸಮಸ್ಯೆಗಳಿಂದ ಬೇಸತ್ತಿರುವುದು ಯಾತ್ರೆ ಸಮಯದಲ್ಲಿ ಜನರನ್ನು ಭೇಟಿ ಮಾಡಿದಾಗ ಮನದಟ್ಟಾಗಿದೆ. ಹಾಗಾಗಿಯೇ ರಾಜ್ಯದಲ್ಲಿ ಅಧಿಕಾರಕ್ಕೆ ಬರುತ್ತೇವೆ ಎಂದು ಹೇಳುತ್ತಿರುವುದು’ ಎಂದರು.

‘ಭಾರತವನ್ನು ಒಗ್ಗೂಡಿಸುವುದು ಯಾತ್ರೆಯ ಉದ್ದೇಶವೇ ಹೊರತು 2024ರ ಚುನಾವಣೆ ಗೆಲ್ಲುವುದಷ್ಟೇ ನಮ್ಮ ಗುರಿಯಲ್ಲ. ಹಿಂಸಾಚಾರ, ಕೋಮು ದ್ವೇಷದಿಂದ ದೇಶವನ್ನು ವಿಭಜಿಸಲಾಗುತ್ತಿದೆ. ಆರ್ಥಿಕ ಅಸಮಾನತೆ ಮೂಡಿದ್ದು, ಕೆಲವರಷ್ಟೇ ಶ್ರೀಮಂತರಾಗುತ್ತಿದ್ದಾರೆ. ಒಬ್ಬಿಬ್ಬರ ಬಳಿ ದೇಶದ ಸಂಪತ್ತು ಕ್ರೋಡೀಕರಣವಾಗುತ್ತಿದೆ. ಬೆಲೆ ಏರಿಕೆ, ಆರ್ಥಿಕ ಕುಸಿತದಿಂದ ಜನರು ಜರ್ಜರಿತರಾಗಿದ್ದು, ಆ ಬಗ್ಗೆ ಮಾತನಾಡುವುದು ಯಾತ್ರೆಯ ಉದ್ದೇಶವಾಗಿದೆ’ ಎಂದು ವಿವರಿಸಿದರು.

ಬಿಜೆಪಿ, ಆರ್‌ಎಸ್‌ಎಸ್ ವಿರುದ್ಧ ವಾಗ್ದಾಳಿ ನಡೆಸಿದ ಅವರು, ‘ಕಾಂಗ್ರೆಸ್ ರಾಷ್ಟ್ರವನ್ನು ಒಗ್ಗೂಡಿಸಿ, ಅಭಿವೃದ್ಧಿ ಮಾಡಿದೆಯೇ ಹೊರತು ಎಂದೂ ವಿಭಜನೆ ಮಾಡಿಲ್ಲ. ದೇಶ ವಿಭಜನೆ ಮಾಡುತ್ತಿರುವವರೇ ನಮ್ಮ ವಿರುದ್ಧ ಮಾತನಾಡುತ್ತಿದ್ದಾರೆ. ಪಿಎಫ್‌ಐ ಸೇರಿದಂತೆ ಯಾರೇ ಅಶಾಂತಿ ಮೂಡಿಸಿದರೂ ಅಂತಹವರನ್ನು ನಾವು ವಿರೋಧಿಸುತ್ತೇವೆ’ ಎಂದರು.

‘ಪಾದಯಾತ್ರೆ ಕಲಿಸಿದ ಪಾಠ ದೊಡ್ಡದು’

ಪಾದಯಾತ್ರೆಯನ್ನೇ ಏಕೆ ಆಯ್ಕೆ ಮಾಡಿಕೊಂಡಿದ್ದೀರಿ? ಎಂಬ ಪತ್ರಕರ್ತರ ಪ್ರಶ್ನೆಗೆ ಉತ್ತರಿಸಿದ ಅವರು, ‘ನನ್ನ ಬಗ್ಗೆ ತಪ್ಪು ಅಭಿಪ್ರಾಯ ಮೂಡಿಸಲು ಬಿಜೆಪಿಯವರು ಹಣ ಖರ್ಚು ಮಾಡಿ ಮಾಧ್ಯಮಗಳನ್ನು ಬಳಸಿಕೊಳ್ಳುತ್ತಿದ್ದಾರೆ. ನೇರವಾಗಿ ಜನರಿಂದಲೇ ಸತ್ಯ ತಿಳಿದುಕೊಳ್ಳಲು ಪಾದಯಾತ್ರೆ ಆಯ್ಕೆ ಮಾಡಿಕೊಂಡಿದ್ದೇನೆ. ಜನರ ಜತೆಗೆ ಹೆಚ್ಚು ಆಪ್ತವಾಗಿ ಬೆರೆತು ಮಾತನಾಡಬಹುದು ಮತ್ತು ಅವರ ನೋವು, ನಲಿವು, ಸಂಕಷ್ಟಗಳನ್ನು ಅರಿಯಬಹುದು. ಇದು ನನಗೆ ದೊಡ್ಡ ಅನುಭವ ನೀಡಿದೆ. ನಾನೂ ಎಲ್ಲರಂತೆ ಕಾರು, ವಿಮಾನದಲ್ಲಿ ಬಂದು ಹೋಗಿದ್ದರೆ ಜನಸಾಮಾನ್ಯರ ಸಮಸ್ಯೆ, ಅಭಿಪ್ರಾಯ ಗೊತ್ತಾಗುತ್ತಿರಲಿಲ್ಲ’ ಎಂದು ಯಾತ್ರೆಯ ಅನುಭವಗಳನ್ನು ಬಿಚ್ಚಿಟ್ಟರು.

‘ಯಾತ್ರೆ ಪ್ರಾರಂಭವಾಗಿ 31 ದಿನಗಳಷ್ಟೇ ಕಳೆದಿದ್ದು, ಇನ್ನೂ ಇದು ಆರಂಭಿಕ ಹಂತ. ಮುಂದಿನ ದಿನಗಳಲ್ಲಿ ಮತ್ತಷ್ಟು ಅನುಭವಗಳು ಪಾಠ ಹೇಳುತ್ತವೆ. ಜನರ ಜತೆಗೆ ಮಾತನಾಡದಿದ್ದರೆ ಅವರ ಪರವಾಗಿ ಕೆಲಸ ಮಾಡುವುದು ಕಷ್ಟಕರ. ಅದಕ್ಕಾಗಿಯೇ ಇಂತಹದೊಂದು ಪ್ರಯತ್ನಕ್ಕೆ ಕೈಹಾಕಿದ್ದೇನೆ’ ಎಂದರು.

‘ಭ್ರಷ್ಟಾಚಾರದ ಹಣದಿಂದ ಬಿಜೆಪಿಯ ನೀಚ ರಾಜಕಾರಣ’



ಮಧು ಬಂಗಾರಪ್ಪ

ಬೆಂಗಳೂರು: ‘ಬಿಜೆಪಿಯು ಭ್ರಷ್ಟಾಚಾರದ ಹಣವನ್ನು ಬಳಸಿಕೊಂಡು ಸುಳ್ಳು ಮಾಹಿತಿಯುಳ್ಳ ಜಾಹೀರಾತುಗಳನ್ನು ಮಾಧ್ಯಮಗಳಲ್ಲಿ ಪ್ರಕಟಿಸುವಂತಹ ನೀಚ ರಾಜಕಾರಣ ಮಾಡುತ್ತಿದೆ’ ಎಂದು ಕೆಪಿಸಿಸಿ ಹಿಂದುಳಿದ ವರ್ಗಗಳ ಘಟಕದ ಅಧ್ಯಕ್ಷ ಮಧು ಬಂಗಾರಪ್ಪ ವಾಗ್ದಾಳಿ ನಡೆಸಿದರು.

ಶಾಸಕ ಎನ್.ಎ. ಹ್ಯಾರೀಸ್ ಅವರೊಂದಿಗೆ ಕೆಪಿಸಿಸಿ ಕಚೇರಿಯಲ್ಲಿ ಶನಿವಾರ ಜಂಟಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿಯವರ ಭಾರತ್ ಜೋಡೊ ಪಾದಯಾತ್ರೆಯ ಯಶಸ್ಸಿನಿಂದ ಕಂಗೆಟ್ಟಿರುವ ಬಿಜೆಪಿ ಕೀಳುಮಟ್ಟದ ರಾಜಕೀಯಕ್ಕೆ ಕೈಹಾಕಿದೆ. ರಾಜ್ಯದ ಮಾಜಿ ಮುಖ್ಯಮಂತ್ರಿಗಳಾದ ಡಿ.ದೇವರಾಜ ಅರಸು, ಎಸ್. ಬಂಗಾರಪ್ಪ ಮತ್ತು ವೀರೇಂದ್ರ ಪಾಟೀಲ ಅವರ ಭಾವಚಿತ್ರಗಳನ್ನು ಬಳಸಿಕೊಂಡು ಸುಳ್ಳು ಜಾಹೀರಾತು ನೀಡಿರುವುದು ನೀಚ ರಾಜಕಾರಣದ ಭಾಗ’ ಎಂದರು.

ಅರಸು, ಬಂಗಾರಪ್ಪ ಮತ್ತು ವೀರೇಂದ್ರ ಪಾಟೀಲ ಅವರು ರಾಜ್ಯದ ದೊಡ್ಡ ನಾಯಕರು. ಹಿಂದುಳಿದ ವರ್ಗಗಳು ಮತ್ತು ಶೋಷಿತ ಸಮುದಾಯಗಳ ಏಳ್ಗೆಗೆ ದೊಡ್ಡ ಮಟ್ಟದಲ್ಲಿ ಕೆಲಸ ಮಾಡಿರುವ ಈ ನಾಯಕರ ಹೆಸರುಗಳನ್ನು ಬಳಸುವ ನೈತಿಕತೆ ಬಿಜೆಪಿಗೆ ಇದೆಯೆ ಎಂದು ಪ್ರಶ್ನಿಸಿದರು.

ಮೂವರು ನಾಯಕರನ್ನು ಕಾಂಗ್ರೆಸ್ ಮೂಲೆಗುಂಪು ಮಾಡಿತ್ತು ಎಂಬ ಅರ್ಥದಲ್ಲಿ ಜಾಹೀರಾತು ನೀಡಲಾಗಿದೆ. ಈ ಎಲ್ಲ ನಾಯಕರು ಸಾಂದರ್ಭಿಕವಾಗಿ ತಮ್ಮ ಶಕ್ತಿಯ ಅನುಸಾರ ತೀರ್ಮಾನ ಕೈಗೊಂಡಿದ್ದರು. ಬಂಗಾರಪ್ಪ ಅವರು ಬಿಜೆಪಿಗೂ ಹೋಗಿದ್ದರು. ಆ ಕಾರಣದಿಂದಲೇ ಬಿಜೆಪಿ ರಾಜ್ಯದಲ್ಲಿ ಅಧಿಕಾರ ಹಿಡಿಯುವ ಮಟ್ಟಕ್ಕೆ ಬೆಳೆಯಿತು. ಈ ಸತ್ಯವನ್ನು ಏಕೆ ಹೇಳುತ್ತಿಲ್ಲ ಎಂದು ಕೇಳಿದರು.

ಬೇರೆ ಪಕ್ಷದ ಬಗ್ಗೆ ಕಾಳಜಿ ತೋರುವ ಬಿಜೆಪಿಯವರಿಗೆ ತಮ್ಮದೇ ನಾಯಕರನ್ನು ಮೂಲೆಗುಂಪು ಮಾಡಿರುವ ಕುರಿತು ಏಕೆ ನೆನಪಾಗುತ್ತಿಲ್ಲ? ಬಿಜೆಪಿ ಸಂಸ್ಥಾಪಕರಲ್ಲಿ ಒಬ್ಬರಾದ ಎಲ್.ಕೆ. ಅಡ್ವಾಣಿ ಎಲ್ಲಿದ್ದಾರೆ? ಮುರಳಿ ಮನೋಹರ ಜೋಶಿಯವರ ಸ್ಥಿತಿ ಏನಾಗಿದೆ? ರಾಜ್ಯದಲ್ಲಿ ಬಿಜೆಪಿ ಕಟ್ಟಿ ಬೆಳೆಸಿದ ಬಿ.ಬಿ.ಶಿವಪ್ಪ ಅವರ ಸ್ಥಿತಿ ಏನಾಗಿತ್ತು? ಎಂಬುದರ ಕುರಿತೂ ಜಾಹೀರಾತು ನೀಡಲಿ ಎಂದರು.

‘ನಮ್ಮ ತಂದೆಯವರ ವಿರುದ್ಧ ಸಿಬಿಐ ದಾಖಲಿಸಿದ್ದ ಪ್ರಕರಣಗಳಿಗೆ ಸಂಬಂಧಿಸಿದಂತೆ ವಿಧಾನಸಭೆಯಲ್ಲಿ ನಡೆದ ಚರ್ಚೆ ವೇಳೆ ನಾನು ಆಡಿದ್ದ ಮಾತುಗಳನ್ನು ಬಿಜೆಪಿ ತನ್ನ ಜಾಹೀರಾತಿನಲ್ಲಿ ದುರ್ಬಳಕೆ ಮಾಡಿಕೊಂಡಿದೆ. ಆಗ ನಾನು ಜೆಡಿಎಸ್ ಶಾಸಕನಾಗಿದ್ದೆ. ಸಿಬಿಐ ತನಿಖೆ ಕುರಿತ ಚರ್ಚೆಯ ಮಾತನ್ನು ರಾಜಕಾರಣಕ್ಕೆ ದುರ್ಬಳಕೆ ಮಾಡಿಕೊಳ್ಳುವುದು ನಾಚಿಕೆಗೇಡಿನ ಸಂಗತಿ’ ಎಂದು ಮಧು ಹೇಳಿದರು.

ಹ್ಯಾರೀಸ್ ಮಾತನಾಡಿ, 'ರಾಹುಲ್ ಗಾಂಧಿಯವರ ಭಾರತ್ ಜೋಡೋ ಯಾತ್ರೆ ಯಶಸ್ವಿಯಾಗಿದೆ ಎಂಬುದಕ್ಕೆ ಬಿಜೆಪಿ ನೀಡುತ್ತಿರುವ ಸುಳ್ಳು ಜಾಹೀರಾತುಗಳೇ ಸಾಕ್ಷಿ.’ ಎಂದರು.

ಸಂಚಲನ ಮೂಡಿಸಿದ ರಾಹುಲ್ ಯಾತ್ರೆ

ತುಮಕೂರು: ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ನೇತೃತ್ವದಲ್ಲಿ ಆರಂಭವಾಗಿರುವ ‘ಭಾರತ್ ಜೋಡೊ’ ಯಾತ್ರೆ ಜಿಲ್ಲೆಯಲ್ಲೂ ಸಂಚಲನ ಮೂಡಿಸಿತು.

ಶನಿವಾರ ಬೆಳಿಗ್ಗೆ 6.30 ಗಂಟೆಗೆ ತುರುವೇಕೆರೆ ತಾಲ್ಲೂಕು ಮಾಯಸಂದ್ರ ಸಮೀಪದ ಟಿ.ಬಿ ಕ್ರಾಸ್‌ಗೆ ಬಂದ ಪಾದಯಾತ್ರೆಗೆ ಅದ್ದೂರಿ ಸ್ವಾಗತ ದೊರೆಯಿತು. ಪಕ್ಷದ ರಾಹುಲ್ ಕಂಡು ಕುಣಿದು, ಕುಪ್ಪಳಿಸಿದ ಕಾರ್ಯಕರ್ತರು ಹರ್ಷೋದ್ಗಾರಗಳ ಮೂಲಕ ಬರಮಾಡಿಕೊಂಡರು.

108 ಪೂರ್ಣಕುಂಭ ಹೊತ್ತ ಮಹಿಳೆಯರು ಯಾತ್ರೆಗೆ ಸ್ವಾಗತ ಕೋರಿದರು. ನಾದಸ್ವರ, ಹಲವಾರು ಕಲಾ ತಂಡಗಳು ಸಾಥ್ ನೀಡಿದವು. ರಾಹುಲ್ ಜತೆಯಲ್ಲಿ ಶಾಸಕ ಡಾ.ಜಿ. ಪರಮೇಶ್ವರ ಹಾಗೂ ಜಿಲ್ಲೆಯ ನಾಯಕರು ಹೆಜ್ಜೆ ಹಾಕಿದರು. ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಮಧ್ಯದಲ್ಲಿ ಯಾತ್ರೆ ಸೇರಿಕೊಂಡರು. ಅರಳೀಕೆರೆಪಾಳ್ಯದಲ್ಲಿ ಪಾದಯಾತ್ರಿಗಳು ವಿಶ್ರಾಂತಿ ಪಡೆದರು. ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಇಲ್ಲಿ ಯಾತ್ರೆಗೆ ಜತೆಯಾದರು.

ದಲಿತ ಸಂಘರ್ಷ ಸಮಿತಿ ಮುಖಂಡ ಕುಂದೂರು ಮುರುಳಿ ಅವರು, ರಾಹುಲ್ ಅವರಿಗೆ ಬುದ್ಧನ ಪ್ರತಿಮೆ ಉಡುಗೊರೆಯಾಗಿ ನೀಡಿದರು.

ಯಾತ್ರೆ ಸಾಗಿದ ಮಾರ್ಗದ ಹಳ್ಳಿಗಳ ಜನರು ಬಂದು ಕೆಲ ಸಮಯ ಹೆಜ್ಜೆ ಹಾಕಿದರು. ಕೆಲವರು ಗ್ರಾಮಕ್ಕೆ ಸ್ವಾಗತಿಸಿ, ಬೀಳ್ಕೊಟ್ಟರು. ಅಲ್ಲಲ್ಲಿ ಕಲಾ ತಂಡಗಳು ರಂಜಿಸಿದವು. ರಸ್ತೆಯುದ್ದಕ್ಕೂ ಕಾಂಗ್ರೆಸ್ ನಾಯಕರ ಫ್ಲೆಕ್ಸ್, ಬ್ಯಾನರ್ ರಾರಾಜಿಸಿದವು. ಮಾರ್ಗ ಮಧ್ಯೆ ನೀರು, ಹಣ್ಣು ಕೊಟ್ಟು ಉಪಚರಿಸುತ್ತಿದ್ದ ದೃಶ್ಯ ಸಾಮಾನ್ಯವಾಗಿತ್ತು.

ರಾಹುಲ್ ಮತ್ತು ರಾಜ್ಯದ ನಾಯಕರ ಭಾವಚಿತ್ರವಿರುವ ಟೀ ಷರ್ಟ್ ಧರಿಸಿದ್ದ ಕಾರ್ಯಕರ್ತರು ಉತ್ಸಾಹದಿಂದ ಪಾಲ್ಗೊಂಡಿದ್ದರು. ಅರಳೀಕೆರೆಪಾಳ್ಯದಲ್ಲಿ ವಿಶ್ರಾಂತಿ ಪಡೆದ ನಂತರ ಮಧ್ಯಾಹ್ನ ತುರುವೇಕೆರೆಯಲ್ಲಿ ಸಾರ್ವಜನಿಕ ಸಭೆ ಉದ್ದೇಶಿಸಿ ರಾಹುಲ್ ಗಾಂಧಿ ಮಾತನಾಡಿದರು. ನಂತರ ಹರಿದಾಸನಹಳ್ಳಿ ಮೂಲಕ ತೆರಳಿ ಬಾಣಸಂದ್ರದಲ್ಲಿ ಕೊನೆಗೊಂಡಿತ್ತು. ಭಾನುವಾರ ಬೆಳಿಗ್ಗೆ ತಿಪಟೂರು ತಾಲ್ಲೂಕು ಕೆ.ಬಿ.ಕ್ರಾಸ್‌ನಿಂದ ಯಾತ್ರೆ ಆರಂಭವಾಗಲಿದೆ.

ಕಾರ್ಯಕರ್ತರ ಮನೆಯಲ್ಲಿ ತಿಂಡಿ ಸವಿದ ರಾಹುಲ್

ಪಾದಯಾತ್ರೆ ಸಮಯದಲ್ಲಿ ರಾಹುಲ್ ಗಾಂಧಿ ತುರುವೇಕೆರೆ ತಾಲ್ಲೂಕು ಹೆಡ್ಡನಕಟ್ಟೆ ಗ್ರಾಮದ ಕಾಂಗ್ರೆಸ್ ಕಾರ್ಯಕರ್ತ ರಾಜೇಶ್ ಅವರ ಮನೆಯಲ್ಲಿ ತಿಂಡಿ ತಿಂದು, ಕಾಫಿ ಕುಡಿದರು. ತಿಂಡಿಗೆ ಚಿತ್ರಾನ್ನ, ಬೋಂಡಾ ನೀಡಲಾಯಿತು.

ಕುಟುಂಬದವರ ಕುಶಲೋಪರಿ ವಿಚಾರಿಸಿದರು. ರಾಜೇಶ್ ಅವರ ಪುತ್ರಿ ಸಿಂಚನ ವಿದ್ಯಾಭ್ಯಾಸದ ಬಗ್ಗೆ ಮಾಹಿತಿ ಪಡೆದುಕೊಂಡರು. ಹಾಕಿ ಕ್ರೀಡೆಯಲ್ಲಿ ಆಸಕ್ತಿ ಇರುವುದನ್ನು ಗಮನಿಸಿ, ಮುಂದೆ ಕ್ರೀಡೆಯಲ್ಲಿ ಉತ್ತಮ ಸಾಧನೆ ಮಾಡುವಂತೆ ಸಲಹೆ ಮಾಡಿದರು.

ಯಾತ್ರೆಯಲ್ಲಿ ಜೆಡಿಎಸ್‌ನ ಉಚ್ಚಾಟಿತ ಶಾಸಕ ಶ್ರೀನಿವಾಸ್

ಜೆಡಿಎಸ್‌ನಿಂದ ಉಚ್ಚಾಟಿತರಾಗಿರುವ ಗುಬ್ಬಿ ಶಾಸಕ ಎಸ್.ಆರ್.ಶ್ರೀನಿವಾಸ್ ‘ಭಾರತ್ ಜೋಡೊ’ ಯಾತ್ರೆಯಲ್ಲಿ ಶನಿವಾರ ಭಾಗವಹಿಸಿದ್ದರು.

ತುರುವೇಕೆರೆ ತಾಲ್ಲೂಕಿನ ಮಾಯಸಂದ್ರ ಸಮೀಪದ ಟಿ.ಬಿ ಕ್ರಾಸ್‌ನಲ್ಲಿ ಯಾತ್ರೆ ಆರಂಭವಾಗುತ್ತಿದ್ದಂತೆ ರಾಹುಲ್ ಗಾಂಧಿ ಜತೆ ಹೆಜ್ಜೆ ಹಾಕಿದರು. ಸಾಕಷ್ಟು ದೂರ ಯಾತ್ರೆಯಲ್ಲಿ ಸಾಗಿ ಬಂದರು.

ಜೆಡಿಎಸ್‌ನಿಂದ ಉಚ್ಚಾಟಿಸಿದ ನಂತರ ಕಾಂಗ್ರೆಸ್ ಸೇರಲಿದ್ದಾರೆ ಎಂಬ ಮಾತು ಕೇಳಿ ಬಂದಿದ್ದವು. ಪಕ್ಷಕ್ಕೆ ಬಂದರೆ ಟಿಕೆಟ್ ನೀಡುವುದಾಗಿ ಮುಖಂಡ ಸಿದ್ದರಾಮಯ್ಯ ಮುಕ್ತ ಆಹ್ವಾನ ನೀಡಿದ್ದರು. ಆದರೆ ಈವರೆಗೆ ಪಕ್ಷ ಸೇರುವ ಬಗ್ಗೆ ಯಾವುದೇ ನಿರ್ಧಾರ ಪ್ರಕಟಿಸಿಲ್ಲ. ಆದರೆ ರಾಹುಲ್ ಗಾಂಧಿ ಜತೆ ಪಾದಯಾತ್ರೆಯಲ್ಲಿ ಭಾಗವಹಿಸಿರುವುದು ಮಹತ್ವ ಪಡೆದುಕೊಂಡಿದೆ.

‘ಮೀಸಲಾತಿ: ಚನ್ನಮ್ಮ ಜಯಂತಿ ಬಹಿಷ್ಕಾರ’

ಪ್ರಜಾವಾಣಿ ವಾರ್ತೆ

ಬಾಗಲಕೋಟೆ: ಲಿಂಗಾಯತ ಪಂಚಮಸಾಲಿ ಸಮಾಜಕ್ಕೆ 2ಎ ಮೀಸಲಾತಿ ನೀಡಲು ಸರ್ವಪಕ್ಷಗಳ ಸಭೆ ಕರೆಯಬೇಕು ಎಂದು ಲಿಂಗಾಯತ ಪಂಚಮಸಾಲಿ ಸಮಾಜದ ರಾಷ್ಟ್ರೀಯ ಅಧ್ಯಕ್ಷ ವಿಜಯಾನಂದ ಕಾಶಪ್ಪನವರ ಆಗ್ರಹಿಸಿದ್ದಾರೆ.

ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಅ.23ರೊಳಗೆ ಮೀಸಲಾತಿ ವಿಷಯ ನಿರ್ಧಾರ ಮಾಡದಿದ್ದರೆ, ಅಂದು ಸರ್ಕಾರ ಆಯೋಜಿಸಿರುವ ಕಿತ್ತೂರು ಚನ್ನಮ್ಮ ಜಯಂತಿ ಕಾರ್ಯಕ್ರಮ ಬಹಿಷ್ಕರಿಸಲಾಗುವುದು ಎಂದು ತಿಳಿಸಿದರು.

ದಾವಣಗೆರೆ: ಡಿ.23ರಿಂದ ವೀರಶೈವ–ಲಿಂಗಾಯತ ಮಹಾ ಅಧಿವೇಶನ

ದಾವಣಗೆರೆ: ಅಖಿಲ ಭಾರತ ವೀರಶೈವ ಲಿಂಗಾಯತ 23ನೇ ಮಹಾ ಅಧಿವೇಶನ ಡಿಸೆಂಬರ್ 23ರಿಂದ 25ರವರೆಗೆ ನಗರದ ಎಂಬಿಎ ಕಾಲೇಜು ಮೈದಾನದಲ್ಲಿ ನಡೆಯಲಿದೆ.

ಸಮಾವೇಶದಲ್ಲಿ ವೀರಶೈವ–ಲಿಂಗಾಯತ ಎರಡೂ ಒಂದೇ ಎಂದು ಜಾಗೃತಿ ಮೂಡಿಸುವುದರ ಜೊತೆಗೆ ವೀರಶೈವ–ಲಿಂಗಾಯತ ಸಮುದಾಯವನ್ನು ಕೇಂದ್ರ ಸರ್ಕಾರದ ಇತರೆ ಹಿಂದುಳಿದ ವರ್ಗಗಳ ಪಟ್ಟಿಗೆ (ಒಬಿಸಿ) ಸೇರ್ಪಡೆಗೊಳಿಸಬೇಕು ಎಂದು ನಿರ್ಣಯ ಕೈಗೊಂಡು ಸರ್ಕಾರಕ್ಕೆ ಮನವಿ ಸಲ್ಲಿಸಲು ಶನಿವಾರ ಇಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ನಿರ್ಧರಿಸಲಾಯಿತು.

‘ಸಿ.ಎಂ ಸೇರಿದಂತೆ ಮಠಾಧೀಶರು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವರು’ ಎಂದು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ರಾಷ್ಟ್ರೀಯ ಉಪಾಧ್ಯಕ್ಷ ಅಥಣಿ ವೀರಣ್ಣ ತಿಳಿಸಿದರು.

ರೈತ ಆತ್ಮಹತ್ಯೆ

ಹೊಸನಗರ: ತಾಲ್ಲೂಕಿನ ಕಿಳಂದೂರು ಗ್ರಾಮದಲ್ಲಿ ಅಡಿಕೆ ತೋಟಕ್ಕೆ ಎಲೆಚುಕ್ಕಿ ರೋಗ ಬಾಧಿಸಿದ್ದರಿಂದ ಬೇಸತ್ತು ರೈತ ಕೃಷ್ಣಪ್ಪ ಗೌಡ (60) ಶುಕ್ರವಾರ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಕೃಷಿ ಅಭಿವೃದ್ಧಿಗಾಗಿ ಕೆನರಾ ಬ್ಯಾಂಕ್‌ನಲ್ಲಿ ₹ 3 ಲಕ್ಷ, ನಗರ ನೀಲಕಂಠೇಶ್ವರ ಪತ್ತಿನ ಸಹಕಾರ ಸಂಘದಲ್ಲಿ ₹ 1.5 ಲಕ್ಷ ಸಾಲ ಮಾಡಿದ್ದರು. ಅಲ್ಲದೇ ಊರಿನಲ್ಲಿ ಹಲವರ ಹತ್ತಿರ ಕೈಸಾಲ ಮಾಡಿದ್ದರು ಕೃಷ್ಣಪ್ಪ ಅವರ ಮಗ ಸತೀಶ್ ಹೇಳಿದ್ದಾರೆ.



ಕೊಡೆ ಅಲಂಕಾರ

ಈದ್ ಮಿಲಾದ್ ಅಂಗವಾಗಿ ಬೆಳಗಾವಿ ನಗರದ ದರ್ಬಾರ್ ಗಲ್ಲಿಯಲ್ಲಿರುವ ಜುಮ್ಮಾ ಮಸೀದಿ ರಸ್ತೆಯಲ್ಲಿ ಶನಿವಾರ ಬಣ್ಣದ ಕೊಡೆಗಳ ಅಲಂಕಾರ ಮಾಡಿದ್ದು ಗಮನ ಸೆಳೆಯಿತು –ಪ್ರಜಾವಾಣಿ ಚಿತ್ರ: ಏಕನಾಥ ಅಗಸಿಮನಿ

ಅಹಮದಾಬಾದ್ ಕರ್ನಾಟಕ ಸಂಘದ ಅಮೃತ ಮಹೋತ್ಸವ ಸಂಭ್ರಮ

‘ಕನ್ನಡ ಭವನ ನಿರ್ಮಿಸಲು ನೆರವಿಗೆ ಬದ್ಧ’

● ಸುದೇಶ ದೊಡ್ಡಪಾಳ್ಯ

ಅಹಮದಾಬಾದ್: ಇಲ್ಲಿನ ಕರ್ನಾಟಕ ಸಂಘ ನಿರ್ಮಿಸಲು ಉದ್ದೇಶಿಸಿರುವ ಕನ್ನಡ ಭವನಕ್ಕೆ ಜಾಗ ಹಾಗೂ ಆರ್ಥಿಕ ನೆರವು ನೀಡುವುದಾಗಿ ಗುಜರಾತಿನ ಮುಖ್ಯಮಂತ್ರಿ ಭೂಪೇಂದ್ರ ಪಟೇಲ್ ಶನಿವಾರ ಭರವಸೆ ನೀಡಿದರು.

ನಗರದ ವಿಶ್ವವಿದ್ಯಾಲಯದ ಪ್ರದರ್ಶನ ಮತ್ತು ಸಮ್ಮೇಳನ ಕೇಂದ್ರದಲ್ಲಿ ಅಹಮದಾಬಾದ್ ಕರ್ನಾಟಕ ಸಂಘವು ಆಯೋಜಿಸಿರುವ ಎರಡು ದಿನಗಳ ಅಮೃತ ಮಹೋತ್ಸವ ಕಾರ್ಯಕ್ರಮದ ಉದ್ಘಾಟನಾ ಸಮಾರಂಭದಲ್ಲಿ, ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರ ಮನವಿಗೆ ಪಟೇಲ್ ಸ್ಪಂದಿಸಿದರು. ಸಭಾಂಗಣದಲ್ಲಿದ್ದ ಕನ್ನಡಿಗರು ಜೋರಾಗಿ ಚಪ್ಪಾಳೆ ತಟ್ಟಿ ಹರ್ಷ ವ್ಯಕ್ತಪಡಿಸಿದರು.

ಕನ್ನಡ ಭವನ ನಿರ್ಮಾಣಕ್ಕೆ ಸಾಮಾಜಿಕ ಹೊಣೆಗಾರಿಕೆ ನಿಧಿಯಿಂದ ಧನ ಸಹಾಯ ಮಾಡುವುದಾಗಿ ಪ್ರಲ್ಹಾದ ಜೋಶಿ ಘೋಷಿಸಿದರು. ಕರ್ನಾಟಕ ಸರ್ಕಾರದಿಂದ ಆರ್ಥಿಕ ನೆರವು ನೀಡುವುದಾಗಿ ಕರ್ನಾಟಕದ ಬೃಹತ್ ಕೈಗಾರಿಕಾ ಸಚಿವ ಮುರುಗೇಶ ನಿರಾಣಿ ವಾಗ್ದಾನ ಮಾಡಿದರು.

ಅಮೃತ ಮಹೋತ್ಸವವನ್ನು ಉದ್ಘಾಟಿಸಿ ಮಾತನಾಡಿದ ಭೂಪೇಂದ್ರ ಪಟೇಲ್, ‘ಸ್ವಾತಂತ್ರ್ಯಪೂರ್ವದಿಂದಲೂ ಗುಜರಾತಿಗಳು ಹಾಗೂ ಕನ್ನಡಿಗರ ನಡುವೆ ಒಳ್ಳೆಯ ಬಾಂಧವ್ಯವಿದೆ. ಕನ್ನಡಿಗರು ಗುಜರಾತಿನ ಮಣ್ಣಿನಲ್ಲಿ ಬೆರತು ಹೋಗಿದ್ದಾರೆ’ ಎಂದು ಶ್ಲಾಘಿಸಿದರು.

ಗುಜರಾತ್‌ನ ಗೃಹ ಮತ್ತು ಸಂಸ್ಕೃತಿ ಸಚಿವ ಹರ್ಷ ಸಂಘ್ವಿ ಮಾತನಾಡಿ, ‘ಗುಜರಾತಿನಲ್ಲಿ ನಾಲ್ಕು ಲಕ್ಷದಷ್ಟು ಕನ್ನಡಿಗರು ಇದ್ದಾರೆ. ಹೆಚ್ಚಿನವರು ಜವಳಿ ಉದ್ಯಮದಲ್ಲಿ ಕೆಲಸ ಮಾಡುತ್ತಿದ್ದರೆ, ಕೆಲವರು ಉದ್ಯಮಿಗಳೂ ಆಗಿದ್ದಾರೆ. ಇತ್ತೀಚಿನ ವರ್ಷಗಳಲ್ಲಿ ಕರ್ನಾಟಕದ ಯುವಕರು ಗುಜರಾತಿನಲ್ಲಿ ಶಿಕ್ಷಣ, ಬ್ಯಾಂಕಿಂಗ್ ಮತ್ತು ಸಾಫ್ಟ್‌ವೇರ್ ಕ್ಷೇತ್ರಗಳಲ್ಲಿ ಹೆಚ್ಚಾಗಿ ಕೆಲಸ ಮಾಡುತ್ತಿದ್ದಾರೆ. ಹೀಗಾಗಿ ಗುಜರಾತ್ ಮತ್ತು ಕರ್ನಾಟಕ ಜೋಡಿ ನಂಬರ್ ವನ್ ಆಗಿದೆ’ ಎಂದು ಹೇಳಿದರು.

ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಮಾತನಾಡಿ, ‘ದೇಶದಲ್ಲಿ ತುಕ್ಡೆ ಗ್ಯಾಂಗ್‌ನವರು ಭಾಷೆ, ಉಡುಗೆ–ತೊಡುಗೆ, ಆಹಾರದ ವಿಷಯವನ್ನು ಬಳಸಿಕೊಂಡು ಸಂಘರ್ಷ ಹುಟ್ಟುಹಾಕಲು ಯತ್ನಿಸುತ್ತಿದ್ದಾರೆ. ಕುವೆಂಪು ರಚಿಸಿರುವ ನಾಡಗೀತೆಯ ಸಾರದಂತೆ ಭಾರತ ದೇಶದ ಎಲ್ಲರೂ ಒಂದಾಗಿ ಬಾಳುವ ಮೂಲಕ ತುಕ್ಡೆ ಗ್ಯಾಂಗ್‌ನವರಿಗೆ ಜಾಗ ಇಲ್ಲದಂತೆ ನೋಡಿಕೊಳ್ಳಬೇಕು’ ಎಂದು ಕರೆ ನೀಡಿದರು.

ವೇದಿಕೆಯಲ್ಲಿ ಕಲಬುರಗಿ ಸಂಸದ ಡಾ.ಉಮೇಶ್ ಜಾಧವ್, ಅಹಮದಾಬಾದ್ (ಪೂರ್ವ) ಸಂಸದ ಹಸ್ಮುಖ್ ಪಟೇಲ್, ಮೇಯರ್ ಕಿರೀಟ್‌ಕುಮಾರ್ ಪರ್ಮಾರ್, ಕೆಸಿಡಿಸಿ ಅಧ್ಯಕ್ಷ ಪಿ.ರಾಜೀವ್, ಕೆಎಫ್‌ಡಿಸಿ ಅಧ್ಯಕ್ಷೆ ತಾರಾ ಅನುರಾಧಾ, ಕೆಎಸ್‌ಎಸ್‌ಡಿಸಿ ಅಧ್ಯಕ್ಷ ಎಸ್.ನರೇಶ್‌ಕುಮಾರ್, ಹುನಗುಂದ ಶಾಸಕ ದೊಡ್ಡನಗೌಡ ಪಾಟೀಲ ಇದ್ದರು. ಕರ್ನಾಟಕ ಸಂಘದ ಅಧ್ಯಕ್ಷ ಹನಮಂತ ಬೆನ್ನೂರ್ ಮನವಿ ಪತ್ರ ಸಲ್ಲಿಸಿದರು. ಇದೇ ಸಂದರ್ಭದಲ್ಲಿ ಸ್ಮರಣ ಸಂಚಿಕೆಯನ್ನು ಗಣ್ಯರು ಬಿಡುಗಡೆ ಮಾಡಿದರು.

ವೀರಗಾಸೆ, ಯಕ್ಷಗಾನ, ಕೋಲು ಕುಣಿತ, ಕರಗ, ಗಾರುಡಿ ಗೊಂಬೆ, ಡೊಳ್ಳು ಕುಣಿತ, ಚಂಡೆಯಂತಹ ಜನಪದ ಕಲೆಗಳ ಪ್ರದರ್ಶನ ಗಮನ ಸೆಳೆಯಿತು.



ಅಹಮದಾಬಾದ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಗುಜರಾತ್ ಮುಖ್ಯಮಂತ್ರಿ ಭೂಪೇಂದ್ರ ಪಟೇಲ್ ಮತ್ತು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ದೀಪ ಬೆಳಗಿಸಿದರು. ಈ ಸಂದರ್ಭದಲ್ಲಿ ಗಣ್ಯರು ಜೊತೆಯಾದರು

> ವಿಶ್ವದಲ್ಲಿ ಕನ್ನಡಿಗರು ಇಲ್ಲದ ಜಾಗವೇ ಇಲ್ಲ. ಎಲ್ಲೇ ಇರಿ, ಕನ್ನಡಕ್ಕಾಗಿ ನಿರಂತರವಾಗಿ ಕೈ ಎತ್ತುತ್ತಲೇ ಇರಿ
> **ಜಗ್ಗೇಶ್,** ರಾಜ್ಯಸಭಾ ಸದಸ್ಯ

> ಕರ್ನಾಟಕ ಸಂಸ್ಕೃತಿಯನ್ನು ಬಿಂಬಿಸುವ ಕಾರ್ಯಕ್ರಮಗಳನ್ನು ಗುಜರಾತಿನ ನಗರಗಳಲ್ಲಿ ಆಯೋಜಿಸಲು ನೆರವು ನೀಡಲು ಬದ್ಧ
> **ಹರ್ಷ ಸಂಘ್ವಿ,** ಸಂಸ್ಕೃತಿ ಸಚಿವ

ಭಾರತ್ ಜೋಡೊಗೂ ಮೀಸಲಾತಿ ಹೆಚ್ಚಳಕ್ಕೂ ಸಂಬಂಧವಿಲ್ಲ: ಕಟೀಲ್

ದಾವಣಗೆರೆ: ‘ಭಾರತ್ ಜೋಡೊ ಯಾತ್ರೆ ಮಾಡುತ್ತಿರುವುದರಿಂದ ಎಸ್ಸಿ, ಎಸ್ಟಿ ಮೀಸಲಾತಿ ಹೆಚ್ಚಿಸಲಾಗಿದೆ ಎಂಬುದು ಸರಿಯಲ್ಲ. ನುಡಿದಂತೆ ನಡೆದ ಮುಖ್ಯಮಂತ್ರಿ, ಮಾತು ತಪ್ಪದ ಸರ್ಕಾರ ನಮ್ಮದು ’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಹೇಳಿದರು.

ಸುದ್ದಿಗಾರರ ಜತೆಗೆ ಗುರುವಾರ ಮಾತನಾಡಿದ ಅವರು, ‘ಸಿದ್ದರಾಮಯ್ಯ ಹಾಗೂ ಡಿ.ಕೆ. ಶಿವಕುಮಾರ್ ಅವರು ಅಧಿಕಾರದಲ್ಲಿದ್ದಾಗ ಏಕೆ ಮಾಡಲಿಲ್ಲ? ಆಗ ಈ ಸಮುದಾಯಗಳ ಬಗ್ಗೆ ಕಾಳಜಿ ಇರಲಿಲ್ಲವೇ? ಅವರು ನಡೆಸುತ್ತಿರುವ ಜೋಡೊಗೂ ಮೀಸಲಾತಿ ಹೆಚ್ಚಳ ತೀರ್ಮಾನಕ್ಕೂ ಯಾವುದೇ ಸಂಬಂಧವಿಲ್ಲ’ ಎಂದು ಸ್ಪಷ್ಟಪಡಿಸಿದರು.

‘ಟಿಪ್ಪು ಹೆಸರೇ ಗೊಂದಲ, ಚರ್ಚೆಯಲ್ಲಿದೆ. ಹೀಗಾಗಿ ಬೆಂಗಳೂರು–ಮೈಸೂರು ನಡುವೆ ಸಂಚರಿಸುವ ಟಿಪ್ಪು ಸೂಪರ್‌ಫಾಸ್ಟ್ ರೈಲಿನ ಹೆಸರು ಬದಲಾಯಿಸಲಾಗಿದೆ’ ಎಂದರು.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)				
ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	123.70	4,851	4,915
ಹಾರಂಗಿ	2,859	2,853.75	878	1,800
ಕಬಿನಿ	2,284	2,281.99	875	800
ಹೇಮಾವತಿ	2,922	2,921.35	1,903	2,962
ಲಿಂಗನಮಕ್ಕಿ	1,819	1,814	2,922	6,503
ಸೂಪಾ (ಮೀ)	564	553.65	1,132	2,395
ಮಾಣಿ	595	589	188	752
ತುಂಗಭದ್ರಾ	1,633	1,633	17,350	26,534
ಮಲಪ್ರಭಾ	2,079.50	2,079.50	1,794	1,794
ಘಟಪ್ರಭಾ	2,175	2,174.56	1,415	1,889
ಭದ್ರಾ	186	185	3,391	1,261
ಆಲಮಟ್ಟಿ (ಮೀ)	519.60	519.60	26,701	26,701
ನಾರಾಯಣಪುರ (ಮೀ)	492.25	492.10	45,000	41,000

* ನೆಲಮಟ್ಟದಿಂದ

ಒಳ ಮೀಸಲಾತಿಗೂ ಪ್ರಕ್ರಿಯೆ ಆರಂಭ

ಒಂದನೇ ಪುಟದಿಂದ

ನಾಗಮೋಹನದಾಸ್ ಆಯೋಗ ಮತ್ತು ನ್ಯಾಯಮೂರ್ತಿ ಸುಭಾಷ್ ಬಿ. ಅಡಿ ಸಮಿತಿ ವರದಿಗಳನ್ನು ಮಾತ್ರ ಸರ್ಕಾರ ಪರಿಶೀಲನೆ ನಡೆಸಿದೆ. ಅವುಗಳ ಆಧಾರದಲ್ಲಿ ಮೀಸಲಾತಿ ಹೆಚ್ಚಿಸುವ ನಿರ್ಣಯ ಕೈಗೊಳ್ಳಲಾಗಿದೆ. ಎಸ್.ಸಿ ಮತ್ತು ಎಸ್.ಟಿ ಪಟ್ಟಿಯಲ್ಲಿರುವ ಸಮುದಾಯಗಳಿಗೆ ಜನಸಂಖ್ಯೆಯ ಆಧಾರದಲ್ಲಿ ಮೀಸಲಾತಿಯನ್ನು ಹಂಚಿಕೆ ಮಾಡಲು ಪ್ರಸ್ತಾವ ಸಿದ್ಧಪಡಿಸುವಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ತಮಗೆ ಸೂಚಿಸಿದ್ದಾರೆ ಎಂದು ವಿವರಿಸಿದರು.

ಇತರರ ಬೇಡಿಕೆಯೂ ಪರಿಶೀಲನೆ: ಮೀಸಲಾತಿಗೆ ಸಂಬಂಧಿಸಿದಂತೆ ಹಲವು ಸಮುದಾಯಗಳ ಬೇಡಿಕೆಗಳು ಸರ್ಕಾರದ ಮುಂದಿವೆ. ಕೆಲವರು ಹೋರಾಟದಲ್ಲೂ ನಿರತರಾಗಿದ್ದಾರೆ. ಹಿಂದುಳಿದ ವರ್ಗಗಳ ಪಟ್ಟಿಗೆ ಸೇರಿಸುವುದು ಹಾಗೂ ಎಸ್.ಟಿ ಪಟ್ಟಿಯಲ್ಲಿ ಮತ್ತೆ ಸ್ಥಾನ ನೀಡಬೇಕೆಂಬ ಮನವಿಗಳೂ ಇವೆ. ಎಲ್ಲವನ್ನೂ ವಿಸ್ತೃತವಾಗಿ ಪರಿಶೀಲನೆ ನಡೆಸಲು ನಿರ್ಧರಿಸಲಾಗಿದೆ ಎಂದು ಮಾಧುಸ್ವಾಮಿ ತಿಳಿಸಿದರು.

ಎಸ್.ಸಿ ಮತ್ತು ಎಸ್.ಟಿ ಮೀಸಲು ಹೆಚ್ಚಳಕ್ಕೆ ಪೂರಕವಾಗಿ ವೈಜ್ಞಾನಿಕವಾದ ವರದಿಗಳಿವೆ. ಆದರೆ, ಇತರ ಸಮುದಾಯಗಳ ಬೇಡಿಕೆಗಳ ಕುರಿತು ವರದಿಗಳು ಇನ್ನೂ ಬಂದಿಲ್ಲ. ವರದಿಗಳು ಕೈಸೇರಿದ ಬಳಿಕ ಸಮಗ್ರವಾಗಿ ಚರ್ಚಿಸಿ ನಿರ್ಧಾರಕ್ಕೆ ಬರಲಾಗುವುದು ಎಂದರು.

> ಎಸ್ಟಿ ಮೀಸಲಾತಿ ಹೆಚ್ಚಳಕ್ಕೆ ಹೋರಾಟ ಮಾಡುತ್ತಲೇ ಇದ್ದೆ. ಹಲವರು ಸಾಮಾಜಿಕ ಮಾಧ್ಯಮಗಳಲ್ಲಿ ನನ್ನನ್ನು ಗೇಲಿ ಮಾಡುತ್ತಿದ್ದವರಿಗೆಸರ್ಕಾರದ ತೀರ್ಮಾನದಿಂದ ಸಮಾಧಾನ ಆಗಿರಬಹುದು
> **ಬಿ. ಶ್ರೀರಾಮುಲು**
> ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವ

ಆದೇಶದ ಮೂಲಕ ಮೀಸಲು ಹೆಚ್ಚಳ

ಎಸ್.ಸಿ ಮತ್ತು ಎಸ್.ಟಿ ಮೀಸಲಾತಿ ಹೆಚ್ಚಿಸುವ ತೀರ್ಮಾನವನ್ನು ಸರ್ಕಾರಿ ಆದೇಶದ ಮೂಲಕವೇ ಅನುಷ್ಠಾನಕ್ಕೆ ತರಲಾಗುವುದು. ಎರಡರಿಂದ ಮೂರು ದಿನಗಳಲ್ಲಿ ಈ ಆದೇಶ ಹೊರಬೀಳಲಿದೆ ಎಂದು ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ ತಿಳಿಸಿದರು.

‘ಎಸ್.ಸಿ ಮೀಸಲಾತಿ ಶೇಕಡ 15ರಿಂದ ಶೇ 17ಕ್ಕೆ ಮತ್ತು ಎಸ್.ಟಿ ಮೀಸಲಾತಿ ಶೇ 3ರಿಂದ ಶೇ 7ಕ್ಕೆ ಹೆಚ್ಚಳವಾಗಲಿದೆ. ಯಾವ ಪ್ರವರ್ಗದ ಮೀಸಲಾತಿ ಕಡಿತವಾಗಲಿದೆ? ಹೇಗೆ ಅನುಷ್ಠಾನಕ್ಕೆ ತರಲಾಗುತ್ತದೆ? ಎಂಬ ಪ್ರಶ್ನೆಗಳಿಗೆ ಆದೇಶದಲ್ಲೇ ಉತ್ತರ ಒದಗಿಸಲಾಗುವುದು’ ಎಂದರು.

ತಮಿಳುನಾಡಿನಲ್ಲಿ ಶೇ 69, ಉತ್ತರ ಪ್ರದೇಶದಲ್ಲಿ ಶೇ 60ರಷ್ಟು ಮೀಸಲಾತಿ ಇದೆ. ಆರ್ಥಿಕವಾಗಿ ಹಿಂದುಳಿದವರಿಗೆ ಶೇ 10ರಷ್ಟು ಮೀಸಲಾತಿ ಕಲ್ಪಿಸಿದ ಬಳಿಕ ಕೇಂದ್ರ ಸರ್ಕಾರದ ಮೀಸಲಾತಿ ಪ್ರಮಾಣವೂ ಶೇ 60ಕ್ಕೆ ತಲುಪಿದೆ. ತಮಿಳುನಾಡು ಸೇರಿದಂತೆ ಕೆಲವು ರಾಜ್ಯಗಳ ಮೀಸಲಾತಿ ಸಂವಿಧಾನದ ಪರಿಚ್ಛೇದ 9ರ ವ್ಯಾಪ್ತಿಯಲ್ಲಿದೆ. ಉಳಿದ ರಾಜ್ಯಗಳಲ್ಲಿ ಕೈಗೊಂಡಿರುವ ತೀರ್ಮಾನಗಳ ಬಗ್ಗೆ ಸುಪ್ರೀಂ ಕೋರ್ಟ್ ತಡೆ ಅಥವಾ ಆದೇಶ ನೀಡಿಲ್ಲ. ಈಗಲೇ ಸಂವಿಧಾನ ತಿದ್ದುಪಡಿಯ ಅಗತ್ಯ ಕಂಡುಬಂದಿಲ್ಲ. ಮುಂದೆ ಅಂತಹ ಪ್ರಶ್ನೆ ಉದ್ಭವಿಸಿದಲ್ಲಿ ರಾಜ್ಯ ಸರ್ಕಾರ ನಿರ್ಣಯ ಕೈಗೊಂಡು ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಲಿದೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಬಲವಾದ ಆಧಾರಗಳಿವೆ: ಸಿ.ಎಂ

ಒಂದನೇ ಪುಟದಿಂದ

ತಮಿಳುನಾಡು, ಉತ್ತರ ಪ್ರದೇಶ, ಜಾರ್ಖಂಡ, ಛತ್ತೀಸ್‌ಗಢ, ಮಧ್ಯಪ್ರದೇಶ ಮತ್ತು ರಾಜಸ್ಥಾನ ರಾಜ್ಯಗಳಲ್ಲಿ ಮೀಸಲಾತಿ ಪ್ರಮಾಣ ಶೇ 50ಕ್ಕಿಂತ ಹೆಚ್ಚಿದೆ. ನ್ಯಾಯಾಲಯವು ಅದರ ವಿರುದ್ಧ ಆದೇಶ ಹೊರಡಿಸಿಲ್ಲ. ಅದೇ ಮಾದರಿಯಲ್ಲಿ ಕರ್ನಾಟಕದಲ್ಲೂ ಜಾರಿಗೆ ತರಲಾಗುವುದು ಎಂದು ತಿಳಿಸಿದರು.

ಸಂವಿಧಾನದ ಅಡಿಯಲ್ಲಿ ರಕ್ಷಣೆ ನೀಡಬೇಕಿದೆ. ಮೀಸಲಾತಿ ಹೆಚ್ಚಳವನ್ನು ಸಂವಿಧಾನದ ಪರಿಚ್ಛೇದ 9ರ ವ್ಯಾಪ್ತಿಗೆ ಸೇರಿಸಲು ಕಾನೂನು ಸಚಿವರು, ಕಾನೂನು ಆಯೋಗ, ಸಂವಿಧಾನ ತಜ್ಞರು, ಎಜಿ ಶಿಫಾರಸಿನಂತೆ ಕ್ರಮ ಕೈಗೊಳ್ಳಲಾಗುವುದು ಎಂದರು.

‘ಮೀಸಲಾತಿ: ಬಿಜೆಪಿಗೆ ಲಾಭವಿಲ್ಲ’

ಮೈಸೂರು: ‘ಪರಿಶಿಷ್ಟರಿಗೆ ಮೀಸಲಾತಿ ಪ್ರಮಾಣ ಹೆಚ್ಚಿಸುವುದರಿಂದ ಆಡಳಿತಾರೂಢ ಬಿಜೆಪಿಗೆ ಮುಂಬರುವ ಚುನಾವಣೆಯಲ್ಲಿ ರಾಜಕೀಯವಾಗಿ ಯಾವುದೇ ಲಾಭವಾಗುವುದಿಲ್ಲ’ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಹೇಳಿದರು.

ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಚುನಾವಣೆ ಸಮೀಪಿಸುತ್ತಿರುವಾಗ ಸರ್ಕಾರ ಜಾರಿಗೆ ಮುಂದಾಗಿದೆ. ಅದರ ಅರ್ಥವೇನು ಎನ್ನುವುದು ಎಲ್ಲರಿಗೂ ಗೊತ್ತಿದೆ. ರಾಜಕೀಯ ಮುಖಂಡರೇ ತಮ್ಮ ಅನುಕೂಲಕ್ಕಾಗಿ ಮೀಸಲಾತಿ ಹೋರಾಟ ಹುಟ್ಟು ಹಾಕಿದ್ದಾರೆ. ಪಂಚಮಸಾಲಿ ಲಿಂಗಾಯತ ಸಮಾಜ, ಕುರುಬ ಸಮಾಜದವರೂ ಬೇಡಿಕೆ ಮಂಡಿಸಿದ್ದಾರೆ. ಮೀಸಲಾತಿ ಹೆಚ್ಚಿಸುವ ಭರದಲ್ಲಿ ಸರ್ಕಾರ ಜೇನುಗೂಡಿಗೆ ಕಲ್ಲು ಎಸೆಯುತ್ತಿದೆ’ ಎಂದರು.



ಗೃಹ ಕಚೇರಿ ಕೃಷ್ಣಾದಲ್ಲಿ ಶನಿವಾರ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ವಾಲ್ಮೀಕಿ ಗುರುಪೀಠದ ಪ್ರಸನ್ನಾನಂದ ಸ್ವಾಮೀಜಿಗೆ ಸಿಹಿ ತಿನ್ನಿಸಿದರು. ಮಾದಾರ ಚೆನ್ನಯ್ಯ ಸ್ವಾಮೀಜಿ, ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ, ಶಾಸಕರಾದ ರಾಜುಗೌಡ, ರೇಣುಕಾಚಾರ್ಯ ಹಾಜರಿದ್ದರು.

ಪ್ರತಿಭಟನೆ ಕೈಬಿಟ್ಟ ವಾಲ್ಮೀಕಿ ಸ್ವಾಮೀಜಿ

ಬೆಂಗಳೂರು: ಮೀಸಲಾತಿ ಪ್ರಮಾಣ ಹೆಚ್ಚಳಕ್ಕೆ ಸರ್ಕಾರವು ಒಪ್ಪಿಗೆ ಸೂಚಿಸಿದ ಹಿನ್ನೆಲೆಯಲ್ಲಿ ಸ್ವಾತಂತ್ರ್ಯ ಉದ್ಯಾನದಲ್ಲಿ ವಾಲ್ಮೀಕಿ ಗುರುಪೀಠದ ಪ್ರಸನ್ನಾನಂದ ಸ್ವಾಮೀಜಿ ನೇತೃತ್ವದಲ್ಲಿ ಪರಿಶಿಷ್ಟ ಜಾತಿ (ಎಸ್.ಸಿ) ಹಾಗೂ ಪರಿಶಿಷ್ಟ ಪಂಗಡ (ಎಸ್.ಟಿ) ಮೀಸಲಾತಿ ಹೆಚ್ಚಳ ಹೋರಾಟ ಕ್ರಿಯಾ ಸಮಿತಿ ನಡೆಸುತ್ತಿದ್ದ ಅನಿರ್ದಿಷ್ಟಾವಧಿ ಪ್ರತಿಭಟನೆಯನ್ನು ಮುಕ್ತಾಯಗೊಳಿಸಲಾಗಿದೆ.

ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ ದಾಸ್ ಆಯೋಗದ ವರದಿ ಜಾರಿಗೆ ಆಗ್ರಹಿಸಿ ಈ ಪ್ರತಿಭಟನೆ ನಡೆಯುತ್ತಿತ್ತು.

ಬೇಡಿಕೆ ಈಡೇರಿಸದಿದ್ದರೆ ವಾಲ್ಮೀಕಿ ಜಯಂತಿ ದಿನವಾದ ಭಾನುವಾರ ವಿಧಾನಸೌಧ ಚಲೋ ಹಮ್ಮಿಕೊಳ್ಳಲು ಸಮಿತಿ ನಿರ್ಧರಿಸಿತ್ತು. ಈಗ ಪ್ರತಿಭಟನೆ, ಚಲೋ ಕೈಬಿಟ್ಟು ವಿಧಾನಸೌಧದ ಬಳಿ ವಿಜಯೋತ್ಸವ ಆಚರಿಸಲು ಕ್ರಿಯಾ ಸಮಿತಿ ನಿರ್ಧರಿಸಿದೆ.

ಪ್ರತಿಭಟನಾ ಸ್ಥಳದಿಂದ ಶನಿವಾರ ವಿಧಾನಸೌಧಕ್ಕೆ ಬಂದ ಸ್ವಾಮೀಜಿ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಧನ್ಯವಾದ ತಿಳಿಸಿದರು. ಪರಸ್ಪರ ಸಿಹಿ ತಿನ್ನಿಸಿಕೊಂಡರು.

‘ಮೀಸಲಾತಿ: ವಿಸ್ತೃತ ಚರ್ಚೆಯಾಗಲಿ’

ಮೈಸೂರು: ‘ಪರಿಶಿಷ್ಟ ಜಾತಿ ಮತ್ತು ಪಂಗಡಕ್ಕೆ ಮೀಸಲಾತಿ ಹೆಚ್ಚಿಸಿರುವುದು ಸ್ವಾಗತಾರ್ಹ. ಈ ಬಗ್ಗೆ ವಿಧಾನಸಭೆಯಲ್ಲಿ ವಿಸ್ತೃತ ರೂಪದಲ್ಲಿ ಚರ್ಚೆ ನಡೆಸಿ, ಕಾನೂನು ರೂಪಿಸಬೇಕು. ಕೆಲವೊಂದು ರಾಜ್ಯಗಳಲ್ಲಿ ಸರ್ಕಾರ ಕೊಟ್ಟಿರುವ ಮೀಸಲಾತಿಯನ್ನು ಸುಪ್ರೀಂಕೋರ್ಟ್ ರದ್ದುಪಡಿಸಿದೆ. ಈ ಬಗ್ಗೆ ಹೆಚ್ಚಿನ ಜಾಗರೂಕತೆ ವಹಿಸಬೇಕು’ ಎಂದು ವಿಧಾನ ಪರಿಷತ್ ಸದಸ್ಯ ಎಚ್.ವಿಶ್ವನಾಥ್ ಹೇಳಿದರು.

ಇ.ಡಿ ದಾಳಿ: ₹1 ಕೋಟಿ ವಶ

ನವದೆಹಲಿ(ಪಿಟಿಐ): ದೆಹಲಿ ಅಬಕಾರಿ ನೀತಿಯ ಅನುಷ್ಠಾನದಲ್ಲಿ ನಡೆದಿದೆ ಎನ್ನಲಾದ ಹಣ ಅಕ್ರಮ ವರ್ಗಾವಣೆ ಮತ್ತು ಅವ್ಯವಹಾರ ಆರೋಪಗಳಿಗೆ ಸಂಬಂಧಿಸಿ 35 ಕಡೆಗಳಲ್ಲಿ ಶುಕ್ರವಾರ ದಾಳಿ ನಡೆಸಿದ್ದ ಜಾರಿ ನಿರ್ದೇಶನಾಲಯವು ದಾಳಿ ವೇಳೆ ₹1 ಕೋಟಿಗೂ ಹೆಚ್ಚು ನಗದು ವಶಕ್ಕೆ ತೆಗೆದುಕೊಂಡಿದೆ ಎಂದು ಮೂಲಗಳು ಶನಿವಾರ ತಿಳಿಸಿವೆ.

ಮದ್ಯ ಉದ್ಯಮಿಗಳು, ಹಂಚಿಕೆದಾರ ಸಂಸ್ಥೆಗಳು ಮತ್ತು ಅವುಗಳಿಗೆ ಸಂಬಂಧಪಟ್ಟ ಸಂಸ್ಥೆಗಳ ಮೇಲೆ ದಾಳಿ ನಡೆಸಲಾಗಿದೆ.ದಾಳಿ ವೇಳೆ ಕೆಲ ಡಿಜಿ ಟಲ್ ಉಪಕರಣಗಳು ಮತ್ತು ದಾಖಲೆಗಳನ್ನೂ ವಶಕ್ಕೆ ತೆಗೆದುಕೊಳ್ಳಲಾಗಿದೆ ಎಂದು ಮೂಲಗಳು ಹೇಳಿವೆ.

ದೆಹಲಿ ಮೂಲದ ಸುದ್ದಿ ವಾಹಿನಿ ಸಂಸ್ಥೆಯ ನಿರ್ದೇಶಕರಿಗೆ ಸೇರಿದ ಸ್ಥಳ, ಮದ್ಯ ರಫ್ತು ಮಾಡಿಕೊಳ್ಳುವ ಮತ್ತು ವಿತರಣೆ ಮಾಡುವ ಉದ್ಯಮಿ ಮತ್ತು ಪಂಜಾಬ್‌ನ ಮಾಜಿ ಶಾಸಕರಿಗೆ ಸೇರಿದ ಸ್ಥಳದಲ್ಲಿ ಶೋಧ ನಡೆಸಲಾಗಿದೆ ಎಂದು ಮೂಲಗಳು ತಿಳಿಸಿವೆ. ಈ ಹಗರಣಕ್ಕೆ ಸಂಬಂಧಿಸಿದಂತೆ ಈವರೆಗೂ ಇ.ಡಿ 103 ದಾಳಿಗಳನ್ನು ನಡೆಸಿದೆ. ಹಣ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ದೆಹಲಿ ಮುಖ್ಯಮಂತ್ರಿ ಮನೀಶ್ ಸಿಸೋಡಿಯಾ ಅವರ ವಿರುದ್ಧ ಸಿಬಿಐ ಎಫ್‌ಐಆರ್ ದಾಖಲಿಸಿದೆ.

'ನಾನು ಇದ್ದೇನೆ ಎನ್ನುವುದನ್ನು ತೋರಿಸಲು ಸಾರ್ವಜನಿಕ ಸಭೆಯಲ್ಲಿ ಭಾಗಿ'

'ಜನತಾ ಮಿತ್ರ'ಕ್ಕೆ ದೇವೇಗೌಡರ ಬಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ಚುನಾವಣೆಯ ತಯಾರಿಗೆ ಮುನ್ನುಡಿ ಬರೆಯಲು ಜೆಡಿಎಸ್ ಹಮ್ಮಿಕೊಂಡಿದ್ದ 'ಜನತಾ ಮಿತ್ರ' ಯಾತ್ರೆಯ ಸಮಾರೋಪ ಸಮಾರಂಭದಲ್ಲಿ ಪಾಲ್ಗೊಂಡ ಪಕ್ಷದ ವರಿಷ್ಠ ಎಚ್‌.ಡಿ. ದೇವೇಗೌಡ, ಮತ ಕಹಳೆ ಮೊಳಗಿಸುವ ಮೂಲಕ ಕಾರ್ಯಕರ್ತರನ್ನು ಹುರಿದುಂಬಿಸಿದರು.

ಇಲ್ಲಿನ ಬಸವನಗುಡಿ ನ್ಯಾಷನಲ್ ಕಾಲೇಜು ಮೈದಾನದಲ್ಲಿ ಶನಿವಾರ ನಡೆದ ಸಮಾವೇಶದಲ್ಲಿ ಬಿಬಿಎಂಪಿ ವ್ಯಾಪ್ತಿಯ ಸಾವಿರಾರು ಮುಖಂಡರು, ಕಾರ್ಯಕರ್ತರು ಭಾಗಿಯಾಗಿದ್ದರು.

ಕೆಲವು ತಿಂಗಳ ವಿಶ್ರಾಂತಿಯ ಬಳಿಕ ಸಾರ್ವಜನಿಕ ಸಭೆಯಲ್ಲಿ ಪಾಲ್ಗೊಂಡ ದೇವೇಗೌಡರು, 'ದೇವೇಗೌಡರ ಕಥೆ ಮುಗಿದೇ ಹೋಯಿತು ಎಂದು ಹಲವರು ಭಾವಿಸಿದ್ದರು. ಯಾರು ಏನೇ ಮಾತನಾಡಿದರೂ, ತಲೆಕೆಡಿಸಿಕೊಳ್ಳಬೇಡಿ. ನಾನು ಇದ್ದೇನೆ ಎನ್ನುವುದನ್ನು ತೋರಿಸಲು ಇಲ್ಲಿಗೆ ಬಂದಿದ್ದೇನೆ. ಎಲ್ಲ ಜಿಲ್ಲೆಗಳಿಗೂ ಭೇಟಿ ನೀಡುವೆ. ಜೆಡಿಎಸ್ ಅಗತ್ಯದ ಕುರಿತು ಜನರಿಗೆ ಮನವರಿಕೆ ಮಾಡುವೆ. ಪಕ್ಷವನ್ನು ಮತ್ತೆ ಅಧಿಕಾರಕ್ಕೆ ತರುವೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು.

'ಯಾರ ಕೈಯಲ್ಲಿ ಏನು ಮಾಡಿದರೂ ಪಕ್ಷ ಅಧಿಕಾರಕ್ಕೆ ಬರುತ್ತದೆ. ಒಂದು ಪ್ರಾದೇಶಿಕ ಪಕ್ಷ ಉಳಿಸುವ ಶಕ್ತಿ ರಾಜ್ಯದ ಜನರಿಗೆ ಇದೆ' ಎಂದರು.

'ಹಿಂದೆ ಪ್ರಧಾನಿ, ಮುಖ್ಯಮಂತ್ರಿಯಾಗಿದ್ದಾಗ ಬೆಂಗಳೂರು ನಗರಕ್ಕೆ ಹಲವು ಯೋಜನೆ ರೂಪಿಸಿದೆ. ಯಾವ ಸಮಾಜಕ್ಕೂ ನೋವಾಗಲು ಬಿಡಲಿಲ್ಲ. ಮಾಡಿದ ಉತ್ತಮ ಕೆಲಸಗಳನ್ನು ಇತರೆ ಪಕ್ಷಗಳು ಹಾಳು ಮಾಡಿದವು.



'ಜನತಾ ಮಿತ್ರ' ಸಮಾರೋಪ ಸಮಾವೇಶದಲ್ಲಿ ರಾಜ್ಯ ಘಟಕದ ಅಧ್ಯಕ್ಷ ಸಿ.ಎಂ. ಇಬ್ರಾಹಿಂ, ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ.ಕುಮಾರಸ್ವಾಮಿ, ವರಿಷ್ಠ ಎಚ್‌.ಡಿ.ದೇವೇಗೌಡ, ವಿಧಾನ ಪರಿಷತ್ ಸದಸ್ಯ ಟಿ.ಎ.ಶರವಣ ಸಾರ್ವಜನಿಕರತ್ತ ಕೈಬೀಸಿದರು —ಪ್ರಜಾವಾಣಿ ಚಿತ್ರ: ಎಂ.ಎಸ್.ಮಂಜುನಾಥ್

ಮುಖ್ಯಾಂಶಗಳು

- ಜುಲೈನಲ್ಲಿ ಆರಂಭವಾಗಿದ್ದ 'ಜನತಾ ಮಿತ್ರ'
- ನವೆಂಬರ್‌ನಿಂದ ಮನೆಮನೆಗೆ ಪಾದಯಾತ್ರೆ
- ಜನವರಿಯಲ್ಲಿ ಜೆಡಿಎಸ್ ಬೃಹತ್ ಸಮಾವೇಶ

ಪಕ್ಷದ ಕಚೇರಿಯನ್ನೇ ಕಿತ್ತುಕೊಂಡರು. ಯಾರು ಏನೇ ಮಾಡಿದರೂ ಎದೆಗುಂದಲಿಲ್ಲ. ಇನ್ನಷ್ಟು ದಿನ ನಿಮ್ಮ ಜೊತೆ ಇರುತ್ತೇನೆ. ಕುಮಾರಸ್ವಾಮಿ ಪಕ್ಷ ಬಲಪಡಿಸಲು ಸಾಕಷ್ಟು ಕಾರ್ಯಕ್ರಮ ರೂಪಿಸಿದ್ದಾರೆ. ಎಲ್ಲರೂ ಒಗ್ಗಟ್ಟಿನಿಂದ ಕೈಜೋಡಿಸಬೇಕು' ಎಂದು ಮನವಿ ಮಾಡಿದರು.

ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ.ಕುಮಾರಸ್ವಾಮಿ, ಬೆಂಗಳೂರು ನಗರದಲ್ಲಿ ಈಚೆಗೆ ಮಳೆಯಿಂದ ಸೃಷ್ಟಿಯಾದ ತೊಂದರೆಗಳನ್ನು ವಿಶೇಷವಾಗಿ ಪ್ರಸ್ತಾಪಿಸಿ, ಈ ಸಂಕಷ್ಟಕ್ಕೆಲ್ಲ ಬಿಜೆಪಿ, ಕಾಂಗ್ರೆಸ್ ಆಡಳಿತ ಕೆಟ್ಟ ನೀತಿಗಳೇ ಕಾರಣ ಎಂದು ಆರೋಪಿಸಿದರು. ಬಿಜೆಪಿಯ ಧರ್ಮ ಆಧಾರಿತ ರಾಜಕಾರಣ, ಕೋಮು ಪ್ರಚೋದನೆಯ ನಡೆಯನ್ನು ಖಂಡಿಸಿದರು.

ಭ್ರಷ್ಟ ಪಕ್ಷಗಳಾದ ಬಿಜೆಪಿ, ಕಾಂಗ್ರೆಸ್‌ಗಳನ್ನು ಹಿಂದಕ್ಕೆ ಸರಿಸಿ, ಜೆಡಿಎಸ್‌ಗೆ ಬಿಬಿಎಂಪಿ ಅಧಿಕಾರ ನೀಡಿದರೆ ರಸ್ತೆ, ನೀರು, ಉಚಿತ ಆರೋಗ್ಯ ಮತ್ತಿತರ ಮೂಲಸೌಕರ್ಯಗಳನ್ನು ಸಮರ್ಪಕವಾಗಿ ಒದಗಿಸುವ, ಶ್ರಮಿಕ ವರ್ಗಗಳಿಗೆ ಅನುಕೂಲ ಕಲ್ಪಿಸುವ ಭರವಸೆ ನೀಡಿದರು.

ಪ್ರಾಸ್ತಾವಿಕ ಮಾತನಾಡಿದ ವಿಧಾನ ಪರಿಷತ್ ಸದಸ್ಯ ಟಿ.ಎ.ಶರವಣ, ಕಾಂಗ್ರೆಸ್ ಶೇ 20 ಬಿಜೆಪಿ ಶೇ 40 ಕಮಿಷನ್ ಪಕ್ಷಗಳು, ಎರಡೂ ರಾಷ್ಟ್ರೀಯ ಪಕ್ಷಗಳಿಗೆ ಭ್ರಷ್ಟಾಚಾರದ ವಿರುದ್ಧ ಮಾತನಾಡುವ ನೈತಿಕತೆ ಇಲ್ಲ ಎಂದರು.

ಜೆಡಿಎಸ್ ರಾಜ್ಯಘಟಕದ ಅಧ್ಯಕ್ಷ ಸಿ.ಎಂ.ಇಬ್ರಾಹಿಂ, ಮಾಜಿ ಸಚಿವೆ ಲೀಲಾದೇವಿ ಆರ್.ಪ್ರಸಾದ್, ಶಾಸಕರಾದ ಆರ್. ಮಂಜುನಾಥ್, ನಿಸರ್ಗ ನಾರಾಯಣ ಸ್ವಾಮಿ, ಡಾ.ಶ್ರೀನಿವಾಸ ಮೂರ್ತಿ,ಕೃಷ್ಣಾ ರೆಡ್ಡಿ, ಸುರೇಶಗೌಡ, ಮಂಜೇಗೌಡ, ಭೋಜೇಗೌಡ, ಗೋವಿಂದರಾಜು ಹಾಗೂ ಆರ್.ಪ್ರಕಾಶ್ ಉಪಸ್ಥಿತರಿದ್ದರು.

ಟಿಕೆಟ್ ಆಕಾಂಕ್ಷಿಗಳ ದಂಡು

ಬಿಬಿಎಂಪಿ ಚುನಾವಣೆಗೆ ಸ್ಪರ್ಧಿಸುವ ಟಿಕೆಟ್ ಆಕಾಂಕ್ಷಿಗಳ ದಂಡೇ ಜನತಾ ಮಿತ್ರ ಕಾರ್ಯಕ್ರಮದತ್ತ ಹರಿದು ಬಂದಿತ್ತು. ತಾವು ಪ್ರತಿನಿಧಿಸಲು ಬಯಸುವ ವಾರ್ಡ್‌ಗಳ ಜನರ ಜತೆ ಪಟಾಕಿ ಸಿಡಿಸುತ್ತಾ, ಘೋಷಣೆಗಳನ್ನು ಕೂಗುತ್ತಾ ಸಾಗಿ ಬಂದು ಮೈದಾನದ ಜನಸ್ತೋಮದ ಮಧ್ಯೆ ಲೀನವಾಗುತ್ತಿದ್ದರು. ಈ ಪ್ರಕ್ರಿಯೆ ಕಾರ್ಯಕ್ರಮ ಆರಂಭವಾದ ಮೇಲೂ ಮುಂದುವರಿದೇ ಇತ್ತು.

ವಿಧಾನಸೌಧದಲ್ಲಿ ದರೋಡೆಕೋರರು

ಚಂಬಲ್ ಕಣಿವೆಯ ದರೋಡೆಕೋರರು ವಿಧಾನಸೌಧದಲ್ಲಿ ಸೇರಿಕೊಂಡಿದ್ದಾರೆ. ಅವರನ್ನು ಓಡಿಸುವ ಕೆಲಸ ಮಾಡಬೇಕಿದೆ. ಹಾಗಾಗಿ, ಪ್ರಾದೇಶಿಕ ಪಕ್ಷ ಜೆಡಿಎಸ್‌ಗೆ ಒಂದು ಅವಕಾಶ ಕೊಡಿ ಎಂದು ಕುಮಾರಸ್ವಾಮಿ ಮನವಿ ಮಾಡಿದರು.

ದೇಶದಲ್ಲಿ ಬಡವರ ವರ್ಗ, ಶ್ರೀಮಂತರ ವರ್ಗ ಇದೆ ಎಂದು ಭಾರತ್ ಜೋಡೊ ಮಾಡುತ್ತಿರುವ ಕಾಂಗ್ರೆಸ್ ನಾಯಕರು ಹೇಳುತ್ತಿದ್ದಾರೆ. 45 ವರ್ಷ ಆಳ್ವಿಕೆ ಮಾಡಿದವರು ಈ ತಾರತಮ್ಯ ಏಕೆ ನಿವಾರಿಸಲಿಲ್ಲ ಎಂದು ಕುಟುಕಿದರು.

ಸುದ್ದಿ 2 ನಿಮಿಷ

ಉದ್ಯೋಗಕ್ಕಾಗಿ ನಿವೇಶನ ಹಗರಣ: ತೇಜಸ್ವಿ ಆಪ್ತ ಕಾರ್ಯದರ್ಶಿ ವಿಚಾರಣೆ

ನವದೆಹಲಿ (ಪಿಟಿಐ): ಉದ್ಯೋಗಕ್ಕಾಗಿ ನಿವೇಶನ ಹಗರಣಕ್ಕೆ ಸಂಬಂಧಿಸಿದಂತೆ ಶನಿವಾರ ಬಿಹಾರ ಉಪಮುಖ್ಯಮಂತ್ರಿ ತೇಜಸ್ವಿ ಯಾದವ್ ಅವರ ಆಪ್ತ ಕಾರ್ಯದರ್ಶಿ ಸಂಜಯ್ ಯಾದವ್ ಅವರನ್ನು ಕೇಂದ್ರಿಯ ತನಿಖಾ ದಳ (ಸಿಬಿಐ) ವಿಚಾರಣೆಗೆ ಒಳಪಡಿಸಿತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಶನಿವಾರ ವಿಚಾರಣೆಗೆ ಹಾಜರಾಗುವಂತೆ ಸಂಜಯ್ ಯಾದವ್ ಅವರಿಗೆ ಸಮನ್ಸ್ ಜಾರಿ ಮಾಡಲಾಗಿತ್ತು. ಈ ಹಗರಣ ಸಂಬಂಧ ಮಾಜಿ ರೈಲ್ವೆ ಸಚಿವ ಲಾಲು ಪ್ರಸಾದ್, ಅವರ ಪತ್ನಿ ರಾಬ್ಡಿ ದೇವಿ ವಿರುದ್ಧ ಸಿಬಿಐ ಶುಕ್ರವಾರ ಚಾರ್ಜ್‌ಶೀಟ್ ಸಲ್ಲಿಸಿದೆ.

ವಂದೇ ಭಾರತ್ ರೈಲಿಗೆ ಮತ್ತೆ ವಿಘ್ನ: ಚಕ್ರ ಜಾಮ್



ನವದೆಹಲಿ: ಅವಘಡಗಳ ಕಾರಣಕ್ಕಾಗಿ 'ವಂದೇ ಭಾರತ್ ಎಕ್ಸ್‌ಪ್ರೆಸ್' ರೈಲು ಸತತ ಮೂರನೇ ದಿನವೂ ಸುದ್ದಿಯಲ್ಲಿದ್ದು, ಶನಿವಾರ ನವದೆಹಲಿ–ವಾರಾಣಸಿ ಮಾರ್ಗದ ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲಿನ ಚಕ್ರಗಳು ಜಾಮ್ ಆಗಿದ್ದರಿಂದ ಪ್ರಯಾಣಿಕರಿಗೆ ಪರ್ಯಾಯವಾಗಿ ವಿಶೇಷ ರೈಲು ವ್ಯವಸ್ಥೆ ಮಾಡಲಾಯಿತು.

'ನವದೆಹಲಿಯ ರೈಲ್ವೆ ನಿಲ್ದಾಣದಿಂದ ಬೆಳಿಗ್ಗೆ 6 ಗಂಟೆಗೆ ಹೊರಟ ಸೆಮಿ ಹೈಸ್ಪೀಡ್ ರೈಲು, 90 ಕಿ.ಮೀ. ಕ್ರಮಿಸಿದ ಬಳಿಕ ಉತ್ತರಪ್ರದೇಶದ ಖುಜ್ರಾ ನಿಲ್ದಾಣದ ಬಳಿ ಚಕ್ರಗಳು ಜಾಮ್ ಆಗಿದ್ದರಿಂದ ಸಂಚಾರ ಸ್ಥಗಿತಗೊಂಡಿತು. ಬೆಳಿಗ್ಗೆ 7.30ರ ರೈಲಿನಲ್ಲಿದ್ದ ಎಲ್ಲ 1,068 ಪ್ರಯಾಣಿಕರನ್ನು ಇಳಿಸಲಾಯಿತು. ಸುಮಾರು 12.40ರ ವೇಳೆಗೆ ದೆಹಲಿಯಿಂದ ಬಂದ ಶತಾಬ್ದಿ ಎಕ್ಸ್‌ಪ್ರೆಸ್ ರೈಲಿನಲ್ಲಿ ಕಳುಹಿಸಲಾಯಿತು' ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

'ವಂದೇ ಭಾರತ್ ರೈಲಿನ ಬೋಗಿ (ರೈಲು ಸಂಖ್ಯೆ: 22436) ಸಿ8 ಕೋಚ್‌ನ ಟ್ರಾಕ್ಷನ್ ಮೋಟಾರ್‌ನಲ್ಲಿನ ಬೇರಿಂಗ್ ದೋಷ ಕಂಡುಬಂದಿದ್ದರಿಂದ ಸಂಚಾರ ಸ್ಥಗಿತಗೊಳಿಸಲಾಯಿತು. ಬೇರಿಂಗ್ ವೈಫಲ್ಯವನ್ನು ಸರಿಪಡಿಸಲಾಗಿದ್ದು, ಈ ಸಂಬಂಧ ತನಿಖೆ ಪ್ರಗತಿಯಲ್ಲಿದೆ' ಎಂದು ರೈಲ್ವೆಯ ಪ್ರಕಟಣೆ ತಿಳಿಸಿದೆ.

ಹೊಸದಾಗಿ ಸಂಚಾರ ಆರಂಭಿಸಿರುವ ವಂದೇ ಭಾರತ್ ಎಕ್ಸ್‌ಪ್ರೆಸ್‌ಗೆ ಗುರುವಾರ ಗಾಂಧಿನಗರ–ಮುಂಬೈ ಮಾರ್ಗದಲ್ಲಿ ಎಮ್ಮೆಗಳು ಅಡ್ಡಬಂದಿದ್ದವು. ಶುಕ್ರವಾರ ಗುಜರಾತ್‌ನ ಆಣಂದ್ ಸಮೀಪ ಈ ರೈಲು ಹಸುವಿಗೆ ಡಿಕ್ಕಿ ಹೊಡೆದಿತ್ತು. ಈ ಎರಡೂ ಅವಘಡಗಳಲ್ಲಿ ರೈಲಿನ ಮುಂಭಾಗಕ್ಕೆ ಹಾನಿಯಾಗಿತ್ತು.

ಅದಾನಿ, ಅಂಬಾನಿ ಎಲ್ಲರನ್ನೂ ಸ್ವಾಗತಿಸುವೆವು

ಬಿಜೆಪಿ ಟೀಕೆಗೆ ಪ್ರತ್ಯುತ್ತರ ನೀಡಿದ ರಾಜಸ್ಥಾನ ಸಿ.ಎಂ ಅಶೋಕ್ ಗೆಹಲೋತ್

ಜೈಪುರ (ಪಿಟಿಐ): 'ನಮಗೆ ಹೂಡಿಕೆದಾರರು ಬೇಕು. ರಾಜ್ಯದ ಜನರಿಗೆ ಉದ್ಯೋಗ ಸಿಗಬೇಕು. ಇದಕ್ಕಾಗಿ ಅದಾನಿ, ಅಂಬಾನಿ, ಕೇಂದ್ರ ಗೃಹ ಅಮಿತ್ ಶಾ ಅವರ ಮಗ ಜಯ್ ಶಾ ಹೀಗೆ ಎಲ್ಲರನ್ನೂ ಸ್ವಾಗತಿಸುತ್ತೇವೆ' ಎಂದು ರಾಜಸ್ಥಾನ ಮುಖ್ಯಮಂತ್ರಿ ಅಶೋಕ್ ಗೆಹಲೋತ್, ಬಿಜೆಪಿ ಟೀಕೆಗೆ ಪ್ರತ್ಯುತ್ತರ ನೀಡಿದ್ದಾರೆ.

ಕಾಂಗ್ರೆಸ್ ನೇತೃತ್ವದ ರಾಜಸ್ಥಾನ ಸರ್ಕಾರವು ಚೊಚ್ಚಲ ಬಾರಿಗೆ ಆಯೋಜಿಸಿದ್ದ 'ಇನ್ವೆಸ್ಟ್ ರಾಜಸ್ಥಾನ್' ಹೂಡಿಕೆದಾರರ ಸಮ್ಮೇಳನದ ಉದ್ಘಾಟನಾ ಕಾರ್ಯಕ್ರಮದಲ್ಲಿ ಅದಾನಿ ಸಮೂಹದ ಮುಖ್ಯಸ್ಥ ಗೌತಮ್ ಅದಾನಿ ಹಾಗೂ ಮುಖ್ಯಮಂತ್ರಿ ಗೆಹಲೋತ್ ಅಕ್ಕಪಕ್ಕದಲ್ಲೇ ಕುಳಿತಿದ್ದರು.

'ಮುಂದಿನ ಐದರಿಂದ ಏಳು ವರ್ಷಗಳಲ್ಲಿ ರಾಜ್ಯಾನದಲ್ಲಿ ಒಟ್ಟು ₹65 ಸಾವಿರ ಕೋಟಿ ಹೂಡಿಕೆ ಮಾಡಲು ತಮ್ಮ ಸಮೂಹ ಸಿದ್ಧವಿದೆ' ಎಂದು ಅದಾನಿ ಶುಕ್ರವಾರ ಪ್ರಕಟಿಸಿದ್ದರು.

ರಾಜ್ಯದಲ್ಲಿ 10 ಸಾವಿರ ಮೆಗಾವ್ಯಾಟ್ ಸೌರ ವಿದ್ಯುತ್ ಉತ್ಪಾದಿಸಲು ಬೇಕಿರುವ ಅಗತ್ಯ ಮೂಲಸೌಕರ್ಯ ಒದಗಿಸುವುದಾಗಿ ಹೇಳಿದ್ದ ಅವರು ಸಿಮೆಂಟ್ ಉತ್ಪಾದನಾ ಘಟಕದ ವಿಸ್ತರಣೆ ಹಾಗೂ ಜೈಪುರ ಅಂತರ–ರಾಷ್ಟ್ರೀಯ ವಿಮಾನ ನಿಲ್ದಾಣವನ್ನು ಮೇಲ್ದರ್ಜೆಗೆ ಏರಿಸುವುದಕ್ಕೂ ತಮ್ಮ ಸಮೂಹ ಆಸಕ್ತವಾಗಿದೆ ಎಂದಿದ್ದರು.

ಕಾರ್ಯಕ್ರಮದಲ್ಲಿ ಮಾತನಾಡಿದ್ದ ಗೆಹಲೋತ್, ಅದಾನಿ ಅವರನ್ನು ಗೌತಮ್ ಭಾಯ್ (ಗೌತಮ್ ಅಣ್ಣ) ಎಂದು ಕರೆದಿದ್ದರು. ವಿಶ್ವದ ಶ್ರೀಮಂತ ವ್ಯಕ್ತಿಗಳ ಪಟ್ಟಿಯಲ್ಲಿ ಎರಡನೇ ಸ್ಥಾನ ಪಡೆದಿರುವುದಕ್ಕೆ ಅವರಿಗೆ ಅಭಿನಂದನೆಯನ್ನೂ ಸಲ್ಲಿಸಿದ್ದರು.

ಬಿಜೆಪಿ ರಾಜಸ್ಥಾನ ಘಟಕದ ಅಧ್ಯಕ್ಷ ಸತೀಶ್ ಪೂನಿಯಾ, ವಿಧಾನಸಭೆ ವಿರೋಧ ಪಕ್ಷದ ಉಪ ನಾಯಕ ರಾಜೇಂದ್ರ ರಾಥೋಡ್ ಮತ್ತು ಬಿಜೆಪಿ ಶಾಸಕ ವಾಸುದೇವ್ ದೇವ್ನಾನಿ ಅವರು ಗೆಹಲೋತ್ ಹೇಳಿಕೆಯನ್ನು ಮುಂದಿಟ್ಟುಕೊಂಡು ಕಾಂಗ್ರೆಸ್ ವಿರುದ್ಧ ಕಿಡಿಕಾರಿದ್ದರು.

'ಅದಾನಿ ಹೆಸರು ಉಲ್ಲೇಖಿಸಿ ಕೇಂದ್ರ ಸರ್ಕಾರದ ಮೇಲೆ ನಿರಂತರ ವಾಗ್ದಾಳಿ ನಡೆಸುತ್ತಿದ್ದ ಗೆಹಲೋತ್ ಅವರಿಗೆ ರಾಜ್ಯದ ಕೋಟ್ಯಂತರ ಜನರ ಎದುರು ಅದಾನಿ ಅವರನ್ನು ಪ್ರಶಂಶಿಸುವುದಕ್ಕೆ ಇರುಸುಮುರುಸು ಆಗಲಿಲ್ಲವೇ' ಎಂದು ವಾಸುದೇವ್ ದೇವ್ನಾನಿ ವ್ಯಂಗ್ಯವಾಡಿದ್ದರು.

ಅದಾನಿ ಮತ್ತು ಗೆಹಲೋತ್ ಅಕ್ಕಪಕ್ಕದಲ್ಲಿ ಆಸೀನರಾಗಿದ್ದ ಚಿತ್ರವನ್ನು ಪೋಸ್ಟ್ ಮಾಡಿರುವ ಅವರು 'ಈ ಚಿತ್ರ ಕಾಂಗ್ರೆಸ್ ಹೈಕಮಾಂಡ್‌ನ ಕಪಾಳಕ್ಕೆ ಬಾರಿಸಿದಂತಿದೆ' ಎಂದು ಅಣಕವಾಡಿದ್ದರು.

'ಅದು ಖಾಸಗಿ ಕಾರ್ಯಕ್ರಮವಲ್ಲ. ಹೂಡಿಕೆದಾರರ ಸಮ್ಮೇಳನ. ಅದರಲ್ಲಿ ವಿವಿಧ ಕಂಪನಿಗಳ 3 ಸಾವಿರ ಮಂದಿ ಪ್ರತಿನಿಧಿಗಳು ಪಾಲ್ಗೊಂಡಿದ್ದರು. ಅವರೆಲ್ಲಾ ಕಾಂಗ್ರೆಸ್‌ನವರೇ' ಎಂದು ಪ್ರಶ್ನಿಸಿರುವ ಗೆಹಲೋತ್, ಆ ಮೂಲಕ ತಮ್ಮ ನಡೆಯನ್ನು ಸಮರ್ಥಿಸಿಕೊಂಡಿದ್ದಾರೆ.



ಗೌತಮ್ ಅದಾನಿ ಮತ್ತು ಅಶೋಕ್ ಗೆಹಲೋತ್ ಸಮಾಲೋಚನೆ —ಪಿಟಿಐ ಚಿತ್ರ

ರಾಜಸ್ಥಾನದಲ್ಲಿ ಅದಾನಿ ಹೂಡಿಕೆ: ರಾಹುಲ್ ಗಾಂಧಿ ಸಮರ್ಥನೆ

ತುಮಕೂರು: ರಾಜಸ್ಥಾನದಲ್ಲಿ ಉದ್ಯಮಿ ಗೌತಮ್ ಅದಾನಿ ₹60 ಸಾವಿರ ಕೋಟಿ ಬಂಡವಾಳ ಹೂಡಿಕೆಗೆ ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಅವಕಾಶ ನೀಡಿರುವುದನ್ನು ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಸಮರ್ಥಿಸಿಕೊಂಡಿದ್ದಾರೆ.

'ಯಾವುದೇ ಉದ್ಯಮಿ ನ್ಯಾಯಬದ್ಧವಾಗಿ ಬಂಡವಾಳ ತೊಡಗಿಸಿದರೆ ಅದಕ್ಕೆ ಎಲ್ಲಾ ರೀತಿಯಲ್ಲೂ ಅವಕಾಶ ಮಾಡಿಕೊಡಲಾಗುತ್ತದೆ. ಗೆಹಲೋತ್ ಸಹ ಅದೇ ನಿರ್ಧಾರ ಕೈಗೊಂಡಿದ್ದಾರೆ. ಬಂಡವಾಳ ಹೂಡಿಕೆಯನ್ನು ಯಾರೂ ವಿರೋಧಿಸುವುದಿಲ್ಲ. ರಾಜಸ್ಥಾನ ಸರ್ಕಾರ ಅದಾನಿಗೆ ವಿಶೇಷ ಆದ್ಯತೆ ನೀಡಿಲ್ಲ' ಎಂದರು.

ಭಾರತ್ ಜೋಡೊ ಯಾತ್ರೆ ಶನಿವಾರ ತುಮಕೂರು ಜಿಲ್ಲೆ ಪ್ರವೇಶಿಸಿದ ಸಂದರ್ಭದಲ್ಲಿ ಅರಳೀಕೆರೆಪಾಳ್ಯ ಗ್ರಾಮದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು. 'ಯಾರೊಬ್ಬರ ಬಳಿ ಸಂಪತ್ತು, ವ್ಯವಹಾರ ಕೇಂದ್ರೀಕೃತ ಆಗಬಾರದು. ಉದ್ಯಮದ ಏಕಸ್ವಾಮ್ಯವನ್ನು ನಾನು ಆಕ್ಷೇಪಿಸುತ್ತೇನೆ. ದೇಶದಲ್ಲಿ ಎಲ್ಲಾ ವ್ಯವಹಾರಗಳನ್ನೂ ಕೇಂದ್ರೀಕರಿಸಿಕೊಳ್ಳಲು ಹೊರಟವರಿಗೆ ರಾಜಸ್ಥಾನ ಸರ್ಕಾರ ಅವಕಾಶ ಮಾಡಿಕೊಟ್ಟಿಲ್ಲ. ಈ ರೀತಿ ಉದ್ಯಮ ನಡೆಸುವ ಉದ್ದೇಶದಿಂದ ಅಧಿಕಾರ, ರಾಜಕೀಯ ಶಕ್ತಿ ಬಳಸಿಕೊಳ್ಳಲು ಮುಂದಾದವರಿಗೆ ತಡೆ ಬಿದ್ದಿದೆ' ಎಂದು ಮುಖ್ಯಮಂತ್ರಿ ಗೆಹಲೋತ್ ನಿರ್ಧಾರವನ್ನು ಬೆಂಬಲಿಸಿದರು.

ಸಂಕ್ಷಿಪ್ತ ಸುದ್ದಿ

'ಕಾಂಗ್ರೆಸ್‌ನೊಂದಿಗೆ ಜೆಡಿಯು ವಿಲೀನಕ್ಕೆ ಸಲಹೆ ನೀಡಿದ್ದ ಪಿಕೆ'

ಸಿತಾಬ್ ದಿಯಾರ, ಬಿಹಾರ (ಪಿಟಿಐ): 'ಚುನಾವಣಾ ಕಾರ್ಯತಂತ್ರ ನಿಪುಣ ಪ್ರಶಾಂತ್ ಕಿಶೋರ್ (ಪಿಕೆ) ಅವರು ತಮ್ಮ ಪಕ್ಷವನ್ನು (ಜೆಡಿಯು) ಕಾಂಗ್ರೆಸ್ ಜೊತೆ ವಿಲೀನ ಮಾಡುವಂತೆ ಹಿಂದೊಮ್ಮೆ ಸಲಹೆ ನೀಡಿದ್ದರು' ಎಂದು ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಶನಿವಾರ ಹೇಳಿದ್ದಾರೆ.

ಇದಕ್ಕೆ ಪ್ರತಿಕ್ರಿಯೆ ನೀಡಿರುವ ನಿತೀಶ್, 'ಪ್ರಶಾಂತ್‌ಗೆ ನಾನೇನೂ ಆಹ್ವಾನ ನೀಡಿರಲಿಲ್ಲ. ಸ್ವ ಇಚ್ಛೆಯಿಂದ ನನ್ನನ್ನು ಭೇಟಿ ಮಾಡಿದ್ದರು. ಈ ವೇಳೆ ಹಲವಾರು ವಿಚಾರಗಳ ಕುರಿತು ಮಾತನಾಡಿದ್ದರು. ಆದರೆ ಕಾಂಗ್ರೆಸ್ ಜೊತೆ ಜೆಡಿಯು ವಿಲೀನಗೊಳಿಸುವಂತೆ ಹೇಳಿದ್ದನ್ನು ಮಾತ್ರ ಮರೆಮಾಚಿದ್ದರು' ಎಂದಿದ್ದಾರೆ.

ಕಾನೂನು ಆಯೋಗಕ್ಕೆ ನೇಮಕ: 10ರಂದು ವಿಚಾರಣೆ

ನವದೆಹಲಿ: 2018ರಿಂದಲೂ ಖಾಲಿ ಇರುವ ಭಾರತದ ಕಾನೂನು ಆಯೋಗದ ಅಧ್ಯಕ್ಷರ ಹುದ್ದೆಗೆ ನೇಮಕಾತಿ ಮಾಡುವಂತೆ ಕೋರಿ ಸಲ್ಲಿಸಲಾದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ (ಪಿಐಎಲ್) ವಿಚಾರಣೆಯನ್ನು ಸುಪ್ರೀಂ ಕೋರ್ಟ್ ಸೋಮವಾರ (ಅ.10) ಕೈಗೆತ್ತಿಕೊಳ್ಳಲಿದೆ.

ಬಿಜೆಪಿ ಮುಖಂಡ ಹಾಗೂ ವಕೀಲರಾದ ಅಶ್ವಿನಿ ಕುಮಾರ್ ಉಪಾಧ್ಯಾಯ ಅವರು ಕಳೆದ ವರ್ಷ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದು, ಮುಖ್ಯ ನ್ಯಾಯಮೂರ್ತಿ ಯು.ಯು. ಲಲಿತ್ ಮತ್ತು ಎಸ್. ರವೀಂದ್ರ ಭಟ್ ಅವರನ್ನೊಳಗೊಂಡ ನ್ಯಾಯಪೀಠವು ಸೋಮವಾರ ವಿಚಾರಣೆ ನಡೆಸಲಿದೆ.

ಮೇಲ್ಜಾತಿಯವರು ಮಾತ್ರ ಏಕೆ ಆರೆಸ್ಸೆಸ್ ಮುಖ್ಯಸ್ಥರಾಗಿರುತ್ತಾರೆ?

ನವದೆಹಲಿ: ಆರ್‌ಎಸ್‌ಎಸ್ ಸಂಘಟನೆಯಲ್ಲಿ ಮೇಲ್ಜಾತಿಯವರು ಮಾತ್ರ ಏಕೆ ಮುಖ್ಯಸ್ಥರಾಗಿರುತ್ತಾರೆ ಎಂಬುದನ್ನು ಮುಖ್ಯಸ್ಥ ಮೋಹನ್ ಭಾಗವತ್ ವಿವರಿಸಬೇಕು ಎಂದು ಆಮ್ ಆದ್ಮಿ ಪಕ್ಷ(ಎಎಪಿ) ಮುಖಂಡ ದುರ್ಗೇಶ್ ಪಾಠಕ್ ಶನಿವಾರ ಒತ್ತಾಯಿಸಿದ್ದಾರೆ.

ಅರವಿಂದ ಕೇಜ್ರಿವಾಲ್ ನೇತೃತ್ವದ ಎಎಪಿ ಪಕ್ಷವು ಬಿಜೆಪಿ ವಿರುದ್ಧವೂ ವಾಗ್ದಾಳಿ ನಡೆಸಿದ್ದು, 'ವರ್ಣ, ಜಾತಿ ಮತ್ತು ಧರ್ಮದ ಹೆಸರಿನಲ್ಲಿ ಬಿಜೆಪಿಯು ದೇಶವನ್ನು ಭಾಗಗಳನ್ನಾಗಿ ಮಾಡಿದೆ' ಎಂದೂ ಆರೋಪಿಸಿದೆ.

ಗುಜರಾತ್ ಎಟಿಎಸ್, ಐಸಿಜಿಯಿಂದ ಕಾರ್ಯಾಚರಣೆ: 6 ಮಂದಿ ಬಂಧನ

₹350 ಕೋಟಿ ಮೌಲ್ಯದ ಹೆರಾಯಿನ್ ವಶ

ಪ್ರಜಾವಾಣಿ ವಾರ್ತೆ

ಅಹಮದಾಬಾದ್: ಗುಜರಾತ್‌ನ ಭಯೋತ್ಪಾದನಾ ನಿಗ್ರಹ ದಳ (ಎಟಿಎಸ್) ಮತ್ತು ಭಾರತೀಯ ಕರಾವಳಿ ರಕ್ಷಣಾ ಪಡೆಯು (ಐಸಿಜಿ) ಆಳ ಸಮುದ್ರದಲ್ಲಿ ಕಾರ್ಯಾಚರಣೆ ನಡೆಸಿ ಪಾಕಿಸ್ತಾನದ ಮೀನುಗಾರಿಕಾ ದೋಣಿಯಲ್ಲಿ ಸಾಗಿಸುತ್ತಿದ್ದ ಅಂದಾಜು ₹350 ಕೋಟಿ ಮೌಲ್ಯದ 50 ಕೆ.ಜಿ. ಹೆರಾಯಿನ್ ವಶಪಡಿಸಿಕೊಂಡು, ಆರು ಮಂದಿಯನ್ನು ಬಂಧಿಸಿದೆ.

ಅಂತರರಾಷ್ಟ್ರೀಯ ಜಲಗಡಿಯ ಬಳಿ ಕಾರ್ಯಾಚರಣೆ ನಡೆದಿದ್ದು, ಬಂಧಿತರನ್ನು ಪಾಕಿಸ್ತಾನದ ಪ್ರಜೆಗಳೆಂದು ಶಂಕಿಸಲಾಗಿದೆ ಎಂದು ಎಟಿಎಸ್‌ನ ಅಧಿಕಾರಿಗಳು ಶನಿವಾರ ತಿಳಿಸಿದ್ದಾರೆ.

ಸೆಪ್ಟೆಂಬರ್ 14ರಂದು ಎಟಿಎಸ್ ಮತ್ತು ಐಸಿಜಿ ಅಧಿಕಾರಿಗಳು ಜಂಟಿ ಕಾರ್ಯಾಚರಣೆ ನಡೆಸಿ ಪಾಕಿಸ್ತಾನದ ಆರು ಮಂದಿ ಪ್ರಜೆಗಳನ್ನು ಬಂಧಿಸಿ, 40 ಕೆ.ಜಿ. ಹೆರಾಯಿನ್ ವಶಪಡಿಸಿಕೊಂಡಿದ್ದರು.

40 ಸಾವಿರ ಕೆ.ಜಿ. ಮಾದಕವಸ್ತು ನಾಶ (ಗುವಾಹಟಿ ವರದಿ): ಎನ್‌ಸಿಬಿ ಮತ್ತು ಇತರ ತನಿಖಾ ಸಂಸ್ಥೆಗಳು ಈಶಾನ್ಯ ರಾಜ್ಯಗಳಿಂದ ವಶಪಡಿಸಿಕೊಂಡಿದ್ದ 40 ಸಾವಿರ ಕೆ.ಜಿ. ಮಾದಕ ವಸ್ತುಗಳನ್ನು ಶನಿವಾರ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಸಮ್ಮುಖದಲ್ಲಿ ನಾಶ ಮಾಡಲಾಯಿತು.

₹1,200 ಕೋಟಿ ಮೌಲ್ಯದ ಡ್ರಗ್ ಸಾಗಿಸುತ್ತಿದ್ದ ಇರಾನ್ ಹಡಗು ವಶಕ್ಕೆ

ಕೊಚ್ಚಿ: ರಾಷ್ಟ್ರೀಯ ಮಾದಕವಸ್ತು ನಿಯಂತ್ರಣ ಘಟಕ (ಎನ್‌ಸಿಬಿ) ಮತ್ತು ನೌಕಾ ಪಡೆ ಜಂಟಿ ಕಾರ್ಯಾಚರಣೆ ನಡೆಸಿ ₹1,200 ಕೋಟಿ ಮೌಲ್ಯದ 200 ಕೆ.ಜಿ ಹೆರಾಯಿನ್ ಸಾಗಿಸುತ್ತಿದ್ದ ಇರಾನ್‌ನ ಮೀನುಗಾರಿಕಾ ಹಡಗೊಂದನ್ನು ವಶಕ್ಕೆ ಪಡೆದಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಈ ಸಂಬಂಧ ಆರು ಮಂದಿ ಇರಾನ್ ಪ್ರಜೆಗಳನ್ನು ಬಂಧಿಸಲಾಗಿದೆ. ಬಂಧಿತರನ್ನು ಕೇರಳದ ಮಟ್ಟಾಂಚೇರಿಗೆ ಕರೆತರಲಾಗಿದ್ದು, ವಿಚಾರಣೆ ನಡೆಸಲಾಗುತ್ತಿದೆ ಎಂದು ಎನ್‌ಸಿಬಿಯ ಉಪ ಮಹಾನಿರ್ದೇಶಕ (ಕಾರ್ಯಾಚರಣೆ) ಸಂಜಯ್ ಕುಮಾರ್ ಸಿಂಗ್ ಹೇಳಿದ್ದಾರೆ.

200 ಜಲನಿರೋಧಕ ಪ್ಯಾಕೆಟ್‌ಗಳಲ್ಲಿ ಹೆರಾಯಿನ್ ಪತ್ತೆಯಾಗಿದ್ದು, ಅಫ್ಗಾನಿಸ್ತಾನದಿಂದ ತಂದಿರುವ ಇದನ್ನು ಪಾಕಿಸ್ತಾನಕ್ಕೆ ಸಾಗಿಸಲಾಗುತ್ತಿತ್ತು ಎಂದು ಅವರು ತಿಳಿಸಿದ್ದಾರೆ.

ಈ ಹಡಗು ಶ್ರೀಲಂಕಾದ ಹಡಗಿಗೂ ಮಾದಕ ವಸ್ತುವನ್ನು ರವಾನೆ ಮಾಡಲು ಭಾರತದ ಜಲ ಪ್ರದೇಶಕ್ಕೆ ಪ್ರವೇಶಿಸಿದೆ. ಈ ವೇಳೆ ವಶಕ್ಕೆ ಪಡೆಯಲಾಗಿದೆ ಎಂದಿದ್ದಾರೆ.

ಕೊಲೆ ಪ್ರಕರಣದ ವಿಚಾರಣೆ ವೇಳೆ ಸುಪ್ರೀಂಕೋರ್ಟ್ ಅಭಿಪ್ರಾಯ

ಸಾಕ್ಷಿ ಹೇಳಿಕೆ ದಾಖಿಲು ವಿಳಂಬ ಸಲ್ಲದು

ನವದೆಹಲಿ (ಪಿಟಿಐ): ಪ್ರಕರಣದಲ್ಲಿ ಸಾಕ್ಷಿಗಳ ಹೇಳಿಕೆಯನ್ನು ಅದೇ ದಿನ ಅಥವಾ ಮರುದಿನದೊಳಗೆ ದಾಖಲಿಸಿಕೊಳ್ಳಬೇಕು, ಹೇಳಿಕೆ ದಾಖಲು ಪ್ರಕ್ರಿಯೆಯ ಸಂದರ್ಭದಲ್ಲಿ ವಿಚಾರಣೆ ಮುಂದೂಡಿಕೆ ಸಲ್ಲದು ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಕೊಲೆ ಪ್ರಕರಣದಲ್ಲಿ ಇಬ್ಬರು ಆರೋಪಿಗಳಿಗೆ ಅಲಹಾಬಾದ್ ಹೈಕೋರ್ಟ್ ನೀಡಿರುವ ಜಾಮೀನು ವಜಾಗೊಳಿಸುವಂತೆ ಕೋರಿ ಸಲ್ಲಿಸಲಾಗಿದ್ದ ಎರಡು ಅರ್ಜಿಗಳನ್ನು ಸುಪ್ರೀಂ ಕೋರ್ಟ್ ವಿಚಾರಣೆ ನಡೆಸಿತು.

ಈ ಪ್ರಕರಣದಲ್ಲಿ ಸಾಕ್ಷಿಯ ಹೇಳಿಕೆ ದಾಖಲಿಸುವ ಪ್ರಕ್ರಿಯೆಗೆ ಮೂರು ತಿಂಗಳು ಹಿಡಿದಿದೆ ಎಂದು ಸುಪ್ರೀಂ ಕೋರ್ಟ್‌ಗೆ ಮಾಹಿತಿ ನೀಡಲಾಯಿತು. ಆಗ ಸುಪ್ರಿಂ ಕೋರ್ಟ್ ಈ ಅಭಿಪ್ರಾಯ ವ್ಯಕ್ತಪಡಿಸಿತು.

'ಪಾಟೀಸವಾಲು ಸೇರಿದಂತೆ ಸಾಕ್ಷಿಯ ಹೇಳಿಕೆಯನ್ನು ದಾಖಲಿಸಿಕೊಳ್ಳುವ ಪ್ರಕ್ರಿಯೆ ಅದೇ ದಿನ ಅಥವಾ ಮರುದಿನದೊಳಗೆ ಪೂರ್ಣಗೊಳ್ಳಬೇಕು ಎಂದು ಕಾನೂನು ಹೇಳುತ್ತದೆ' ಎಂದು ನ್ಯಾಯಮೂರ್ತಿಗಳಾದ ಅಜಯ್ ರಸ್ತೋಗಿ ಮತ್ತು ಸಿ.ಟಿ. ರವಿಕುಮಾರ್ ಅವರ ಪೀಠ ಹೇಳಿತು.

ಉತ್ತರ ಪ್ರದೇಶದ ಭದೋಹಿ ಜಿಲ್ಲೆಯಲ್ಲಿ ದಾಖಲಾದ ಪ್ರಕರಣ ಕುರಿತಂತೆ ಫೆಬ್ರುವರಿ ಹಾಗೂ ಮಾರ್ಚ್‌ನಲ್ಲಿ ಪ್ರತ್ಯೇಕ ಆದೇಶ ಹೊರಡಿಸಿದ್ದ ಹೈಕೋರ್ಟ್, ಇಬ್ಬರಿಗೆ ಜಾಮೀನು ನೀಡಿತ್ತು. ಪ್ರಕರಣದಲ್ಲಿ ಮೂವರು ಪತ್ಯಕ್ಷದರ್ಶಿಗಳಿದ್ದು, ಆರೋಪ ಪಟ್ಟಿ ಸಲ್ಲಿಕೆಯಾಗಿದೆ.

ಈ ಪೈಕಿ ಒಬ್ಬ ಸಾಕ್ಷಿಯ ಹೇಳಿಕೆ ದಾಖಲಿಸಿಕೊಳ್ಳಲಾಗಿದೆ.

ವಿಚಾರಣೆ ಮುಂದೂಡಿಕೆ ಕಾರಣದಿಂದ, ಈ ಪ್ರಕ್ರಿಯೆ ಸಂಪೂರ್ಣವಾಗಲು ಮೂರು ತಿಂಗಳ ಸಮಯ ತೆಗೆದುಕೊಂಡಿತು. ಸಾಕ್ಷಿಯ ಹೇಳಿಕೆಯನ್ನು ದಾಖಲಿಸಿಕೊಳ್ಳುವ ವಿಚಾರದಲ್ಲಿ ಸಿಆರ್‌ಪಿಸಿ ಸೆಕ್ಷನ್ 309 ಅನ್ನು ಉಲ್ಲಂಘಿಸಲಾಗಿದೆ ಎಂದು ಆರೋಪಿಸಲಾಗಿದೆ. ಈ ವಿಧಿಯು ವಿಚಾರಣೆ ಮುಂದೂಡಿಕೆ ಅಧಿಕಾರವನ್ನು ಪ್ರಸ್ತಾಪಿಸುತ್ತದೆ. 2014ರ ಸುಪ್ರೀಂ ಕೋರ್ಟ್ ತೀರ್ಪಿನಲ್ಲಿ 309ನೇ ಸೆಕ್ಷನ್ ಅನ್ನು ಮುಖ್ಯವಾಗಿ ಪರಿಗಣಿಸಲಾಗಿತ್ತು.

ಪ್ರಕರಣವನ್ನು ಚುರುಕುಗೊಳಿಸಲು ವಿಚಾರಣಾ ನ್ಯಾಯಾಲಯದ ನ್ಯಾಯಾಧೀಶರ ಯತ್ನವಷ್ಟೇ ಸಾಲದು. ಪಾಟೀಸವಾಲು ಹಾಗೂ ಹೇಳಿಕೆ ದಾಖಲಿಸಿಕೊಳ್ಳುವ ಪ್ರಕ್ರಿಯೆಯೂ ತ್ವರಿತವಾಗಿ ಆಗಬೇಕು. ಸಾಕ್ಷಿ ಹೇಳಿಕೆ ದಾಖಲು ಪ್ರಕ್ರಿಯೆಯನ್ನು ದೀರ್ಘಕಾಲದವರೆಗೆ ಮುಂದೂಡುವಂತಿಲ್ಲ ಎಂದು ಕೋರ್ಟ್ ಹೇಳಿದೆ.

ತಿರುಮಲ: 48 ಗಂಟೆ ಸರತಿಯಲ್ಲಿ ನಿಂತ ಭಕ್ತರು

ಹೈದರಾಬಾದ್: ಭಾರಿ ಸಂಖ್ಯೆಯಲ್ಲಿ ಭಕ್ತರು ತಿರುಮಲಕ್ಕೆ ಭೇಟಿ ನೀಡುತ್ತಿರುವ ಕಾರಣ ವೆಂಕಟೇಶ್ವರ ದರ್ಶನಕ್ಕೆ ಶನಿವಾರ 48 ಗಂಟೆಗೂ ಹೆಚ್ಚು ಸಮಯ ತಗುಲಿತು.

ದಸರಾ ರಜೆ ಜೊತೆಗೆ ಭಾದ್ರಪದ ಮಾಸದ 3ನೇ ವಾರವೂ ಆಗಿರುವುದರಿಂದ ಯಾತ್ರಿಗಳ ಸಂಖ್ಯೆ ಹೆಚ್ಚಾಗಿದೆ. ಭಾನುವಾರದ ನಂತರ ಭಕ್ತರ ಸಂಖ್ಯೆಯಲ್ಲಿ ಕಡಿಮೆಯಾಗುವ ನಿರೀಕ್ಷೆ ಇದೆ' ಎಂದು ತಿರುಪತಿ ತಿರುಮಲ ದೇವಸ್ಥಾನಮ್ಸ್ (ಟಿಟಿಡಿ) ಅಧಿಕಾರಿಗಳು 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

ಶುಕ್ರವಾರವೂ ಸರ್ವ ದರ್ಶನ ಸರತಿಯಲ್ಲಿ ಜನರು 48 ಗಂಟೆಗಳ ಕಾಲ ಕಾಯಬೇಕಾಯಿತು. ಸಂಜೆ ಭಕ್ತರಿಗೆ ಸರತಿ ಸಾಲಿನಲ್ಲಿ ನಿಲ್ಲುವ ಅವಕಾಶವನ್ನು ನಿರಾಕರಿಸಲಾಗಿತ್ತು. ಶನಿವಾರ ಸರತಿ ಸಾಲು ಶ್ರೀವಾರಿ ದೇವಾಲಯದಿಂದ 3 ಕಿ.ಮೀ ದೂರದಲ್ಲಿರುವ ಗೋಗರ್ಭಮ್ ದೇವಾಲಯದವರೆಗೂ ಇತ್ತು.



ಐಎಎಫ್‌ನ 90ನೇ ವರ್ಷಾಚರಣೆ ಕಾರ್ಯಕ್ರಮದಲ್ಲಿ ನಡೆದ ವೈಮಾನಿಕ ಪ್ರದರ್ಶನ —ಎಎಫ್‌ಪಿ ಚಿತ್ರ

ಐಎಎಫ್ ಅಧಿಕಾರಿಗಳಿಗಾಗಿ ಶಸ್ತ್ರಾಸ್ತ್ರ ವ್ಯವಸ್ಥೆಯ ಶಾಖೆ: ಕೇಂದ್ರ ಒಪ್ಪಿಗೆ

ಚಂಡೀಗಢ (ಪಿಟಿಐ): 'ಭಾರತೀಯ ವಾಯುಪಡೆಯ (ಐಎಎಫ್) ಅಧಿಕಾರಿಗಳಿಗಾಗಿ ಶಸ್ತ್ರಾಸ್ತ್ರ ವ್ಯವಸ್ಥೆಯ ಶಾಖೆಯೊಂದನ್ನು ಸ್ಥಾಪಿಸುವುದಕ್ಕೆ ಕೇಂದ್ರ ಸರ್ಕಾರ ಒಪ್ಪಿಗೆ ಸೂಚಿಸಿದೆ. ಇದರಿಂದ ವಿಮಾನ ಹಾರಾಟ ತರಬೇತಿಗೆ ತಗಲುವ ₹3,400 ಕೋಟಿ ಮೊತ್ತ ಉಳಿತಾಯವಾಗಲಿದೆ' ಎಂದು ಏರ್ ಚೀಫ್ ಮಾರ್ಷಲ್ ವಿ.ಆರ್. ಚೌಧರಿ ಹೇಳಿದ್ದಾರೆ.

ಐಎಎಫ್‌ನ 90ನೇ ವರ್ಷಾಚರಣೆ ಹಿನ್ನೆಲೆಯಲ್ಲಿ ಇಲ್ಲಿನ ವಾಯುಪಡೆ ಕೇಂದ್ರದಲ್ಲಿ ಶನಿವಾರ ಹಮ್ಮಿಕೊಳ್ಳಲಾಗಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಮುಂದಿನ ವರ್ಷದಿಂದ ಐಎಎಫ್‌ಗೆ ಮಹಿಳಾ ಅಗ್ನಿವೀರರನ್ನು ನೇಮಿಸಿಕೊಳ್ಳಲು ಚಿಂತಿಸಲಾಗಿದ್ದು, ಈ ಕುರಿತು ಯೋಜನೆ ರೂಪಿಸಲಾಗಿದೆ' ಎಂದು ತಿಳಿಸಿದ್ದಾರೆ.

'ಸ್ವಾತಂತ್ರ್ಯ ನಂತರದಲ್ಲಿ ಇದೇ ಮೊದಲ ಬಾರಿಗೆ ಶಸ್ತ್ರಾಸ್ತ್ರ ವ್ಯವಸ್ಥೆಯ ಶಾಖೆಯೊಂದನ್ನು ಸ್ಥಾಪಿಸಲಾಗುತ್ತಿದೆ. ಖಂಡಾಂತರ ಕ್ಷಿಪಣಿ, ನೆಲದಿಂದ ಆಕಾಶಕ್ಕೆ ಚಿಮ್ಮುವ ಕ್ಷಿಪಣಿ, ದೂರ ನಿಯಂತ್ರಿತ ಯುದ್ಧ ವಿಮಾನ ಹಾಗೂ ಅವಳಿ ಹಾಗೂ ಬಹು ಸಿಬ್ಬಂದಿ ವಿಮಾನಗಳನ್ನು ಈ ವ್ಯವಸ್ಥೆಯು ಒಳಗೊಂಡಿರಲಿದೆ' ಎಂದು ಮಾಹಿತಿ ನೀಡಿದ್ದಾರೆ.

'ತುರ್ತು ನಿರ್ಧಾರ ಕೈಗೊಳ್ಳಲು ಹಾಗೂ ದೊಡ್ಡ ಪ್ರಮಾಣದ ದತ್ತಾಂಶಗಳ ವಿಶ್ಲೇಷಣೆಗಾಗಿ ಕೃತಕ ಬುದ್ಧಿಮತ್ತೆಯನ್ನು ಬಳಕೆ ಮಾಡಿಕೊಳ್ಳಲಾಗುತ್ತದೆ. ಯಾಂತ್ರೀಕೃತ ಸಾಮರ್ಥ್ಯ, ದತ್ತಾಂಶ ವಿಶ್ಲೇಷಣೆ ಮತ್ತು ಕೃತಕ ಬುದ್ಧಿಮತ್ತೆಯ ಸೂಕ್ತ ಬಳಕೆಯೊಂದಿಗೆ ನಮ್ಮ ಕಾರ್ಯತಂತ್ರವನ್ನು ಮತ್ತಷ್ಟು ಪರಿಣಾಮಕಾರಿಗೊಳಿಸಲಾಗುತ್ತದೆ. ಈ ಕುರಿತ ಯೋಜನೆಗಳು ಈಗಾಗಲೇ ಪ್ರಗತಿಯಲ್ಲಿವೆ' ಎಂದಿದ್ದಾರೆ.

ಕಾಡುಗೊಲ್ಲರ ದೈವದ ಗುಬ್ಬ



ಗುಬ್ಬದ ಮುಂದೆ ಸಾಂಪ್ರದಾಯಿಕ ವಾದ್ಯ ಗಣೆ ವಾದನ

ಕಾಡುಗೊಲ್ಲರ ಸಾಂಸ್ಕೃತಿಕ ಸಂಪತ್ತಿನ 'ಅಕ್ಷಯ ನಿಧಿ'ಗಳಂತಿರುವ ಗುಬ್ಬಗಳು ಆ ಸಮುದಾಯದ ನೈತಿಕ ಸ್ವಚ್ಛತೆ ಮತ್ತು ಸಾತ್ವಿಕ ಗುಣದ ಪ್ರತಿನಿಧಿಗಳಂತಿವೆ. ಈ ಗುಬ್ಬಗಳೂ ನಾಗರಿಕ ಜಗತ್ತಿನ ರೂಪಾಂತರದ ಪ್ರಕ್ರಿಯೆಗೆ ಒಡ್ಡಿಕೊಂಡ ಪರಿಯಾದರೂ ಹೇಗಿದೆ? ಒಂದು ನೋಟ ಇಲ್ಲಿದೆ

ಜಿ.ವಿ. ಆನಂದಮೂರ್ತಿ

ಕಾಲ ಮತ್ತು ನಾಗಾಲೋಟದ ಆಧುನಿಕತೆಯ ಒತ್ತಡವನ್ನು ತಾಳಿಕೊಂಡು ಉಳಿದು ಬಂದಿರುವ ಕೆಲವೇ ಬುಡಕಟ್ಟುಗಳಲ್ಲಿ ಕಾಡಗೊಲ್ಲ ಸಮುದಾಯವೂ ಒಂದು. ಬಹುಸಂಖ್ಯಾತರ ಧಾರ್ಮಿಕ ಮತ್ತು ಸಾಮಾಜಿಕ ದಮನಗಳಿಗೆ ತುತ್ತಾಗದೆ, ತಮ್ಮ ಪ್ರಾಚೀನ ನಂಬಿಕೆ, ಜೀವನಶೈಲಿ ಮತ್ತು ಆಚರಣೆಗಳನ್ನು ಬಿಟ್ಟುಗೊಡದೆ, ಇಂದಿಗೂ ತಮ್ಮದೇ ಸಂಸ್ಕೃತಿಯೊಂದಿಗೆ ಬೆಸೆದುಕೊಂಡು ಕಾಡುಗೊಲ್ಲರು ಬದುಕುತ್ತಿದ್ದಾರೆ. ಚರಿತ್ರೆಯೇ ಇಲ್ಲದ ತಮ್ಮ ಹಟ್ಟಿಗಳಲ್ಲಿ, ತಮ್ಮ ಹಿರಿಯರು ಕಟ್ಟಿಕೊಟ್ಟಿದ್ದ 'ದೇವರ ಗುಬ್ಬ', 'ಆವಿನ ಗೂಡು' ಹಾಗೂ 'ವಲಸೆ' ಬದುಕನ್ನು ಜತನದಿಂದ ಕಾಪಾಡಿಕೊಂಡು ಬಾಳುತ್ತಿದ್ದಾರೆ.

ಕಾಡುಗೊಲ್ಲರು ನಿರಾಕಾರ ಪೂಜಕರು. ತಮ್ಮ ಸಮುದಾಯದ ಹಿತಕ್ಕಾಗಿ ಹೊರಗಿನವರೊಂದಿಗೆ ಹೋರಾಡಿ ಮಡಿದ ಅಥವಾ ತಮ್ಮ ಅವುಗಳ (ದನ-ಕರುಗಳು) ರಕ್ಷಣೆಗಾಗಿ ಕಾಡುಪ್ರಾಣಿಗಳೊಂದಿಗೆ ಹೋರಾಡಿ ಮಡಿದ ತಮ್ಮ ಪೂರ್ವಿಕರನ್ನು ಇವರು ಈ ಗುಬ್ಬಗಳಲ್ಲಿ ದೈವವನ್ನಾಗಿ ಪೂಜಿಸುತ್ತಾರೆ. ಹೀಗೆ ಮಡಿದವರನ್ನು ವೀರಗಾರರೆಂದು ಕರೆಯುತ್ತಾರೆ. ಪ್ರಾಚೀನ ಬುಡಕಟ್ಟುಗಳು ರೂಪಿಸಿಕೊಂಡ ಸಂರಚನೆಗಳಲ್ಲಿ ಈ ಸಂಪ್ರದಾಯವೂ ಒಂದು. ಕಾಲದ ಬದಲಾವಣೆಗಳನ್ನು ದಾಟಿಬಂದಿರುವ ಕಾಡುಗೊಲ್ಲರ ಸಂಸ್ಕೃತಿಯಲ್ಲಿ ಇದು ಇಂದಿಗೂ ಬಲಯುತವಾಗಿಯೇ ಉಳಿದುಕೊಂಡು ಬಂದಿದೆ. ಎತ್ತಪ್ಪ, ಜುಂಜಪ್ಪ, ಸಿರಿಯಣ್ಣ, ವೀರಚಿಕ್ಕಣ್ಣ, ಹೊನ್ನೆಮರದ ಈರಣ್ಣ, ಕಾಟುಂ ದೇವರು, ಹಾಲುಗುಡದಪ್ಪ, ಕ್ಯಾತಪ್ಪ ಹೀಗೆಯೇ ಇನ್ನೂ ಕೆಲವು ಸ್ಥಳೀಯ ವೀರಗಾರರು ಕರ್ನಾಟಕದಾದ್ಯಂತ ಕಾಡುಗೊಲ್ಲರ ಹಟ್ಟಿಗಳಲ್ಲಿ ನೆಲೆಗೊಂಡಿದ್ದಾರೆ.

ವಿಶೇಷವಾಗಿ ಹೀಗೆ ಪೂಜೆಗೆ ಅರ್ಹರಾದ ಪೂರ್ವಜರೆಲ್ಲ ಬಹುಪಾಲು ಪುರುಷರೇ ಆಗಿದ್ದಾರೆ! ಇದು ಸಹಜವೇ ಇರಬಹುದು. ಏಕೆಂದರೆ, ಬೇಟೆ ಮತ್ತು ಅಲೆಮಾರಿ ಬದುಕಿನ ಹಂತದಲ್ಲಿ ಪುರುಷರಿಗೇ ಬೇಟೆ ಮತ್ತು ಅನ್ಯರ ಮೇಲಿನ ಆಕ್ರಮಣಗಳಲ್ಲಿ ಪಾಲ್ಗೊಳ್ಳುವ ಅವಕಾಶಗಳು ಹೆಚ್ಚು. ಆದ್ದರಿಂದ ಕಾಡುಪ್ರಾಣಿಗಳೊಂದಿಗಿನ ಕಾದಾಟದಲ್ಲಿ ಪ್ರಾಣ ತೆರುವವರು, ಮತ್ತು ಅನ್ಯ ಸಮುದಾಯವರ ಜತೆ ಕಾದಾಡಿ ಮಡಿಯುವವರೂ ಹೆಚ್ಚಿನ ಪ್ರಮಾಣದಲ್ಲಿ ಪುರುಷರೇ ಆಗಿರುತ್ತಾರೆ. ಈ ಕಾರಣವಾಗಿ ಕಾಡುಗೊಲ್ಲರ ವೀರಗಾರರಲ್ಲಿ ಪುರುಷರೇ ಹೆಚ್ಚಿನ ಪ್ರಮಾಣದಲ್ಲಿದ್ದಾರೆ!

ಕರ್ನಾಟಕದಲ್ಲಿರುವ ಯಾವುದೇ ಕಾಡುಗೊಲ್ಲರ ಹಟ್ಟಿಗೆ ಹೋದರೆ, ಅಲ್ಲಿ ಕಡ್ಡಾಯವಾಗಿ ಎರಡು ಗುಬ್ಬಗಳಿರುತ್ತವೆ. ಒಂದು ಚಿತ್ರದೇವರ ಪೌಳಿ, ಮತ್ತೊಂದು ಅಲ್ಲಿನ ಸ್ಥಳೀಯ ವೀರಗಾರನ ಪೌಳಿ. ಕೆಲವು ಕಡೆ ಜುಂಜಪ್ಪನ ಪೌಳಿಯೂ ಸೇರಿ ಮೂರು ಪೌಳಿಗಳಿದ್ದರೆ, ಇನ್ನೂ ಕೆಲವು ಹಟ್ಟಿಗಳಲ್ಲಿ ಸ್ಥಳೀಯ ವೀರಗಾರನ ಒಂದೇ ಪೌಳಿ ಸಹ ಇರುತ್ತದೆ. 'ಚಿತ್ರದೇವರು' ಕಾಡುಗೊಲ್ಲರ ಮೂಲ ದೈವವಾದ್ದರಿಂದ ಚಿತ್ರದೇವರ ಪೌಳಿಯು ಕರ್ನಾಟಕದ ಎಲ್ಲ ಕಾಡುಗೊಲ್ಲರ ಹಟ್ಟಿಗಳಲ್ಲಿ ಸಾಮಾನ್ಯವಾಗಿ ಕಂಡುಬರುತ್ತದೆ.

'ಪೌಳಿ' ಎಂದರೆ, ಗುಬ್ಬಗಳ ಸುತ್ತಲೂ ಕಟ್ಟಿದ ಒಂದು ಕಳ್ಳೆಬೇಲಿ. ಹೊರಗಿನ ಯಾವುದೇ ಕೆಡುಕಿನ ನೆರಳು ಹಾಗೂ 'ಅಂಟು-ಮುಂಟು' ದೈವದ ಗುಬ್ಬಗಳ ಮೇಲೆ ಬೀಳದಂತೆ ಕಳ್ಳೆಬೇಲಿ ತಡೆವೊಡ್ಡುತ್ತದೆ ಎಂಬುದು ಕಾಡುಗೊಲ್ಲರ ನಂಬಿಕೆ. ಕೆಲವು ಗುಬ್ಬಗಳಲ್ಲಿ ದೈವದ ಜೊತೆಗೆ ಕಾಡುಗೊಲ್ಲರ ಪಾರಂಪರಿಕ ವಾದ್ಯವಾದ 'ಗಣೆ'ಯನ್ನೂ ಇಟ್ಟು ಪೂಜಿಸುವ ಸಂಪ್ರದಾಯವಿದೆ. ಕಾಡುಗೊಲ್ಲರ ಉತ್ಕೃಷ್ಟ ಅಭಿರುಚಿ ಸೃಷ್ಟಿಸಿದ ಈ ಗುಬ್ಬಗಳು ಅವರ ಪ್ರಾಚೀನ ಕೌಶಲಕ್ಕೆ ಸಾಕ್ಷಿಯಾಗಿವೆ. ತಮ್ಮ ಬುಡಕಟ್ಟಿನ ವೀರಗಾರರ ಬಗ್ಗೆ ಕಾಡುಗೊಲ್ಲರಿಗೆ ಅಪಾರವಾದ ಹೆಮ್ಮೆಯಿದೆ. ಈ ಕಾರಣವಾಗಿಯೇ ವೀರಗಾರರನ್ನು ಕುರಿತ ನೂರಾರು ಮೌಖಿಕ ಸಾಹಿತ್ಯವೂ ಕಾಡುಗೊಲ್ಲರಲ್ಲಿದೆ.

ಹಟ್ಟಿಯ ಒಂದು ಭಾಗದಲ್ಲಿ ಅಥವಾ ದೊಡ್ಡ ಮರವೊಂದರ ಕೆಳಗೆ ಸಾಮಾನ್ಯವಾಗಿ ಈ ಗುಬ್ಬಗಳು ನೆಲೆಕಂಡಿವೆ. ನಾಲ್ಕು ಅಡಿಯ ಹಸಿಮಣ್ಣಿನ ಗೋಡೆ, ಅದರ ಮೇಲೆ ಸ್ಥಳೀಯವಾಗಿ ತಮಗೆ ಲಭ್ಯವಾಗುವ ಕಾಮ್ಸಿಹುಲ್ಲು ಅಥವಾ ಮುತ್ತುಗದ ಎಲೆ ಅಥವಾ ಬಾಳೆಪಟ್ಟೆ ಅಥವಾ ಕೆಲವು ಕಡೆ ಆಪಿನ ದಂಟುಗಳಿಂದಲೂ ಈ ಗುಬ್ಬಗಳ ಮಾಡು ನಿರ್ಮಾಣವಾಗಿರುತ್ತದೆ. ಕೆಲವು ಹಟ್ಟಿಗಳಲ್ಲಿ ಮಣ್ಣಿನ ಗೋಡೆಗೆ ಬದಲಾಗಿ ಹುಲ್ಲಿನ ಗೋಡೆ ಇದೆ. ಒಬ್ಬರು ಮಾತ್ರ ಮೈ ಕುಗ್ಗಿಸಿಕೊಂಡು ಒಳಗೆ ನುಸುಳಿಕೊಂಡು ಹೋಗುವಷ್ಟು ಕಿರಿದಾದ ಕಲಾತ್ಮಕ ಬಾಗಿಲು ಇರುತ್ತದೆ. ಗುಬ್ಬದ ಪೂಜಾರಪ್ಪನನ್ನು ಹೊರತುಪಡಿಸಿ ಬೇರೆ ಯಾರೂ ಗುಬ್ಬದ ಒಳಗೆ ಹೋಗುವಂತಿಲ್ಲ!

ಈ ಗುಡಿಗಳಿಗೆ ಹೊದೆಸಿರುವ ಹುಲ್ಲನ್ನು ಎರಡು-ಮೂರು ವರ್ಷಗಳಿಗೊಮ್ಮೆ ಬದಲಿಸುತ್ತಾರೆ. ಕಾಡುಗೊಲ್ಲರ ಪ್ರಾಚೀನ ಕೌಶಲ ಮತ್ತು ಅಂದಿನ ಅವರ ಅಲೆಮಾರಿ ಬದುಕಿನ ಅವಸ್ಥೆಗೆ ಅನುಗುಣವಾಗಿ ಈ ಗುಬ್ಬಗಳು ನಿರ್ಮಾಣಗೊಂಡಿವೆ ಎನ್ನುವುದನ್ನು ಅವುಗಳ ವಿನ್ಯಾಸವೇ ಹೇಳುತ್ತದೆ. ಸೊಬಗು, ಪ್ರಸನ್ನತೆ ಮತ್ತು ಸರಳತೆಯಿಂದ ಕೂಡಿರುವ ಈ ಗುಬ್ಬಗಳು ಕಾಡುಗೊಲ್ಲರ ವಿವೇಕ ರೂಪಿಸಿದ ಅಮರ ಕೃತಿಗಳು. ನೈತಿಕ ಸ್ವಚ್ಛತೆ ಮತ್ತು ಸಾತ್ವಿಕ ಗುಣದ ಈ ಬುಡಕಟ್ಟು ಸಮುದಾಯವು ತಮ್ಮ ಪೂರ್ವಜರಿಗೆ ಅರ್ಪಿಸಿದ ಪರಿಶುದ್ಧ 'ಎಡೆ'ಯಂತಿವೆ ಈ ಗುಬ್ಬಗಳು. ತಮ್ಮ ಬುಡಕಟ್ಟು ಸಮುದಾಯದ ಒಡವೆಗಳಂತಿರುವ ಈ ಗುಬ್ಬಗಳನ್ನು ಕಾಡುಗೊಲ್ಲರು ಇಂದಿಗೂ ಅಪಾರವಾದ ದೈವಿಕ ಭಾವನೆಯಿಂದ ಗೌರವಿಸುತ್ತಾರೆ.

ಇದರ ಜೊತೆಗೆ ಕಾಡುಗೊಲ್ಲರ ಗುಬ್ಬಗಳ ಬಳಿ ಧೂಪದ ಮರಗಳು ಸಾಮಾನ್ಯವಾಗಿ ಕಂಡುಬರುತ್ತವೆ. ಗಂಧದ ಕಡ್ಡಿ (ಊದುಬತ್ತಿ) ಇಲ್ಲದಿರುವ ಕಾಲದಲ್ಲಿ, ಕಾಡುಗೊಲ್ಲರು ತಂಗಟೆ ಮರದ ಒಣ ಕಡ್ಡಿಗಳಿಂದ ಕೆಂಡ ಮಾಡಿ, ಈ ಕೆಂಡದಲ್ಲಿ ಧೂಪದ ಮರದ ಚೆಕ್ಕೆಯಿಂದ ಧೂಪ ಹಾಕುವ ಸಂಪ್ರದಾಯವಿತ್ತು. ಈಗಲೂ ಕಾಡುಗೊಲ್ಲರು ಈ ಸಂಪ್ರದಾಯವನ್ನು ಮುಂದುವರಿಸಿಕೊಂಡು ಬರುತ್ತಿದ್ದಾರೆ. ಕರ್ನಾಟಕದಲ್ಲಿರುವ ಹಲವಾರು ಕಾಡುಗೊಲ್ಲರ ಗುಬ್ಬಗಳ ಬಳಿ ಪುರಾತನ ಧೂಪದ ಮರಗಳು ಈಗಲೂ ಉಳಿದುಕೊಂಡು ಬಂದಿರುವುದನ್ನು ನಾವು ಕಂಡಿದ್ದೇವೆ. ಚಿತ್ರದೇವರ ಕಾವ್ಯದಲ್ಲೂ ಧೂಪದ ಮರದ ಉಲ್ಲೇಖವಿದೆ.

ಬುಡಕಟ್ಟು ಸಮುದಾಯವಾದ ಕಾಡುಗೊಲ್ಲರದ್ದು ಮೂಲತಃ ದೇವಾಲಯ ಸಂಸ್ಕೃತಿಯಲ್ಲ. 'ಗರ್ಭಗುಡಿ', 'ಯಜ್ಞ-ಹೋಮ', 'ಪುರೋಹಿತ' ಹಾಗೂ 'ಮಂತ್ರ'ಗಳ ಸಂಪ್ರದಾಯವದವರಲ್ಲ! ಹಾಗೆಯೇ ಅವರು ಮೂರ್ತಿ ಪೂಜಕರೂ ಅಲ್ಲ. ತಮ್ಮ ಪೂರ್ವಿಕರನ್ನು ನಿರಾಕಾರ ಸ್ಥಿತಿಯಲ್ಲಿ ಪೂಜಿಸುವ ಕಾಡುಗೊಲ್ಲರ ದೈವದ ಕಲ್ಪನೆಯೆಂದರೆ, ಅಲುಗು, ಈಟಿ, ಮುಸ್ತಾಫ್‌ಗಳನ್ನು ಪೂರ್ವಿಕರಿಗೆ ಸಂಕೇತವಾಗಿ ಪೂಜಿಸುತ್ತಾರೆ. ಬಿದಿರಿನ ಪೆಟ್ಟಿಗೆಗಳ ಮೇಲೆ ಕೆಂಪುವಸ್ತ್ರ ಸುತ್ತಿ, ಅದರ ಮೇಲೆ 'ನಾಗರ'ಗಳನ್ನು ಇಟ್ಟು ಪೂಜಿಸುವುದು ಇವರಲ್ಲಿರುವ ಸಂಪ್ರದಾಯ. ಹೀಗಾಗಿ ಕಾಡುಗೊಲ್ಲರು ಕನ್ನಡ ಜಿಲ್ಲೆಯ 'ಮೇರ'ರಂತೆ ನಾಗಾರಾಧಕರೂ ಹೌದು ಎನ್ನುವುದನ್ನು ಅವರ ಬಹುಪಾಲು ಆಚರಣೆಗಳು ದೃಢಪಡಿಸುತ್ತವೆ. ಚರಿತ್ರೆಯ ಯಾವ ಹಂತದಲ್ಲಿ ಇವರು ನಾಗಾರಾಧನೆಗೆ ತೊಡಗಿದರೋ ತಿಳಿಯದು! ಇವೆಲ್ಲವೂ ಲಿಖಿತ ಇತಿಹಾಸವೇ ಇಲ್ಲದ ಕಾಡುಗೊಲ್ಲರಲ್ಲಿ ಮುಚ್ಚಿಹೋಗಿರುವ ಸಂಗತಿಗಳು. 'ಶೈವ'ರೂ ಅಲ್ಲದ, 'ವೈಷ್ಣ'ವರೂ ಅಲ್ಲದ ಕಾಡುಗೊಲ್ಲರು ಮೂಲತಃ ಬುಡಕಟ್ಟು ಸಂಪ್ರದಾಯದವರು. ಕಾಡುಗೊಲ್ಲರ ಬದುಕಿನಲ್ಲಿ ಇಂದಿಗೂ ಹಾಸುಹೊಕ್ಕಾಗಿರುವ ಇಂತಹ ಸಾಂಸ್ಕೃತಿಕ ಬದುಕಿನ ದಟ್ಟ ವಿವರಗಳು ಹೆಚ್ಚಿನ ಶೋಧನೆಗೆ ದಾರಿ ತೋರುತ್ತವೆ.

ಕಾಡುಗೊಲ್ಲರನ್ನು ಒಂದಾಗಿ ಕೂಡಿಸಿರುವುದೇ ಅವರ ಸಂಸ್ಕೃತಿಯ ವೈವಿಧ್ಯಮಯ ಆಚರಣೆಗಳು. ಒಂದು ಬುಡಕಟ್ಟಿನ ಸ್ವಭಾವ ಲಕ್ಷಣಗಳನ್ನು ಸೂತ್ರೀಕರಿಸಿ, ಅದೇ ಎಲ್ಲ ಬುಡಕಟ್ಟುಗಳ ಸಾಮಾನ್ಯ ಲಕ್ಷಣಗಳು ಎಂದು ಹೇಳುವ ಹಾಗಿಲ್ಲ! ಪ್ರತಿಯೊಂದು ಬುಡಕಟ್ಟಿಗೂ ಅದರದೇ ಆದ ಸ್ವಭಾವ ಲಕ್ಷಣಗಳು, ಧಾರ್ಮಿಕ ಕಟ್ಟುಪಾಡುಗಳು, ಸಂಪ್ರದಾಯ ನಂಬಿಕೆಗಳು ತಾಳಿನಿಂದ ತುದಿತನಕ ಭಿನ್ನವಾಗಿರುತ್ತವೆ. ಆದ್ದರಿಂದ ಪ್ರತಿಯೊಂದು ಬುಡಕಟ್ಟನ್ನೂ ಪ್ರತ್ಯೇಕವಾಗಿಯೇ ಅಧ್ಯಯನ ಮಾಡಬೇಕು. ಮಾನವಶಾಸ್ತ್ರಜ್ಞ ರೂತ್ ಬೆನಡಿಕ್ಟ್ ಹೇಳುವುದು ಇದನ್ನೇ.

'ನಮ್ಮ ಸಾಂಸ್ಕೃತಿಕ ಅಸ್ಮಿತೆಯ ಸಂಕೇತವಾದ ಗುಬ್ಬಗಳು ಮತ್ತು ತಮ್ಮ ಬುಡಕಟ್ಟಿಗೆ ಮಾತ್ರ ಮೀಸಲಾದ ಧಾರ್ಮಿಕ ಆಚರಣೆಗಳನ್ನು ಕಳೆದುಕೊಂಡರೆ, ನಾವು ಭವಿಷ್ಯದಲ್ಲಿ ದಬ್ಬಾಳಿಕೆಯ ಧರ್ಮದ ಅಡಿಯಾಳಾಗುತ್ತೇವೆ' ಎಂಬ ಅರಿವು ಕಾಡುಗೊಲ್ಲರಲ್ಲಿ ಆಳವಾಗಿ ಬೇರೂರಿದೆ. ಕಾಲ ಕಾಲಕ್ಕೆ ಸಂಸ್ಕೃತಿಯಲ್ಲಾಗುವ ರೂಪಾಂತರದ ಪ್ರಕ್ರಿಯೆಗಳು ಸಹಜವಾಗಿರುತ್ತವೆ. ಕಾಡುಗೊಲ್ಲರ ದೈವದ ಗುಬ್ಬಗಳೂ ಈ ರೂಪಾಂತರದ ಪ್ರಕ್ರಿಯೆಗೆ ಕ್ರಮೇಣ ಒಡ್ಡಿಕೊಳ್ಳುತ್ತಿವೆ.

9ನೇ ಪುಟಕ್ಕೆ...



ಗುಬ್ಬದ ಮುಂದೆ ದೈವಾರಾಧನೆ



ಆಲದ ಮರದ ಆಸರೆಯಡಿ ಗುಬ್ಬ

ಚಿತ್ರಗಳು: ನಿಸರ್ಗ ಗೋವಿಂದರಾಜು ಚಳ್ಳಕೆರೆ

ಹಸಿರ ಸೀರೆಗೆ ನೀಲಿ ಚಿತ್ತಾರದ ಕುರಿಂಜಿ

ಇನ್ನೂ ಹನ್ನೆರಡು ವರ್ಷ ಹೋದರೆ ನಾವೆಲ್ಲಾ ಬದುಕಿರುತ್ತೇವೆಯೋ, ಇಲ್ಲ ನೆಗೆದುಬಿದ್ದಿರುತ್ತೇವೆಯೋ? ಯಾರಿಗೆ ಗೊತ್ತು. ಸಿಕ್ಕ ಛಾನ್ಸು ಬಿಡಬಾರದೆಂದು ಸೀತಾಳಯ್ಯನಗಿರಿ, ಮುಳ್ಳಯ್ಯನಗಿರಿ ಮತ್ತು ಬಾಬಾಬುಡನ್‌ಗಿರಿಗೆ ಈ ಸಲ ಜನ ಮುಗಿಬಿದ್ದು ಬರುತ್ತಲೇ ಇದ್ದಾರೆ. ನೀಲಕುರಿಂಜಿ ಎಂಬ ಹೂವು ಎಷ್ಟೆಲ್ಲಾ ಮಂದಿಯನ್ನು ಹೀಗೆ ಸೂಜಿಗಲ್ಲಿನಂತೆ ಸೆಳೆಯುತ್ತಲೇ ಇದೆ.

ನೋಡಿ ಪುಟ 11



ವೈಯಕ್ತಿಕ ಅನುಭವದಲ್ಲಿ ಅದ್ದಿ ತೆಗೆದ ಸಾಮುದಾಯಿಕ ನೆನಪು

ಆತ್ಮವೃತ್ತಾಂತ-ಕಾದಂಬರಿ ಎಂದು ಕರೆಯಬಹುದಾದ ಹೊಸ ಪ್ರಕಾರದ ಕೃತಿಗಳಲ್ಲಿ ತಮ್ಮ ವೈಯಕ್ತಿಕ ನೆನಪುಗಳ ಬೇರುಗಳು, ಅಗಲಿಕೆಗಳು ಹಾಗೂ ಸಾಮೂಹಿಕ ನಿರ್ಬಂಧಗಳನ್ನು ಚಿಕಿತ್ಸಕ ನೋಟದಿಂದ ದಾಖಲಿಸುವ ಧೈರ್ಯ ತೋರಿದ ಎಂಬತ್ತೆರಡು ವರ್ಷದ ಫ್ರೆಂಚ್ ಲೇಖಕಿ ಆ್ಯನೀ ಎರ್ನೋಗೆ ಈ ಬಾರಿಯ ನೊಬೆಲ್ ಬಹುಮಾನ ದೊರೆತಿದೆ

ಕುಸುಂ

ಆ್ಯನೀ ಎರ್ನೋ ಈವರೆಗೆ ಪ್ರಕಟಿಸಿದ ಎಲ್ಲ ಕೃತಿಗಳೂ ಅವರ ಖಾಸಗಿ ಬದುಕಿನ ಪುಟಗಳೇ. ಆದರೆ ಸುತ್ತಲ ಸಮಾಜದ ಸಾಮೂಹಿಕ ಬದುಕು, ಸಾಮೂಹಿಕ ಅನುಭವ ಎರಡೂ ಈ ಪುಟಗಳಲ್ಲಿ ಬೆರೆತಿವೆ. ಎಷ್ಟರಮಟ್ಟಿಗೆ ಎಂದರೆ ಇವು ಆತ್ಮವೃತ್ತಾಂತಕ್ಕೆ ಸೀಮಿತಗೊಳ್ಳದೇ, ವೈಯಕ್ತಿಕ ಅನುಭವಗಳ ಮೂಲಕವೇ ಎರಡನೇ ಮಹಾಯುದ್ಧದ ನಂತರದ ಸಾಮಾಜಿಕ ಬದುಕು, ಪಲ್ಲಟಗಳು, ದುಡಿಯುವ ವರ್ಗದವರು ಎದುರಿಸುವ ಅವಮಾನಗಳು, ಸಂಕಟಗಳು, ಒಟ್ಟಾರೆ ಒಂದು ಕಾಲಘಟ್ಟದ ಇತಿಹಾಸವನ್ನು, ಕಳೆದ ಆರೇಳು ದಶಕಗಳ ಸಾಮುದಾಯಿಕ ನೆನಪನ್ನು ಅವರು ಕಟ್ಟಿಕೊಟ್ಟಿದ್ದಾರೆ.

ಉತ್ತರ ಫ್ರಾನ್ಸಿನ ಚಿಕ್ಕ ಪಟ್ಟಣವೊಂದರಲ್ಲಿ ಆನೀಯ ಅಪ್ಪ-ಅಮ್ಮ ಸಣ್ಣದಾದ ಗೂಡಂಗಡಿಯನ್ನು ನಡೆಸುತ್ತಿದ್ದವರು. ಅದು ದುಡಿಯುವ ವರ್ಗದವರೇ ವಾಸಿಸುತ್ತಿದ್ದ ಪ್ರದೇಶ. ಶಾಲೆಗೆ ಸೇರಿದ ಆ್ಯನೀ ಮಧ್ಯಮವರ್ಗದ ಹುಡುಗಿಯರೊಂದಿಗೆ ಮುಖಾಮುಖಿಯಾದಾಗ ತನ್ನಂತಹ ದುಡಿಯುವ ವರ್ಗದಿಂದ ಬಂದವರು ಅನುಭವಿಸುವ ಅವಮಾನದ ಅರಿವು ಮೊತ್ತಮೊದಲ ಬಾರಿಗೆ ಆಗಿತ್ತು. ಶಿಕ್ಷಕ ವೃತ್ತಿಯ ಶಿಕ್ಷಣವನ್ನು ಅರ್ಧಕ್ಕೆ ಬಿಟ್ಟ ಇಪ್ಪತ್ತು ವರ್ಷದ ಆನೀ ಲಂಡನ್ನಿಗೆ ಹೋಗಿ ಅಂಗಡಿಯೊಂದರಲ್ಲಿ ಕೆಲಸ ಮಾಡಿದಳು. ಮತ್ತೆ ಫ್ರಾನ್ಸಿಗೆ ವಾಪಾಸಾಗಿ, ಓದು ಮುಂದುವರಿಸಿ, ಆಧುನಿಕ ಸಾಹಿತ್ಯದಲ್ಲಿ ಉನ್ನತ ಪದವಿ ಪಡೆದರು. ಮೊದಲು ಕಾಲೇಜೊಂದರಲ್ಲಿ ಕಲಿಸುತ್ತಿದ್ದವರು ನಂತರ 'ನ್ಯಾಶನಲ್ ಸೆಂಟರ್ ಫಾರ್ ಡಿಸ್ಟನ್ಸ್ ಎಜುಕೇಶನ್' ಸಂಸ್ಥೆಯಲ್ಲಿ ಬೋಧಕರಾಗಿ ಕೆಲಸ ಮಾಡಿದರು.

ಆ್ಯನೀಯವರ ಮೊದಲ ಕೃತಿ 'ಕ್ಲೀನ್ಡ್ ಔಟ್' ಪ್ರಕಟವಾಗಿದ್ದು 1974ರಲ್ಲಿ. ಅದರಲ್ಲಿ ತಾನು ಹತ್ತು ವರ್ಷಗಳ ಕೆಳಗೆ ಮಾಡಿಸಿಕೊಂಡಿದ್ದ ಕಾನೂನುಬಾಹಿರ ಗರ್ಭಪಾತದ ತಲ್ಲಣವನ್ನು ಚಿತ್ರಿಸುತ್ತಲೇ, ಆ ಕಾಲಘಟ್ಟದ (ಮತ್ತು ಇಂದಿನ ಕಾಲಘಟ್ಟಕ್ಕೂ ಸಲ್ಲಬಹುದಾದ) ಬೇಡದ ಗರ್ಭವನ್ನು ಇಳಿಸಿಕೊಳ್ಳಲು ಬಯಸುವ ಎಲ್ಲ ಮಹಿಳೆಯರು ಎದುರಿಸುವ ಒಂದು ಆತ್ಯಂತಿಕ ಯಾತನೆಯನ್ನು, ಸಮಾಜದ ಕ್ರೌರ್ಯವನ್ನು ಅಕ್ಷರಗಳಲ್ಲಿ ಕಟ್ಟಿಕೊಟ್ಟಿದ್ದಾರೆ. ಈ ಕೃತಿ ಅಪಾರ ಮನ್ನಣೆಯನ್ನು ಗಳಿಸಿತು. ನಂತರ ಪ್ರಕಟವಾದ 'ಎ ಮ್ಯಾನ್ಸ್ ಪ್ಲೇಸ್' ಕೃತಿಯಲ್ಲಿ ತಂದೆತಾಯಿ ಸಾಮಾಜಿಕವಾಗಿ ಪ್ರಗತಿಯಾಗಿದ್ದು ಹಾಗೂ ತಂದೆಯೊಂದಿಗೆ ತನ್ನ ಸಂಬಂಧ, ಚಿಕ್ಕ ಪಟ್ಟಣದಲ್ಲಿ ಬೆಳೆದದ್ದು – ಇಂತಹ ಅನುಭವಗಳನ್ನು ಹೇಳುತ್ತಲೇ, ಆ ಕಾಲಘಟ್ಟದ ದುಡಿಯುವ ವರ್ಗದ ಸ್ಥಿತಿಗತಿ, ಅವರು ಅನುಭವಿಸುತ್ತಿದ್ದ ಅವಮಾನಗಳನ್ನು ಚಿತ್ರಿಸಿದ್ದಾರೆ.

ಆ್ಯನೀ ತಮ್ಮ ಕೃತಿಗಳಲ್ಲಿ ಅವರ ತಲೆಮಾರಿನವರ, ಅಪ್ಪಅಮ್ಮನ, ಮಹಿಳೆಯರ, ಅಲ್ಲಿ ಇಲ್ಲಿ ಹೊರಗೆ ಭೇಟಿಯಾದ, ಮರೆತ ಎಷ್ಟೋ ಅನಾಮಿಕರ ಬದುಕಿನ ಅನುಭವಗಳನ್ನೂ ಶೋಧಿಸುತ್ತಾರೆ. ತಮ್ಮ ವೈಯಕ್ತಿಕ ಯಾತನೆ, ದುಡಿಯುವ ವರ್ಗದವರು ಎದುರಿಸುವ ಅವಮಾನ, ಅದೇ ಅರಳುತ್ತಿದ್ದ ಲೈಂಗಿಕತೆ, ಒಲವು, ಕಾನೂನುಬಾಹಿರ ಗರ್ಭಪಾತ, ಅನಾರೋಗ್ಯ, ಸಮಯದ ಗ್ರಹಿಕೆ, ಹೀಗೆ ತೀರಾ ಖಾಸಗಿ ಎನ್ನಿಸುವ ಅನುಭವಗಳನ್ನು ಕೇವಲ ತಮ್ಮೊಬ್ಬರದು ಎಂಬಂತೆ ಅಲ್ಲದೇ, ಬೇರೆಯವರೂ ಹಂಚಿಕೊಂಡ, ಆ ಕಾಲಘಟ್ಟದ ಸಾಮಾಜಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಸಂದರ್ಭವನ್ನು ಪ್ರತಿಫಲಿಸುವ ರೀತಿಯಲ್ಲಿ ಕಟ್ಟಿಕೊಡುವುದೇ ಅವರ ಕೃತಿಗಳ ಹಿರಿಮೆ.

'ಕಾದಂಬರಿಕಾರರ ಕೆಲಸವೇ ಸತ್ಯವನ್ನು ಹೇಳುವುದು. ನಾನು ಹುಡುಕುತ್ತಿರುವ ಸತ್ಯ ಯಾವುದು ಎಂದು ನನಗೆ ಕೆಲವೊಮ್ಮೆ ಗೊತ್ತಿರುವುದಿಲ್ಲ, ಆದರೆ, ನಾನು ಸದಾ ಸತ್ಯದ ಹುಡುಕಾಟದಲ್ಲಿ ಇರುತ್ತೇನೆ ಎನ್ನುವ ಆ್ಯನೀ ಅವರಿಗೆ ನೊಬೆಲ್ ಪ್ರಶಸ್ತಿ ಸಂದಿರುವುದು ಒಂದು ಕಾಲಘಟ್ಟದ ಸಾಮುದಾಯಿಕ ನೆನಪುಗಳನ್ನೂ ಮತ್ತು ಸತ್ಯಗಳನ್ನು ಒಟ್ಟಿಗೇ ತೆರೆದಿಡುವ ಪ್ರಾಮಾಣಿಕತೆಗೆ ಸಂದ ಮನ್ನಣೆಯೂ ಹೌದು.

2000ನೇ ಇಸ್ವಿಯಲ್ಲಿ ನಿವೃತ್ತರಾದ ನಂತರ ಬರವಣಿಗೆಯಲ್ಲಿಯೇ ಸಂಪೂರ್ಣವಾಗಿ ತೊಡಗಿಸಿಕೊಂಡ ಆ್ಯನೀ 2008ರಲ್ಲಿ 'ದಿ ಇಯರ್ಸ್' ಕೃತಿಯನ್ನು ಪ್ರಕಟಿಸಿದರು. ಸುಮಾರು ಆರು ದಶಕಗಳ ಸಾಮೂಹಿಕ ಇತಿಹಾಸ ಹಾಗೂ ಖಾಸಗಿ ಬದುಕಿನ ವಿವರ ಒಂದಕ್ಕೊಂದು ಹೆಣೆದುಕೊಂಡಿದ್ದು, ತನ್ನ ವಸ್ತು ಹಾಗೂ ಹೊಸಬಗೆಯ ನಿರೂಪಣಾ ಸ್ವರೂಪದಿಂದಾಗಿ ಇದು ಅವರ ಮೇರು ಕೃತಿಯೆಂದೇ ಪರಿಗಣಿತವಾಗಿದೆ.

ಈ ಕೃತಿಯ ಭಾವತೀವ್ರತೆಯನ್ನು ತೋರಿಸುವ ಆಯ್ದಭಾಗದ ಅನುವಾದ ಇಲ್ಲಿದೆ:

* * * * *

ಯುದ್ಧ ಮತ್ತು ಹಸಿವೆ ಬಿಟ್ಟು ಇನ್ನೇನೂ ಇರಲಿಲ್ಲ

ಎಲ್ಲ ಚಿತ್ರಗಳೂ ಮರೆಯಾಗುತ್ತವೆ.

ಯುದ್ಧಾನಂತರ ಇವಿತೊ ಪಟ್ಟಣದ ಭಗ್ನಾವಶೇಷಗಳ ಅಂಚಿನಲ್ಲಿದ್ದ ಕಾಫಿ ಗೂಡಂಗಡಿಯ ಹಿಂದೆ ಹಾಡುಹಗಲೇ ಕುಕ್ಕುರುಗಾಲಿನಲ್ಲಿ ಕೂತು ಉಚ್ಚೆ ಹೊಯ್ದು, ಎದ್ದು ನಿಂತು, ಲಂಗವನ್ನು ಮೇಲೆತ್ತಿ ಒಳ ಉಡುಪನ್ನು ಮೇಲೆಳೆದುಕೊಂಡು, ನಂತರ ಗೂಡಂಗಡಿಗೆ ಮರಳಿದ ಹೆಂಗಸಿನ ಚಿತ್ರ; ದಿ ಲಾಂಗ್ ಆಬ್ಸೆನ್ಸ್ ಸಿನಿಮಾದಲ್ಲಿ ಜಾರ್ಜಸ್ ವಿಲ್ಸನ್ ಜೊತೆಗೆ ನರ್ತಿಸುತ್ತಿದ್ದ ಅಲೀಡ ವ್ಯಾಲಿಯ ಕಣ್ಣೀರು ತುಂಬಿದ ಮುಖ; 1990ರ ಬೇಸಿಗೆಯಲ್ಲಿ ಪಜುವ ನಗರದ ಪಾದಚಾರಿ ಹಾದಿಯಲ್ಲಿ ನಡೆದುಹೋದ ಮನುಷ್ಯನ ಚಹರೆ, ಭುಜದ ಬಳಿ ಕಟ್ಟಿದ್ದ ಅವನ ಕೈಗಳು ತಟ್ಟನೆ ಮೂವತ್ತು ವರ್ಷಗಳ ಹಿಂದೆ ಬಸುರಿ ಹೆಂಗಸಿಗೆ ಹೊಟ್ಟೆ ತೊಳೆಸುವುದನ್ನು ತಡೆಯಲು ಬರೆದುಕೊಟ್ಟಿದ್ದ ಥ್ಯಾಲಿಡೊಮೈಡ್ ಗುಳಿಗೆಯನ್ನು ನೆನಪಿಸುವಂತೆ ಇದ್ದವು.

ಹೊರಾಂಗಣ ವೇದಿಕೆಯಲ್ಲಿ, ಸುತ್ತಲೂ ನಿಂತ ಗಂಡಸರು ಬೆಳ್ಳಿಯ ಈಟಿಗಳಿಂದ ಮುಚ್ಚಿದ ಪೆಟ್ಟಿಗೆಯನ್ನು ಹೊರಗಿನಿಂದ ಚುಚ್ಚುತ್ತಿರುವಾಗ ಜೀವಂತವಾಗಿ ಹೊರಬರುವ ಹೆಂಗಸಿನ ಚಹರೆ;...


9ನೇ ಪುಟಕ್ಕೆ ...



ಅನನ್ಯ ಯಕ್ಷಗುರು

ಒಂದು ಕಡೆ ಯಕ್ಷಗಾನ ಕಲೆ ಪಾಮರ ರಂಜನೆಯ ಹಾದಿ ಹಿಡಿದಿರುವ ಇಂದಿನ ದಿನಗಳಲ್ಲಿ ಉಮೇಶ ಭಟ್ಟರಂತಹ ಕಲಾನಿಷ್ಠ ಕಲಾವಿದರ ಸಂಯಮದ ಬದುಕನ್ನು ಸೂಕ್ಷ್ಮವಾಗಿ ಅವಲೋಕಿಸುವವರಿಗೆ ಯಕ್ಷಗಾನ ರಂಗಭೂಮಿಯು ಎದುರಿಸುತ್ತಿರುವ ಎಲ್ಲ ಸಮಸ್ಯೆಗಳಿಗೆ ಸೂಕ್ತ ಪರಿಹಾರ ಗೋಚರಿಸಬಲ್ಲುದು

ಕಡತೋಕಾ ಗೋಪಾಲಕೃಷ್ಣ ಭಾಗವತ



ಉಮೇಶ ಭಟ್ಟ

ಸಾಧನೆ



ಎಂಬತ್ತರ ದಶಕದಲ್ಲಿ ಬಡಗುತಿಟ್ಟಿನ ಅಂದಿನ ಜನಪ್ರಿಯ ಸಾಲಿಗ್ರಾಮ ಮೇಳದಲ್ಲಿ ಜನ ಆ ಕಾಲದಲ್ಲಿ ಖ್ಯಾತಿಯ ಉತ್ತುಂಗದಲ್ಲಿದ್ದ ಕಾಳಿಂಗ ನಾವಡರ ಭಾಗವತಿಕೆಯನ್ನು ಕೇಳಲೆಂದು ಮುಗಿಬೀಳುತ್ತಿದ್ದ ದಿನಗಳು. ಆದರೆ, ಕಾಳಿಂಗ ನಾವಡರಿಗಿಂತ ಮೊದಲು ಪ್ರಸಂಗವನ್ನು ನಡೆಸುತ್ತಿದ್ದ ಸುಶ್ರಾವ್ಯ ಕಂಠಶ್ರೀಯ ಬಾಡದ ಉಮೇಶ ಭಟ್ಟರ ಪದ್ಯವು ಕೂಡ ನಂತರ ರಂಗಸ್ಥಳಕ್ಕೆ ಬರುತ್ತಿದ್ದ ನಾವಡರ ಭಾಗವತಿಕೆ ಬೇಕಾದ ಒಂದು ಆವರಣವನ್ನು ನೀಡುತ್ತಿತ್ತು.

ಇಬ್ಬರೂ ಪ್ರಾಚಾರ್ಯ ನಾರಣಪ್ಪ ಉಪ್ಪೂರರ ಗರಡಿಯಲ್ಲಿ ಪಳಗಿದವರು. ಮೈಮನಸ್ಸನ್ನು ಆವರಿಸುವ ನಾವಡರ ಕಂಠಶ್ರೀಯ ನಡುವೆಯೂ ಭಟ್ಟರ ಗಾನರಸಧಾರೆ ಸಹಸ್ರಾರು ಪ್ರೇಕ್ಷಕರಿಗೆ ಪ್ರತಿದಿನ ಕರ್ಣಾನಂದವನ್ನು ನೀಡುತ್ತಿತ್ತು. ನಾವಡರು ಅಕಾಲದಲ್ಲಿ ಹೊರಟುಹೋದರು. ನಂತರದ ದಿನಗಳೆಲ್ಲ ಮತ್ತಿನ ಸ್ತರದ ಭಾಗವತರ ನಡುವಿನ ಪೈಪೋಟಿಯ ದಿನಗಳು. ನಾವಡರು ಬಿಟ್ಟುಹೋದ ಸ್ಥಾನವನ್ನು ತುಂಬುವಲ್ಲಿ ಒಂದು ಇಡೀ ತಲೆಮಾರಿನ ಭಾಗವತರು ವಿಫಲರಾದದ್ದು ನಾವಡರ ಭೂಮ ಪ್ರತಿಭೆಗೆ ಸಾಕ್ಷಿ.

ಅನೇಕರು ತರಹೇವಾರಿ ವ್ಯಾಪಾರಿ ತಂತ್ರಗಳಿಗೆ ಶರಣಾದರು. ಆದರೆ ಉಮೇಶರು ಆ ಮಾರ್ಗವನ್ನು ತುಳಿಯಲಿಲ್ಲ. ಸಿನಿಮೀಯ ಭಾಗವತಿಕೆ ಮಾಡಲು ಬೇಕಾದ ಕಂಠಶ್ರೀಯಿದ್ದರೂ ಪಾಮರ ರಂಜನೆಯ ಹಾದಿ ಹಿಡಿಯದ ಭಟ್ಟರು 96ರವರೆಗೆ ಹಲವು ಮೇಳಗಳಲ್ಲಿ ಭಾಗವತರಾಗಿ ದುಡಿದರೂ ವ್ಯವಸಾಯೀ ಮೇಳದ ವ್ಯವಸ್ಥೆಯಿಂದ ಜಿಗುಪ್ಸೆ ಹೊಂದಿದರು; ಇನ್ನೂ ಹೆಚ್ಚು ರಚನಾತ್ಮಕವಾಗಿ ಯಕ್ಷಗಾನದ ಸೇವೆಮಾಡುವ ಉಪಾಯದ ಅನ್ವೇಷಣೆಯಲ್ಲಿ ತೊಡಗಿದರು. ಆಗ ಅವರು ಪ್ರಾರಂಭಿಸಿದುದು ಯಕ್ಷಗಾನ ತರಬೇತಿಯ ಕಾಯಕ. ಪ್ರಾಚಾರ್ಯ ನಾರಣಪ್ಪ ಉಪ್ಪೂರರ ಗಟ್ಟಿ ಪಾರಂಪರಿಕ ಹಿನ್ನೆಲೆಯುಳ್ಳ ಭಟ್ಟರು ತಮ್ಮ ಗುರುವಿನ ಆತ್ಮಕ್ಕೆ ಶಾಂತಿ ದೊರೆಯುವ ಮಾರ್ಗವನ್ನು ಹಿಡಿದರು.

ಉತ್ತರ ಕನ್ನಡದ ಕುಮಟಾ ತಾಲ್ಲೂಕಿನ ಬಾಡದಲ್ಲಿ 1957ರಲ್ಲಿ ಉಮೇಶರು ಜನಿಸಿದರು. ಅವರ ತಂದೆ ಲಕ್ಷ್ಮೀನಾರಾಯಣ ಭಟ್ಟರು ವೈದಿಕರಾಗಿದ್ದರು. ತಾಯಿ ಮಹಾದೇವಿ ಗೃಹಿಣಿ. ಬಡ ಕುಟುಂಬ. ಸಮುದ್ರ ಕಿನಾರೆಯಲ್ಲಿಯ ಉನ್ನತ ಶಿಖರದಲ್ಲಿ ರಾರಾಜಿಸುವ ಪ್ರಸಿದ್ಧ ಶ್ರೀಕಾಂಚಿಕಾಂಬಾ ದೇವಾಲಯದ ಅರ್ಚಕರಾಗಿದ್ದ ತಂದೆಯವರ ಜೊತೆ ವೈದಿಕ ವೃತ್ತಿಗಿಳಿದು ಬದುಕು ಕಟ್ಟಿಕೊಳ್ಳುವ ಧಾವಚಿತ್ತದ ತಾರುಣ್ಯದಲ್ಲಿ ಉಮೇಶರಿಗೆ ಕಡತೋಕಾ ನಾರಾಯಣ ಭಂಡಾರಿಯವರ ಪ್ರಭಾವದಿಂದ ಯಕ್ಷಗಾನ ಭಾಗವತಿಕೆಯ ಮೊದಲ ಪಾಠವೂ ಆಯಿತು. ಆ ದಿನಗಳಲ್ಲಿ ಯಕ್ಷಗಾನವನ್ನು ವ್ಯವಸ್ಥಿತವಾಗಿ ಕಲಿಯುವುದು ಸುಲಭವಾಗಿರಲಿಲ್ಲ. ದೂರದ ಉಡುಪಿ ಜಿಲ್ಲೆಯ ಹಂಗಾರಕಟ್ಟೆಯ ಕಲಾಕೇಂದ್ರದಲ್ಲಿ ಉಪ್ಪೂರರು ಯಕ್ಷಗಾನ ಕೇಂದ್ರ ನಡೆಸುತ್ತಿದ್ದರು ಅಷ್ಟೆ.

ಯಕ್ಷಗಾನದ ಯಾವ ಕೌಟುಂಬಿಕ ಹಿನ್ನೆಲೆಯೂ ಇಲ್ಲದ ಇಪ್ಪತ್ತೊಂದರ ಹುಡುಗ ಉಮೇಶ ಯಾರಿಂದಲೋ ದಾರಿ ಖರ್ಚಿಗೆ ಒಂದಿಷ್ಟು ಹಣ ಪಡೆದು ಉಡುಪಿ ಬಸ್ ಹತ್ತಿದ. ಹಂಗಾರಕಟ್ಟೆಯ ಕಲಾಕೇಂದ್ರವನ್ನು ಸೇರಿದ. ತಾನಾಗಿ ಮುನ್ನುಗ್ಗಿ ತನ್ನನ್ನು ತಾನು ತೋರಿಸಿಕೊಳ್ಳುವ ಜಾಯಮಾನದವನಲ್ಲದ ಉಮೇಶ ಎಂಬ ಹುಡುಗನ ಕಂಠಶ್ರೀ, ಧಾರೇಶ್ವರ, ನಾವಡರಂತಹ ಪಟ್ಟಶಿಷ್ಯರ ಗಡಣದ ಮಧ್ಯದಲ್ಲಿಯೂ ಪ್ರಾಚಾರ್ಯ ನಾರಣಪ್ಪ ಅವರ ಗಮನ ಸೆಳೆದುದು ಸಹಜವಾಗಿತ್ತು. ಉಡುಪಿ ತಿಟ್ಟಿನ ಮಾರ್ವಿ ಶೈಲಿಯ ಹಾಡುಗಾರಿಕೆಯಲ್ಲಿ ಭಟ್ಟರು ಪರಿಣತರಾಗಿ ಹೊರಬಂದರು.

ಇದೇ ಅವಧಿಯಲ್ಲಿ ಬಡಗುತಿಟ್ಟಿನ ಸರ್ವಶ್ರೇಷ್ಠ ಕಲಾವಿದ ಕೋಟ ವೈಕುಂಠರಿಂದ ಹೆಜ್ಜೆಗಾರಿಕೆಯನ್ನೂ ಕಲಿತ ಉಮೇಶರು ಕೇವಲ ಭಾಗವತರಲ್ಲ ನೃತ್ಯ, ಅಭಿನಯ, ಮದ್ದಳೆ ಚೆಂಡೆ ವಾದನವೆಲ್ಲವನ್ನೂ ಬಲ್ಲ ನಿಜ ಅರ್ಥದ ದಶಾವತಾರಿಯಾದರು. ವೃತ್ತಿ ಮೇಳವನ್ನು ಸೇರಿ ಭಾಗವತಿಕೆಯಿಂದಲೇ ಜೀವನವನ್ನು ಕಂಡುಕೊಳ್ಳತೊಡಗಿದರು. ಸಾಲಿಗ್ರಾಮ ಮೇಳದ ರಂಗಸ್ಥಳದಲ್ಲಿ ಭಟ್ಟರ ವೃತ್ತಿ ಜೀವನ ಮೊದಲುಗೊಂಡಿತು. ಸಾಲಿಗ್ರಾಮ ಮೇಳದ ನಂತರ ಶಿರಸಿ ಪಂಚಲಿಂಗ ಮೇಳ, ಬಚ್ಚಗಾರು ಮೇಳ, ಶಿರಸಿಯ ಮಾರಿಕಾಂಬಾ ಮೇಳ, ಮುಲ್ಕಿ ಮೇಳ, ಗೋಳಿ ಗರಡಿ ಮೇಳ, ಕುಮಟಾ ಮೇಳ, ಗುಂಡಬಾಳ ಮೇಳ ಹೀಗೆ ಹಲವು ಮೇಳಗಳಲ್ಲಿ ಎರಡು ದಶಕಗಳ ಪರ್ಯಂತ ಅವ್ಯಾಹತವಾಗಿ ಸೇವೆ ಸಲ್ಲಿಸಿದರು. 90ರ ದಶಕದಲ್ಲಿ ಬದಲಾದ ಮೇಳಗಳ ಸಂಘಟನಾ ವ್ಯವಸ್ಥೆ, ಮಿತಿಮೀರಿದ ವ್ಯಾಪಾರೀಕರಣದಿಂದ ಕಲಾನಿಷ್ಠರಾದ ಭಟ್ಟರು ವಿಚಲಿತರಾದರು. ಅದಾಗಲೇ ವಿವಾಹಿತರಾಗಿ ದೊಡ್ಡ ಸಂಸಾರವನ್ನು ನಿರ್ವಹಿಸುವ ಅನಿವಾರ್ಯತೆಯಿದ್ದರೂ ವ್ಯವಸಾಯೀ ಧೋರಣೆಗೆ ಶರಣಾಗದೇ ಯಕ್ಷಗಾನ ತರಬೇತಿ ಕೇಂದ್ರವನ್ನು ಸ್ಥಾಪಿಸುವ ಅನನ್ಯ ಮಾರ್ಗವನ್ನು ಕಂಡುಕೊಂಡರು. ಅದಾಗಲೇ ಬಾಡದಿಂದ ಕಡತೋಕಾಕ್ಕೆ ತಮ್ಮ ವಸತಿಯನ್ನು ಸ್ಥಳಾಂತರಿಸಿದ್ದ ಭಟ್ಟರು ತಮ್ಮ ಸುತ್ತಮುತ್ತಲಿನ ಸ್ನೇಹಿತರ ಸಹಾಯದಿಂದ ಚಿಣ್ಣರ ಮೇಳವೆಂಬ ಮಕ್ಕಳ ಮೇಳ ಮತ್ತು ತರಬೇತಿ ಕೇಂದ್ರವನ್ನು 1995ರಲ್ಲಿ ಪ್ರಾರಂಭಿಸಿದರು.

ಗಲ್ಲಿ ಗಲ್ಲಿಗಳಲ್ಲಿ ಇಂದು ಯಕ್ಷಗಾನ ತರಬೇತಿ ನಡೆಯುತ್ತಿವೆ. ಆದರೆ, ಭಟ್ಟರು ಚಿಣ್ಣರ ಮೇಳವನ್ನು ಪ್ರಾರಂಭಿಸುವಾಗ ಉತ್ತರ ಕನ್ನಡದ ಪರಿಸರದಲ್ಲಿ ಗುಣವಂತೆಯ ಶ್ರೀಮಯ ಕಲಾಕೇಂದ್ರ ಮತ್ತು ಹೊಸ್ತೋಟ ಭಾಗವತರ ಅನೌಪಚಾರಿಕ ತರಬೇತಿಯ ವ್ಯವಸ್ಥೆಯನ್ನು ಬಿಟ್ಟರೆ ಉಳಿದಂತೆ ಹವ್ಯಾಸಿಗಳಿಗೆ ಮತ್ತು ಮಕ್ಕಳಿಗೆ ಯಕ್ಷಗಾನವನ್ನು ಶಾಸ್ತ್ರೋಕ್ತವಾಗಿ ಕಲಿಯುವ ಸರಿಯಾದ ವ್ಯವಸ್ಥೆಯಿರಲಿಲ್ಲ. ಗುಣವಂತೆಯ ಶ್ರೀಮಯ ಕಲಾಕೇಂದ್ರದಲ್ಲಿ ಪೂರ್ಣ ಪ್ರಮಾಣದಲ್ಲಿ ವೃತ್ತಿಯಲ್ಲಿ ತೊಡಗಿಸಿಕೊಳ್ಳುವವರಿಗೆ ಮಾತ್ರ ವ್ಯವಸ್ಥೆಯಿದ್ದರೆ, ಹೊಸ್ತೋಟರಿಗೆ ತಮ್ಮದೇ ಆದ ಕೇಂದ್ರವಿರಲಿಲ್ಲ- ಅವರು ಉಳಿದುಕೊಂಡಲ್ಲಿಯೇ ತರಬೇತಿ ನಡೆಯುತ್ತಿತ್ತು.

ಈ ಕಾಲಘಟ್ಟದಲ್ಲಿ ಹೊನ್ನಾವರ ಕುಮಟಾ ಪರಿಸರದಲ್ಲಿ ಸಂಗೀತ-ಭರತನಾಟ್ಯದ ಮಾದರಿಯಲ್ಲಿ ಆಸಕ್ತ ಪಾಲಕರಿಗೆ ತಮ್ಮ ಮಕ್ಕಳಿಗೆ ಯಕ್ಷಗಾನ ತರಬೇತಿ ಕೊಡಿಸಲು ಮತ್ತು ಹವ್ಯಾಸಿಗಳಿಗೆ ಭಾಗವತಿಕೆ, ಹೆಜ್ಜೆಗಾರಿಕೆಯನ್ನು ಕಲಿಯಲು ಭಟ್ಟರ ಚಿಣ್ಣರ ಮೇಳ ಮತ್ತು ತರಬೇತಿ ಕೇಂದ್ರ ಸೂಕ್ತ ಅವಕಾಶವನ್ನು ನೀಡಿತು. ಒಂದೆರಡು ವರ್ಷಗಳಲ್ಲಿ ಅವರ ಚಿಣ್ಣ ಶಿಷ್ಯರು ರಾಜ್ಯದ ಅನೇಕ ಕಡೆಗಳಲ್ಲಿ ಪ್ರದರ್ಶನ ನೀಡಿ ಸೈಯೆನಿಸಿಕೊಂಡರು; ಮೇಳದಲ್ಲಿ ಪದ್ಯವೊಂದನ್ನು ಮೆಚ್ಚಿ ಪ್ರೇಕ್ಷಕರಿಂದ ಬಂದ ಪ್ರಶಂಸೆಯಿಂದ ದೊರೆಯಬಹುದಾದ ಧನ್ಯತೆಯ ಇಮ್ಮಡಿ ಧನ್ಯತೆಯನ್ನು ಭಟ್ಟರು ಅನುಭವಿಸಿದರು.

ಭಟ್ಟರ ಶಿಷ್ಯರಲ್ಲಿ ಮಕ್ಕಳು ಮಾತ್ರವಲ್ಲ, ಸಮಾಜದ ಬೇರೆ ಬೇರೆ ಕ್ಷೇತ್ರದಲ್ಲಿ ಸೇವೆ ಸಲ್ಲಿಸುವ ವೈದ್ಯರು, ವಕೀಲರು, ತಂತ್ರಜ್ಞರು, ಉಪನ್ಯಾಸಕರೆಲ್ಲ ಬಂದರು. ಭಟ್ಟರು ಇದಕ್ಕೆಲ್ಲ ಹೆಚ್ಚಿನ ಸಂಭಾವನೆಯನ್ನು ಪಡೆದವರಲ್ಲ- ಮಕ್ಕಳು ಕುಣಿಯುವುದನ್ನು ನೋಡಿ ಸಾರ್ಥಕತೆಯನ್ನು ಅನುಭವಿಸುವುದರಲ್ಲಿಯೇ ತೃಪ್ತರಾಗುತ್ತಾ ಬಂದರು. ಭಟ್ಟರ ಪತ್ನಿ ಮಹಾಲಕ್ಷ್ಮಿಯವರು ಕಲಿಯಲು ಬರುವವರಿಗೆಲ್ಲ ಆದರಾತಿಥ್ಯ ಮಾಡುವುದರಲ್ಲಿಯೇ ಅತೀವ ಸಂತೋಷವನ್ನು ಕಾಣತೊಡಗಿದರು. ಭಟ್ಟರ ಮನೆ ಯಕ್ಷಗಾನ ಕೇಂದ್ರವೇ ಆಗಿ ಪರಿವರ್ತನೆಯಾಯಿತು.

ಇತ್ತ ಯಕ್ಷಗಾನದ ಮುಖ್ಯ ವಾಹಿನಿಯಲ್ಲಿ ಏನೇನೋ ಅಲ್ಲೋಲ ಕಲ್ಲೋಲಗಳು ನಡೆಯುತ್ತಿದ್ದರೂ ಅವುಗಳಿಂದ ಒಂದಿನಿತೂ ವಿಚಲಿತರಾಗದ ಭಟ್ಟರು ತಮ್ಮ ಕಲಿಸುವ ಕಾಯಕವನ್ನು ಯಾವ ಪ್ರಚಾರದ ಗೀಳಿಲ್ಲದೇ ಮುಂದುವರಿಸಿಕೊಂಡು ಬಂದರು. ಅವರನ್ನು ಈಗ ಯಕ್ಷಗಾನ ಅಕಾಡೆಮಿಯ 'ಗೌರವ ಪ್ರಶಸ್ತಿ' ಹುಡುಕಿಕೊಂಡು ಬಂದಿದೆ. ತಮ್ಮ ಗುರುಗಳಿಗೆ ಇಂತಹ ಉನ್ನತ ಗೌರವ ಸಂದಾಯವಾದಾಗ ಭಟ್ಟರಿಗಿಂತಲೂ ಅವರ ಶಿಷ್ಯರಿಗೆ ಸಂಭ್ರಮವೋ ಸಂಭ್ರಮ. ಈ ಸಂಭ್ರಮದ ಭಾಗವಾಗಿ ಶಿಷ್ಯರೆಲ್ಲ ಸೇರಿ ಅ. 15ರಂದು ಹಳದೀಪುರದಲ್ಲಿ ಅದ್ದೂರಿಯ ಗುರುವಂದನೆಯನ್ನು ಹಮ್ಮಿಕೊಂಡಿದ್ದಾರೆ. ಆ ದಿನ ನೂರಾರು ಜನ ಶಿಷ್ಯರು ಯಕ್ಷಗಾನ ಪ್ರದರ್ಶನವನ್ನು ಪ್ರದರ್ಶಿಸಿ ಭಟ್ಟರ ಕಲಾಸೇವೆಯನ್ನು ಪ್ರಾಯೋಗಿಕವಾಗಿ ನಿರೂಪಿಸಲಿದ್ದಾರೆ.



ಗುಬ್ಬದ ಮುಂದೆ ಪೂಜಾರಿ

ದೈವದ ಗುಬ್ಬ

8ನೇ ಪುಟದಿಂದ...

ಗುಬ್ಬಗಳ ಜಾಗದಲ್ಲಿ 'ದೇವಾಲಯ'ಗಳು ತಲೆಯೆತ್ತುತ್ತಿವೆ. ಈ ಸಂಬಂಧವಾಗಿ ಚಿತ್ರದುರ್ಗಕ್ಕೆ ಸಮೀಪದ ಚಿಕ್ಕೋನಹಳ್ಳಿ ಗೊಲ್ಲರಹಟ್ಟಿಯ ಹಿರಿಯ ಪೂಜಾರಪ್ಪನನ್ನು ನಾನು ಮತ್ತು ನಿಸರ್ಗ ಗೋವಿಂದರಾಜು ಮಾತನಾಡಿಸಿದಾಗ 'ಕಲ್ಲಿನ ಗುಡಿ ಕಲ್ಲಿನಂಗಿರ್ತದೆ; ಹುಲ್ಲಿನ ಗುಡಿ ಹೂವಿನಂಗೆ ಇರ್ತದೆ' ಎಂದು ನಿಭಾವ್ರುಕರಾಗಿ ಹೇಳಿದರು. ಇದೇ ಪ್ರಶ್ನೆಗೆ ರಾಯದುರ್ಗ ಗಡಿಭಾಗದ ಹೊಸೂರು ಗೊಲ್ಲರಹಟ್ಟಿಯ ಹಿರಿಯ ಮಹಿಳೆ ಹೇಳಿದ ಮಾತು ಇನ್ನೂ ಕುತೂಹಲಕರವಾಗಿತ್ತು 'ದೀಪ ಹಳೆಯದಾಯಿತು ಅಂತ ಎಸೆಯಕ್ಕಾದೀತೆ?' ಎಂದು ನಮಗೇ ಮರು ಪ್ರಶ್ನಿಸಿದರು! ಈ ಮಾತು ಹೆಚ್ಚು ಅಲಂಕಾರಿಕವಾಗಿಯೂ ಮತ್ತು ರೂಪಾತ್ಮಕವಾಗಿಯೂ ಇತ್ತು. ಅವರಿಬ್ಬರ ಮಾತುಗಳು ವ್ಯಕ್ತಿಯೊಬ್ಬನ ಮಾತೋ ಅಥವಾ ಕಾಡುಗೊಲ್ಲ ಸಮುದಾಯದ ಅಂತರಾಳದ ಮಾತೋ ನನಗೆ ತಿಳಿಯಲಿಲ್ಲ! ಆದರೆ ದೈವದ ಗುಬ್ಬಗಳನ್ನು ಕುರಿತ ಅವರ ಅಲಂಕಾರಿಕವಾದ ಮಾತು ಹೆಚ್ಚು ಭಾರವಾಗಿತ್ತು.

ಗೋವಿಂದರಾಜು ಅವರು ಕಳೆದ ಕೆಲವು ವರ್ಷಗಳಿಂದ ನಾಡಿನಾದ್ಯಂತ ಸಾವಿರಾರು ಕಿಲೋಮೀಟರ್ ಸುತ್ತಿ, ಕರ್ನಾಟಕದಲ್ಲಿರುವ ಕಾಡುಗೊಲ್ಲರ ಗುಬ್ಬಗಳನ್ನು ಕುರಿತು ಅರಿವು ಮೂಡಿಸುತ್ತಾ ಫೋಟೊ ದಾಖಲೀಕರಣ ಮಾಡುತ್ತಿದ್ದಾರೆ. ಅವರ ಬಳಿ ಈಗ ನೋಡಲೂ ಸಿಗದ ನೂರಾರು ಗುಬ್ಬಗಳ ಅಪೂರ್ವ ಛಾಯಾಚಿತ್ರಗಳಿವೆ.

ಈ ಬಗೆಯ ಅರಿವಿನಿಂದಾಗಿಯೇ ಕಾಡುಗೊಲ್ಲರ ಸಾಂಸ್ಕೃತಿಕ ಸಂಪತ್ತಿನ 'ಅಕ್ಷಯ ನಿಧಿ'ಗಳಂತಿರುವ ಗುಬ್ಬಗಳು ಇನ್ನೂ ಹಟ್ಟಿಗಳಲ್ಲಿ ಉಳಿದುಕೊಂಡುಬಂದಿವೆ. 'ಬದಲಾವಣೆ' ನಾಗರಿಕತೆಯ ಸಹಜ ಸ್ಥಿತಿ ಎಂದು ಹೇಳುವಾಗಲೂ, ಈ ಬದಲಾವಣೆ ಎಂಬುದು ಸಿಹಿ ಲೇಪನದ ವಿಷ ಎಂಬುದನ್ನು ಕಾಡುಗೊಲ್ಲರು ಮರೆತಿಲ್ಲ.



ವೈಯಕ್ತಿಕ ಅನುಭವದಲ್ಲಿ ಅದ್ದಿ...

8ನೇ ಪುಟದಿಂದ...

ಕ್ಯಾಂಪ್‌ಗಳಿಂದ ಹೊರದೂಡುವ ಮೊದಲು ಅಧಿಕಾರಿಗಳು ತೆಗೆದ ನೂರಾರು ಭಯಬೀತ ಮುಖಗಳ ಫೋಟೊ... ನಿದ್ರಿಸುವ ತನಕ ಉದ್ದಕ್ಕೂ ನಮ್ಮನ್ನು ಹಿಂಬಾಲಿಸುವ, ನೈಜ ಅಥವಾ ಕಾಲ್ಪನಿಕ ಚಿತ್ರಗಳು. ತಮಗಷ್ಟೇ ಸೇರಿದ ಬೆಳಕಿನಲ್ಲಿ ಅದ್ದಿತೆಗೆದ ಕ್ಷಣವೊಂದರ ಚಿತ್ರಗಳು.

ಏಕಕಾಲಕ್ಕೆ ಈ ಎಲ್ಲ ಚಿತ್ರಗಳೂ ಕಣ್ಮರೆಯಾಗುತ್ತವೆ.

ಅರೆಶತಮಾನದ ಹಿಂದೆ ಸತ್ತುಹೋದ ಅಜ್ಜ ಅಜ್ಜಿಯರ ಮತ್ತು ಈಗ ಸತ್ತಿರುವ ಅಪ್ಪ ಅಮ್ಮನ ಹಣೆನೆರಿಗೆಯ ಹಿಂದೆ ಅಡಗಿದ ಲಕ್ಷಾಂತರ ಚಿತ್ರಗಳಂತೆ. ಆ ಚಿತ್ರಗಳಲ್ಲಿ, ನಾವು ಹುಟ್ಟುವ ಮೊದಲೇ ತೀರಿಹೋದವರ ನಡುವೆ ಚಿಕ್ಕ ಹುಡುಗಿಯರಂತೆ ನಾವು ಕಾಣಿಸಿಕೊಳ್ಳುತ್ತೇವೆ; ನಮ್ಮದೇ ನೆನಪುಗಳಲ್ಲಿ ನಮ್ಮ ತಂದೆತಾಯಿಯರು, ಸಹಪಾಠಿಗಳ ನೆನಪುಗಳ ನಂತರ ನಮ್ಮ ಚಿಕ್ಕ ಮಕ್ಕಳು ಇರುವಂತೆ. ಮತ್ತು ಒಂದು ದಿನ ನಾವೆಲ್ಲರೂ ನಮ್ಮ ಮಕ್ಕಳ ನೆನಪುಗಳಲ್ಲಿ ಅವರ ಮೊಮ್ಮಕ್ಕಳು ಹಾಗೂ ಇನ್ನೂ ಹುಟ್ಟೇ ಇರದ ಜನರ ನಡುವೆ ಕಾಣಿಸಿಕೊಳ್ಳುತ್ತೇವೆ. ಲೈಂಗಿಕ ಕಾಮನೆಯಂತೆ ನೆನಪು ಎಂದೂ ನಿಲ್ಲುವುದಿಲ್ಲ. ಅದು ಸತ್ತಿರುವುದನ್ನು ಜೀವಂತವಿರುವುದರೊಂದಿಗೆ, ವಾಸ್ತವವನ್ನು ಕಾಲ್ಪನಿಕ ಸ್ಥಿತಿಯೊಂದಿಗೆ, ಕನಸುಗಳನ್ನು ಇತಿಹಾಸದೊಂದಿಗೆ ಜೊತೆಯಾಗಿಸುತ್ತಲೇ ಇರುತ್ತದೆ.

ಸಾವಿರಾರು ಪದಗಳು ತಟ್ಟನೆ ಅಳಿಸಿಹೋಗುತ್ತವೆ.

ವಸ್ತುಗಳು, ಮುಖಗಳು, ಕ್ರಿಯೆಗಳು, ಭಾವನೆಗಳನ್ನು ಹೆಸರಿಸಲು ಬಳಸುವ, ವಿಶ್ವವನ್ನು ಕ್ರಮಬದ್ಧವಾಗಿಡುವ, ಹೃದಯ ಬಡಿಯುವಂತೆ ಮಾಡುವ ಪದಗಳು ಅವು.

ಘೋಷಣೆಗಳು, ಸಾರ್ವಜನಿಕ ಶೌಚಾಲಯಗಳ ಮೇಲೆ, ರಸ್ತೆ ಬದಿ ಗೋಡೆಯ ಮೇಲೆ ಗೀರಿದ ಚಿತ್ರಗಳು, ಕವನಗಳು, ಕೊಳಕು ಕಥೆಗಳು, ಶೀರ್ಷಿಕೆಗಳು; ನಾವು ಹದಿಹರೆಯಲ್ಲಿದ್ದಾಗ ನೋಟ್‌ಪುಸ್ತಕಗಳಲ್ಲಿ ಕಾಪಿ ಮಾಡಿದ ವ್ಯಾಕರಣ ಪುಸ್ತಕದ ಉದಾಹರಣೆಗಳು, ಉಲ್ಲೇಖಗಳು, ಅವಮಾನಗಳು, ಹಾಡುಗಳು, ವಾಕ್ಯಗಳು; ಹಿಂದೆ ಮುಂದೆ ಯೋಚಿಸದೇ ಬೇರೆಯವರು ಬಳಸುವ, ನಾವೆಂದಾದರೂ ಹಾಗೆ ಬಳಸಲು ಸಾಧ್ಯವೇ ಎಂದು ನಾವು ಅನುಮಾನಿಸುವ ಪದಗುಚ್ಛಗಳು; ಮರೆತೇಬಿಟ್ಟ ಭಯಾನಕ ವಾಕ್ಯಗಳು; ಹಾಸಿಗೆ ಯಲ್ಲಿರುವ ಗಂಡಸರ ಪದಗಳು, 'ನಾನು ನಿನ್ನ ವಸ್ತು, ನಿನ್ನಿಷ್ಟದಂತೆ ಮಾಡು'; 2001ರ ಸೆಪ್ಟೆಂಬರ್ 11ರಂದು ನೀನೇನು ಮಾಡುತ್ತಿದ್ದೆ...

ಈ ಎಲ್ಲ ಪದಗಳೂ ಒಂದೇ ಸೆಕೆಂಡಿನಲ್ಲಿ ಅಳಿಸಿಹೋಗುತ್ತವೆ.

ತೊಟ್ಟಿಲು ಹಾಗೂ ಮರಣಶಯ್ಯೆಯ ನಡುವೆ ಗುಡ್ಡೆಹಾಕಿದ ಪದಗಳ ನಿಘಂಟನ್ನು ತೆಗೆದುಹಾಕಲಾಗಿದೆ. ಅಲ್ಲಿರುವುದು ಬರಿಯ ಮೌನ, ಅದನ್ನು ಹೇಳಲೂ ಪದಗಳಿಲ್ಲ. ತೆರೆದ ಬಾಯಿಯಿಂದ ಯಾವುದೇ ಪದ ಹೊರಬರುತ್ತಿಲ್ಲ. ವಿಶ್ವವನ್ನು ಪದಗಳೊಳಗೆ ಇಡುವುದನ್ನು ಭಾಷೆಯು ಮುಂದುವರಿಸುವುದು. ರಜಾದಿನದಂದು ಮೇಜಿನ ಸುತ್ತ ನಡೆಯುವ ಸಂಭಾಷಣೆಗಳಲ್ಲಿ, ದೂರದ ತಲೆಮಾರಿನ ಅಗಾಧ ಅನಾಮಧೇಯತೆಯೊಳಗೆ ಮರೆಯಾಗುವವರೆಗೂ, ನಾವು ಚಹರೆಯಿಲ್ಲದ ಬರಿಯ ಮೊದಲ ಹೆಸರಾಗಿ ಉಳಿಯುತ್ತೇವೆ.

ಯುದ್ಧಾನಂತರ ರಜೆಯ ಮಧ್ಯಾಹ್ನಗಳಲ್ಲಿ, ನಿಧಾನವಾಗಿ ಉಣ್ಣುವಾಗ ಅದೆಲ್ಲಿಂದಲೋ ಕಾಣಿಸಿಕೊಂಡು, ಅದು ರೂಪು ತಳೆಯಿತು, ತಂದೆತಾಯಿಯರು ದಿಟ್ಟಿಸಿ ನೋಡುತ್ತ, ನಾವು ಕೇಳಿದ್ದಕ್ಕೆ ಅವರು ಉತ್ತರಿಸಲು ಮರೆತಾಗ, ಆ ಸಮಯ ಅದಾಗಲೇ ಶುರುವಾಗಿತ್ತು, ಅದು ನಾವು ಇಲ್ಲದ ಸಮಯ, ನಾವೆಂದೂ ಇರಲಾಗದ ನಮಗಿಂತ ಮುಂಚಿನ ಸಮಯ. ಅತಿಥಿಗಳ ಧ್ವನಿಗಳು ಒಂದಾಗಿ ಹೊರಹೊಮ್ಮಿ ಸಾಮೂಹಿಕ ಘಟನೆಗಳ ಅಗಾಧ ಕಥಾನಕವನ್ನು ರಚಿಸಿತು, ಕೊನೆಗೆ ನಾವೂ ಅದನ್ನು ಕಂಡಿದ್ದೇವೆ ಎಂದು ನಂಬುವಂತಾಯಿತು. 1942ರ ಚಳಿಗಾಲ, ಮೂಳೆ ಕೊರೆಯುವ ತಂಪು, ಹಸಿವು ಹಾಗೂ ಗೆಡ್ಡೆಗೆಣಸು, ರೇಷನ್ ಮತ್ತು ಹೊಗೆಸೊಪ್ಪಿನ ವೋಚರ್‌ಗಳು, ಗುಂಡಿನ ದಾಳಿಗಳ ಕುರಿತು ದಣಿವಿಲ್ಲದಂತೆ ಅವರು ಮಾತನಾಡಿದರು.

ಉತ್ತರ ಧ್ರುವಪ್ರಭೆಯು ಯುದ್ಧದ ಮುನ್ಸೂಚನೆಯನ್ನು ಸಾರಿದ್ದು; ದೊಂಬಿಯ ಸಮಯದಲ್ಲಿ ರಸ್ತೆಯಲ್ಲಿದ್ದ ಸೈಕಲ್ಲುಗಳು, ಗಾಡಿಗಳು, ಲೂಟಿಯಾದ ಅಂಗಡಿಗಳು; ಭಗ್ನಾವಶೇಷಗಳಲ್ಲಿ ತಮ್ಮ ಫೋಟೊ ಹಾಗೂ ಹಣವನ್ನು ಹುಡುಕುತ್ತಿರುವ ಸಂತ್ರಸ್ತರು; ಜರ್ಮನ್ನರು ಬಂದಿದ್ದು - ಎಲ್ಲಿಂದ ಯಾವ ನಗರಕ್ಕೆ ಅವರು ಬಂದಿಳಿದರು ಎಂಬುದನ್ನು ಮೇಜಿನ ಮುಂದೆ ಕೂತ ಪ್ರತಿ ವ್ಯಕ್ತಿಯೂ ಸರಿಯಾಗಿ ಹೇಳಬಲ್ಲವರಾಗಿದ್ದರು - ಇಂಗ್ಲಿಷರು ಸದಾ ವಿನಯಶೀಲರು, ಅಮೆರಿಕನ್ನರು ದುಡುಕಿನ ಮಂದಿ; ಪ್ರಾಪಗಾಂಡ; ಹಳ್ಳಿಯ ಹೆಂಗಸರು ಜರ್ಮನ್ನರೇ ತುಂಬಿದ್ದ ರೈಲಿನ ಬೋಗಿಯೊಂದರ ಕಿಟಕಿಯನ್ನು ಮುರಿದು, ಜೋರುಧ್ವನಿಯಲ್ಲಿ ಸಾರಿದರು, 'ನಮಗೆ ಇದನ್ನು ಹೇಳಲು ಅಸಾಧ್ಯವಾದರೆ, ಅವರಿಗೆ ಇದರ ವಾಸನೆ ಬಡಿಯುವಂತೆ ಮಾಡುತ್ತೇವೆ'.

ಅದು ಹಿಂಸೆ, ವಿನಾಶ ಮತ್ತು ಸಾವು ನೋವುಗಳು ತುಂಬಿದ ಕಥೆ.

ನಡುನಡುವೆ ಸುಳ್ಳು ಹೆಣೆದು, 'ಮತ್ತೆಂದೂ ಇಂಥದು ನಡೆಯಬಾರದು' ಎಂಬ ಸ್ಫೂರ್ತಿದಾಯಕ, ಗಂಭೀರ ಮಾತಿನೊಂದಿಗೆ ಉಲ್ಲಾಸದಿಂದ ನಿರೂಪಿಸಿದ ಕಥಾನಕ. ಆದರೆ, ಅವರು ತಾವು ನೋಡಿದ್ದರ ಕುರಿತು ಮತ್ತು ಕುಡಿಯುವಾಗ, ತಿನ್ನುವಾಗ ಪುನಃ-ಅನುಭವಿಸಬಹುದಾದ ಘಟನೆಗಳ ಬಗ್ಗೆ ಮಾತ್ರವೇ ಮಾತನಾಡಿದರು. ಅವರಿಗೆ ಚೆನ್ನಾಗಿ ಗೊತ್ತಿದ್ದ, ಆದರೆ ಕಣ್ಣಾರೆ ಕಾಣದಿದ್ದ ಸಂಗತಿಗಳ ಕುರಿತು ಮಾತನಾಡುವ ಪ್ರತಿಭೆ ಹಾಗೂ ಗಾಢನಂಬಿಕೆ ಅವರಲ್ಲಿ ಇರಲಿಲ್ಲ. ಹೀಗಾಗಿ ಆಶ್‌ವಿಟ್ಜ್ ಕ್ಯಾಂಪಿಗೆ ರೈಲು ಹತ್ತಿದ ಯಹೂದಿ ಮಕ್ಕಳಾಗಲೀ ಅಥವಾ ವಾರ್ಸಾ ಘೆಟ್ಟೋದಿಂದ ಪ್ರತಿ ಬೆಳಿಗ್ಗೆ ಸಂಗ್ರಹಿಸುತ್ತಿದ್ದ ಹಸಿವೆಯಿಂದ ಸತ್ತವರ ಶವಗಳಾಗಲೀ ಅಥವಾ ಹಿರೋಶಿಮಾದ 10,000 ಡಿಗ್ರಿ ಉಷ್ಣತೆಯಲ್ಲಿ ಬೆಂದವರಾಗಲೀ ಆ ಮಾತುಕತೆಯಲ್ಲಿ ಇರುತ್ತಿರಲಿಲ್ಲ.



ಕ್ರಿಮಿಯಾದ ಯುದ್ಧ, 1870ರಲ್ಲಿ ಜರ್ಮನ್ನರು ಪ್ಯಾರಿಸ್ ವಶಪಡಿಸಿಕೊಂಡಿದ್ದು, ಆಗ ಪ್ಯಾರಿಸ್ಸಿಗರು ಇಲಿಯನ್ನು ತಿಂದು ಬದುಕುಳಿದಿದ್ದು, ಹೀಗೆ ಅವರು ತಾವು ಹುಟ್ಟುವುದಕ್ಕಿಂತ ಮೊದಲಿನ ಕಾಲಘಟ್ಟಕ್ಕೂ ಸಾಗಿದರು.

ಅವರು ಮಾತನಾಡಿದ ಆ ಮೊದಲಿನ ಕಾಲದಲ್ಲಿ ಯುದ್ಧ ಮತ್ತು ಹಸಿವೆ ಬಿಟ್ಟು ಇನ್ನೇನೂ ಇರಲಿಲ್ಲ.

ಮುನ್ನೋಟ 09-10-2022 ರಿಂದ 15-10-2022

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1

ಕೈಗೊಂಡ ಯೋಜನೆಗಳಿಗೆ ಬೇಕಾದ ಆರ್ಥಿಕ ಸಹಾಯ ಒದಗಿಬರುತ್ತದೆ. ಆದರೆ ಮಧ್ಯದಲ್ಲಿ ಆಗುವ ಹಣ ಸೋರಿಕೆ ತಡೆಗಟ್ಟಿರಿ. ಮಂಗಳ ಕಾರ್ಯಗಳನ್ನು ಮಾಡಲು ಸಾಕಷ್ಟು ತಯಾರಿ ಮಾಡುವಿರಿ. ವೃತ್ತಿರಂಗದಲ್ಲಿ ಸಮಾಧಾನವನ್ನು ಹೊಂದುವಿರಿ. ವೃತ್ತಿಯಲ್ಲಿ ನಯವಂಚಕರ ಜಾಡನ್ನು ಭೇದಿಸುವಿರಿ. ಸಂಗೀತ ಕ್ಷೇತ್ರದಲ್ಲಿರುವವರಿಗೆ ಸಾಕಷ್ಟು ಮನ್ನಣೆ ದೊರೆಯುತ್ತದೆ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2

ನಿಮ್ಮ ಗುರಿಸಾಧನೆಗಾಗಿ ತಾಳ್ಮೆ ವಹಿಸುವುದು ಅತಿ ಅಗತ್ಯ. ಯಾರದೋ ಟೀಕೆಗಳಿಗೆ ಗಮನಹರಿಸದಿರುವುದು ಉತ್ತಮ. ಕಾರ್ಖಾನೆಯಲ್ಲಿ ಕಂಡುಬರುವ ತೊಂದರೆಗಳಿಗಾಗಿ ತಜ್ಞರ ಸಲಹೆಯನ್ನು ಪರಿಗಣಿಸುವುದು ಉತ್ತಮ. ಕೋರ್ಟ್ ಕಚೇರಿ ಕೆಲಸಗಳಲ್ಲಿ ಮುನ್ನಡೆ ಇರುತ್ತದೆ. ಉದ್ಯೋಗ ಕ್ಷೇತ್ರದಲ್ಲಿ ಹಿತಶತ್ರುಗಳ ಕಾಟವನ್ನು ಎದುರಿಸಬೇಕಾದೀತು. ಮಹಿಳಾ ಉದ್ಯಮಿಗಳಿಗೆ ಯಶಸ್ಸಿನ ದಿನಗಳು ಹತ್ತಿರದಲ್ಲಿವೆ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3

ಇಚ್ಛಾಶಕ್ತಿಯ ಬಲದಿಂದ ಆರಂಭಿಸಿದ ಕೆಲಸಗಳು ಉತ್ತಮ ಫಲಿತಾಂಶವನ್ನು ಕೊಡುತ್ತವೆ. ನೆರೆಹೊರೆಯವರೊಡನೆ ಉತ್ತಮ ಬಾಂಧವ್ಯ ಬೆಳೆದು ಸಂತಸ ವಾಗುತ್ತದೆ. ಹಂತಹಂತವಾಗಿ ಕಂಡುಬರುವ ಅಭಿವೃದ್ಧಿಯು ಮನಸ್ಸಿಗೆ ಮುದ ನೀಡುತ್ತದೆ. ಸಂಗಾತಿಯ ಜೊತೆ ವಿಹಾರಕ್ಕಾಗಿ ಹೋಗುವ ಸಂದರ್ಭವಿದೆ. ಹಿರಿಯರೊಡನೆ ವಾದ-ವಿವಾದದ ಬದಲಾಗಿ ಸ್ವಲ್ಪ ಸಂಯಮ ತೋರುವುದು ಬಹಳ ಒಳ್ಳೆಯದು.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ

ಆದಾಯದ ಹೊಸ ದಾರಿ ಗೋಚರಿಸಿ ಆರ್ಥಿಕತೆಯ ಬಗ್ಗೆ ತೃಪ್ತಿಪಡುವಿರಿ. ರಾಜಕೀಯವನ್ನು ಸೇರಬೇಕೆನ್ನುವವರಿಗೆ ಅದನ್ನು ಸೇರುವ ಬಗ್ಗೆ ಸೂಕ್ತ ತಿಳಿವಳಿಕೆ ಮತ್ತು ಮಾರ್ಗದರ್ಶನ ದೊರೆಯುತ್ತದೆ. ಕೆಲವರಿಗೆ ಸಾರ್ವಜನಿಕ ಜೀವನದಲ್ಲಿ ಉನ್ನತ ಸ್ಥಾನ ಪಡೆಯುವ ಯೋಗವಿದೆ. ವೈಯಕ್ತಿಕ ಆರೋಗ್ಯದ ಕುರಿತು ಹೆಚ್ಚಿನ ಕಾಳಜಿ ವಹಿಸಿರಿ. ವಿದ್ಯಾರ್ಥಿಗಳಿಗೆ ಉತ್ತಮ ಸಾಧನೆಯ ಕಾಲ.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1

ಜಾಣ್ಮೆಯಿಂದ ಕಷ್ಟಸಾಧ್ಯವಾದ ಕೆಲಸವನ್ನು ಸಾಧಿಸಿ ಅಧಿಕಾರ ಪ್ರಾಪ್ತಿಯನ್ನು ಪಡೆಯುವಿರಿ. ಆರ್ಥಿಕ ಸ್ಥಿತಿಯು ನಿಮ್ಮ ಅಗತ್ಯವನ್ನು ಪೂರೈಸುವಷ್ಟು ಇರುತ್ತದೆ. ನೆರೆಹೊರೆಯವರೊಡನೆ ಸಣ್ಣ ವಿಚಾರಗಳಿಗಾಗಿ ಕಲಹ ಮಾಡುವುದು ಬೇಡ. ಹಿರಿಯರ ಆರೋಗ್ಯ ನಿರ್ವಹಣೆಗಾಗಿ ಹಣ ಖರ್ಚು ಮಾಡಬೇಕಾಗಬಹುದು. ವಿದ್ಯಾರ್ಥಿಗಳಿಗೆ ತಮ್ಮ ಅಭ್ಯಾಸದಲ್ಲಿ ಪ್ರಗತಿ ಇರುತ್ತದೆ.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2

ನಿಮ್ಮ ವಿರೋಧಿಗಳ ಸಂಚು ಫಲಿಸದೆ ಅವರು ಬೇಸರಗೊಳ್ಳುವರು ಮತ್ತು ನಿಮಗೆ ನಿಮ್ಮ ವಿರೋಧಿಗಳು ಯಾರೆಂಬುದು ಸ್ಪಷ್ಟವಾಗಿಯೇ ಈಗ ಗೊತ್ತಾಗುತ್ತದೆ. ಪ್ರಯತ್ನಪಟ್ಟ ವ್ಯವಹಾರದಲ್ಲಿ ಸಫಲವಾಗಿ ಆದಾಯ ಹೆಚ್ಚುತ್ತದೆ. ಹಣದ ಒಳಹರಿವು ಸಾಮಾನ್ಯವಾಗಿರುತ್ತದೆ. ಸರ್ಕಾರಿ ಅಧಿಕಾರಿಗಳಿಂದ ನಿಮ್ಮ ಕೆಲಸಗಳಿಗೆ ಸಹಾಯ ದೊರೆಯುತ್ತದೆ. ಕೃಷಿ ತಂತ್ರಜ್ಞರಿಗೆ ಉತ್ತಮ ಗೌರವ ದೊರೆಯುತ್ತದೆ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3

ವ್ಯವಹಾರದಲ್ಲಿದ್ದ ಏರಿಳಿತಗಳು ಒಂದು ಹಂತಕ್ಕೆ ಹಿಡಿತಕ್ಕೆ ಬರುತ್ತವೆ. ಪಾಲುದಾರಿಕೆ ವ್ಯವಹಾರಗಳಲ್ಲಿ ಒಂದು ಜವಾಬ್ದಾರಿಯುತ ಹುದ್ದೆ ದೊರಕುವ ಸಾಧ್ಯತೆ ಇದೆ. ವಿದ್ಯಾರ್ಥಿಗಳಿಗೆ ಅಭ್ಯಾಸದಲ್ಲಿ ಸ್ವಲ್ಪ ಹಿನ್ನಡೆಯನ್ನು ಕಾಣಬಹುದು. ಹಾಗಾಗಿ ಹೆಚ್ಚಿನ ಶ್ರಮವಹಿಸಬೇಕಾದೀತು. ಹಣದ ಒಳಹರಿವು ಸಾಮಾನ್ಯವಾಗಿರುತ್ತದೆ. ಮದುವೆ ಮೊದಲಾದ ಶುಭಕಾರ್ಯಗಳಲ್ಲಿ ಭಾಗವಹಿಸುವ ಅವಕಾಶವಿದೆ.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ

ಹಮ್ಮಿಕೊಂಡ ಕೆಲವು ಕೆಲಸಗಳು ಯಾವುದೇ ಅಡೆತಡೆಯಿಲ್ಲದೆ ಮುಂದುವರಿಯುತ್ತವೆ. ಮೃದುವಾದ ಮಾತುಗಳ ಮೂಲಕ ಆಪ್ತರಲ್ಲಿ ವಿಶ್ವಾಸವನ್ನು ಗಳಿಸುವಿರಿ. ಬಂಧುಗಳೊಡನೆ ಅಸಮಾಧಾನ ಇರುತ್ತದೆ. ಧನಾದಾಯ ತೃಪ್ತಿಕರವಾಗಿರುತ್ತದೆ. ನಿಮ್ಮ ಶತ್ರುಗಳನ್ನು ಅವರದೇ ತಂತ್ರಗಳಿಂದ ಬಗ್ಗು ಬಡಿಯುವಲ್ಲಿ ಯಶಸ್ವಿಯಾಗುವಿರಿ. ಪಾಲುದಾರಿಕೆ ವ್ಯವಹಾರದಲ್ಲಿ ಬಂಡವಾಳ ಹಾಕಿದರೆ ಲಾಭ ಹೆಚ್ಚು ಬರುವುದು.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1

ವೃತ್ತಿಗೆ ಸಂಬಂಧಪಟ್ಟ ವಿಚಾರಗಳಲ್ಲಿ ಮಹತ್ವದ ತೀರ್ಮಾನವನ್ನು ಕೈಗೊಳ್ಳುವಿರಿ. ಈ ಬಗ್ಗೆ ಅಪೇಕ್ಷಿತರ ಭೇಟಿಯನ್ನು ಮಾಡುವಿರಿ. ಉದ್ಯೋಗದಲ್ಲಿ ಆರಂಭದಲ್ಲಿ ಸ್ವಲ್ಪಮಟ್ಟಿನ ಸಮಸ್ಯೆಯಿದ್ದರೂ ಚಿಂತೆಗೆ ಕಾರಣವಿಲ್ಲ. ಮಹಿಳೆಯರಿಗೆ ಸಾಮಾಜಿಕವಾಗಿ ಉತ್ತಮ ಸ್ಥಾನಮಾನ ದೊರೆಯುತ್ತದೆ. ಕುಟುಂಬದ ಕಡೆಗೆ ಸ್ವಲ್ಪ ಗಮನಹರಿಸುವುದು ಉತ್ತಮ. ಧನ ಆದಾಯವು ಸಾಮಾನ್ಯವಾಗಿರುತ್ತದೆ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2

ಕೆಲಸಕಾರ್ಯಗಳಲ್ಲಿ ಇದ್ದ ಒತ್ತಡ ಕಡಿಮೆಯಾಗಿ ಉಲ್ಲಾಸವೆನಿಸುತ್ತದೆ. ಹಣದ ಒಳಹರಿವು ನಿಮ್ಮ ನಿರೀಕ್ಷೆಯಷ್ಟು ಇರುತ್ತದೆ. ವಿದೇಶದಲ್ಲಿ ಓದುತ್ತಿರುವವರಿಗೆ ಬೇಕಾದ ಸೌಲಭ್ಯಗಳು ಸಿಗುತ್ತವೆ. ಬಹಳ ದಿನಗಳಿಂದ ಖರೀದಿಸಬೇಕೆಂದು ಆಶಿಸಿದ್ದ ನಿವೇಶನವನ್ನು ಈಗ ಖರೀದಿ ಮಾಡಬಹುದು. ಕೆಲವರಿಗೆ ಚರ್ಮ ಕಾಯಿಲೆ ಕಾಡಬಹುದು. ಹೈನುಗಾರಿಕೆ ಮಾಡುತ್ತಿರುವವರಿಗೆ ಉತ್ತಮ ಆದಾಯವಿರುತ್ತದೆ.


ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3

ಈ ರಾಶಿಯ ಯುವಕರಿಗೆ ಆತ್ಮಾಭಿಮಾನ ಅತಿಯಾಗಿರುತ್ತದೆ. ಇದು ಅಹಂಕಾರಕ್ಕೂ ಕಾರಣವಾಗಬಹುದು. ಹಣದ ಒಳಹರಿವು ನಿಮ್ಮ ನಿರೀಕ್ಷೆಯಷ್ಟು ಇರುತ್ತದೆ. ಹೊಸ ಆಸ್ತಿ ಖರೀದಿ ಮಾಡುವಾಗ ಸಾಕಷ್ಟು ಎಚ್ಚರಿಕೆಯನ್ನು ತೆಗೆದುಕೊಳ್ಳಿ. ಮಕ್ಕಳ ವೃತ್ತಿಯಲ್ಲಿ ಸಂತಸದ ಸುದ್ದಿ ಕೇಳುವಿರಿ. ಸಂಗಾತಿಗೆ ಉತ್ತಮ ಉದ್ಯೋಗ ದೊರೆಯಬಹುದು.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ

ಕೃಷಿ ಕಾರ್ಮಿಕರಿಗೆ ಉತ್ತಮ ಬೇಡಿಕೆ ಬಂದು ಧನ ಸಂಪಾದನೆ ಹೆಚ್ಚಾಗುತ್ತದೆ. ವಿದ್ಯಾರ್ಥಿಗಳಿಗೆ ಅಭ್ಯಾಸದಲ್ಲಿ ಸ್ವಲ್ಪ ಹಿನ್ನಡೆ ಇರುತ್ತದೆ. ಶ್ವಾಸಕೋಶದ ತೊಂದರೆ ಇರುವವರು ಎಚ್ಚರವಹಿಸುವುದು ಉತ್ತಮ. ಸಂಗಾತಿಗೆ ಪಿತ್ರಾರ್ಜಿತ ಆಸ್ತಿ ದೊರೆಯುವ ಸಾಧ್ಯತೆ ಇದೆ. ವೃತ್ತಿಯಲ್ಲಿ ಸ್ತ್ರೀ ಮೇಲಧಿಕಾರಿಯಿಂದ ಸಾಕಷ್ಟು ಸಹಾಯ ದೊರೆಯುತ್ತದೆ. ಹಿರಿಯರಿಂದ ಒಡವೆಗಳು ಉಡುಗೊರೆಯಾಗಿ ದೊರೆಯಬಹುದು.

ಪದಬಂಧ 2759



ಮೇಲಿನಿಂದ ಕೆಳಕ್ಕೆ

1. ಒಂದು ಕಡೆಯಿಂದ ಮತ್ತೊಂದು ಕಡೆಗೆ ಸರಿ 3
2. ಲೆಕ್ಕಕ್ಕೆ ಬಾರದವ ಒಂದು ರೀತಿಯಲ್ಲಿ ಗಣಿತಕ್ಕೆ ಬರುವುದಿಲ್ಲ 4
3. ಅಳಲೆಕಾಯಿ ಔಷಧಿ ಕೊಡುವ ನುರಿತ 3
4. ತೋಳ್ತೆಕ್ಕೆಯಲ್ಲಿ ಸಿಕ್ಕಿಕೊಂಡವರಿಗೆ ಆಗುವ ಅನುಭವ 3
7. ಹೊಕ್ಕಳಿನಲ್ಲಿ ತಾವರೆಯನ್ನು ಇರಿಸಿಕೊಂಡವ 5
9. ನಿತ್ಯ ರವಿ ಉದಯದ ದಿವಸ 2
10. ಮದುವೆ ಮೆರವಣಿಗೆಗಳಲ್ಲಿ ಮೊಳಗಿ ಮೆರೆಯುವ ವಾದ್ಯ ವೃಂದ 5
11. ಈ ತಲೆಕೆಳಕಾದ ಹುಲ್ಲನ್ನು ಗಣೇಶನಿಗಿಟ್ಟರೆ ವರವನ್ನು ಕೊಡುತ್ತಾನೆ 3
13. ಭೋಜ ಮಾಡುವ ಊಟ 3
15. ರಕ್ತಹರಿವ ತಂತು ತಲೆಕೆಳಕಾಗಿದೆ 2
18. ವೀಳಯಕ್ಕೆ ಹೆಸರಾದ ವಾರಣಾಸಿ ನಿವಾಸಿ 4
20. ಮೈಯಲ್ಲಾಗುವ ರೋಮಾಂಚನ 3
21. ಕನ್ನಡದ ಗಣಪ 3
23. ಪರಶಿವನ ಕೈವಾದ್ಯ 3

ಎಡದಿಂದ ಬಲಕ್ಕೆ

1. ಜನತೆಯ ವಾಸುದೇವ ರೂಪ 4
3. ಐದು ನದಿಗಳ ನಾಡಿನವ 3
5. ಮಾರ್ಗದರ್ಶಕನ ಮಧುರ ಮಾತು 4
6. ಆತುರದ ಕುಣಿತ ಹೀಗೆ 4
8. ಉಗಾದಿಗೆ ಉಂಟಾಗುವ ತಕರಾರು 3
10. ಸಾಧಾರಣ ಬೇಸಿಗೆಯಲ್ಲಾಗುವ ದಾಹ 4
12. ಆಕಾಶವನ್ನು ಆವರಿಸಿರುವ ಗ್ರಹ ನಕ್ಷತ್ರಗಳ ಗುಂಪು 5
14. ಈಜಲು ಕಠಿನವೆನಿಸುವ ಸಂಸಾರ ಸಮುದ್ರ 5
16. ಹೊಸತಿನ ಶುರು 4
17. ತುರ್ಕಿಸ್ಥಾನದ ಒಡೆಯ 3
19. ಮೂರೂರನ್ನು ಮುರಿದು ಮೆರೆದ ದೇವಿ 4
22. ಒಂದು ಪ್ರಾಂತದ ಆಡಳಿತಾಧಿಕಾರಿಯಾಗಿ ಕೆಂಪೇಗೌಡ 4
24. ಬಂಗಾರದಂತಹ ದಾಸವರೇಣ್ಯ 3
25. ಐಶ್ವರ್ಯವನ್ನು ಪಡೆದ ಮಾರ್ಗದರ್ಶಕ 4

ಪದಬಂಧ ಉತ್ತರ -2758

ಮೇಲಿಂದ ಕೆಳಕ್ಕೆ

1.ಮಕರಾಂಕ 2.ಸಮರ್ಪಣಭಾವ 3.ಗುಣತ್ರಯ 4.ಮತ್ತಕಾಮಿ 6.ಮಾಯಾವಿನಿ 9.ಶಯನ 11.ಹಸನು 12.ನವರಾತ್ರಿರಜ 13.ಜಾತವೇದ 14.ಅಟ್ಟಹಾಸ 15.ವಾಮದೇವ 17.ಗಜಪಥ

ಎಡದಿಂದ ಬಲಕ್ಕೆ

1.ಮನೋಲ್ಲಾಸ 3.ಗುರುಧಾಮ 5.ಮಹಿಮಾ 7.ಕಪ್ಪುಹಣ 8.ವಿಜಯದಶಮಿ 10.ಭಾಮಿನಿ 11.ಹರಾವ 12.ನಯನ 13.ಜಾದವ 14.ಅನುಭವಾಮೃತ 16.ರಾಷ್ಟ್ರರಂಗ 18.ದಸರ 19.ಸದಾಶಿವ 20.ಜಗನ್ನಾಥ

ಎಳೆಯರ ಅಂಗಳದಲ್ಲಿ ನವಿಲ ನರ್ತನ

ರಘುನಾಥ ಚ.ಹ.

ವಿಮರ್ಶೆ



ಕನ್ನಡ ಸಾಹಿತ್ಯದ ಜೀವನದಿಗೆ ಸೇರುವ ಪುಟ್ಟದೊಂದು ತೊರೆ ಮಕ್ಕಳ ಸಾಹಿತ್ಯ. ಈ ತೊರೆಯಲ್ಲೀಗ ಹೊಸ ನೀರಿನ ರಭಸ, ಉಲ್ಲಾಸ - 'ವಸಂತ ಬಾಲ ಸಾಹಿತ್ಯ ಮಾಲೆ' ಹೆಸರಿನಲ್ಲಿ ಎಚ್.ಎಸ್. ವೆಂಕಟೇಶ ಮೂರ್ತಿ ಅವರು ಸಂಪಾದಿಸಿರುವ ಹನ್ನೆರಡು ಕೃತಿಗಳ ಮೂಲಕ.

ಕೆ.ವಿ. ತಿರುಮಲೇಶ್, ವೈದೇಹಿ, ನಾಗರಾಜ ಶೆಟ್ಟಿ, ಚಿಂತಾಮಣಿ ಕೊಡ್ಲೆಕೆರೆ, ಎಚ್. ಡುಂಡಿರಾಜ್, ಟಿ.ಎಸ್. ರಮಾನಂದ, ವಿಜಯಶ್ರೀ ಹಾಲಾಡಿ, ಬಸು ಬೇವಿನಗಿಡದ, ರಾಧೇಶ ತೋಳ್ಪಾಡಿ, ಶ್ರೀನಿವಾಸ ಉಡುಪ ಹಾಗೂ ಜಿ.ಎನ್. ರಂಗನಾಥರಾವ್ ಅವರೊಂದಿಗೆ ಸಂಪಾದಕರಾದ ಎಚ್ಚೆಸ್ವಿ ಅವರೂ ಮಕ್ಕಳಿಗಾಗಿ ಮಾಲೆ ಕಟ್ಟಿದ್ದಾರೆ. ಪದ್ಯ, ಗದ್ಯ, ನಾಟಕ ಮಾಲೆಯ ಚೆಲುವನ್ನು ಹೆಚ್ಚಿಸಿವೆ. 'ಈ ಸಾಹಿತ್ಯ ಮಾಲೆ ನನ್ನ ಜೀವನದ ಬಹು ಮುಖ್ಯ ಸಂಪಾದನೆ; 'ಬುದ್ಧಚರಣ' ಮತ್ತು 'ಕುಮಾರವ್ಯಾಸ ಕಥಾಂತರ' ಮಾಲೆಯಷ್ಟೇ ಮುಖ್ಯವಾದುದು' ಎನ್ನುವ ಎಚ್ಚೆಸ್ವಿಯವರ ಮಾತು ಈ ಮಾಲೆಯ ಮಹತ್ವವನ್ನು ಹೇಳುವಂತಿದೆ. ಅವರು ಬರೆದಿರುವ ದೀರ್ಘ ಪ್ರಸ್ತಾವನೆ, ಕನ್ನಡದಲ್ಲಿನ ಮಕ್ಕಳ ಸಾಹಿತ್ಯದ ಬೆಳವಣಿಗೆಯನ್ನು ಅರಿಯುವವರಿಗೆ ಪಕ್ಷಿನೋಟ ಒದಗಿಸುವಂತಿದೆ.

ಶೇಕ್ಸ್‌ಪಿಯರ್‌ನ 'ಟೆಂಪೆಸ್ಟ್' ನಾಟಕವನ್ನು ಆಧರಿಸಿ 'ಧಾಂ ಧೂಂ ಸುಂಟರಗಾಳಿ' ಹೆಸರಿನಲ್ಲಿ ವೈದೇಹಿ ಅವರು ರೂಪಿಸಿರುವ ಮಕ್ಕಳ ನಾಟಕ ಈಗಾಗಲೇ ಪ್ರಕಟವಾಗಿ ಹಾಗೂ ರಂಗಪ್ರಯೋಗಗಳನ್ನು ಕಂಡಿದೆ. ಮಾರ್ಕ್ ಟ್ವೇನ್‌ರ ಕೃತಿಯನ್ನು ಆಧರಿಸಿ ಜಿ.ಎನ್. ರಂಗನಾಥ ರಾವ್ ಅವರು 'ಟಾಮಿಯ ಪ್ರಚಂಡ ಸಾಹಸಗಳು' ಹೆಸರಿನಲ್ಲಿ ಕಾದಂಬರಿ ರಚಿಸಿದ್ದಾರೆ. ಈ ಎರಡೂ ಕೃತಿಗಳು ಕನ್ನಡದ ಮಕ್ಕಳಿಗೆ ತಮ್ಮದಲ್ಲದ ಹೊಸ ಆವರಣವೊಂದನ್ನು ಪರಿಚಯಿಸಿಕೊಳ್ಳುವ ಅವಕಾಶಗಳಾಗಿವೆ.

'ವಾಪು ಪದ್ಯಗಳು ಮತ್ತು ಓಬೀರಾಯನ ಕಥೆ' ಕೃತಿ, ಮಕ್ಕಳ ಸಾಹಿತ್ಯಕ್ಕೆ ಗಣನೀಯ ಕೊಡುಗೆ ನೀಡಿದ ಶ್ರೀನಿವಾಸ ಉಡುಪರ ಸ್ಮರಣೆ ಆಗಿರುವಂತೆಯೇ, ಅವರನ್ನು ಹೊಸಕಾಲದ ಮಕ್ಕಳಿಗೆ ಪರಿಚಯಿಸುವ ಪ್ರಯತ್ನವೂ ಆಗಿದೆ. ಎಚ್ಚೆಸ್ವಿ ಅವರ 'ಗುಬ್ಬಿ ಜಂಕ್ಷನ್' ಹಾಗೂ ಟಿ.ಎಸ್. ನಾಗರಾಜ ಶೆಟ್ಟಿ ಅವರ 'ನರಿಯಣ್ಣನ ಅಂಗಡಿ' ಆಯ್ದ ಕವಿತೆಗಳ ಸಂಕಲನಗಳು.

ಈ ಮಾಲೆಯ ಮೂಲಕವೇ ಮೊತ್ತಮೊದಲ ಬಾರಿಗೆ ಪ್ರಕಟಗೊಂಡಿರುವ ಪದ್ಯ ಕೃತಿಗಳಲ್ಲಿ ಹೆಚ್ಚು ಗಮನಸೆಳೆಯುವುದು ಕೆ.ವಿ. ತಿರುಮಲೇಶರ 'ಪುಟ್ಟನ ಮನ' ಹಾಗೂ ಚಿಂತಾಮಣಿ ಕೊಡ್ಲೆಕೆರೆ ಅವರ 'ಓಕೆ ಮೇಕೆ'. ರಮ್ಯಕಲ್ಪನೆ ಹಾಗೂ ಪದವಿನೋದದ ಮೂಲಕ ಎಳೆಯ ಮನಸ್ಸುಗಳಿಗೆ ಲಗ್ಗೆಯಿಡುವ ತಿರುಮಲೇಶರ ಪದ್ಯಗಳು, ಕನ್ನಡ ಸಾಹಿತ್ಯ ಪರಂಪರೆಯನ್ನು ಮಕ್ಕಳಿಗೆ ಪರಿಚಯಿಸುವ ಪ್ರಯತ್ನಗಳೂ ಆಗಿವೆ. ದಾಸರು, ಪಂಪ, ಅಡಿಗ, ಅನಂತಮೂರ್ತಿ, ರಾಮಚಂದ್ರ ಶರ್ಮ, ಕಂಬಾರ – ಹೀಗೆ ಅನೇಕ ಕನ್ನಡ ಲೇಖಕರನ್ನು ನೆನಪಿಸುವ ರಚನೆಗಳು 'ಪುಟ್ಟನ ಮನ' ಸಂಕಲನದಲ್ಲಿವೆ.

'ಸಂತ್ರಿಲಾಂಬ್ರೀನ'ದ ಚಿಂತಾಮಣಿಯವರ 'ಓಕೆ ಮೇಕೆ'ಯಲ್ಲಿ ಮಕ್ಕಳ ನಾಲಗೆಗೆ ಒಗ್ಗುವ ಹಾಗೂ ನೆನಪಿನಲ್ಲಿ ಉಳಿಯುವ ಸೊಗಸಾದ ರಚನೆಗಳಿವೆ. ಶಿವ-ಶಿವೆಯರ ಮೂಲಕ ಹೇಳುವ ಕೌಟುಂಬಿಕ ತತ್ವದಷ್ಟೇ ಸಹಜವಾಗಿ, 'ಜಾತಿ ಭೂತ ಓಡಿಹೋಗ್ಲು / ತೋರದಿಲ್ಲಿ ಮೂಡಿ / ಕುಣಿದು ಕುಣಿದು ಹಾಡುತಾರೆ / ರಮ್ಯ ಕಮಲಾ ಪ್ರೀತಿ' ಎಂದು ಬರೆಯಬಲ್ಲ ಕವಿ ಅವರು. ಕಲರ್ ಟೀವಿಯೊಳಗೆ ಪುಟ್ಟನೊಬ್ಬ ಜಾರಿಬಿದ್ದಾಗ ಏನಾಗುತ್ತದೆ ಎನ್ನುವುದನ್ನು ಸ್ವಾರಸ್ಯಕರ ಪದ್ಯವಾಗಿಸಬಲ್ಲರು. ವಿಜಯಶ್ರೀ ಹಾಲಾಡಿ ಅವರ 'ಪಟ್‌ಪಟಕಾಯಿ ಚಟ್‌ಪಟ' ಸಾಕುಪ್ರಾಣಿಗಳ ಲೋಕದ ಆಪ್ತ ಪದ್ಯಗಳ ಗುಚ್ಛ. ಬೆಳ್ಳಿ, ಬೆಕ್ಕಿನ ಗುಣಗಳ ಬಗ್ಗೆ ಹೇಳುತ್ತಲೇ, ಮನುಷ್ಯನ ಅವಗುಣಗಳನ್ನು ಸೂಚಿಸುವ ಜಾಣ್ಮೆ ಅವರದು. ಬೆಕ್ಕು-ನಾಯಿಗಳಂಥ ಪ್ರಾಣಿಗಳ ಮೂಲಕ ಮಗುಲೋಕದೊಂದಿಗೆ ಇಷ್ಟು ತೀವ್ರತೆಯಲ್ಲಿ ಸಂವಾದ ನಡೆಸಿರುವ ಕನ್ನಡ ಕವಿ ಬಹುಶಃ ವಿಜಯಶ್ರೀ ಒಬ್ಬರೇ ಇರಬೇಕು.

ವಿಜಯಶ್ರೀ ಅವರು ಕಾವ್ಯದ ಮೂಲಕ ಪ್ರಾಣಿಲೋಕ ಕಾಣಿಸಿದರೆ, ಆ ಪ್ರಯತ್ನವನ್ನು ಡಾ.ಟಿ.ಎಸ್. ರಮಾನಂದ ಕಥೆಗಳ ಮೂಲಕ ಮಾಡಿದ್ದಾರೆ. 'ಮರಿ ಆನೆಗೆ ಮಾತು ಬಂತು ಇತರ ಕಥೆಗಳು' ಸಂಕಲನದ ಐದು ರಚನೆಗಳು ಪ್ರಾಣಿಗಳ ಕುರಿತ ಕಾಳಜಿ ಮತ್ತು ಪರಿಸರ ಪ್ರೇಮವನ್ನು ಭಿತ್ತಿಯಾಗಿರಿಸಿಕೊಂಡಿವೆ. ಕಲ್ಪನೆಯಾಗುತ್ತಿರುವ ಕಾಡು ಮತ್ತು ಅಲ್ಲಿನ ಜೀವವೈವಿಧ್ಯವನ್ನು ಮಕ್ಕಳ ಭಾವಕೋಶದಲ್ಲಿರಿಸುವ ಮತ್ತು ಜೀವಗೊಳಿಸುವ ಪ್ರಯತ್ನದಂತೆ ಅವರ ಕಥೆಗಳು ಕಾಣಿಸುತ್ತವೆ. ಬಸು ಬೇವಿನಗಿಡದ ಅವರ 'ಒಳ್ಳೆಯ ದೆವ್ವ' - ಮನುಷ್ಯ ಮನಸ್ಸೇ ದೆವ್ವದ ಬೀಡಾಗಿರುವುದನ್ನು ಸೂಚಿಸುವ ಕಾದಂಬರಿ; ಹೈಸ್ಕೂಲು ವಿದ್ಯಾರ್ಥಿಗಳು ಓದಬಹುದಾದ ರಮ್ಯ ಕಥಾನಕ.

ಪದ್ಯಗಳ ಮೂಲಕ ಮಕ್ಕಳ ಸಾಹಿತ್ಯಪ್ರಿಯರಿಗೆ ಪರಿಚಿತರಾದ ರಾಧೇಶ ತೋಳ್ಪಾಡಿ, 'ನವಿಲ ಕರುಣೆ' ಕಾದಂಬರಿಯ ಮೂಲಕ ಗದ್ಯ ಪ್ರಕಾರಕ್ಕೆ ಹೊರಳಿಕೊಂಡಿರುವುದು ಕುತೂಹಲಕರ. ಕಾವ್ಯಕ್ಕೆ ಹತ್ತಿರವಾದ ಭಾಷೆ ಹಾಗೂ ಚಿತ್ರವತ್ತಾದ ವಿವರಗಳಿಂದ ರಾಧೇಶರ ಕಾದಂಬರಿ ಗಮನಸೆಳೆಯುತ್ತದೆ. ಮನುಷ್ಯನ ಔದಾರ್ಯ-ಸಣ್ಣತನ ಹಾಗೂ ಪ್ರಕೃತಿಯ ಕರುಣೆಯನ್ನು ಚರ್ಚಿಸುವ ಈ ಕಾದಂಬರಿ, ಮಕ್ಕಳ ಮನಸ್ಸಿಗೆ ಉಲ್ಲಾಸದೊಂದಿಗೆ ವಿಚಾರವನ್ನೂ ದಾಟಿಸುವ ಹಂಬಲ ಹೊಂದಿದೆ.

'ಕಾಳಿಗುಡ್ಡದ ಕೌತುಕ' ಡುಂಡಿರಾಜ್‌ರ ಪನ್ ಮತ್ತು ಫನ್ ಎರಡನ್ನೂ ಒಳಗೊಂಡಿರುವ ಮಕ್ಕಳ ನಾಟಕ. ಕನ್ನಡ ಪಂಡಿತರ ಭಾಷಾಪ್ರೀತಿ, ಮಕ್ಕಳ ಸಾಹಸ ಪ್ರವೃತ್ತಿ ಹಾಗೂ ಪರಿಸರ ಪ್ರೀತಿ, ಹೊಸ ತಲೆಮಾರಿನ ಮೊಬೈಲ್ ದಾಸ್ಯದ ಕುರಿತ ವ್ಯಂಗ್ಯೋಕ್ತಿಯ ಮೂಲಕ ಗಮನಸೆಳೆಯುವ ಈ ನಾಟಕ, ಸಾಮಾಜಿಕ-ಶೈಕ್ಷಣಿಕ ಕಾಳಜಿಯನ್ನು ಭಿತ್ತಿಯಲ್ಲಿರಿಸಿಕೊಂಡಿದೆ.

ಇಲ್ಲಿನ ಹನ್ನೆರಡು ಬರಹಗಾರರೊಂದಿಗೆ ಕಲಾವಿದರಾದ ಪ.ಸ. ಕುಮಾರ್ ಮತ್ತು ಸಂತೋಷ ಸಸಿಹಿತ್ಲು ಅವರನ್ನೂ ನೆನಪಿಸಿಕೊಳ್ಳಬೇಕು. ಅವರ ಸೊಗಸಾದ ಚಿತ್ರಗಳು ಕಥೆ-ಕವಿತೆಯಷ್ಟೇ ಸೊಗಸಾಗಿವೆ, ಚಿಣ್ಣರಿಗೆ ಪ್ರಿಯವಾಗುವಂತಿವೆ.

ಮಕ್ಕಳ ಸಾಹಿತ್ಯ ರಚನೆ ಮತ್ತು ಪ್ರಕಟಣೆ ಎರಡೂ ಕಷ್ಟ ಎನ್ನುವಂಥ ಸಂದರ್ಭದಲ್ಲಿ ಪ್ರಕಟಗೊಂಡಿರುವ 'ವಸಂತ ಬಾಲ ಸಾಹಿತ್ಯ ಮಾಲೆ'ಯ ಕೃತಿಗಳು, ಕನ್ನಡ ಮಕ್ಕಳ ಸಾಹಿತ್ಯಕ್ಕೆ ಸ್ವಾಗತಾರ್ಹ ಸೇರ್ಪಡೆ. ಬರವಣಿಗೆಯ ಗುಣಮಟ್ಟದೊಂದಿಗೆ ಮುದ್ರಣದ ಚೆಲುವೂ ಹದವಾಗಿ ಮಿಳಿತಗೊಂಡು ನವಿಲುಗರಿಗಳಂತೆ ರೂಪುಗೊಂಡಿರುವ ಈ ಪುಸ್ತಕಗಳು ಪಾಲಕರು ತಮ್ಮ ಮಕ್ಕಳಿಗೆ ನೀಡಬಹುದಾದ ಒಳ್ಳೆಯ ಉಡುಗೊರೆಯೂ ಹೌದು.

ಕೃತಿ	ಲೇಖಕ	ಪುಟ	ಬೆಲೆ(₹)
ಪುಟ್ಟನ ಮನ	ಕೆ.ವಿ. ತಿರುಮಲೇಶ್	90	110
ಒಳ್ಳೆಯ ದೆವ್ವ	ಬಸು ಬೇವಿನಗಿಡದ	148	160
ಕಾಳಿಗುಡ್ಡದ ಕೌತುಕ	ಎಚ್. ಡುಂಡಿರಾಜ್	96	115
ಓಕೆ ಮೇಕೆ	ಚಿಂತಾಮಣಿ ಕೊಡ್ಲೆಕೆರೆ	134	160
ವಾಪು ಪದ್ಯಗಳು ಮತ್ತು ಓಬೀರಾಯನ ಕಥೆ	ಶ್ರೀನಿವಾಸ ಉಡುಪ	126	150
ಧಾಂ ಧೂಂ ಸುಂಟರಗಾಳಿ	ವೈದೇಹಿ	124	150
ನವಿಲ ಕರುಣೆ	ರಾಧೇಶ ತೋಳ್ಪಾಡಿ	144	160
ಗುಬ್ಬಿ ಜಂಕ್ಷನ್	ಎಚ್.ಎಸ್. ವೆಂಕಟೇಶ ಮೂರ್ತಿ	106	125
ಟಾಮಿಯ ಪ್ರಚಂಡ ಸಾಹಸಗಳು	ಮೂಲ: ಮಾರ್ಕ್ ಟ್ವೈನ್, ಅನು: ಜಿ.ಎನ್. ರಂಗನಾಥ ರಾವ್	88	105
ನರಿಯಣ್ಣನ ಅಂಗಡಿ	ಟಿ.ಎಸ್. ನಾಗರಾಜ ಶೆಟ್ಟಿ	118	140
ಪಟ್‌ಪಟಕಾಯಿ ಚಟ್‌ಪಟ	ವಿಜಯಶ್ರೀ ಹಾಲಾಡಿ	96	115
ಮರಿ ಆನೆಗೆ ಮಾತು ಬಂತು ಮತ್ತು ಇತರ ಕಥೆಗಳು	ಟಿ.ಎಸ್. ರಮಾನಂದ	136	160

ಮಾಲೆಯ ಎಲ್ಲ ಕೃತಿಯ ಪ್ರಕಾಶಕರು: ವಸಂತ ಪ್ರಕಾಶನ ಸಂ: 7892106719

ಅಭಿನಯ ಜಂಗಮನ ಹಿಂದೆಬಿದ್ದು...

ಪ್ರೀತಿ ನಾಗರಾಜ

ಒಳನೋಟ

ನೀವು ನಟರಾಗಿರಬಹುದು ಅಥವಾ ನಟನೆಯ ಕನಸು ಕಾಣುತ್ತಿರುವವರೂ ಆಗಿರಬಹುದು. ಇಲ್ಲವೆ ಸುಮ್ಮನೆ ನಟನೆಯ ಬಗ್ಗೆ ಕೌತುಕ ಹೊಂದಿರುವವರೂ ಆಗಿರಬಹುದು. ರಂಗ ತಂಡಗಳೇ ಒಂದಾಗಿ ಮಾಡಿರುವ ಥಿಯೇಟರ್ ತಾತ್ಕಾಲ್ ಬುಕ್ಸ್‌ನ ಪ್ರಕಟಣೆ, ಅಭಿನಯದ ಮೇಷ್ಟ್ರು ಮೌನೇಶ ಬಡಿಗೇರರ 'ಅಭಿನಯ ಕಲಿಸಲು ಸಾಧ್ಯವಿಲ್ಲ' ಪುಸ್ತಕವನ್ನು ಒಮ್ಮೆ ಓದಬೇಕು. ಅದರಲ್ಲಿ ಇರುವ ಒಳನೋಟಗಳು ನಿಮ್ಮ ಹಾಗೂ ಪುಸ್ತಕದ ನಡುವಿನ ಏಕಾಂತದ ಸಂಸರ್ಗದಲ್ಲಿ ಅರಳುವುದು ಖಚಿತ. 'ಏನನ್ನೋ ಮಾಡಲು ಸಾಧ್ಯವಿಲ್ಲ' ಎಂದು ಹೇಳುವುದು ರಿವರ್ಸ್ ಸೈಕಾಲಜಿಯ ಭಾಗವೇ ಸರಿ. 'ಇದು ಆಗಲ್ಲ ಎಂದರೆ ಯಾಕಾಗಲ್ಲ' ಎನ್ನುವುದೂ ಒಂದು ಮಾರ್ಗದ ಹುಡುಕಾಟವೇ. ಈ ಪುಸ್ತಕದಲ್ಲಿ ಅದೇ ಹುಡುಕಾಟ ನಡೆದಿದೆ.

ಕನ್ನಡದಲ್ಲಿ ಅಭಿನಯದ ಬಗ್ಗೆ ಬಂದಿರುವ ಪುಸ್ತಕಗಳು ಬಹಳ ಕಡಿಮೆ ಎಂದೇ ಹೇಳಬೇಕು. ನೀನಾಸಂ ಸಂಸ್ಥಾಪಕ ಕೆ.ವಿ. ಸುಬ್ಬಣ್ಣನವರಿಂದ (ಕೋನ್‌ಸ್ತಂತಿನ್ ಸ್ತಾನಿಸ್ಲಾವ್ಸ್ಕಿ ವಿರಚಿತ ಪುಸ್ತಕದ ಅನುವಾದ 'ರಂಗದಲ್ಲಿ ಅಂತರಂಗ') ಮೊದಲಾಗಿ ಹಲವರ ಉತ್ತಮ ಕೃತಿಗಳು ಅಭಿನಯದ ಬಗ್ಗೆ ಹೆಚ್ಚು ತಿಳಿಯುವ ಆಸೆ ಇರುವ ಮನಸ್ಸುಗಳಿಗೆ ದಕ್ಕಿವೆ. ರಂಗ ದಿಗ್ಗಜ ಶ್ರೀರಂಗರು ಬರೆದ 'ನಾಟ್ಯ ಶಾಸ್ತ್ರದ ನಟ', ಹಿರಿಯ ರಂಗನಿರ್ದೇಶಕ ಪ್ರಸನ್ನ ಅವರು ಬರೆದಿರುವ 'ನಟನೆಯ ಪಾಠಗಳು' ಕೃತಿ ಕೂಡ ಇಲ್ಲಿ ಉಲ್ಲೇಖಾರ್ಹ.

ರಂಗಾಯಣದ ಹಿರಿಯ ಕಲಾವಿದರಾದ ರಾಮನಾಥ ಅವರ 'ಡ್ರಾಮಾ ಕ್ಲಬ್' ಕೃತಿಯಲ್ಲಿ ನಟನೆಯನ್ನು ಕೇಂದ್ರೀಕರಿಸಿ ಸಾಕಷ್ಟು ಅಂಶಗಳನ್ನು ಹೇಳಲಾಗಿದೆ. ಹಿರಿಯ ರಂಗ ನಿರ್ದೇಶಕ ಶ್ರೀಪಾದ ಭಟ್ಟರು ನಟನೆಯನ್ನು ರೂಢಿಸಿಕೊಳ್ಳುವ ಬಗ್ಗೆ 'ನಟನೆಯ ಕೈಪಿಡಿ' ಎಂಬ ಪುಟ್ಟ ಹೊತ್ತಗೆಯನ್ನು ತಂದಿದ್ದಾರೆ. ಇವಿಷ್ಟೂ ಅಂಶಗಳನ್ನು ಗಮನದಲ್ಲಿ ಇಟ್ಟುಕೊಂಡು ನೋಡಿದರೆ ಕನ್ನಡದಲ್ಲಿ ಅಭಿನಯದ ಬಗ್ಗೆ ಇನ್ನೂ ಹೆಚ್ಚಿನ ಸಾಹಿತ್ಯ ಬೇಕೆನಿಸುವುದು ಸುಳ್ಳಲ್ಲ.

ರಂಗಭೂಮಿಗೆ ಬರುತ್ತಿರುವ ಎಳೆವಯಸ್ಸಿನ ನಟರನ್ನು ನೋಡಿದರೆ ಮನಸ್ಸು ತುಂಬಿ ಬರುತ್ತದೆ. ಈ ಹೊತ್ತು ನಾವು ನೋಡುತ್ತಿರುವ ರಂಗಭೂಮಿ ಎಪ್ಪತ್ತು-ಎಂಬತ್ತರ ದಶಕದ ಅತ್ಯಂತ ಸೃಜನಶೀಲ ರಂಗಭೂಮಿ ಅಲ್ಲ. ರಂಗಭೂಮಿಯನ್ನು ಮೀರಿದ ನೂರಾರು ಆಕರ್ಷಣೆಗಳ ನಡುವೆಯೂ ಇಲ್ಲಿಗೆ ಬಂದು ಪ್ರೊಡಕ್ಷನ್ನು, ಸ್ಕ್ರಿಪ್ಟು, ರೀಡಿಂಗು, ರಿಹರ್ಸಲ್ಲು, ಸ್ಕ್ರೀನ್, ಲೈಟು, ಮ್ಯೂಸಿಕ್ಕು, ಕಾಸ್ಟ್ಯೂಮು ಎಂದೆಲ್ಲ ಯೋಚಿಸುತ್ತಾ ರೋಮಾಂಚನದಿಂದ ಕೆಲಸ ಮಾಡುವುದನ್ನು ಕಂಡರೆ ಒಂದು ಕಡೆ ಖುಷಿ, ಇನ್ನೊಂದು ಕಡೆ ಆತಂಕ. ಇವರ ರಂಗಭೂಮಿಯ ಕನಸು ನನಸಾಗದೆ ಹೋದರೆ ಇದರಿಂದ ದೂರವೇ ಆಗಿಬಿಡುತ್ತಾರೇನೋ ಎನ್ನುವ ಪುಕಪುಕ ಬೇರೆ!



ಪು: 184 ₹220

ಅಭಿನಯ ಕಲಿಸಲು ಸಾಧ್ಯವಿಲ್ಲ
ಲೇ: ಮೌನೇಶ ಬಡಿಗೇರ
ಪ್ರ: ಥಿಯೇಟರ್ ತತ್ಕಾಲ್ ಬುಕ್ಸ್
ಸಂ: 9901234161

'ಅಭಿನಯ ಕಲಿಸಲು ಸಾಧ್ಯವಿಲ್ಲ' ಎನ್ನುವ ಪುಸ್ತಕ ಕೂಡ ತನ್ನಿಂತಾನೇ ಸಂಪೂರ್ಣವಲ್ಲ. ಇದು ಎಲ್ಲಾ ಪ್ರಶ್ನೆಗಳಿಗೂ ಉತ್ತರವಲ್ಲ ಅಥವಾ ಸೂಕ್ತ ಹಾಗೂ ಪ್ರಬುದ್ಧ ಅಭಿನಯ ತರಬೇತಿಗೆ ಪರ್ಯಾಯವೂ ಅಲ್ಲ. ಈ ಮಾತನ್ನು ಇಲ್ಲಿ ಮೌನೇಶರೂ ಹೇಳಿಯೇ ಹೇಳುತ್ತಾರೆ. ಕಲಿಸಲು ಸಾಧ್ಯವಿಲ್ಲ; ಆದರೆ, ನೀವೇ ಕಲಿಯಲು ಸಾಧ್ಯವಿದೆ ಎನ್ನುವ ಬೆಳಕಿನ ಹೊಳಹನ್ನೂ ಅವರೇ ತೋರುತ್ತಾರೆ. ಇದರಲ್ಲಿ ಅವರು ಮಂಡಿಸುವ ಪ್ರತಿಯೊಂದು ಮಾತಿಗೂ ಭರಪೂರ ಉದಾಹರಣೆಗಳನ್ನು ಅವರೇ ನೀಡುತ್ತಾ, ಅವರ ಮಾತುಗಳು ಎದೆಗಿಳಿದು ಸಂಪೂರ್ಣವಾಗಿ ಮನದಟ್ಟಾಗುವಂತೆ ಹೇಳುತ್ತಾರೆ. ಏಕಲವ್ಯನ ಉದಾಹರಣೆಯಿಂದ ಮೊದಲುಗೊಂಡು ನೀಡುವ ಪ್ರತಿಯೊಂದು ಉದಾಹರಣೆ ಮನಸ್ಸಿಗೆ ನಾಟಿ ಅಲ್ಲೇ ನೆಲೆ ನಿಲ್ಲುವ ಹಾಗೆ ವಿಷಯ ಮಂಡನೆಯಾಗುತ್ತದೆ.

ಪುಸ್ತಕದ ಓದಿನುದ್ದಕ್ಕೂ ಅವರೇ ಕೂತು ಮಾತನಾಡುತ್ತಿದ್ದಾರೆ ಎಂತಲೇ ಅನಿಸುತ್ತದೆ. ಒಬ್ಬ ನಟ/ನಟಿ ಕೇಳಿಕೊಳ್ಳಬೇಕಾದ ಮೂಲಭೂತವಾದ ಪ್ರಶ್ನೆಗಳು, ಪಾತ್ರಕ್ಕೆ ಮಾಡಿಕೊಳ್ಳಬೇಕಾದ ಸಿದ್ಧತೆ, ಓದು, ಆಂಗಿಕ-ವಾಚಿಕ ಅಭಿನಯ, ಪಾತ್ರ ಪೋಷಣೆ, ವಿವಿಧ ಬಗೆಯ ಭಾವಗಳು, ಪಾತ್ರಕ್ಕೆ ಬೇಕಾದ ವಿವಿಧ ಭಾವಗಳನ್ನು ಹೊಂದಲು ಬೇಕಾದ ಓದು ಹಾಗೂ ನೋಡುವಿಕೆ, ಅಲ್ಲಲ್ಲಿ ಕಥೆಗಳು, ನಿದರ್ಶನಗಳು, ಸ್ಕ್ರಿಪ್ಟಿನ ಆಯ್ದ ಭಾಗಗಳು, ಎಲ್ಲವೂ ಪುಸ್ತಕವನ್ನು ಅತ್ಯಂತ ಪ್ರಸ್ತುತವಾಗಿಸಿವೆ.

ನಟನೆಯನ್ನು ಆರ್ಥಿಕವಾಗಿ ಲಾಭವಿಲ್ಲದ ಕೆಲಸ ಎಂದು ಹೀಗಳೆದು ನೋಡುವ ಜನರೂ ಈ ಪುಸ್ತಕವನ್ನೊಮ್ಮೆ ಓದಿದರೆ ನಟನೆಯ ಅಭಿಮಾನಿಗಳೇ ಆಗಿಬಿಡುವುದು ಖಂಡಿತ. ಇದರಲ್ಲಿ ಕೊರತೆಗಳು ಇಲ್ಲವೆಂದಲ್ಲ. ಎಲ್ಲವನ್ನೂ ಸರಳೀಕರಿಸಿ ನೋಡುವ ದೃಷ್ಟಿಕೋನ ಒಮ್ಮೊಮ್ಮೆ ಅಪಾಯಕಾರಿ ಆಗಿ ಕಾಣಬಹುದು. ಅದನ್ನು ಮೀರಬೇಕಾದ ಅವಶ್ಯಕತೆ ಇದ್ದೇ ಇದೆ. ಆದರೆ, ಅಭಿನಯ ಶಾಲೆಗಳಿಗೆ ಇದೊಂದು ಅತ್ಯುತ್ತಮ ಪಠ್ಯ ಎನ್ನುವುದು ಸುಳ್ಳಲ್ಲ.

ಸರಳ, ಅಷ್ಟೇ ಸಂಕೀರ್ಣ ಕಥಾಗುಚ್ಛ



ಪು: 144 ₹150

ಉದಕ ಉರಿದು
ಲೇ: ಶ್ರೀಹರ್ಷ ಸಾಲಿಮಠ
ಪ್ರ: ಆಲಿಸಿರಿ ಬುಕ್ಸ್
ಸಂ: 9986302947

ಕನ್ನಡದಲ್ಲಿ ಹಲವು ವೈಜ್ಞಾನಿಕ, ತಾಂತ್ರಿಕ ವಿಷಯಗಳ ಕುರಿತ ಲೇಖನಗಳ ಹಿಂದಿನ ಲೇಖನಿಯಾಗಿದ್ದ ಶ್ರೀಹರ್ಷ ಸಾಲಿಮಠ ಅವರ ಚೊಚ್ಚಲ ಕೃತಿ ಇದು. ಈ ಕಥಾ ಸಂಕಲನದಲ್ಲಿ ವಿಭಿನ್ನ ಜಾಡಿನ ಹನ್ನೊಂದು ಕಥೆಗಳಿವೆ. ದಾವಣಗೆರೆಯಲ್ಲಿ ಬಾಲ್ಯ ಕಳೆದು, ಎಂಜಿನಿಯರಿಂಗ್‌ನಲ್ಲಿ ಸ್ನಾತಕೋತ್ತರ ಪದವಿ ಪಡೆದು, ಸದ್ಯ ಆಸ್ಟ್ರೇಲಿಯಾದ ಸಿಡ್ನಿಯಲ್ಲಿ ವಾಸವಾಗಿದ್ದುಕೊಂಡು ವೃತ್ತಿ ಮುಂದುವರಿಸಿರುವ ಹರ್ಷ ಅವರನ್ನು ಕಾಡುವುದು ಗ್ರಾಮೀಣ ಜೀವನ.

ಕೃತಿಯಲ್ಲಿನ 'ಗಂಧಕ್ಕೊಂದು ಬರೆ', 'ಬಿಳಲು ಬೇರು', 'ಸದ್ಗತಿ', 'ಉಡಾಳ ಬಸ್ಯಾನ ಖೂನಿ' ಮೊದಲಾದ ಕಥೆಗಳು ಇದಕ್ಕೆ ಸಾಕ್ಷ್ಯ ಒದಗಿಸುತ್ತವೆ ಜೀವನಾನುಭವ, ಬದುಕಿನಲ್ಲಿ ಕಣ್ಣೆದುರಿಗೆ ಗ್ರಹಿಕೆಗೆ ಬಂದ ವಿಷಯಾಧಾರಿತ ಕಥೆಗಳು, ಓದುಗನಿಗೂ ಹತ್ತಿರವಾಗುತ್ತವೆ. ಗ್ರಾಮ್ಯ ಭಾಷೆ, ಸರಳವಾದ ನಿರೂಪಣಾ ಶೈಲಿ ಇಲ್ಲಿನ ಕಥೆಗಳ ವೈಶಿಷ್ಟ್ಯ.

'ಗಂಧಕ್ಕೊಂದು ಬರೆ' ಶೀರ್ಷಿಕೆಯೇ ಕಥೆಯ ಹೂರಣ ಬಿಚ್ಚಿಡುತ್ತದೆ. ಈ ಕಥೆ ಯಲ್ಲಿ ಶಾಮಣ್ಣ ಮೇಷ್ಟ್ರನ್ನೂ, ಮೇಷ್ಟ್ರ ಹೆಂಡತಿ ಯನ್ನೂ ಕಥೆಗಾರ ಚಿತ್ರಿಸಿದ ಬಗೆ ವಿಭಿನ್ನ. ಉತ್ತರ ಕರ್ನಾಟಕದ ಭಾಷೆಯ ಸೊಗಡು ಓದಿನ ಓಘಕ್ಕೆ ಇಂಧನ. ಮೇಷ್ಟ್ರ ಹೆಂಡತಿ ಎದುರಿಗೇ ನಿಂತು ಮಂಗಳಾರತಿ ಎತ್ತಿದ ಅನುಭವ. ಸರಳ ವಿಷಯವಾಗಿದ್ದರೂ, ವಾಸ್ತವದಲ್ಲಿ ವ್ಯವಸ್ಥೆ ಹೆಣೆಯುತ್ತಿರುವ ಬಲೆಯನ್ನು ಕಥೆಯ ಮೂಲಕ ಹೆಣೆದ ಬಗೆ ಉಲ್ಲೇಖಾರ್ಹ. ಅದೇ ರೀತಿ 'ಉಡಾಳ ಬಸ್ಯಾನ ಖೂನಿ' ಕಥೆಯಲ್ಲಿನ ಬಸ್ಯ ಹಾಗೂ ಚಂದ್ರಿ ಪಾತ್ರಗಳು ಮನಸ್ಸಿನಲ್ಲಿ ಉಳಿಯುವಂಥದ್ದು. ತುಂಟತನ, ಚಡ್ಡಿ ಪುರಾಣದೊಳಗೆ ಅಡಗಿದ ಸುರುಳಿಗಳು ಹಲವು.

ಕೃತಿಯ ಶೀರ್ಷಿಕೆ ಹೊತ್ತ 'ಉದಕ ಉರಿದು' ಜಗತ್ತಿನ ಪ್ರಸ್ತುತ ಸನ್ನಿವೇಶ ವಿವರಿಸುವ ಕೃತಿ. ತನ್ನ ನೆಲದಿಂದಲೇ ಹೊರಬಿದ್ದು ಅನಾಥವಾಗಿ ಬದುಕುತ್ತಿರುವ ಮಗೇಂದ್ರನ್ ಹಾಗೂ ನೆಲವಿದ್ದೂ ಅನಾಥಭಾವ ಕಾಡಿದ ಕಥಾನಾಯಕನ ಪಯಣ ಹಲವು ವಾಸ್ತವಗಳನ್ನು ತೆರೆದಿಟ್ಟಿದೆ. ಜೊತೆಗೆ ತಮ್ಮದೇ ವಲಯಕ್ಕೆ ಸಂಬಂಧಿಸಿದ, ಕಾರ್ಪೊರೇಟ್ ಕಥೆಯೊಂದನ್ನು 'ಸಂಕೋಲೆಯೂ ಸರಕು' ಎನ್ನುವ ಕಥೆಯಲ್ಲಿ ವಿಭಿನ್ನವಾಗಿ ಕಟ್ಟಿ ಓದುಗರ ಮುಂದಿರಿಸಿದ್ದಾರೆ ಶ್ರೀಹರ್ಷ. ಹಣವೆನ್ನುವುದು ಮನುಷ್ಯತ್ವವನ್ನು ಹೇಗೆ ಕಸಿದುಕೊಳ್ಳುತ್ತದೆ ಎನ್ನುವುದನ್ನು ಜಾಹೀರಾತಿನ ವಿಷಯವಿಟ್ಟುಕೊಂಡು ಕಥೆ ಹೆಣೆದಿದ್ದಾರೆ ಅವರು.

ಜಾತಿಗ್ರಸ್ತ ಮನಸ್ಥಿತಿಯ ದ್ಯೋತಕ

ಪ್ರತಿಕ್ರಿಯೆ

ಗಾಂಧಿ ಜಯಂತಿಯ ಪ್ರಯುಕ್ತ (ಅ.2) ಭಾನುವಾರದ ಪುರವಣಿಯಲ್ಲಿ ಪ್ರಕಟವಾಗಿರುವ 'ಸಂವಾದ ಬೇಕು, ವಿವಾದ ಬೇಡ' ಎಂಬ ಲೇಖನ ಹಲವು ಪೂರ್ವಗ್ರಹಗಳಿಂದ ಕೂಡಿದೆ. ಇತ್ತೀಚೆಗಷ್ಟೆ ಮುಗಿದ ಗಣೇಶೋತ್ಸವಗಳಲ್ಲಿ ಕರ್ನಾಟಕದ ಕೆಲವು ನಗರಗಳಲ್ಲಿ 'ಗೋಡ್ಸೆ' ಫೋಟೊವನ್ನು ಗಣಪನ ವಿಗ್ರಹದ ಜೊತೆಗಿಟ್ಟು ಪೂಜೆಮಾಡಿ ಜೈಕಾರ ಹಾಕಿರುವುದು ಎಲ್ಲರಿಗೂ ತಿಳಿದ ವಿಷಯ. ಅಂದು ಆ ನಿಟ್ಟಿನಲ್ಲಿ ಚರ್ಚೆಯಾಗಬಹುದೆಂದು ನನ್ನ ನಿರೀಕ್ಷೆಯಾಗಿತ್ತು. ಸಮಾಜದ ಸ್ವಾಸ್ಥ್ಯದ ದೃಷ್ಟಿಯಿಂದ ಅದು ತುರ್ತಾಗಿ ಚರ್ಚೆಯಾಗಬೇಕಾಗಿದ್ದ ವಿಷಯ ಕೂಡ. ಆದರೆ, ಸುಧೀಂದ್ರ ಕುಲಕರ್ಣಿಯವರು ಪೂನಾ ಪ್ಯಾಕ್ಟ್ ಘಟನೆಯನ್ನು ನೆನಪಿಸಿ ಅಂಬೇಡ್ಕರ್ ಅವರನ್ನು ಚರ್ಚೆಗೆ ಎಳೆದುತಂದಿದ್ದಾರೆ.

ಪ್ರತ್ಯೇಕ ಪ್ರಾತಿನಿಧ್ಯ ಅದಾಗಲೇ ಮಸ್ಲಿಮರಿಗೆ, ಕ್ರೈಸ್ತರಿಗೆ, ಆಂಗ್ಲೋ ಇಂಡಿಯನ್ನರಿಗೆ ಚಾಲ್ತಿಯಲ್ಲಿತ್ತು. ಅದನ್ನು ದಲಿತರಿಗೂ ವಿಸ್ತರಿಸಿದರೆ ಶತಮಾನಗಳಿಂದ ಅಕ್ಷರವಂಚಿತರಾಗಿ, ಕೊಳಕು ಕೆಲಸಗಳನ್ನು ಮಾಡುತ್ತಾ, ತುತ್ತು ಕೂಳಿಗೂ ಯಾಚಿಸಬೇಕಾದ ಸಮಾಜದಲ್ಲಿ, ಅವಮಾನವನ್ನೆ ಹಾಸಿ ಹೊದ್ದುಕೊಂಡು ಬದುಕು ಸಾಗಿಸುತ್ತಿದ್ದ ಒಂದು ವರ್ಗಕ್ಕೆ – ಅದು ಬಾಬಾಸಾಹೇಬರ ದೃಷ್ಟಿಯಲ್ಲಿ - ಸ್ವತಂತ್ರ ಚಿಂತನೆಯನ್ನು ಬೆಳೆಸಿ ಸ್ವಾಭಿಮಾನ ತುಂಬುವ, ಸ್ವಾವಲಂಬನೆ ಹೆಚ್ಚಿಸುವ ಕೆಲಸ ಮಾಡುತ್ತದೆ ಮತ್ತು ತ್ವರಿತ ಗತಿಯಲ್ಲಿ ಅಸ್ಪೃಶ್ಯತೆಯ ನಿವಾರಣೆಗೆ ಎಡೆಮಾಡಿಕೊಡುತ್ತದೆ ಎಂಬುದಾಗಿತ್ತು. ಇಂದಿಗೂ ಅದೇ ದಲಿತ ಚಿಂತಕರ, ಹೋರಾಟಗಾರರ ಅಭಿಪ್ರಾಯವಾಗಿದ್ದರೆ ಅದರಲ್ಲಿ ತಪ್ಪೆಣಿಸುವುದೇಕೆ? ಹಿಂದೂ ಸಮಾಜದ ವಿಭಜನೆಯಾಗುತ್ತದೆ ಎಂಬುದು ಗಾಂಧೀಜಿಯವರ ಆತಂಕವಾಗಿತ್ತು, ಅದು ಅರ್ಧಸತ್ಯ. ಆದರೆ, ಯಾವಾಗ ದಲಿತರು ಹಿಂದೂ ಸಮಾಜದ ಭಾಗವಾಗಿದ್ದರು ಎಂಬುದು ಅಂಬೇಡ್ಕರ್ ಎತ್ತಿದ ಮೂಲಭೂತ ಪ್ರಶ್ನೆ!

ಅಂಬೇಡ್ಕರ್ ಅವರೇ ಸಂವಿಧಾನ ಕರಡು ಸಮಿತಿಯ ಅಧ್ಯಕ್ಷರಾಗಿದ್ದೂ ದಲಿತರಿಗೆ ಪ್ರತ್ಯೇಕ ಮತದಾನ ವ್ಯವಸ್ಥೆಯನ್ನು ಜಾರಿಮಾಡಲು ಸಾಧ್ಯವಾಗಲಿಲ್ಲ ಎಂಬ ಅವರ ಹೇಳಿಕೆ ಬಾಲಿಶವಾಗಿದೆ. 1932ರಲ್ಲಿಯೆ ಪೂನಾ ಪ್ಯಾಕ್ಟ್‌ಗೆ ಸಹಿಮಾಡಿದ ಮೇಲೆ ಆ ವಿಷಯ ಅಲ್ಲಿಗೆ ಮುಗಿಯಿತಲ್ಲವೆ? ಆದ್ದರಿಂದ ಅಂದಿನ ಒಪ್ಪಂದದಂತೆ ಧಾರ್ಮಿಕ ಸಮಾನತೆ ಮತ್ತು ಮೀಸಲಾತಿ ವ್ಯವಸ್ಥೆಯನ್ನು ಪರಿಚ್ಛೇದ 15, 16, 25, 335ರಲ್ಲಿ ಮುಂದುವರಿಸಿದ್ದಾರೆ. ಮೇಲಾಗಿ ಸಂವಿಧಾನದ ಪ್ರತಿಯೊಂದು ಕಲಮನ್ನು (395) ಸಂವಿಧಾನ ರಚನಾ ಸಭೆಯಲ್ಲಿ ಬಿಡಿಬಿಡಿಯಾಗಿ ಓದಿ ಮಂಡಿಸಿ, ಚರ್ಚೆಗಳಿಗೆ ಉತ್ತರ ನೀಡಿದ ಮೇಲೆ ಅಗತ್ಯ ಬಿದ್ದಾಗ ವೋಟಿಂಗ್ ಮೂಲಕ ಪ್ರಜಾಪ್ರಭುತ್ವವಾದೀ ನೆಲೆಯಲ್ಲಿಯೇ ಬಹುಮತ ಪಡೆದು ಒಪ್ಪಿಕೊಳ್ಳಲಾಗುತ್ತಿತ್ತಲ್ಲವೆ? ಸಂವಿಧಾನದಲ್ಲಿರುವ 'ಎಷ್ಟು ವಿಚಾರಗಳು ಅವರ ಪರಿಕಲ್ಪನೆ ಮತ್ತು ಎಷ್ಟನ್ನು ಅವರು ಸೃಷ್ಟಿಸಿದ್ದಾರೆ' ಎಂಬ ಅವರ ಮಾತು ಅಂಬೇಡ್ಕರ್ ಅವರನ್ನು ಸಂವಿಧಾನ ಶಿಲ್ಪಿ ಎಂದು ಒಪ್ಪಿಕೊಳ್ಳಲಾರದ ಜಾತಿಗ್ರಸ್ತ ಮನಸ್ಥಿತಿಯನ್ನು ತೋರಿಸುತ್ತದೆ. ಸನಾತನ ಯಥಾಸ್ಥಿತಿವಾದಿಗಳ ನಡುವೆ ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವ, ಸಾಮಾಜಿಕನ್ಯಾಯ ಎಂಬ ಆಧಾರ ಸ್ತಂಭಗಳ ಮೇಲೆ ಸಂವಿಧಾನವನ್ನು ಕಟ್ಟಿಕೊಟ್ಟಿರುವುದೇ ಅಂಬೇಡ್ಕರ್ ಅವರ ದೊಡ್ಡ ಸಾಧನೆ.

ಈಗ 'ಅಸ್ಪೃಶ್ಯತೆಯು ಬಹುಪಾಲು ಮರೆಯಾಗಿದೆ' ಎಂದು ರಾಜಕಾರಣದ ಉನ್ನತ ಸ್ತರದ ವ್ಯಕ್ತಿಗಳೊಂದಿಗೆ ಕೆಲಸ ಮಾಡಿರುವ ಸುಧೀಂದ್ರ ಕುಲಕರ್ಣಿಯವರು ದಂತಗೋಪುರದಲ್ಲಿ ಕುಳಿತು ಹೇಳಿದಂತಿದೆ. ನಮ್ಮ ರಾಜ್ಯದಲ್ಲಿಯೇ ಕಳೆದ ಎರಡು ವಾರಗಳಲ್ಲಿ ನಡೆದಿರುವ ಮಾಲೂರು ತಾಲ್ಲೂಕಿನ ಉಳ್ಳೇರಹಳ್ಳಿಯಲ್ಲಿ ದಲಿತ ಬಾಲಕ ದೇವರ ಗುಜ್ಜುಕೋಲು ಮುಟ್ಟಿದ್ದಕ್ಕೆ ಥಳಿಸಿ ₹60 ಸಾವಿರ ದಂಡ ವಿಧಿಸಿದ್ದು, ಶಿಡ್ಲಘಟ್ಟದ ಹಂದಿಗಣಾಳದಲ್ಲಿ ಮಗಳು ದಲಿತ ಯುವಕನೊಡನೆ ಓಡಿಹೋದದ್ದು ಭಯಂಕರ ಅವಮರ್ಯಾದೆ ಎಂದು ಕುಟುಂಬದ ಮೂರು ಮಂದಿ ಆತ್ಮಹತ್ಯೆಗೆ ಮೊರೆಹೋದದ್ದು, ಕಳ್ಳತನದ ಆರೋಪ ಹೊರಿಸಿ ಬಾಲಕನನ್ನು ವಿದ್ಯುತ್ ಕಂಬಕ್ಕೆ ಕಟ್ಟಿ ತಾಯಿ ಮತ್ತು ಮಗನನ್ನು ಹೊಡೆದ ವರದಿಗಳು ಅಸ್ಪೃಶ್ಯತೆಯ ಭಯಾನಕ ಮುಖಗಳನ್ನು ತೋರಿಸುತ್ತಿಲ್ಲವೆ? ಇವರ ಉದ್ದೇಶವಿಷ್ಟೆ; ಭಾರತ ಪ್ರಕಾಶಿಸುತ್ತಿದೆ ಎಂದು ಹೇಳುವುದು.

ಮೂಡ್ನಾಕೂಡು ಚಿನ್ನಸ್ವಾಮಿ, ಬೆಂಗಳೂರು


ಮೊದಲ ಓದು

ಅಂಗೈಯಲ್ಲಿಯೇ ಅಗಾಧ ಮಾಹಿತಿ

ಬೆಂಗಳೂರಿನ ಕುರಿತು ನಿಮಗೆಷ್ಟು ಗೊತ್ತು? 'ರಸ-ಪ್ರಶ್ನೋತ್ತರಗಳಲ್ಲಿ ನಮ್ಮ ಬೆಂಗಳೂರು' ಕೃತಿಯನ್ನು ಹಿಡಿದುಕೊಂಡು ಕುಳಿತರೆ ರಾಜಧಾನಿಯ ಕುರಿತು ನಿಮಗೆ ಎಷ್ಟು ಮಾಹಿತಿ ಇದೆ ಎನ್ನುವುದು ಸ್ಪಷ್ಟವಾಗಿ ಗೊತ್ತಾಗುತ್ತದೆ. 'ಭಾರತದ ವಿಜ್ಞಾನದ ರಾಜಧಾನಿ'ಯನ್ನು ಪ್ರಶ್ನೋತ್ತರ ರೂಪದಲ್ಲೇ ಪರಿಚಯಿಸುವುದು ಲೇಖಕ ನಾರಾಯಣ ರಾಯಚೂರ್ ಅವರ ಆಕಾಂಕ್ಷೆ. ಅದಕ್ಕೆ ಅವರು ಕೊಡುವ ಕಾರಣವೂ ವಿಶಿಷ್ಟವಾಗಿದೆ. 'ನಮ್ಮ ಉಪನಿಷತ್, ಪುರಾಣಗಳು ಸಹ ಪ್ರಶ್ನೋತ್ತರ ರೂಪದಲ್ಲೇ ಹುಟ್ಟಿಕೊಂಡಿಲ್ಲವೇ? ಇಂತಹ ಪ್ರಶ್ನೋತ್ತರಗಳು ನಮ್ಮನ್ನು ಎಲ್ಲೆಲ್ಲಿಗೋ ಕರೆದೊಯ್ದು, ಹೊಸ ಹೊಸ ವಿಷಯ, ವಿಚಾರಗಳಿಗೆ ಮುಖಾಮುಖಿಯಾಗಿಸುವುದುಂಟು' ಎಂದು ಅವರು ಹೇಳುತ್ತಾರೆ.

ಹೌದು, ಬೆಂಗಳೂರಿನ ವೈವಿಧ್ಯಮಯ ವಿಷಯಗಳನ್ನು ಚುಟುಕಾಗಿ ಅರಿಯಬೇಕಾದರೆ 700 ಪ್ರಶ್ನೋತ್ತರಗಳ ಪುಸ್ತಕವನ್ನು ನೋಡಬೇಕು. ವಿದ್ಯಾರ್ಥಿಗಳು ಮತ್ತು ಬೆಂಗಳೂರಿನ ಬಗೆಗಿನ ಕುತೂಹಲಿಗರನ್ನು ಕೇಂದ್ರೀಕರಿಸಿ ಈ ಕೃತಿಯನ್ನು ರಚಿಸಲಾಗಿದೆ. ಇಲ್ಲಿ ವಿಷಯವಾರು ಪ್ರಶ್ನೆಗಳು, ನಾಲ್ಕು ಬಹು ಆಯ್ಕೆಯ ಉತ್ತರಗಳು ಇವೆ. ಕೊನೆಯ ಭಾಗದಲ್ಲಿ ಸರಿ ಉತ್ತರಗಳಿವೆ. ಓದುಗ ತನ್ನ ಸಾಮಾನ್ಯ ಜ್ಞಾನವನ್ನು ಶೋಧಿಸಿಕೊಂಡು ಓದಲೂ ಸಾಧ್ಯ. ವರ್ತಮಾನದ ಸಂಗತಿಗಳಿಗೆ ಸಂಬಂಧಿಸಿದ ಪ್ರಶ್ನೆಗಳೂ ಇವೆ. ಇತಿಹಾಸ, ರಾಜಕೀಯ, ಭೂಗೋಳ, ಪತ್ರಿಕೋದ್ಯಮ, ಸಾಹಿತ್ಯ, ವಿಜ್ಞಾನ ಸಹಿತ 13 ವಿಷಯಗಳಿಗೆ ಸಂಬಂಧಿಸಿದಂತೆ ಪ್ರಶ್ನೆಗಳು ಇವೆ. ಸ್ಥಳ, ವ್ಯಕ್ತಿಗಳನ್ನು ಗುರುತಿಸುವ ಸಂಬಂಧ ಚಿತ್ರಗಳನ್ನು ಗುರುತಿಸುವ ಪ್ರಶ್ನೆಗಳೂ ಅಲ್ಲಲ್ಲಿ ಇವೆ.

ರಸಪ್ರಶ್ನೆ ಆಸಕ್ತರು, ಸ್ಪರ್ಧೆ ಆಯೋಜಕರು, ಶಿಕ್ಷಕರಿಗೆ ಕೂಡ ಉಪಯುಕ್ತವಾಗುವ ಕೃತಿ.



ಪು: 119 ₹110

ನಮ್ಮ ಬೆಂಗಳೂರು ಒಂದು ಕ್ವಿಜ್
ಲೇ: ನಾರಾಯಣ ರಾಯಚೂರ್
ಪ್ರ: ಅಂಬಾ ಪ್ರಕಾಶನ ಬೆಂಗಳೂರು
ಸಂ: 90088 33886

ಸಾತ್ವಿಕ ಆಕ್ರೋಶ, ಸಾಮರಸ್ಯದ ಆಶಯ



ಪು: 100 ₹60

ಕಟ್ಟು ಬಿಚ್ಚಿದ ಕಾವ್ಯ
ಲೇ: ಡಾ.ಕೆ.ಬಿ. ಬ್ಯಾಳಿ
ಪ್ರ: ತಾಯಿ ಪ್ರಕಾಶನ ಕುಕನೂರು
ಸಂ: 9449689567

ವಿದ್ಯಾರ್ಥಿ ಜೀವನದಿಂದ ಇಂದಿನವರೆಗೆ ಕಂಡ ಕಾಲದ ತಲ್ಲಣಗಳು, ಬದಲಾವಣೆಗಳನ್ನು ಕಾವ್ಯರೂಪದಲ್ಲಿ ಬ್ಯಾಳಿ ಅವರು ದಾಖಲಿಸಿದ್ದಾರೆ. ಪುಟ್ಟ ಪುಟ್ಟ ಸಾಲುಗಳು ಕೆಲವೇ ನಿಮಿಷಗಳಲ್ಲಿ ಓದಿಸಿಕೊಂಡು ಹೋಗುತ್ತವೆ. ಒಂದಿಷ್ಟು ಚಿಂತನೆಯ ಹುಳವನ್ನೂ ಬಿಡುತ್ತವೆ. ಸಾತ್ವಿಕ ಆಕ್ರೋಶವನ್ನು ಹೊರಹಾಕುವ ಕಾವ್ಯದ ಸಾಲುಗಳು, ಸಾಮರಸ್ಯದ ಹಂಬಲವನ್ನೂ ಪ್ರಕಟಿಸುತ್ತವೆ.

ಮಂದಿರ ಮಸೀದಿ, ಚರ್ಚುಗಳ
ಮೇಲೊಂದು/ ಆಶ್ಚರ್ಯದ
ಆನಂದಾಶ್ರಮ ನಿರ್ಮಿಸೋಣ/
ಸರ್ವಧರ್ಮದಾಶ್ರಮಧಾಮವದು...


ಎಂಬಲ್ಲಿಗೆ ಇಡೀ ಸಂಕಲನದ ಆಶಯ ವ್ಯಕ್ತವಾಗುತ್ತದೆ. ಸೌಹಾರ್ದ, ಸಾಮರಸ್ಯ ಮತ್ತು ಸಮಬಾಳು ಕವನದ ಸಾಲುಗಳಲ್ಲಿನ ಸಂದೇಶ. ಹಣ-ಹೆಣಗಳ ರಾಶಿಗೆ ಹಣದ ಪೂಜೆ... (ಕವನ: ಎಂದು ಮುಕ್ತಿ ಭಾರತಕ್ಕೆ) ಎನ್ನುವಲ್ಲಿ ವಿಷಾದ, ಸಾತ್ವಿಕ ಆಕ್ರೋಶವಿದೆ. ಇಂಥದ್ದೇ ಇನ್ನೊಂದು ಸಾಲಿನಲ್ಲಿ 'ನರಭಕ್ಷಕ, ಗಿರಿ ಭಕ್ಷಕ, ಗಿಡ ಭಕ್ಷಕ... ಯಾರಿಲ್ಲ ಇಲ್ಲಿ' ಎನ್ನುವ ಮೂಲಕ ರಾಜಕಾರಣಿಗಳನ್ನು ಚುಚ್ಚಿದ್ದಾರೆ.

ಕವಿಯೇ ಹೇಳಿರುವಂತೆ, 'ಇದು ನವೋದಯ, ನವ್ಯ, ನವೋದಯ, ನವ್ಯೋತ್ತರ ಚುಟುಕು ಕಾವ್ಯಗಳನ್ನು ಒಳಗೊಂಡಿದೆ. ಕೆಲವು ಈಗಾಗಲೇ ಪ್ರಕಟಗೊಂಡಿವೆ. ಆದರೆ, ಹಿಂದಿನ ಚಿತ್ರೀಕರಣಕ್ಕೆ ಇದು ಸಹಕಾರಿ ಎಂಬ ಕಾರಣಕ್ಕೆ ಇಲ್ಲಿ ಸೇರಿಸಿದ್ದೇನೆ' ಎಂದು ಹೇಳಿದ್ದಾರೆ. ಹೈದರಾಬಾದ್ ಕರ್ನಾಟಕ ಭಾಗದ ಜನ ಮನದ ಮಿಡಿತಗಳ ಕಾವ್ಯ ದಾಖಲೆಯಾಗಿಯೂ ಈ ಕೃತಿಯನ್ನು ನೋಡಬಹುದು.

ವರ್ತಮಾನದ ಸಂಗತಿಗಳ ಕಥಾರೂಪ

ಕಾಡಿದ ಕಥೆಯೊಂದು ದೀರ್ಘ ಕಾಲದ ನಂತರ ಅಕ್ಷರ ರೂಪ ತಾಳಿದೆ. ಎರಡು ಭಿನ್ನ ಪಾತ್ರಗಳ ಮೂಲಕ ನಿರೂಪಿಸಲು ಹೊರಟ ಕಥೆಗಾರ ದ್ವಾರನಕುಂಟೆ ಪಾತಣ್ಣ ಅವರಿಗೆ ಕೊನೆಗೆ ಪ್ರೊಫೆಸರ್ ರಾಘವ ಪಾತ್ರವೇ ಮಹತ್ವದ್ದೆನಿಸಿದೆ. ಅದರ ಮೂಲಕವೇ ಸಮಾಜದ ಹುಳುಕು, ಆಸೆಬುರುಕತನ, ನೈತಿಕತೆಯ ಪತನವನ್ನು ತೋರಿಸಿದ್ದಾರೆ. ಈ ವೇಳೆ ಪ್ರೊಫೆಸರರನ್ನು ಸಮಾಜ ನಡೆಸಿಕೊಳ್ಳುವ ರೀತಿಯನ್ನೂ ಅವರು ವಿಷಾದದಿಂದಲೇ ಚಿತ್ರಿಸಿದ್ದಾರೆ.


ಶಾಲಿನಿ ಪಾತ್ರ ಸ್ತ್ರೀ ಶೋಷಣೆಯನ್ನು ಎತ್ತಿ ತೋರಿಸಿದೆ. ಶೋಷಿತ ಸ್ತ್ರೀಕುಲದ ಪ್ರತಿನಿಧಿಯಾಗಿ ಆಕೆ ಕಾಣುತ್ತಾಳೆ. ಆಕೆಯಲ್ಲಿ ಸಾಧಕಿಯಾಗುವ ಛಲವಿದೆ. ಆದರೆ, ಅವಳನ್ನು ಸೆಳೆಯುವ ಬಣ್ಣದ ಜಗತ್ತು, ಮತ್ತೆ ಮತ್ತೆ ಬಲಿಪಶುವಾಗುವ ನಾಯಕಿ... ಹೀಗೆ ಅಲ್ಲಲ್ಲಿ ನಾಟಕೀಯತೆಯೂ ಇಣುಕಿಹಾಕಿದೆ. ಸಿನಿಮೀಯತೆಯೂ ಇದೆ. ಆದರೆ, ಅಲ್ಲಲ್ಲಿ ರೋಚಕ ತಿರುವು ಪಡೆಯುತ್ತಾ ಕಾದಂಬರಿ ಬೆರಗು ಮೂಡಿಸುತ್ತದೆ. ಅಭಿವ್ಯಕ್ತಿ ಸ್ವಾತಂತ್ರ್ಯದ ಕುರಿತ ಚರ್ಚೆಯೂ ಕಥೆಯೊಳಗೆ ಸಾವಯವವಾಗಿ ಬೆರೆತಿದ್ದು, ಕಾದಂಬರಿ ವರ್ತಮಾನದ ವಿದ್ಯಮಾನಕ್ಕೂ ಸ್ಪಂದಿಸಿದೆ. ವಿಷಯದ ಗಹನತೆ, ಮನರಂಜನೆ ಎರಡೂ ದಿಕ್ಕಿನಲ್ಲಿ ಓದಿಸಿಕೊಂಡು ಹೋಗುವ ಕೃತಿ.



ಪು: 224 ₹200

ಕತ್ತಲ ದಾರಿ ದೂರ
ಲೇ: ದ್ವಾರನಕುಂಟೆ ಪಾತಣ್ಣ
ಪ್ರ: ಸ್ನೇಹ ಪ್ರಕಾಶನ ಬೆಂಗಳೂರು
ಸಂ: 9449655053

'ದೇವಸಭೆ'ಯ ಸುಖ ದುಃಖಗಳು




ಪು: 92 ₹60


ಸುಧರ್ಮಾ
ಲೇ: ಡಾ.ಕೂಡ್ಲಿ ಗುರುರಾಜ
ಪ್ರ: ಶ್ರೀ ಜಯತೀರ್ಥ ಪಬ್ಲಿಕೇಷನ್ಸ್
ಸಂ: 7760563260

ಮೈಸೂರಿನಲ್ಲಿ ಪುಟ್ಟದಾಗಿ ಆರಂಭವಾಗಿ 52 ವರ್ಷಗಳ ಕಾಲ ಮುಂದುವರಿದು ಬಂದ ಏಕೈಕ ಸಂಸ್ಕೃತ ಪತ್ರಿಕೆ 'ಸುಧರ್ಮಾ'ದ ವಿಸ್ತೃತ ಒಳನೋಟ ಕೊಟ್ಟಿದೆ ಡಾ. ಕೂಡ್ಲಿ ಗುರುರಾಜ ಅವರ ಈ ಕೃತಿ. ದೇಶದಲ್ಲಿ ಏಷ್ಯಾಟಿಕ್ ಸೊಸೈಟಿ ಆಫ್ ಬೆಂಗಾಲ್ ಸಂಸ್ಥೆ 1832ರಲ್ಲಿ ಹೊರತಂದ ಪ್ರಥಮ ಸಂಸ್ಕೃತ ದಿನ ಪತ್ರಿಕೆಯಿಂದ ಹಿಡಿದು ಆ ಬಳಿಕದ ಸಂಸ್ಕೃತ ಪತ್ರಿಕೋದ್ಯಮದ ಬೆಳವಣಿಗೆವರೆಗೆ ಸುದೀರ್ಘ ವಿವರ ಇಲ್ಲಿದೆ. ಪುಟ್ಟ ಪತ್ರಿಕೆ ಮುಂದೆ ಪದ್ಮ ಪ್ರಶಸ್ತಿ ಪಡೆಯುವವರೆಗೆ ಬೆಳೆದದ್ದು ಒಂದು ರೋಚಕ ಕಥನವೇ ಸರಿ. ಆದರೆ, ಆ ಪ್ರಶಸ್ತಿ ಪಡೆಯಲು ಸಂಪಾದಕರೇ ಇಲ್ಲವಾದ ವಿಷಾದದ ಉಲ್ಲೇಖವೂ ಇದೆ. ದೇವಸಭೆಯಲ್ಲಿ (ಸುಧರ್ಮ ಸಭೆ) ಬರುವ ಕಲಾಪದ ವಿಷಯಗಳಂತೆ ಇಲ್ಲಿಯೂ ಪತ್ರಿಕೆಯೊಂದರ ಸುಖ ದುಃಖಗಳ ಪರಿಚಯವೂ ಇದೆ.

ಮಾಧ್ಯಮ ಕ್ಷೇತ್ರವೇ ತೂಗುಯ್ಯಾಲೆಯ ಸ್ಥಿತಿಯಲ್ಲಿರುವಾಗ ಈ ಪತ್ರಿಕೆ ಇಂದು ಆಧುನಿಕ ತಂತ್ರಜ್ಞಾನವನ್ನೂ ಒಳಗೊಂಡು, ಡಿಜಿಟಲ್ ಆವೃತ್ತಿಯನ್ನು ತರುವವರೆಗೂ ಬೆಳೆದಿದೆ. ಸಂಸ್ಕೃತ ಎಂದರೆ ಧಾರ್ಮಿಕ ಆಚರಣೆಗಳು, ಪ್ರಾರ್ಥನೆಗಳಿಗಷ್ಟೇ ಸೀಮಿತವಲ್ಲ. ಮಾಧ್ಯಮ ಕ್ಷೇತ್ರದಲ್ಲೂ ಪರಿಣಾಮಕಾರಿಯಾಗಿ ಅಳವಡಿಸಬಹುದು ಎಂಬುದನ್ನು ಪತ್ರಿಕೆ ತೋರಿಸಿಕೊಟ್ಟಿದೆ ಎಂಬ ಹೇಳಿಕೆಯೊಂದಿಗೆ ಕೃತಿ ಕೊನೆಗೊಳ್ಳುತ್ತದೆ. ಸಂಸ್ಕೃತ ಪತ್ರಿಕೋದ್ಯಮ ಶಿಕ್ಷಣದ ಬಗೆಗೂ ಮಾಹಿತಿ ಈ ಕೃತಿಯಲ್ಲಿದೆ. ಅಪರೂಪದ ಮತ್ತು ಏಕೈಕ ಸಂಸ್ಕೃತ ದಿನ ಪತ್ರಿಕೆಯ ಬಗ್ಗೆ ತಿಳಿಯಬಯಸುವವರು, ಪತ್ರಿಕೋದ್ಯಮ ವಿದ್ಯಾರ್ಥಿಗಳು ಓದಬಹುದಾದ ಕೃತಿ.



ಹಸಿರ ಸೀರೆಗೆ ನೀಲಿ ಚಿತ್ತಾರದ ಕುರಿಂಜಿ



ನೀಲಕುರಿಂಜಿ

ಚಿತ್ರ-ಬರಹ: ಡಾ.ಕಲೀಮ್ ಉಲ್ಲಾ

ಇನ್ನೂ ಹನ್ನೆರಡು ವರ್ಷ ಹೋದರೆ ನಾವೆಲ್ಲಾ ಬದುಕಿರುತ್ತೇವೆಯೋ, ಇಲ್ಲ ನೆಗೆದುಬಿದ್ದಿರುತ್ತೇವೆಯೋ? ಯಾರಿಗೆ ಗೊತ್ತು. ಸಿಕ್ಕ ಛಾನ್ಸು ಬಿಡಬಾರದೆಂದು ಸೀತಾಳಯ್ಯನಗಿರಿ, ಮುಳ್ಳಯ್ಯನಗಿರಿ ಮತ್ತು ಬಾಬಾಬುಡನ್‌ಗಿರಿಗೆ ಈ ಸಲ ಜನ ಮುಗಿಬಿದ್ದು ಬರುತ್ತಲೇ ಇದ್ದಾರೆ. ನೀಲಕುರಿಂಜಿ ಎಂಬ ಹೂವು ಎಷ್ಟೆಲ್ಲಾ ಮಂದಿಯನ್ನು ಹೀಗೆ ಸೂಜಿಗಲ್ಲಿನಂತೆ ಸೆಳೆಯುತ್ತಲೇ ಇದೆ. ಪರಿಸರವನ್ನು ಕಣ್ತುಂಬಿಕೊಳ್ಳುವ ನಿಸರ್ಗವನ್ನು ನೋಡಿ ನಲಿಯುವ ಜನರೇ ಇಲ್ಲಿ ಹೆಚ್ಚಾಗಿ ಕಾಣುತ್ತಿದ್ದಾರೆ. ಈ ಹೂವನ್ನು ಒಂಟಿಯಾಗಿ ನೋಡಿದರೆ ಅಷ್ಟೇನು ವಿಶೇಷ ಅನ್ನಿಸದೇ ಇರಬಹುದು. ಅದೇ ಗುಂಪು ಗುಂಪಾಗಿ ಬೆಳೆದು ಹಸಿರು ಬೆಟ್ಟವನ್ನು ಅಪ್ಪಿ ಹಿಡಿದು ಹರಡಿದ ಅದರ ಹಠಮಾರಿತನವನ್ನು ಕಣ್ಣಾರೆ ಕಂಡಾಗ ಆಗುವ ಉಲ್ಲಾಸ ಹೇಳತೀರದ್ದು.

ಸದಾ ಬೋಳು ಬೆಟ್ಟಗಳಾಗಿ ಕಾಣುವ ಇಲ್ಲಿನ ಬೆಟ್ಟಗಳು ಈಗ ಈ ನೀಲ ಕುರಿಂಜಿ ಹೂವನ್ನು ಹಾಸಿಹೊದ್ದು ನವ ವಧುವಿನಂತೆ ಕಾಣುತ್ತಿವೆ. ನಿಸರ್ಗದ ಈ ಅಚ್ಚರಿ ನೋಡುಗರ ಪಾಲಿಗೊಂದು ತಾಜಾತನ. ಈ ಗಿಡ ಬೇರೆ ಸಮಯದಲ್ಲಿ ಅದೇ ಬೆಟ್ಟದಲ್ಲಿ ಇದ್ದರೂ ಕಣ್ಣಿಗೆ ಕಾಣದಂತೆ ನೆಲಕ್ಕೆ ಅಂಟಿಕೊಂಡು ಚಿಕ್ಕಳೆಯಾಗಿ ಬಿದ್ದಿರುತ್ತದೆ. ಒಂದು ಗಿಡ ಹೂ ಅರಳಿಸಿಕೊಂಡು ನಗಲು ಇಷ್ಟು ವರ್ಷಗಳ ಕಾಲ ತಪಸ್ಸು ಮಾಡುವುದು ನಿಜಕ್ಕೂ ಸೋಜಿಗ. ಹಸಿರು ಬೆಟ್ಟವನ್ನು ತನ್ನ ನವಿರಾದ ಬಣ್ಣದಿಂದ ಅಲಂಕರಿಸಿರುವ ಕುರಿಂಜಿ ಪ್ರವಾಸಿಗರ ಎದೆಯಲ್ಲಿ ಮತ್ತೆ ಮತ್ತೆ ಅರಳುತ್ತಿದೆ. ಶೋಲಾ ಅರಣ್ಯದ ತುದಿಯಲ್ಲಿ ನಿಂತು ಕಣ್ಣಿಗೆ ಕಾಣುವಷ್ಟು ದೂರದ ತನಕ ರಾಚಿರುವ ಈ ಹೂವಿನ ಲಾಲಿತ್ಯವನ್ನು ಸವಿಯುವ ರೀತಿಯೇ ಬೇರೆ ಬಗೆಯದು.

ಗಿರಿಯಲ್ಲಿ ಆಗಾಗ ಬೀಳುವ ತುಂತುರು ಮಳೆ, ಚಂಚಲ ಮೋಡಗಳ ಹೊಯ್ದಾಟ, ಐಸಿನಷ್ಟು ತಣ್ಣನೆಯ ಗಾಳಿ ಹೂವಿಗೂ ಒಂದು ಮಾಂತ್ರಿಕ ಸ್ಪರ್ಶವನ್ನು ಕೊಟ್ಟಿದೆ. ನಗರದ ಯಾಂತ್ರೀಕೃತ ಜೀವನಗಳಿಂದ ಕಂಗೆಟ್ಟವರು ಇಲ್ಲಿಗೆ ಓಡೋಡಿ ಬರುತ್ತಿದ್ದಾರೆ. ಸೃಷ್ಟಿಯ ಈ ವಿಸ್ಮಯ ಇವರೆಲ್ಲರ ಮನಸ್ಸುಗಳನ್ನು ಹದಗೊಳಿಸುತ್ತಿದೆ. ದೂರದಿಂದ ನೋಡಿದರೆ ಅಷ್ಟೇನು ಸ್ಪಷ್ಟವಾಗಿ ಕಾಣದ ಈ ಹೂವುಗಳನ್ನು ಹತ್ತಿರದಿಂದಲೇ ಹೋಗಿ ನೋಡಿ ನಲಿಯಬೇಕು. ದಿನಕಳೆದಂತೆ ಅರಳಿರುವ ಹೂಗಳು ಉದುರುತ್ತಿವೆ. ಹಲವೆಡೆ ಮೊಗ್ಗುಗಳು ಅರಳಲು ಸನ್ನದ್ಧವಾಗಿ ನಿಂತಿವೆ.

ಜೇನುನೊಣಗಳ ಪರಾಗ ಸ್ಪರ್ಶವನ್ನೂ ಇಲ್ಲಿ ಕಾಣಬಹುದು. ಕುರಿಂಜಿ ಹೂವಿನ ಮಕರಂದ ತುಂಬಾ ಅಮೂಲ್ಯ ಎಂದು ಅನೇಕರು ಹೇಳುತ್ತಾರೆ. ಇದರಲ್ಲಿ ನೈಸರ್ಗಿಕವಾದ ಅನೇಕ ಗುಣಗಳು ಹುದುಗಿರುವ ಬಗ್ಗೆಯೂ ಮಾತಾಡುತ್ತಾರೆ. ಆದರೆ ಇದರ ಜೇನು ಸಿಗುವುದು ಕಷ್ಟ. ಮೂರ್ನಾಲ್ಕು ವರ್ಷಗಳ ಹಿಂದೆ ಮೂಡಿಗೆರೆ ಬಳಿಯ ದೇವರಮನೆ ಕಾಡಿನ ಸಮೀಪ ಅರಳಿದ್ದ ಕುರಿಂಜಿ ಹೂವಿನ ಜೇನನ್ನು ಕಷ್ಟಬಿದ್ದು ಸಂಪಾದಿಸಿದ್ದೆವು. ಪರಿಮಳ ಭರಿತವಾದ ಅದರ ಘಮ ಈಗಲೂ ಮನಸ್ಸಲ್ಲಿ ಉಳಿದುಹೋಗಿದೆ. ಬಣ್ಣದ ಚಿಟ್ಟೆಗಳು ಕೂಡ ಈ ಹೂವಿನ ಸಂಗಕ್ಕಾಗಿ ಹಾತೊರೆದು ಬರುತ್ತಿವೆ.

ಸ್ಟ್ರೋಬಿಲಾಂಥೆಸ್ ಕುಂಥಿಯಾನಸ್ ಎಂಬ ವೈಜ್ಞಾನಿಕ ಹೆಸರಿನ ಈ ಹೂವುಗಳು ಜುಲೈನಿಂದ ಅಕ್ಟೋಬರ್ ನಡುವೆ ಅರಳುತ್ತವೆ. ಈ ಹೂವುಗಳು ಅರಳುವ ಸಮಯದಲ್ಲಿ ಮಳೆ ಹೆಚ್ಚು ಎಂದು ಸ್ಥಳೀಯ ಜನ ಮಾತಾಡುತ್ತಿದ್ದರು. ಕುರಿಂಜಿ ಪ್ರಭೇದದಲ್ಲಿ ಇನ್ನೂರೈವತ್ತು ಬಗೆಯ ಪ್ರಜಾತಿ ಹೂವುಗಳಿದ್ದಾವಂತೆ. ಇದರಲ್ಲಿ ಭಾರತದಲ್ಲಿ ಅರಳುವ ಕುರಿಂಜಿಗಳು ಸುಮಾರು ನಲವತ್ತೈದರ ಆಸುಪಾಸು. ಮುಖ್ಯವಾಗಿ ಪಶ್ಚಿಮ ಘಟ್ಟಗಳು ಹಾದು ಹೋದ ತಮಿಳುನಾಡಿನ ಊಟಿ, ಪಳನಿ, ಕೊಡೈಕೆನಾಲ್, ಏರ್ಕಾಡು ಹಾಗೂ ಕೇರಳದ ಮುನ್ನಾರ್‌ಗಳಲ್ಲಿ ಈ ಹೂವುಗಳು ಕಾಲಕಾಲಕ್ಕೆ ಅರಳುತ್ತವೆ. ತಮಿಳುನಾಡಿನ ಪಾಲಿಯನ್ ಬುಡಕಟ್ಟು ಜನಾಂಗದವರು ತಮ್ಮ ವಯಸ್ಸನ್ನು ಲೆಕ್ಕಹಾಕಲು ಈ ಪೊದೆಗಿಡಗಳು ಹೂಬಿಡುವ ಕಾಲ ಚಕ್ರವನ್ನೇ ಉಲ್ಲೇಖಿಸುತ್ತಾರೆ.

ನೀಲಕುರಿಂಜಿ ಅರಳಲು ಸತತ ಹನ್ನೆರಡು ವರ್ಷಗಳ ಸುದೀರ್ಘ ಸಮಯ ಏಕೆ ತೆಗೆದುಕೊಳ್ಳುತ್ತದೆ ಎಂಬ ಕುತೂಹಲದ ಪ್ರಶ್ನೆಗೆ ಕೇರಳ ಪ್ರವಾಸೋದ್ಯಮ ವೆಬ್‌ಸೈಟ್‌ನಲ್ಲಿ ಉತ್ತರವಿದೆ. 'ನೀಲಕುರಿಂಜಿ ಹೂವುಗಳ ಪರಾಗಸ್ಪರ್ಶಕ್ಕೆ ಹೆಚ್ಚು ಸಮಯ ಬೇಕಾಗುವುದರಿಂದ ಹೂವು ಅರಳಲು ಹನ್ನೆರಡು ವರ್ಷಗಳನ್ನು ತೆಗೆದುಕೊಳ್ಳುತ್ತದೆ. ಸಸ್ಯಶಾಸ್ತ್ರದಲ್ಲಿ, ಇದನ್ನು ಸಸ್ಯಗಳ 'ಬದುಕುಳಿಯುವ ಕಾರ್ಯವಿಧಾನ' ಎಂದು ಕರೆಯಲಾಗುತ್ತದೆ. ದೀರ್ಘ ಪರಾಗಸ್ಪರ್ಶವು ಪರಭಕ್ಷಕಗಳಿಂದ ಹಾಗೂ ಹವಾಮಾನ ಬದಲಾವಣೆಗಳಿಂದ ಆಗುವ ಸಂಪೂರ್ಣ ನಾಶದಿಂದ ತಪ್ಪಿಸುತ್ತದೆ. ಹೀಗಾಗಿ ಈ ಸಸ್ಯ ತನ್ನಲ್ಲಿ ಈ ಬದಲಾವಣೆ ಮಾಡಿಕೊಂಡು ತನ್ನ ಪ್ರಜಾತಿ ಉಳಿಸಿಕೊಳ್ಳುವ ಉಪಾಯ ಕಂಡುಕೊಂಡಿದೆ' ಎಂದು ಆ ವಿವರಣೆಯಲ್ಲಿ ವ್ಯಾಖ್ಯಾನಿಸಿದೆ.

ಒಮ್ಮೊಮ್ಮೆ ರಭಸವಾಗಿ ಬೀಸುವ ಥಂಡಿ ಗಾಳಿಗೆ, ಆಗಾಗ ಮುಸುಕುವ ಮಂಜಿಗೆ ತನ್ನ ಸೌಂದರ್ಯದ ಅಮಲನ್ನು ತೆರೆದಿಟ್ಟ ನೀಲಕುರಿಂಜಿ ಹೂವುಗಳ ಕುರಿತು ಅನೇಕರು ಬರೆಯುತ್ತಲೇ ಇದ್ದಾರೆ. ಕನ್ನಡ ಕವಿಯತ್ರಿ ಎಲ್.ಕೆ.ಸುಮಿತ್ರಾ 'ಗಿರಿಶಿಖರಗಳಿಗೆಲ್ಲ ನೀಲಿಯ ಹೊದಿಕೆ, ಹಸಿರು ಸೆರಗಿಗೆ ನೀಲ ಕಸೂತಿ, ಗಾಳಿಗೊಲೆಯುವ ಭೂರಮೆಯ ನೀಲಾಂಜನ, ಬೆಟ್ಟ ಕೋಡುಗಳಿಗೆಲ್ಲ ನೀಲಿಯ ಪೇಟ' ಎಂಬ ಮಾತು ಈ ಹೂವಿನ ಚೆಲುವಿಗೆ, ವೈಯ್ಯಾರಕ್ಕೆ ಬರೆದ ಭಾಷ್ಯದಂತಿದೆ.





ಮಜ ಮಜ ಮಜಕೂರ

• ಎಂ.ಎಸ್.ಪೂಜಾರ

ಡಶ್ಗ ಚಕ್ಕುಶೇಕ್ರಷ್ಟು ಕಥೆಯ

ಜಮಖಂಡಿ ಸಂಸ್ಥಾನ

• ಕಲೆ–ಪರಿಕಲ್ಪನೆ: ಸುರೇಶ ಆರ್. ಅರ್ಕಸಾಲಿ



ಇದು ಜಮಖಂಡಿ ಸಂಸ್ಥಾನದ ಅರಮನೆ. 1655ರಿಂದ ಸ್ವಾತಂತ್ರ್ಯ ಬಂದು ಭಾರತದ ಒಕ್ಕೂಟದಲ್ಲಿ ಒಂದಾಗುವವರೆಗೆ ಈ ಸಂಸ್ಥಾನ ಆಡಳಿತ ನಡೆಸಿತು. 1923ರಲ್ಲಿ ತನ್ನದೇ ಆದ ಶಾಸನಸಭೆಯನ್ನೂ ಹೊಂದಿ ಪ್ರಜೆಗಳಿಗೆ ಮೂಲಸೌಕರ್ಯ ಒದಗಿಸಿ ಮಾದರಿಯಾಗಿತ್ತು.



ಇದು ಜಮಖಂಡಿ ಅರಮನೆ ಮುಂಭಾಗದ ರಾಮತೀರ್ಥ. ಇಲ್ಲಿನ ಅರಮನೆಗೆ ರಾಮತೀರ್ಥ ಎಂದೂ ಕರೆಯುವುದುಂಟು. 1912ರಷ್ಟು ಹಿಂದೆಯೇ ಮಹಾರಾಜರು ತಮ್ಮ ರಾಮತೀರ್ಥ ಅರಮನೆಗೆ ವಿದ್ಯುತ್ ಸಂಪರ್ಕ ಕಲ್ಪಿಸಿದ್ದರು. ಎಲ್ಲ ಆಧುನಿಕ ಸೌಲಭ್ಯಗಳನ್ನು ಅರಮನೆ ಹಾಗೂ ಜಮಖಂಡಿ ನಗರ ಅಂದೇ ಹೊಂದಿತ್ತು



ಇದು ಜಮಖಂಡಿ ಅರಮನೆಯ ಪಾರ್ಶ್ವದಲ್ಲಿರುವ ರಂಗಮಂದಿರ. ಮಹಾರಾಜರ ಕಾಲದಲ್ಲಿ ಇಲ್ಲಿ ಕಲೆ, ಸಂಸ್ಕೃತಿಗೆ ಪ್ರೋತ್ಸಾಹವೂ ಇತ್ತು. ಸಾಂಸ್ಕೃತಿಕ ಅಭಿರುಚಿಯೂ ಜನರಲ್ಲಿತ್ತು



ಅರಮನೆಯು ಕಲಾತ್ಮಕ ವಾಸ್ತು ಶೈಲಿಯಿಂದ ಜನರನ್ನು ಆಕರ್ಷಿಸುತ್ತಿದೆ. ಪ್ರವಾಸಿಗರು, ಇತಿಹಾಸ ಅಧ್ಯಯನಾಸಕ್ತರು ಇಲ್ಲಿಗೆ ಸಾಕಷ್ಟು ಸಂಖ್ಯೆಯಲ್ಲಿ ಭೇಟಿ ನೀಡುತ್ತಾರೆ. ಅರಮನೆ ಜಮಖಂಡಿ ಸಂಸ್ಥಾನದ ವೈಭವವನ್ನು ಇಂದೂ ನೆನಪಿಸುತ್ತಿದೆ

ಗಣಿತದಲ್ಲಿ ಗರ್ದಿ ಗಮ್ಮತ್ತು

ಗೊಂದಲ ಗಣಿತ

1 ಒಂದು ಗುಂಪಿನಲ್ಲಿ ಗಂಡಸರು ಹೆಂಗಸರು ಹಾಗೂ ಮಕ್ಕಳು ಸೇರಿ 20 ಜನರಿದ್ದಾರೆ ಹಾಗೂ 20 ಬಿಸ್ಕತ್‌ಗಳು ಇವೆ. ನೀವು ಗಂಡಸರಿಗೆ ಮೂರು ಬಿಸ್ಕತ್, ಹೆಂಗಸರು, ಮಕ್ಕಳಿಗೆಲ್ಲಾ ಅರ್ಧ ಬಿಸ್ಕತ್‌ನಂತೆ ಹಂಚಿದಾಗ 20 ಬಿಸ್ಕತ್‌ಗಳು 20 ಜನರಿಗೆ ಸಮನಾಗಿ ಸಿಗಬೇಕು. ಹೇಗೆ ಹಂಚುವುದು?

ಪರಿಹಾರ: ಗಂಡಸರಿಗೆ: ಒಂದು ಗಂಡು ಮಗುವಿಗೆ 1 ಬಿಸ್ಕತ್

ಹೆಂಗಸರಿಗೆ: 5 ಹೆಂಗಸರಿಗೆ ಒಬ್ಬರಿಗೆ ತಲಾ 2ರಂತೆ (5X2) = 10 ಬಿಸ್ಕತ್

ಮಕ್ಕಳಿಗೆ: 14 ಮಕ್ಕಳಿಗೆ ಅರ್ಧ ಬಿಸ್ಕತ್‌ನಂತೆ 7 ಬಿಸ್ಕತ್.

ಒಟ್ಟು ಜನರು	ಬಿಸ್ಕತ್
ಗಂಡುಮಗು 3	3
ಹೆಣ್ಣು ಮಕ್ಕಳು 5	10
ಮಕ್ಕಳು 14	7
ಒಟ್ಟು	20

2

ಒಬ್ಬ ರಾಜನಲ್ಲಿ 17 ಆನೆಗಳಿದ್ದವು. ಆತ ಸಾಯುವಾಗ 1ನೇ ಮಗನಿಗೆ ಅರ್ಧ, ಎರಡನೇ ಮಗನಿಗೆ 1/3, ಮೂರನೇ ಮಗನಿಗೆ 1/9ನೇ ಆನೆಗಳನ್ನು ಕೊಡಬೇಕು ಎಂದು ಮೃತ್ಯುಪತ್ರದಲ್ಲಿ ಬರೆದಿದ್ದ. ಆದರೆ ಹಂಚುವುದು ಹೇಗೆ?

ಹೀಗೆ – ಹಂಚುವ: ಹಿರಿಯನೊಬ್ಬ 1 ಆನೆಯ ಮೇಲೆ ಹತ್ತಿಕೊಂಡು ಬಂದು ಅದನ್ನು 17 ಆನೆಗಳ ಜೊತೆಗೆ ಕಟ್ಟಿಸಿದ. ನಂತರ **18X1/2=9** ಆನೆ. **9** ಆನೆಗಳನ್ನು 1ನೇ ಮಗನಿಗೆ

18X1/3 = 6 ಆನೆ 2ನೇ ಮಗನಿಗೆ

18X 1/9 = 2 ಆನೆ ಮೂರನೇ ಮಗನಿಗೆ ಕೊಟ್ಟು ಉಳಿದ ಒಂದು ಆನೆಯ ಮೇಲೆ ತಾನು ಹತ್ತಿಕೊಂಡು ಹೋದ ಒಟ್ಟು **17** ಆನೆಗಳು ಹಂಚಿಕೆಯಾದವು.

ಟ್ವೆಂಟಿ – 20 ಮ್ಯಾಚ್

ಇಲ್ಲಿ ಕೊಟ್ಟಿರುವ ಊರುಗಳ ಹೆಸರಿಗೂ ಅಲ್ಲಿನ ವಿಶೇಷತೆಗೂ ಹೊಂದಿಸಿರಿ

1	ಕುಂದರಗಿ	A	ಹೆಂಚುಗಳು
2	ಕಲಘಟಗಿ	B	ಕಲ್ಲುಗಳು
3	ಕುಣಿಗಲ್	C	ವಡೆ
4	ಚನ್ನಪಟ್ಟಣ	D	ಕರದಂಟು
5	ಕಿನ್ನಾಳ	E	ಕಿತ್ತಳೆ
6	ಸಾಗರ	F	ದೋಸೆ
7	ಮೈಸೂರು	G	ಖಣಗಳು
8	ಧಾರವಾಡ	H	ಪೇಡೆ
9	ಮದ್ದೂರು	I	ದಾಳಿಂಬೆ
10	ದಾವಣಗೆರೆ	J	ಕಂಬಳಿ
11	ಬೆಂಗಳೂರು	K	ಕುದುರೆ
12	ಇಳಕಲ್	L	ಮರದ ಆಟಿಕೆ
13	ನವಲಗುಂದ	M	ತೊಟ್ಟಿಲು
14	ಗುಳೇದಗುಡ್ಡ	N	ರಸಬಾಳೆ
15	ಮಧುಗಿರಿ	O	ಬಣ್ಣದ ಬೊಂಬೆ
16	ನಂಜನಗೂಡು	P	ಮಸಾಲೆದೋಸೆ
17	ಅಮೀನಗಡ	Q	ಬೆತ್ತದ ಸಾಮಾನು
18	ಕೊಡಗು	R	ಜಮಖಾನ
19	ಶಹಬಾದ್	S	ಸೀರೆ
20	ಮಂಗಳೂರು	T	ವೀಳ್ಯದೆಲೆ

ಶಬ್ದಗಳೊಡನೆ ಸರಸ

ಎರಡು ಪ್ರಶ್ನೆಗಳಿಗೆ ಒಂದೇ ಉತ್ತರ.

ಪ್ರಶ್ನೆ 1: (ಹಣ್ಣಿನ ವ್ಯಾಪಾರಿಗೆ) ನನ್ನ ಎಮ್ಮೆ ಇಲ್ಲಿ ಹಾದು ಹೋಗಿದ್ದನ್ನು ನೋಡಿದೆಯಾ?
ಪ್ರಶ್ನೆ 2: ಈ ಹಣ್ಣಿನ ಧಾರಣೆ ಎಷ್ಟು?
ಉತ್ತರ: ನಾಕಾಣೆ

ಪ್ರಶ್ನೆ 1: ಮಲಗಲು ಇಲ್ಲಿ ಸ್ವಲ್ಪ ಸ್ಥಳಾವಕಾಶ ಕೊಡುವೆಯಾ?
ಪ್ರಶ್ನೆ 2: ಚಹಾ ಮಾಡಲು ಹಾಲಿಲ್ಲ. ಸ್ವಲ್ಪ ಕೊಡುವಿರಾ?
ಉತ್ತರ: ಚಿಕ್ಕಾಡದಾವು

ಪ್ರಶ್ನೆ 1:ನನ್ನ ಚೆಂಡು ನಿನ್ನ ಮಾಳಿಗೆ ಮೇಲೆ ಬಿದ್ದಿದೆ. ಹತ್ತಲೇ?
ಪ್ರಶ್ನೆ 2: ಈಗ ವೇಳೆ ಎಷ್ಟು?
ಉತ್ತರ: ಹತ್ತು

ಪ್ರಶ್ನೆ 1: ಬತ್ತಿ ಮಾಡಲು ಅರಳಿ ಕೊಡುವೆಯಾ?
ಪ್ರಶ್ನೆ 2: ಪೂಜೆಗೆ ಹೂ ಬೇಕಾಗಿದೆ ಕೊಡುವೆಯಾ?
ಉತ್ತರ: ಅರಳಿಲ್ಲ

ಪ್ರಶ್ನೆ 1: ಊಟದ ಜೊತೆಗೆ ಸ್ವಲ್ಪ ಹಿಂಡಿ ಬೇಕಾಗಿದೆ ಕೊಡುವೆಯಾ?
ಪ್ರಶ್ನೆ 2: ಊಟಕ್ಕೆ ಹಾಲು ಬೇಕಾಗಿವೆ ಕೊಡುವೆಯಾ?
ಉತ್ತರ: ಹಿಂಡಿಲ್ಲ



ಕಳೆದ ಸಂಚಿಕೆಯ ಮಜಕೂರ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಕಳೆದ ಸಂಚಿಕೆಯ ಸರಿ ಉತ್ತರಗಳು

ಟ್ವೆಂಟಿ – 20 ಮ್ಯಾಚ್

1-I, 2-L, 3-N, 4-Q, 5-P, 6-M, 7-H, 8-R, 9-T, 10-J 11-G, 12-F, 13-C, 14-E, 15-B, 16-A, 17-H, 18-S 19-D, 20-O

ಜಾಣಪದ ಆಟ

1 – ಕಾಲ 2 ಶೀಲ 3 ಕೋಲು 4– ಕುಲ 5–ಕಾಲು

ಅದಲು ಬದಲು

1 ಯಮನರಾಗ 2 ಹೊರಗೆಹಿತ 3 ಬಗೆಹರಿ 4 ಮೊಲದ ಚಿತ್ರ

ಪದ ಆಟ

1– ಸರತಿ 2 ಸಜಾತಿ 3 ಸದ್ಗತಿ 4 ಸನ್ಮತಿ 5 ಸವತಿ 6 ಸಮಿತಿ 7 ಸಮ್ಮತಿ

ಜಾಣಪದ ಆಟ

ಇಲ್ಲಿ ಕೊಟ್ಟಿರುವ ಮೂಲ ಅಕ್ಷರಗಳಿಗೆ ಪಕ್ಕದಲ್ಲಿರುವ ಸುಳಿವು ಆಧರಿಸಿ ಎರಡಕ್ಷರಗಳ ಹೊಸ ಪದ ರಚಿಸಿ

	ಬ	ಡ	ಸುಳಿವು
1			ಕಳೆಗುಂದು
2			ಯೋಚಿಸು
3			ತೊರೆ
4			ತಳ
5			ಕಿರಾತಕ



ಅದಲು ಬದಲು ಕಂಚಿ ಕದಲು

ಇಲ್ಲಿರುವ ಪದಗಳ ಅಕ್ಷರಗಳನ್ನೇ ಪುನಃ ಬಳಸಿಕೊಂಡು ಬೇರೊಂದು ಪದ ಮಾಡಿ

1. ಕೆಲಸಮಯ = ...
2. ಯಾರನಗ = ...
3. ಎಲ್ಲ ವಿಚಾರ = ...
4. ಇವನಗಡಿ = ...

ಕಳೆದ ಸಂಚಿಕೆಯ 'ಮಜಕೂರ'ಕ್ಕೆ ಪ್ರತಿಕ್ರಿಯಿಸಿದ ಆಯ್ದ ಮೂವರು ಪುಟಾಣಿಗಳು



ದಿಯಾ ಹುಡೇದಗಡ್ಡಿ
ಮೈಸೂರು



ಸಿರಿ ವೈ. ಭಟ್ಟ
ಸಾಗರ



ಶ್ರೇಯಾ ಜೆ.ಎಂ.
ಬೆಂಗಳೂರು

ಸರಿ ಉತ್ತರ ಮುಂದಿನ ವಾರ

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಮೂವರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಟ್ವೆಂಟಿ-20 ಮ್ಯಾಚ್ ಮತ್ತು ಪುಟಾಣಿ ಪದಬಂಧದ ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in

ಕೆನರಾ ಬ್ಯಾಂಕ್: ಹೊಸ ಅವಧಿ ಠೇವಣಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಸ್ವಾಮ್ಯದ ಕೆನರಾ ಬ್ಯಾಂಕ್, 666 ದಿನಗಳ ಹೊಸ ಅವಧಿ ಠೇವಣಿ ಯೋಜನೆಯನ್ನು ಪರಿಚಯಿಸಿದೆ.

₹ 2 ಕೋಟಿಗಿಂತಲೂ ಕಡಿಮೆ ಮೊತ್ತದ ಠೇವಣಿಗಳಿಗೆ ಈ ವಿಶೇಷ ಯೋಜನೆ ಲಭ್ಯವಾಗಲಿದೆ. ಶೇ 7.50ರವರೆಗೆ ಬಡ್ಡಿದರ ಸಿಗಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳಲ್ಲಿಯೇ ಗರಿಷ್ಠ ಪ್ರಮಾಣದ ಬಡ್ಡಿದರ ಇದಾಗಿದೆ ಎಂದೂ ಹೇಳಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ
ಸಕಲೇಶಪುರ

ಕೂಳೆ	400-420
ನಡುಗೋಲು	450-480
ರಾಶಿ	500-600
ರಾಶಿ ಉತ್ತಮ	550-600
ಜರಡಿ	600-650
ಹೆರಕಿದ್ದು	1000-1100
ಹಸಿರು ಸಾಧಾರಣ	600-700
ಹಸಿರು ಉತ್ತಮ	900-1000
ಹಸಿರು ಅತಿ ಉತ್ತಮ	1150-1250

ಕಾಳು ಮೆಣಸು 480

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	16200	16000	16100	218.10 ಸೆಂಟ್ಸ್
ಎಸಿ	9100	8400	8850	
ಆರ್‌ಪಿ	9800	9800	9850	ಲಂಡನ್
ಆರ್‌ಸಿ	4800	4500	4750	2155 ಡಾಲರ್ಸ್

ಡಿಎಫ್‌ಸಿಯಿಂದ ₹ 164 ಕೋಟಿ ಸಾಲ ಪಡೆದ ಆರ್ಬ್ ಎನರ್ಜಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಮೆರಿಕದ ಅಂತರ ರಾಷ್ಟ್ರೀಯ ಅಭಿವೃದ್ಧಿ ಹಣಕಾಸು ನಿಗಮದಿಂದ (ಡಿಎಫ್‌ಸಿ) ₹164 ಕೋಟಿ ಸಾಲ ಪಡೆದಿರುವುದಾಗಿ ಆರ್ಬ್ ಎನರ್ಜಿ ಸಂಸ್ಥೆಯು ತಿಳಿಸಿದೆ.

ಮೊದಲ ಸುತ್ತಿನಲ್ಲಿ ಪಡೆದ ₹82 ಕೋಟಿ ಸಾಲವನ್ನು ಸದುಪಯೋಗ ಪಡಿಸಿಕೊಂಡ ಆಧಾರದ ಮೇಲೆ ಡಿಎಫ್‌ಸಿಯು ಎರಡನೇ ಸುತ್ತಿನ ಸಾಲ ಮಂಜೂರು ಮಾಡಿದೆ ಎಂದು ಸಂಸ್ಥೆಯು ಪ್ರಕಟಣೆಯಲ್ಲಿ ತಿಳಿಸಿದೆ.

ಎಸ್‌ಎಂಇಗಳಿಗೆ ಹಣಕಾಸಿನ ನೆರವು ನೀಡಲು ಈ ಸಾಲವನ್ನು ಬಳಸಿಕೊಳ್ಳಲಾಗುವುದು ಎಂದು ಆರ್ಬ್ ಎನರ್ಜಿಯ ಸಹಸ್ಥಾಪಕ ಡೆಮಿಯನ್ ಮಿಲ್ಲರ್ ತಿಳಿಸಿದರು.

ಡಿಎಫ್‌ಸಿ ನೀಡಿರುವ ಸಾಲದಿಂದ ಸಂಸ್ಥೆಯು ಹೆಚ್ಚುವರಿ ಉದ್ಯೋಗ ಸೃಷ್ಟಿಸಲಿದೆ ಮತ್ತು ಉದ್ದಿಮೆಗಳಿಗೆ ಇಂಧನ ಬಳಕೆಯ ಮೇಲಿನ ವೆಚ್ಚ ತಗ್ಗಿಸಲು ನೆರವಾಗಲಿದೆ ಎಂದು ಡಿಎಫ್‌ಸಿಯ ಮುಖ್ಯ ಹವಾಮಾನ ಅಧಿಕಾರಿ ಜೇಕ್ ಲೆವಿನ್ ಹೇಳಿದರು.

ಆರ್ಬ್ ಎನರ್ಜಿ ಭಾರತದಲ್ಲಿ ಸೌರಶಕ್ತಿ ಪರಿಹಾರಗಳನ್ನು ಒದಗಿಸುವ ಪೂರೈಕೆದಾರ ಸಂಸ್ಥೆಯಾಗಿದೆ. 2006ರಿಂದ ಕಾರ್ಯನಿರ್ವಹಿಸುತ್ತಿದ್ದು, ಬೆಂಗಳೂರಿನಲ್ಲಿ ಮುಖ್ಯ ಕಚೇರಿ ಹೊಂದಿದೆ. ಸೌರಫಲಕ ತಯಾರಿಕೆ, ವಿನ್ಯಾಸ, ಅಳವಡಿಕೆ ಮತ್ತು ಸಂಬಂಧಿಸಿದ ಸೇವೆಗಳನ್ನು ನೀಡುತ್ತಿದೆ. ವಾಣಿಜ್ಯ ಮತ್ತು ಕೈಗಾರಿಕಾ ಗ್ರಾಹಕರಿಗೆ ಐದು ವರ್ಷಗಳವರೆಗೆ ಹಣಕಾಸಿನ ನೆರವನ್ನೂ ಸಹ ನೀಡುತ್ತಿದೆ.

ಬ್ಯಾಂಕ್ ಆಫ್ ಬರೋಡಾದಿಂದ ಹಬ್ಬದ ವಿಶೇಷ ಕೊಡುಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬ್ಯಾಂಕ್ ಆಫ್ ಬರೋಡಾ, ಹಬ್ಬದ ಋತುವಿನ ಪ್ರಯುಕ್ತ ತನ್ನ ಗ್ರಾಹಕರಿಗೆ ಹಲವು ಕೊಡುಗೆಗಳನ್ನು ಘೋಷಿಸಿದೆ.

ಗೃಹ ಮತ್ತು ಕಾರು ಸಾಲಗಳು ಆಕರ್ಷಕ ಬಡ್ಡಿದರಗಳೊಂದಿಗೆ, ಪ್ರಕ್ರಿಯೆ ಶುಲ್ಕ ಇಲ್ಲದೇ ಪಡೆಯಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಬ್ಯಾಂಕ್‌ನ ಗೃಹ ಸಾಲವು ಶೇ 7.95ರ ಬಡ್ಡಿದರದಲ್ಲಿ ಆರಂಭ ಆಗುತ್ತದೆ. ಯಾವುದೇ ಪ್ರಕ್ರಿಯೆ ಶುಲ್ಕ ಇಲ್ಲ ಎಂದು ತಿಳಿಸಿದೆ. ಶೇ 7.95ರ ವಿಶೇಷ ಬಡ್ಡಿದರದಲ್ಲಿ ಕಾರು ಸಾಲ ಪಡೆಯಬಹುದು ಎಂದು ಹೇಳಿದೆ.

'ನಮ್ಮ ಗ್ರಾಹಕರ ಆಕಾಂಕ್ಷೆಗಳನ್ನು ಈಡೇರಿಸಲು ಮತ್ತು ಹಬ್ಬದ ಆಚರಣೆಯ ಸಂಭ್ರಮವನ್ನು ಇನ್ನಷ್ಟು ಹೆಚ್ಚಿಸಲು ಆಕರ್ಷಕ ಕೊಡುಗೆಗಳ ಮೂಲಕ ಬೆಂಬಲ ನೀಡುವುದು ನಮ್ಮ ಗುರಿಯಾಗಿದೆ' ಎಂದು ಬ್ಯಾಂಕ್‌ನ ಕಾರ್ಯನಿರ್ವಾಹಕ ನಿರ್ದೇಶಕ ಅಜಯ್ ಕೆ. ಕುರಾನಾ ಹೇಳಿದರು.

'ತ್ವರಿತವಾಗಿ ಸಾಲ ವಿತರಣೆ ಮಾಡಲು ಡಿಜಿಟಲ್ ಲೆಂಡಿಂಗ್ ಅಭಿಯಾನವನ್ನೂ ಆರಂಭಿಸಲಾಗಿದೆ' ಎಂದು ಅವರು ತಿಳಿಸಿದರು.

ಇಂಧನ ಬೇಡಿಕೆ 10 ತಿಂಗಳ ಕನಿಷ್ಠ

ಬೆಂಗಳೂರು (ರಾಯಿಟರ್ಸ್): ದೇಶದ ಇಂಧನ ಬೇಡಿಕೆಯು ಆಗಸ್ಟ್‌ಗೆ ಹೋಲಿಸಿದರೆ ಸೆಪ್ಟೆಂಬರ್‌ನಲ್ಲಿ ಶೇ 3.6ರಷ್ಟು ಕಡಿಮೆ ಆಗಿ, 1.71 ಕೋಟಿ ಟನ್‌ಗೆ ತಲುಪಿದೆ. 2021ರ ನವೆಂಬರ್ ನಂತರದ ಕನಿಷ್ಠ ಮಟ್ಟ ಇದಾಗಿದೆ.

ಪೆಟ್ರೋಲಿಯಂ ಯೋಜನೆ ಮತ್ತು ವಿಶ್ಲೇಷಣಾ ಘಟಕದ (ಪಿಪಿಎಸಿ) ಇರುವ ಮಾಹಿತಿಯ ಪ್ರಕಾರ, ಆಗಸ್ಟ್‌ನಲ್ಲಿ 1.78 ಕೋಟಿ ಟನ್‌ನಷ್ಟು ಬೇಡಿಕೆ ಇತ್ತು. 2021ರ ಸೆಪ್ಟೆಂಬರ್‌ಗೆ ಹೋಲಿಸಿದರೆ ಬೇಡಿಕೆಯು ಶೇ 8.1ರಷ್ಟು ಹೆಚ್ಚಾಗಿದೆ.

ಸಂಸ್ಕರಣಾಗಾರಗಳನ್ನು ಸುಸ್ಥಿತಿಯಲ್ಲಿ ಇಡಲು ನಿರ್ವಹಣಾ ಕೆಲಸ ಕೈಗೆತ್ತಿಕೊಂಡಿದ್ದೂ ಬೇಡಿಕೆ ಕಡಿಮೆ ಆಗಲು ಒಂದು ಕಾರಣ ಎಂದು ಚಿಕಾಗೊದ ಪ್ರೈಸ್ ಫ್ಯೂಚರ್ ಗ್ರೂಪ್‌ನ ವಿಶ್ಲೇಷಕ ಫಿಲ್ ಫ್ಲಿನ್ ಹೇಳಿದ್ದಾರೆ.

ಚಿನ್ನ, ಬೆಳ್ಳಿ (ಬೆಂಗಳೂರು)

ಸ್ಟ್ಯಾಂಡರ್ಡ್ ಚಿನ್ನ (10ಗ್ರಾಂ)	₹53,450
ಆಭರಣ ಚಿನ್ನ	₹4,918
ಬೆಳ್ಳಿ ಕೆ.ಜಿಗೆ	₹61,800

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1710 (1680)
ಸೋಯಾ (ರಿಫೈನ್ಡ್)	₹1250 (1237)
ಸೂರ್ಯಕಾಂತಿ (ರಿಫೈನ್ಡ್)	₹1270 (1350)
ಪಾಮೋಲಿನ್	₹945 (935)

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹440
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹445

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹151.50
ಆರ್‌ಎಸ್‌ಎಸ್-5	₹142
ಗುಡ್ ಲಾಟ್	₹137

ಕೇಂದ್ರ ಪೆಟ್ರೋಲಿಯಂ ಸಚಿವ ಹರ್‌ದೀಪ್ ಸಿಂಗ್ ಪುರಿ

'ರಷ್ಯಾ ತೈಲ ಖರೀದಿ ನಿಲ್ಲದು'

ವಾಷಿಂಗ್ಟನ್ (ಪಿಟಿಐ): 'ರಷ್ಯಾದಿಂದ ಕಚ್ಚಾ ತೈಲ ಖರೀದಿಸುವುದನ್ನು ನಿಲ್ಲಿಸುವಂತೆ ನಮಗೆ ಯಾವುದೇ ದೇಶವೂ ಕೇಳಿಲ್ಲ. ಯಾವುದೇ ದೇಶದಿಂದ ಬೇಕಿದ್ದರೂ ಕಚ್ಚಾ ತೈಲ ಖರೀದಿಸುವುದನ್ನು ಭಾರತ ಮುಂದುವರಿಸಲಿದೆ' ಎಂದು ಪೆಟ್ರೋಲಿಯಂ ಸಚಿವ ಹರ್‌ದೀಪ್ ಸಿಂಗ್ ಪುರಿ ಹೇಳಿದರು.

ಮುಖ್ಯಾಂಶಗಳು
- ರಷ್ಯಾದಿಂದ ರಿಯಾಯಿತಿ ದರದಲ್ಲಿ ತೈಲ ಆಮದು
- ಉತ್ಪಾದನೆ ಕಡಿತದಿಂದ ಆಗಲಿರುವ ಸಮಸ್ಯೆ ತಗ್ಗಿಸುವ ವಿಶ್ವಾಸ



ಶುದ್ಧ ಇಂಧನದ ಕುರಿತು ಅಮೆರಿಕದ ಅಧಿಕಾರಿಗಳೊಂದಿಗೆ ಮಾತುಕತೆ ನಡೆಸಲು ಅಮೆರಿಕಕ್ಕೆ ಬಂದಿರುವ ಅವರು, 'ಕೈಗೆಟಕುವ ದರದಲ್ಲಿ ಇಂಧನವನ್ನು ಗ್ರಾಹಕರಿಗೆ ನೀಡುವುದು ಸರ್ಕಾರದ ನೈತಿಕ ಕರ್ತವ್ಯ' ಎಂದು ಹೇಳಿದರು.

ರಷ್ಯಾದಿಂದ ಹೆಚ್ಚಿನ ಪ್ರಮಾಣದಲ್ಲಿ ತೈಲ ಖರೀದಿಸುತ್ತಿರುವ ದೇಶಗಳ ಸಾಲಿನಲ್ಲಿ ಭಾರತವು ಎರಡನೇ ಸ್ಥಾನದಲ್ಲಿದೆ. ಚೀನಾ ಮೊದಲ ಸ್ಥಾನ ಪಡೆದುಕೊಂಡಿದೆ. ರಷ್ಯಾವು ಉಕ್ರೇನ್ ಮೇಲೆ ದಾಳಿ ಆರಂಭಿಸಿದ ಬಳಿಕ ಪಾಶ್ಚಿಮಾತ್ಯ ದೇಶಗಳು ರಷ್ಯಾದ ಜೊತೆಗೆ ವ್ಯಾಪಾರ ನಡೆಸುವುದನ್ನು ನಿಲ್ಲಿಸಿವೆ. ಹೀಗಾಗಿ ರಷ್ಯಾವು ರಿಯಾಯಿತಿ ದರದಲ್ಲಿ ಭಾರತಕ್ಕೆ ತೈಲ ಪೂರೈಕೆ ಮಾಡುತ್ತಿದೆ.

'ನವೆಂಬರ್‌ನಿಂದ ದಿನಕ್ಕೆ 20 ಲಕ್ಷ ಬ್ಯಾರಲ್‌ನಷ್ಟು ಉತ್ಪಾದನೆ ಕಡಿತ ಮಾಡಲು ಒಪೆಕ್ + ನಿರ್ಧರಿಸಿವೆ. ಇದರಿಂದ ಆಗಲಿರುವ ಸಮಸ್ಯೆಯನ್ನು ತಗ್ಗಿಸುವ ವಿಶ್ವಾಸ ಇದೆ ಎಂದು ಸಚಿವ ಪುರಿ ತಿಳಿಸಿದ್ದಾರೆ.

ಅಮೆರಿಕದ ಇಂಧನ ಕಾರ್ಯದರ್ಶಿ ಜೆನ್ನಿಫರ್ ಗ್ರಾನ್ಹೋಮ್ ಅವರೊಂದಿಗಿನ ದ್ವಿಪಕ್ಷೀಯ ಸಭೆಯ ಬಳಿಕ ಮಾತನಾಡಿದ ಅವರು, 'ನಿಮ್ಮ ನೀತಿಗಳ ಬಗ್ಗೆ ನಿಮಗೆ ಸ್ಪಷ್ಟತೆ ಇದ್ದರೆ, ಅಂದರೆ, ಇಂಧನ ಸುರಕ್ಷತೆ ಮತ್ತು ಇಂಧನ ಲಭ್ಯತೆಯ ಬಗ್ಗೆ ನಂಬಿಕೆ ಇದ್ದರೆ ಯಾವುದೇ ಮೂಲಗಳಿಂದ ಬೇಕಿದ್ದರೂ ನೀವು ಖರೀದಿ ಮಾಡುತ್ತೀರಿ' ಎಂದು ಹೇಳಿದ್ದಾರೆ.

ರಷ್ಯಾದ ತೈಲ ಖರೀದಿಸುತ್ತಿರುವುದನ್ನು ಭಾರತ ಸರ್ಕಾರವು ಸಮರ್ಥಿಸಿಕೊಂಡಿದೆ. ಎಲ್ಲಿ ಅಗ್ಗದ ದರಕ್ಕೆ ತೈಲ ಸಿಗುವುದೋ ಅಲ್ಲಿಂದ ಖರೀದಿಸುವುದಾಗಿ ಹೇಳಿದೆ.

ತೈಲ ಉತ್ಪಾದನೆ ಕಡಿತಕ್ಕೆ ಮಾರುಕಟ್ಟೆಯು ಈಗಾಗಲೇ ಸಿದ್ಧತೆ ನಡೆಸುತ್ತಿದೆ. ಮಾರುಕಟ್ಟೆಗೆ ಬಿಡುಗಡೆ ಮಾಡುವ ತೈಲದಲ್ಲಿ ಭಾರಿ ಪ್ರಮಾಣದಲ್ಲಿ ಕೊರತೆ ಎದುರಾದಲ್ಲಿ ಆಗ ಬೆಲೆ ಏರಿಕೆ ಆಗಲಿದೆ. ಅದರಿಂದಾಗಿ ಆರ್ಥಿಕ ಹಿಂಜರಿತದ ಸ್ಥಿತಿಯು ಇನ್ನಷ್ಟು ತೀವ್ರಗೊಳ್ಳಲಿದ್ದು, ಬೇಡಿಕೆ ಕುಸಿತಕ್ಕೆ ಕಾರಣವಾಗಲಿದೆ ಎಂದು ತಿಳಿಸಿದ್ದಾರೆ.

ಮುಂಬೈ ಧಾರಣೆ

ಶೇಂಗಾ
8–10–2022

ಜಾವಾ 70/80(ಹೊಸ)	11150-11200
ಜಾವಾ 80/90(ಹೊಸ)	10950-11000
ದಪ್ಪ ಮಧ್ಯಪ್ರದೇಶ(ಹೊಸ)	10100-10200
ದಪ್ಪ ಗುಜರಾತ್(ಹೊಸ)	10600-10700

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1720 (1690)
ಒಂದು ವಾರದ ಡೆಲಿವರಿ	1715 (1685)
ಸೋಯಾ ಕಚ್ಚಾ	1200 (1180)
ಪಾಮ್ ವಾರದ ಡೆಲಿವರಿ	943 (933)
ಸೂರ್ಯಕಾಂತಿ ಎಣ್ಣೆ ಕಚ್ಚಾ	1280 (1270)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)
ಅಪರಂಜಿ ಚಿನ್ನ 10ಗ್ರಾಂ
51,545 (51,600)
ಬೆಳ್ಳಿ ಕೆ.ಜಿ 60,100 (60,900)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ನೈಸರ್ಗಿಕ ಅನಿಲ ದರ ಶೇ 40ರಷ್ಟು ಏರಿಕೆ ಪರಿಣಾಮ

ಸಿಎನ್‌ಜಿ ದರ ₹ 3ರಷ್ಟು ಹೆಚ್ಚಳ

ನವದೆಹಲಿ (ಪಿಟಿಐ): ಸಿಎನ್‌ಜಿ ಮತ್ತು ಕೊಳವೆ ಮೂಲಕ ಪೂರೈಕೆಯಾಗುವ ಅಡುಗೆ ಅನಿಲ (ಪಿಎನ್‌ಜಿ) ದರವನ್ನು ತಲಾ ₹ 3ರಷ್ಟು ಹೆಚ್ಚಿಸಲಾಗಿದೆ.

ಇಂದ್ರಪ್ರಸ್ಥ ಗ್ಯಾಸ್ ಲಿಮಿಟೆಡ್‌ನ (ಐಜಿಎಲ್) ಜಾಲತಾಣದಲ್ಲಿ ಇರುವ ಮಾಹಿತಿಯ ಪ್ರಕಾರ, ಸಿಎನ್‌ಜಿ ದರ ಪ್ರತಿ ಕೆ.ಜಿಗೆ ₹3ರಷ್ಟು ಏರಿಕೆ ಮಾಡಲಾಗಿದೆ. ನಾಲ್ಕು ತಿಂಗಳ ಬಳಿಕ ಇದೇ ಮೊದಲ ಬಾರಿಗೆ ದರ ಹೆಚ್ಚಿಸಲಾಗಿದೆ. ಇದರಿಂದಾಗಿ ದೆಹಲಿಯಲ್ಲಿ ಸಿಎನ್‌ಜಿ ದರವು ಕೆ.ಜಿಗೆ ₹78.61ಕ್ಕೆ ತಲುಪಿದೆ.



ಪಿಎನ್‌ಜಿ ದರವು ಪ್ರತಿ ಕ್ಯುಬಿಕ್ ಮೀಟರ್‌ಗೆ ₹3ರಷ್ಟು ಹೆಚ್ಚಿಸಲಾಗಿದೆ. ಮಾರಾಟ ದರವು ₹53.59ಕ್ಕೆ ಏರಿಕೆ ಆಗಿದೆ. ಮಾರ್ಚ್ 7ರ ಬಳಿಕ 14ನೇ ಬಾರಿಗೆ ಸಿಎನ್‌ಜಿ ದರ ಹೆಚ್ಚಿಸಲಾಗಿದೆ. ಅಂತೆಯೇ, 2021ರ ಆಗಸ್ಟ್ ಬಳಿಕ 10ನೇ ಬಾರಿಗೆ ಪಿಎನ್‌ಜಿ ದರದಲ್ಲಿ ಏರಿಕೆ ಮಾಡಲಾಗಿದೆ.

ಮುಂಬೈನಲ್ಲಿ ವಹಿವಾಟು ನಡೆಸುವ ಮಹಾನಗರ್ ಗ್ಯಾಸ್ ಲಿಮಿಟೆಡ್ (ಎಂಜಿಎಲ್) ಈಗಾಗಲೇ ಸಿಎನ್‌ಜಿ ದರ ಕೆ.ಜಿಗೆ ₹6 ಮತ್ತು ಪಿಎನ್‌ಜಿ ದರ ಪ್ರತಿ ಕ್ಯುಬಿಕ್ ಮೀಟರ್‌ಗೆ ₹4ರಷ್ಟು ಹೆಚ್ಚಳ ಮಾಡಿದೆ.

ಕೇಂದ್ರ ಸರ್ಕಾರವು ಅಕ್ಟೋಬರ್ 1 ರಿಂದ ಜಾರಿಗೆ ಬರುವಂತೆ ನೈಸರ್ಗಿಕ ಅನಿಲ ದರವನ್ನು ಶೇ 40ರಷ್ಟು ಹೆಚ್ಚಳ ಮಾಡಿರುವುದರಿಂದ ಸಿಎನ್‌ಜಿ ಮತ್ತು ಪಿಎನ್‌ಜಿ ದರ ಏರಿಕೆ ಮಾಡಲಾಗಿದೆ.

ಮೂವರ ಸಾವು; ಸ್ಫೋಟದ ಹಿಂದೆ ಉಕ್ರೇನ್ ಕೈವಾಡ: ಕ್ರಿಮಿಯಾ ಅಧಿಕಾರಿಗಳ ಆರೋಪ

ರಷ್ಯಾ-ಕ್ರಿಮಿಯಾ ಸಂಪರ್ಕ ಸೇತುವೆ ಸ್ಫೋಟ

ಹಾರ್ಕಿವ್ (ಎಪಿ): ರಷ್ಯಾ ಮತ್ತು ಕ್ರಿಮಿಯಾವನ್ನು ಸಂಪರ್ಕಿಸುವ ಸೇತುವೆ ಮೇಲೆ ಟ್ರಕ್ ಬಾಂಬ್ ಸ್ಫೋಟಗೊಂಡ ಪರಿಣಾಮ ಸೇತುವೆಯ ಭಾಗವೊಂದು ಕುಸಿದಿದ್ದು, ಮೂವರು ಮೃತಪಟ್ಟಿದ್ದಾರೆ ಎಂದು ರಷ್ಯಾದ ಅಧಿಕಾರಿಗಳು ಶನಿವಾರ ಹೇಳಿದ್ದಾರೆ.

ದಕ್ಷಿಣ ಉಕ್ರೇನ್‌ನಲ್ಲಿ ಯುದ್ಧದಲ್ಲಿ ತೊಡಗಿಕೊಂಡಿರುವ ರಷ್ಯಾದ ಯೋಧರಿಗೆ ಸಾಮಗ್ರಿಗಳನ್ನು ತಲುಪಿಸುವ ಪ್ರಮುಖ ಮಾರ್ಗ ಇದಾಗಿತ್ತು.

ಈ ಸ್ಫೋಟದ ಹಿಂದೆ ಉಕ್ರೇನ್ ಕೈವಾಡವಿದೆ ಎಂದು ಕ್ರಿಮಿಯಾದ ರಷ್ಯಾ ಬೆಂಬಲಿತ ಪ್ರಾದೇಶಿಕ ಸಂಸತ್‌ನ ಸ್ಪೀಕರ್ ಆರೋಪಿಸಿದ್ದಾರೆ. ಈ ಸೇತುವೆಯನ್ನು ಸ್ಫೋಟಿಸುವುದಾಗಿ ಉಕ್ರೇನ್‌ನ ಅಧಿಕಾರಿಗಳು ಈ ಹಿಂದೆ ಹಲವು ಬಾರಿ ಬೆದರಿಕೆಯೊಡ್ಡಿದ್ದರು. ಆದರೆ ಈ ಬಗ್ಗೆ ಉಕ್ರೇನ್ ಯಾವುದೇ ಹೇಳಿಕೆ ನೀಡಿಲ್ಲ.



ರಷ್ಯಾ ಮತ್ತು ಕ್ರಿಮಿಯಾವನ್ನು ಸಂಪರ್ಕಿಸುವ ಸೇತುವೆ ಮೇಲೆ ಟ್ರಕ್ ಬಾಂಬ್ ಸ್ಫೋಟಗೊಂಡ ಪರಿಣಾಮ ಸರಕು ಸಾಗಣೆ ರೈಲೊಂದಕ್ಕೆ ಬೆಂಕಿ ಹತ್ತಿಕೊಂಡಿತು —ಎಎಫ್‌ಪಿ ಚಿತ್ರ

ರಷ್ಯಾದ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರು 70ನೇ ವರ್ಷಕ್ಕೆ ಕಾಲಿಟ್ಟ ಮರುದಿನ ಈ ಸ್ಫೋಟ ನಡೆದಿದೆ. ಪುಟಿನ್ ಅವರನ್ನು ಅವಮಾನಿಸುವ ಉದ್ದೇಶದಿಂದ ಈ ಕೃತ್ಯ ಎಸಗಲಾಗಿದೆ ಎಂದು ಮೂಲಗಳು ಹೇಳಿವೆ.

ಸೇತುವೆಯಲ್ಲಿ ಬಾಂಬ್ ಸ್ಫೋಟಗೊಂಡ ಪರಿಣಾಮ ಇಂಧನ ಸಾಗಿಸುತ್ತಿದ್ದ ರೈಲೊಂದರ ಏಳು ಟ್ಯಾಂಕರ್‌ಗಳಿಗೆ ಬೆಂಕಿ ಹೊತ್ತು ಕೊಂಡಿದೆ. ಈ ಸೇತುವೆಯು ರೈಲುಗಳ ಹಾಗೂ ವಾಹನಗಳ ಸಂಚಾರಕ್ಕೆ ಮಾರ್ಗಗಳನ್ನು ಹೊಂದಿದೆ. ವಾಹನಗಳು ಸಂಚರಿಸುವ ಒಂದು ಮಾರ್ಗ ಕುಸಿದಿದೆ ಎಂದು ರಷ್ಯಾದ ರಾಷ್ಟ್ರೀಯ ಭಯೋತ್ಪಾದಕ ನಿಗ್ರಹ ಸಮಿತಿ ಹೇಳಿದೆ.

ಕಪ್ಪುಸಮುದ್ರ ಮತ್ತು ಅಜೋವ್ ಸಮುದ್ರವನ್ನು ಸಂಪರ್ಕಿಸುವ ಕೆರ್ಚ್ ಜಲಸಂಧಿಗೆ ಅಡ್ಡಲಾಗಿ ನಿರ್ಮಿಸಿರುವ 19 ಕಿ.ಮೀ. ಉದ್ದದ ಈ ಸೇತುವೆಯನ್ನು 2018ರಲ್ಲಿ ಬಳಕೆಗೆ ಮುಕ್ತಗೊಳಿಸಲಾಗಿತ್ತು. ಇದು ಯೂರೋಪ್‌ನಲ್ಲಿಯೇ ಅತಿ ಉದ್ದದ ಸೇತುವೆಯಾಗಿದೆ.

ಸೇತುವೆ ದುರಸ್ತಿ: ಹಾನಿಗೀಡಾದ ಸೇತುವೆ ಭಾಗವನ್ನು ಕೆಲವೇ ಗಂಟೆಗಳಲ್ಲಿ ದುರಸ್ತಿ ಮಾಡಲಾಗಿದ್ದು, ಸಂಜೆಯ ವೇಳೆಗೆ ರೈಲು ಸಂಚಾರದ ಪ್ರಾಯೋಗಿಕ ಪರೀಕ್ಷೆ ನಡೆಸಲಾಯಿತು.

15 ದಿನಗಳಿಗಾಗುವಷ್ಟು ಇಂಧನ ಸಂಗ್ರಹ ಕ್ರಿಮಿಯಾದಲ್ಲಿದೆ ಎಂದು ರಷ್ಯಾದ ಇಂಧನ ಸಚಿವಾಲಯ ಹೇಳಿದೆ.

ಸಂಭ್ರಮ: ಸೇತುವೆ ಮೇಲೆ ಸ್ಫೋಟ ನಡೆದಿರುವುದಕ್ಕೆ ಉಕ್ರೇನ್‌ನ ಹಲವು ಅಧಿಕಾರಿಗಳು ಸಂಭ್ರಮಿಸಿದ್ದಾರೆ.

'ರಷ್ಯಾದ ಅಕ್ರಮ ನಿರ್ಮಾಣ ಕುಸಿಯಲು ಆರಂಭಿಸಿದೆ' ಎಂದು ಉಕ್ರೇನ್‌ನ ಸರ್ವೆಂಟ್ ಆಫ್ ದಿ ಪೀಪಲ್ ಪಾರ್ಟಿ ಮುಖಂಡ ಡೇವಿಡ್ ಅರಾಖಾಮಿಯಾ ಹೇಳಿ ದ್ದಾರೆ.

ನೇಮಕ: ಜನರಲ್ ಸೆರ್ಗಿ ಸುರೋವಿಕಿನ್ ಅವರನ್ನು ಉಕ್ರೇನ್‌ನಲ್ಲಿ ಹೋರಾಟದಲ್ಲಿ ನಿರತ ಪಡೆಗಳ ಕಮಾಂಡರ್ ಆಗಿ ನೇಮಕ ಮಾಡಲಾಗಿದೆ ಎಂದು ರಷ್ಯಾದ ರಕ್ಷಣಾ ಸಚಿವಾಲಯ ಶನಿವಾರ ತಿಳಿಸಿದೆ.

ಇತ್ತೀಚಿನ ದಿನಗಳಲ್ಲಿ ಉಕ್ರೇನ್ ವಿರುದ್ಧದ ಹೋರಾಟದಲ್ಲಿ ರಷ್ಯಾ ಪಡೆಗಳು ಸತತ ಹಿನ್ನಡೆ ಅನುಭವಿಸಿದ್ದವಲ್ಲದೇ, ಮಿಲಿಟರಿ ನಾಯಕತ್ವ ವ್ಯಾಪಕ ಟೀಕೆಗೆ ಒಳಗಾಗಿತ್ತು. ಈ ಕಾರಣಕ್ಕೆ ಸೆರ್ಗಿ ಅವರನ್ನು ನೇಮಕ ಮಾಡಲಾಗಿದೆ.

ಟ್ರಕ್‌ಗೆ ಡಿಕ್ಕಿ ಹೊಡೆದು ಹೊತ್ತಿ ಉರಿದ ಬಸ್: 12 ಮಂದಿ ಸಾವು

ಒಂದನೇ ಪುಟದಿಂದ

ಸ್ಥಳಕ್ಕೆ ಸಿ.ಎಂ ಭೇಟಿ: ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ ಶಿಂದೆ ಅವರು ಶನಿವಾರ ಮಧ್ಯಾಹ್ನ ಘಟನಾ ಸ್ಥಳಕ್ಕೆ ಭೇಟಿ ನೀಡಿದ್ದು, ಅಧಿಕಾರಿಗಳಿಂದ ಮಾಹಿತಿ ಪಡೆದಿದ್ದಾರೆ. ಆಸ್ಪತ್ರೆಗೂ ಭೇಟಿ ನೀಡಿ ಗಾಯಗೊಂಡವರ ಯೋಗ ಕ್ಷೇಮ ವಿಚಾರಿಸಿದ್ದಾರೆ.

ಕೇಂದ್ರದಿಂದ ₹2 ಲಕ್ಷ, ರಾಜ್ಯ ಸರ್ಕಾರದಿಂದ ₹5 ಲಕ್ಷ ಪರಿಹಾರ: ಪ್ರಧಾನಿ ನರೇಂದ್ರ ಮೋದಿ ಅವರು ಸಂತಾಪ ಸೂಚಿಸಿದ್ದು, ಮೃತರ ಕುಟುಂಬಗಳಿಗೆ ಪ್ರಧಾನ ಮಂತ್ರಿಯವರ ರಾಷ್ಟ್ರೀಯ ಪರಿಹಾರ ನಿಧಿಯಿಂದ ತಲಾ ₹2 ಲಕ್ಷ ಪರಿಹಾರ ಹಾಗೂ ಗಾಯಗೊಂಡವರ ಚಿಕಿತ್ಸೆಗಾಗಿ ತಲಾ ₹50 ಸಾವಿರ ಒದಗಿಸುವುದಾಗಿ ಘೋಷಿಸಿದ್ದಾರೆ.

ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ ಶಿಂದೆ ಕೂಡ ಪರಿಹಾರ ಘೋಷಿಸಿದ್ದಾರೆ.



ಅವಘಡದಲ್ಲಿ ಸುಟ್ಟು ಹೋಗಿರುವ ಬಸ್ —ಪಿಟಿಐ ಚಿತ್ರ

ಮೃತರ ಕುಟುಂಬಗಳಿಗೆ ತಲಾ ₹5 ಲಕ್ಷ ನೀಡುವುದಾಗಿ ಹೇಳಿರುವ ಅವರು ಗಾಯಗೊಂಡವರ ಸಂಪೂರ್ಣ ವೈದ್ಯಕೀಯ ವೆಚ್ಚವನ್ನು ಸರ್ಕಾರದ ವತಿಯಿಂದಲೇ ಭರಿಸುವುದಾಗಿ ತಿಳಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ವೀಸಾ: ಅನಧಿಕೃತ ಏಜೆಂಟರಿಂದ ಶುಲ್ಕ ವಸೂಲಿ– ತನಿಖೆ

ಲಂಡನ್ (ಪಿಟಿಐ): ಭಾರತಕ್ಕೆ ಪ್ರಯಾಣಿಸುವವರ ವೀಸಾಗಳ ಪರಿಶೀಲನೆ ಪ್ರಕ್ರಿಯೆಗೆ ಸಂಬಂಧಿಸಿದಂತೆ ಅನಧಿಕೃತ ಏಜೆಂಟರು ಶುಲ್ಕ ವಸೂಲಿ ಮಾಡುತ್ತಿದ್ದಾರೆ ಎಂಬ ವರದಿಗಳ ಹಿನ್ನೆಲೆಯಲ್ಲಿ ತನಿಖೆ ನಡೆಸಲಾಗುತ್ತಿದೆ ಎಂದು ಇಲ್ಲಿನ ಭಾರತೀಯ ಹೈಕಮಿಷನ್ ಕಚೇರಿ ಶನಿವಾರ ಹೇಳಿದೆ.

ಬರುವ ವಾರಗಳಲ್ಲಿ ಭಾರತಕ್ಕೆ ತೆರಳುತ್ತಿರುವ ಬ್ರಿಟನ್ ಪ್ರಯಾಣಿಕರು ತಮ್ಮ ವೀಸಾ ಪರಿಶೀಲನೆ ಪ್ರಕ್ರಿಯೆ ವಿಳಂಬವಾಗುತ್ತಿರುವ ಕುರಿತು ದೂರಿದ್ದಾರೆ. ಈ ಹಿನ್ನೆಲೆಯಲ್ಲಿ, ಹೈಕಮಿಷನ್ ಕಚೇರಿಯು ಅನಧಿಕೃತ ಏಜೆಂಟರ ಬಗ್ಗೆ ಎಚ್ಚರಿಕೆ ನೀಡಿದೆ. ಅಂತೆಯೇ ವೀಸಾ ಪ್ರಕ್ರಿಯೆ ಸುಗಮ ಗೊಳಿಸಲು ಕ್ರಮಕೈಗೊಳ್ಳಲಾಗುತ್ತಿದೆ ಎಂದೂ ತಿಳಿಸಿದೆ.

'ವೀಸಾಕ್ಕೆ ಸಂಬಂಧಿಸಿದ ನಿಯಮಗಳಲ್ಲಿ ದಿಢೀರ್ ಬದಲಾವಣೆಗಳನ್ನು ಮಾಡ ಲಾಗಿದ್ದು, ಬ್ರಿಟನ್‌ನ ಪ್ರವಾಸಿಗರ ಪ್ರಯಾಣದ ಮೇಲೆ ಇದು ಪರಿಣಾಮ ಬೀರುತ್ತಿದೆ ಎಂಬುದಾಗಿ ಬ್ರಿಟನ್‌ನ ಕೆಲ ಮಾಧ್ಯಮಗಳಲ್ಲಿ ಪ್ರಕಟವಾಗಿರುವುದು ಸತ್ಯಕ್ಕೆ ದೂರ' ಎಂದೂ ಕಚೇರಿ ತಿಳಿಸಿದೆ.

ಐರ್ಲೆಂಡ್: ಅನಿಲ ಘಟಕದಲ್ಲಿ ಸ್ಫೋಟ, 9 ಮಂದಿ ಸಾವು

ಲಂಡನ್ (ಎಪಿ): ವಾಯವ್ಯ ಐರ್ಲೆಂಡ್‌ನ ಕ್ರೀಸ್‌ಲೊ ಎಂಬ ಗ್ರಾಮದಲ್ಲಿ ಅನಿಲ ಘಟಕವೊಂದರಲ್ಲಿ ಸಂಭವಿಸಿದ ಸ್ಫೋಟದಲ್ಲಿ ಕನಿಷ್ಠ 9 ಜನರು ಮೃತಪಟ್ಟಿದ್ದಾರೆ ಎಂದು ಪೊಲೀಸರು ಶನಿವಾರ ತಿಳಿಸಿದ್ದಾರೆ.

ಗಂಭೀರವಾಗಿ ಗಾಯಗೊಂಡಿರುವ 8 ಜನರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಸ್ಫೋಟಕ್ಕೆ ಕಾರಣ ತಿಳಿದು ಬಂದಿಲ್ಲ ಎಂದು ಪೊಲೀಸ್ ಅಧಿಕಾರಿಗಳು ಹೇಳಿದ್ದಾರೆ.

ಜನಸಂಖ್ಯೆಗೆ ತಕ್ಕಂತೆ ಮುಸ್ಲಿಮರಿಗೆ ಸೂಕ್ತ ಪ್ರಾತಿನಿಧ್ಯ ಸಿಕ್ಕಿಲ್ಲ: ಪವಾರ್

ನಾಗ್ಪುರ: 'ದೇಶದ ಜನಸಂಖ್ಯೆಯಲ್ಲಿ ಮುಸ್ಲಿಂ ಸಮುದಾಯದವರು ದೊಡ್ಡ ಭಾಗವಾಗಿದ್ದರೂ ಅವರಿಗೆ ಸೂಕ್ತ ಪ್ರಾತಿನಿಧ್ಯ ದೊರಕುತ್ತಿಲ್ಲ ಎಂಬ ಭಾವನೆ ಇದೆ' ಎಂದು ನ್ಯಾಷಲಿಸ್ಟ್ ಕಾಂಗ್ರೆಸ್ ಪಕ್ಷದ (ಎನ್‌ಸಿಪಿ) ಮುಖ್ಯಸ್ಥ ಶರದ್ ಪವಾರ್ ಹೇಳಿದ್ದಾರೆ.

ವಿದರ್ಭ ಮುಸ್ಲಿಂ ಬುದ್ಧಿಜೀವಿಗಳ ವೇದಿಕೆ ಶನಿವಾರ ಇಲ್ಲಿ ಆಯೋಜಿಸಿದ್ದ 'ಭಾರತೀಯ ಮುಸ್ಲಿಮರು ಎದುರಿಸುತ್ತಿರುವ ಸಮಸ್ಯೆಗಳು' ವಿಷಯ ಕುರಿತ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಅವರು, 'ಸೂಕ್ತ ಪ್ರಾತಿನಿಧ್ಯ ಸಿಗುತ್ತಿಲ್ಲ ಎಂಬ ಭಾವನೆ ವಾಸ್ತವವೂ ಹೌದು. ಅವರಿಗೆ ಪ್ರಾತಿನಿಧ್ಯ ಹೇಗೆ ದೊರೆಯಬೇಕೆಂಬ ಬಗ್ಗೆ ಚರ್ಚೆಗಳು ನಡೆಯುವುದು ಅಗತ್ಯ' ಎಂದರು.

'ಕೇರಳದಲ್ಲಿ ಬಹುಸಂಖ್ಯೆಯಲ್ಲಿ ಅಲ್ಪಸಂಖ್ಯಾತರು ಇದ್ದಾರೆ. ಆ ರಾಜ್ಯದಲ್ಲಿ ಅವರು ಹೆಚ್ಚಿನ ಪ್ರಮಾಣದಲ್ಲಿ ಹೇಗೆ ಸಾಕ್ಷರರಾಗಿದ್ದಾರೆ, ಅಲ್ಲಿನ ಮುಖ್ಯಭಾಷೆಗೆ ಹೇಗೆ ಬೆಂಬಲ ನೀಡುತ್ತಿದ್ದಾರೆ ಮತ್ತು ಇದರಿಂದ ಅವರಿಗೆ ಆಗುತ್ತಿರುವ ಪ್ರಯೋಜನಗಳೇನು ಎಂಬ ಬಗ್ಗೆ ಅಧ್ಯಯನ ಮಾಡುವ ಅಗತ್ಯವಿದೆ. ಮುಸ್ಲಿಮರಿಗೆ ಬೆಂಬಲ ಮತ್ತು ಸಮಾನ ಅವಕಾಶ ನೀಡಿದರೆ ಅವರು ಉರ್ದು ಭಾಷೆಯ ಮೂಲಕ ಕಲೆ ಮತ್ತು ಸಾಹಿತ್ಯ ಕ್ಷೇತ್ರದಲ್ಲಿ ಬಹುದೊಡ್ಡ ಕೊಡುಗೆ ನೀಡಬಹುದು' ಎಂದು ಪವಾರ್ ಅಭಿಪ್ರಾಯಪಟ್ಟರು.

ಪ್ರೊ ಕಬಡ್ಡಿ: ಎರಡು ಪಂದ್ಯಗಳು ಟೈ



ಪುಣೇರಿ ಪಲ್ಟನ್ ಹಾಗೂ ಪಟ್ನಾ ಪೈರೇಟ್ಸ್ ತಂಡಗಳ ನಡುವಣ ಹೋರಾಟ –ಪ್ರಜಾವಾಣಿ ಚಿತ್ರ/ವಿ. ಪುಷ್ಕರ್

ಬೆಂಗಳೂರು: ಕಂಠೀರವ ಕ್ರೀಡಾಂಗಣದ ಒಳಾಂಗಣದಲ್ಲಿ ಶನಿವಾರ ನಡೆದ ಪ್ರೊ ಕಬಡ್ಡಿ ಟೂರ್ನಿಯ ಎರಡು ಪಂದ್ಯಗಳೂ ಟೈ ಆದವು.

ಪಟ್ನಾ ಪೈರೇಟ್ಸ್ ಹಾಗೂ ಪುಣೇರಿ ಪಲ್ಟನ್ ನಡುವಣ ನಡೆದ ಈ ದಿನದ ಮೊದಲ ಪಂದ್ಯವು 34–34ರಿಂದ ಸಮವಾಯಿತು. ಇನ್ನೊಂದು ಪಂದ್ಯದಲ್ಲಿ ಗುಜರಾತ್ ಟೈಟನ್ಸ್ ಹಾಗೂ ತಮಿಳ್ ತಲೈವಾಸ್ 31–31ರಿಂದ ಸಮಬಲ ಸಾಧಿಸಿದವು.

ಪುಣೇರಿ ಪಲ್ಟನ್ ತಂಡವು ಮೊದ-ಲಾರ್ಧದಲ್ಲಿ 23–16ರಿಂದ ಮುನ್ನಡೆ ಗಳಿಸಿತ್ತು. ಆದರೆ ದ್ವಿತೀಯಾರ್ಧದಲ್ಲಿ ತಿರುಗೇಟು ನೀಡಿದ ಪಟ್ನಾ ತಂಡವು 18–11ರಿಂದ ಮುನ್ನಡೆ ಸಾಧಿಸಿ ಸೋಲು ತಪ್ಪಿಸಿಕೊಂಡಿತು. ಪಟ್ನಾ ತಂಡದ ರೇಡರ್ ಸಚಿನ್ (8), ಆಲ್‌ರೌಂಡರ್ ರೋಹಿತ್ ಗುಲಿಯಾ (6) ಹಾಗೂ ಎಸ್. ವಿಶ್ವಾಸ್ (4) ಮಿಂಚಿದರು.

ಪುಣೇರಿ ತಂಡದ ನಾಯಕ ಅಸ್ಲಂ ಇನಾಂದಾರ್ (7) ರೇಡಿಂಗ್ ಪಾಯಿಂಟ್ ಗಳಿಸಿದರು. ಮೋಹಿತ್ ಗೊಯತ್ (8) ಕೂಡ ಮಿಂಚಿನ ದಾಳಿ ನಡೆಸಿದರು.

ಇನ್ನೊಂದು ಪಂದ್ಯದ ಮೊದಲಾರ್ಧದಲ್ಲಿ ಗುಜರಾತ್ ತಂಡವು 18–16ರಿಂದ ಮುನ್ನಡೆ ಸಾಧಿಸಿತು. ಇದರಲ್ಲಿ 13 ರೇಡಿಂಗ್ ಪಾಯಿಂಟ್‌ಗಳು ಗುಜರಾತ್ ಪಾಲಾದವು. ಆದರೆ ದ್ವಿತೀಯಾರ್ಧದಲ್ಲಿ ಮರುಹೋರಾಟ ಮಾಡಿದ ತಲೈವಾಸ್ ತಂಡವು 15–13ರ ಮುನ್ನಡೆ ಗಳಿಸಿ ಸೋಲಿನಿಂದ ಪಾರಾಯಿತು.

ಆದರೆ ಈ ಅವಧಿಯಲ್ಲಿಯೂ ಹೆಚ್ಚು ರೇಡಿಂಗ್ ಪಾಯಿಂಟ್ (10) ಗಳಿಸುವಲ್ಲಿ ಗುಜರಾತ್ ಸಫಲವಾಯಿತು. ತಂಡದ ರಾಕೇಶ್ (13) ಹಾಗೂ ಚಂದ್ರನ್ ರಂಜೀತ್ (5) ಮಿಂಚಿದರು. ತಮಿಳ್ ತಂಡದ ನಾಯಕ ಪವನ್ ಶೆರಾವತ್ (1)ನಿರಾಸೆ ಮೂಡಿಸಿದರು. ಆದರೆ ರೇಡರ್ ನರೇಂದರ್ 10 ಅಂಕ ಗಳಿಸಿದರು.

ಹರಿಯಾಣಕ್ಕೆ ಗೆಲುವು: ದಿನದ ಕೊನೆಯ ಪಂದ್ಯದಲ್ಲಿ ಹರಿಯಾಣ ಸ್ಟೀಲರ್ಸ್ ತಂಡ 41–33 ರಲ್ಲಿ ಬೆಂಗಾಲ್ ವಾರಿಯರ್ಸ್ ತಂಡವನ್ನು ಮಣಿಸಿತು.

ಇಂದಿನ ಪಂದ್ಯಗಳು: ಜೈಪುರ್ ಪಿಂಕ್ ಪ್ಯಾಂಥರ್ಸ್–ಪಟ್ನಾ ಪೈರೇಟ್ಸ್ (ರಾತ್ರಿ 7.30); ತೆಲುಗು ಟೈಟನ್ಸ್–ಬೆಂಗಾಲ್ ವಾರಿಯರ್ಸ್ (ರಾತ್ರಿ 8.30)

ಪುಣೇರಿ ಪಲ್ಟನ್–ಬೆಂಗಳೂರು ಬುಲ್ಸ್ (ರಾತ್ರಿ 9.30)

ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಹಾಟ್‌ಸ್ಟಾರ್

ಮಹಿಳಾ ಏಷ್ಯಾಕಪ್ ಕ್ರಿಕೆಟ್: ಶಫಾಲಿ–ಸ್ಮೃತಿ ಮಿಂಚು; ಬಾಂಗ್ಲಾಕ್ಕೆ ನಿರಾಸೆ

ಸೆಮಿಫೈನಲ್‌ಗೆ ಭಾರತ ಲಗ್ಗೆ



ಭಾರತದ ಶಫಾಲಿ ವರ್ಮಾ ಬ್ಯಾಟಿಂಗ್ –ಪಿಟಿಐ ಚಿತ್ರ

ಸಿಲೆಟ್ (ಪಿಟಿಐ): ಲಯಕ್ಕೆ ಮರಳಿದ ಶಫಾಲಿ ವರ್ಮಾ ಆಲ್‌ರೌಂಡ್ ಆಟದ ಬಲದಿಂದ ಭಾರತ ತಂಡವು ಮಹಿಳೆಯರ ಏಷ್ಯಾಕಪ್ ಟಿ20 ಕ್ರಿಕೆಟ್ ಟೂರ್ನಿಯಲ್ಲಿ ಬಾಂಗ್ಲಾ ವಿರುದ್ಧ ಜಯಿಸಿತು. ಇದರೊಂದಿಗೆ ಸೆಮಿಫೈನಲ್‌ಗೆ ಲಗ್ಗೆಯಿಟ್ಟಿತು.

ಸಿಲೆಟ್ ಅಂತರರಾಷ್ಟ್ರೀಯ ಕ್ರಿಕೆಟ್ ಮೈದಾನದಲ್ಲಿ ನಡೆದ ಪಂದ್ಯದಲ್ಲಿ ಭಾರತ ತಂಡವು 59 ರನ್‌ಗಳಿಂದ ಜಯಿಸಿತು. ಒಟ್ಟು ಎಂಟು ಅಂಕ ಗಳಿಸಿರುವ ತಂಡವು ಪಾಯಿಂಟ್ ಪಟ್ಟಿಯ ಅಗ್ರಸ್ಥಾನದಲ್ಲಿದೆ. ಲೀಗ್ ಹಂತದಲ್ಲಿ ಇನ್ನೊಂದು ಪಂದ್ಯದಲ್ಲಿ ಭಾರತ ಆಡಬೇಕಿದೆ.

ಟಾಸ್ ಗೆದ್ದು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡ ಹರ್ಮನ್‌ಪ್ರೀತ್ ಬಳಗಕ್ಕೆ ಶಫಾಲಿ (55; 44ಎ, 4X5, 6X2) ಹಾಗೂ ಸ್ಮೃತಿ (47; 38ಎ, 4X6) ಉತ್ತಮ ಆರಂಭ ನೀಡಿದರು. ಮೊದಲ ವಿಕೆಟ್ ಜೊತೆಯಾಟದಲ್ಲಿ 96 ರನ್ ಸೇರಿಸಿದರು. ಜೆಮಿಮಾ ರಾಡ್ರಿಗಸ್ ಅಜೇಯ 35 ರನ್ ಗಳಿಸಿದರು. ಇದರಿಂದಾಗಿ ತಂಡವು 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 159 ರನ್ ಗಳಿಸಿತು.

ಗುರಿ ಬೆನ್ನಟ್ಟಿದ ಬಾಂಗ್ಲಾದೇಶ ತಂಡವು 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 100 ರನ್ ಗಳಿಸಿತು. ಭಾರತದ ದೀಪ್ತಿ ಶರ್ಮಾ ಹಾಗೂ ಶಫಾಲಿ ವರ್ಮಾ ತಲಾ ಎರಡು ವಿಕೆಟ್ ಗಳಿಸಿದರು. ಕಳೆದ ಕೆಲವು ಪಂದ್ಯಗಳಲ್ಲಿ ಕಳಪೆ ಬ್ಯಾಟಿಂಗ್ ಮಾಡಿದ್ದ ಶಫಾಲಿ ಇಲ್ಲಿ ಲಯಕ್ಕೆ ಮರಳಿದರು. ಶುಕ್ರವಾರ ನಡೆದಿದ್ದ ಪಂದ್ಯದಲ್ಲಿ ಭಾರತ ತಂಡವು ಪಾಕಿಸ್ತಾನ ಎದುರು ಸೋತಿತ್ತು.

ಸಂಕ್ಷಿಪ್ತ ಸ್ಕೋರು: ಭಾರತ: 20 ಓವರ್‌ಗಳಲ್ಲಿ 5ಕ್ಕೆ159 (ಶಫಾಲಿ ವರ್ಮಾ 55, ಸ್ಮೃತಿ ಮಂದಾನ 47, ಜೆಮಿಮಾ ರಾಡ್ರಿಗಸ್ ಔಟಾಗದೆ 35, ದೀಪ್ತಿ ಶರ್ಮಾ 10, ರುಮಾನ ಅಹಮದ್ 27ಕ್ಕೆ3) ಬಾಂಗ್ಲಾದೇಶ: 20 ಓವರ್‌ಗಳಲ್ಲಿ 7ಕ್ಕೆ100 (ಫರ್ಗನಾ ಹಕ್ 30, ಮುರ್ಷಿದಾ ಖಾತೂನ್ 21, ನಿಜರ್ ಸುಲ್ತಾನಾ 36, ದೀಪ್ತಿ ಶರ್ಮಾ 13ಕ್ಕೆ2, ಶಫಾಲಿ ವರ್ಮಾ 10ಕ್ಕೆ2) ಫಲಿತಾಂಶ: ಭಾರತ ತಂಡಕ್ಕೆ 59 ರನ್‌ಗಳ ಜಯ. ಪಂದ್ಯದ ಆಟಗಾರ್ತಿ: ಶಫಾಲಿ ವರ್ಮಾ.


ಬೆಳಿಗ್ಗೆ ಪಂದ್ಯ: ಶ್ರೀಲಂಕಾ: 20 ಓವರ್‌ಗಳಲ್ಲಿ 7ಕ್ಕೆ105 (ಚಾಮರಿ ಅಟಪಟ್ಟು 21, ನೀಲಾಕ್ಷಿ ಡಿಸಿಲ್ವಾ 21, ಒಶಾದಿ ರಣಸಿಂಗೆ ಔಟಾಗದೆ 23, ಸಶಾ ಆಜ್ಮಿ 10ಕ್ಕೆ2, ಎನಾ ಹಮಿಜಾ ಹಶೀಮ್ 23ಕ್ಕೆ2) ಮಲೇಷ್ಯಾ: 9.5 ಓವರ್‌ಗಳಲ್ಲಿ 33 (ಎಲ್ಸಾ ಹಂಟರ್ 18, ಮಲ್ಶಾ ಶೇಹಾನಿ 2ರನ್‌ಗೆ 4, ಐನೊಕಾ ರಣವೀರಾ 8ಕ್ಕೆ2, ಸುಗಂಧಿಕಾ ಕುಮಾರಿ 11ಕ್ಕೆ2) ಫಲಿತಾಂಶ: ಶ್ರೀಲಂಕಾ ಕ್ಕೆ 72 ರನ್‌ಗಳ ಜಯ.

ಏಷ್ಯಾ ಕಪ್ ಮಹಿಳಾ ಟಿ20 ಕ್ರಿಕೆಟ್ - ಪಾಯಿಂಟ್ ಪಟ್ಟಿ					
ತಂಡ	ಪಂದ್ಯ	ಜಯ	ಸೋಲು	ಪಾಯಿಂಟ್	ನೆಟ್‌ರನ್‌ರೇಟ್
ಭಾರತ	5	4	1	8	+2.590
ಪಾಕಿಸ್ತಾನ	4	3	1	6	+1.684
ಶ್ರೀಲಂಕಾ	4	3	1	6	+1.282
ಬಾಂಗ್ಲಾದೇಶ	4	2	2	4	+0.506
ಥಾಯ್ಲೆಂಡ್	4	2	2	4	-1.079
ಯುಎಇ	4	1	3	2	-1.794
ಮಲೇಷ್ಯಾ	5	0	5	0	-3.124

18ರಂದು ಪದಾಧಿಕಾರಿಗಳ ಚುನಾವಣೆ; ಐಸಿಸಿಗೆ ತೆರಳುವರೇ ಗಂಗೂಲಿ?

ಬಿಸಿಸಿಐನಲ್ಲಿ ರೋಜರ್‌ಗೆ ಉನ್ನತ ಸ್ಥಾನ?

ಪ್ರಜಾವಾಣಿ ವಾರ್ತೆ



ರೋಜರ್ ಬಿನ್ನಿ



ಗಂಗೂಲಿ

ಬೆಂಗಳೂರು: ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯಲ್ಲಿ ಕರ್ನಾಟಕದ ರೋಜರ್ ಬಿನ್ನಿ ಅವರಿಗೆ ಪ್ರಮುಖ ಸ್ಥಾನ ಲಭಿಸುವ ಸಾಧ್ಯತೆ ಇದೆ.

ಇದೇ 18ರಂದು ಮುಂಬೈನಲ್ಲಿ ನಡೆಯಲಿರುವ ಸರ್ವಸದಸ್ಯರ ಸಭೆಯಲ್ಲಿ ಪದಾಧಿಕಾರಿಗಳ ಆಯ್ಕೆ ನಡೆಯಲಿದೆ. ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯ ಅಧ್ಯಕ್ಷರೂ ಆಗಿರುವ ಬಿನ್ನಿ ಈ ಸಭೆಯಲ್ಲಿ ರಾಜ್ಯವನ್ನು ಪ್ರತಿನಿ-ಧಿಸಲಿದ್ದಾರೆ. ಕೆಎಸ್‌ಸಿಎ ಅವರನ್ನು ನಾಮನಿರ್ದೇಶನ ಮಾಡಿದೆ. ಪ್ರಸ್ತುತ ಅಧ್ಯಕ್ಷರಾಗಿರುವ ಸೌರವ್ ಗಂಗೂಲಿ ಅವರು ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ಮುಖ್ಯಸ್ಥರಾಗುವ ಸಾಧ್ಯತೆ ಇದೆ ಎನ್ನಲಾಗಿದೆ. ಅದರಿಂದಾಗಿ ಬಿಸಿಸಿಐ ಅಧ್ಯಕ್ಷ ಸ್ಥಾನ ತೆರವಾಗಲಿದೆ. ವಯಸ್ಸು, ಆಡಳಿತ ಅನುಭವ ಹಾಗೂ 1983ರ ವಿಶ್ವಕಪ್ ವಿಜೇತ ತಂಡದ ಆಲ್‌ರೌಂಡರ್ ಆಗಿರುವ ಬಿನ್ನಿ ಅವರ ಹೆಸರು ಕೇಳಿಬರುತ್ತಿದೆ.

ಕಳೆದ ಕೆಲವು ದಿನಗಳಿಂದ ನಡೆಯುತ್ತಿದ್ದ ಚರ್ಚೆಯಲ್ಲಿ ಸದ್ಯ ಕಾರ್ಯದರ್ಶಿಯಾಗಿರುವ ಜಯ್ ಶಾ ಅವರು ಅಧ್ಯಕ್ಷ ಹಾಗೂ ಖಜಾಂಚಿಯಾಗಿರುವ ಅರುಣಸಿಂಗ್ ಧುಮಾಲ್ ಅವರು ಕಾರ್ಯದರ್ಶಿಯಾ-ಗಲಿದ್ದಾರೆಂದು ಹೇಳಲಾಗಿತ್ತು. ಆದರೆ ಈಗ 67 ವರ್ಷದ ರೋಜರ್ ಹೆಸರು ಕೇಳಿಬರುತ್ತಿದೆ.

ಪ್ರತಿಬಾರಿಯೂ ಬಿಸಿಸಿಐ ಸರ್ವಸ-ದಸ್ಯರ ಸಭೆಗೆ ಕೆಎಸ್‌ಸಿಎ ಕಾರ್ಯದರ್ಶಿ ಸಂತೋಷ್ ಮೆನನ್ ಅವರನ್ನು ನಾಮನಿರ್ದೇಶನ ಮಾಡಲಾಗುತ್ತಿ-ತ್ತು. ಆದರೆ ಈ ಬಾರಿ ಬಿನ್ನಿಯವರ ಹೆಸರು ಕಳಿಸಿರುವುದು ಕುತೂಹಲಕ್ಕೆ ಕಾರಣವಾಗಿದೆ. ರೋಜರ್ ಮೂರು ವರ್ಷದಿಂದ ಕೆಎಸ್‌ಸಿಎ ಅಧ್ಯಕ್ಷರಾಗಿದ್ದು, ಈ ಹಿಂದೆ ಅವರು ರಾಷ್ಟ್ರೀಯ ಆಯ್ಕೆ ಸಮಿತಿಯ ಮುಖ್ಯಸ್ಥರೂ ಆಗಿದ್ದರು.

‘ಬಿಸಿಸಿಐಗೆ ಅಧ್ಯಕ್ಷ, ಉಪಾಧ್ಯಕ್ಷ, ಖಜಾಂಚಿ, ಜಂಟಿ ಕಾರ್ಯದರ್ಶಿ, ಕಾರ್ಯದರ್ಶಿ ಹಾಗೂ ಆಡಳಿತ ಸಮಿತಿ ಸದಸ್ಯರ ಆಯ್ಕೆ ಎಜಿಎಂನಲ್ಲಿ ನಡೆಯಲಿದೆ. ಇದರಲ್ಲಿ ಯಾವುದಾದರೂ ಒಂದು ಸ್ಥಾನಕ್ಕೆ ರೋಜರ್ ಆಯ್ಕೆಯಾಗುವ ಸಾಧ್ಯತೆ ಇದೆ. ಅಧ್ಯಕ್ಷರೇ ಆಗುತ್ತಾರೆಂದು ಈಗಲೇ ಹೇಳಲು ಸಾಧ್ಯವಿಲ್ಲ. ಇದೇ ವಾರ ನಾಮಪತ್ರ ಸಲ್ಲಿಕೆಯಾಗಲಿವೆ. ಅದರ ನಂತರ ಸ್ಪಷ್ಟ ಚಿತ್ರಣ ಸಿಗಲಿದೆ’ ಎಂದು ಬಿಸಿಸಿಐ ಮೂಲಗಳು ‘ಪ್ರಜಾವಾಣಿ’ಗೆ ತಿಳಿಸಿವೆ.

ಆದರೆ, ಸೌರವ್ ಗಂಗೂಲಿ ಅವರು ಅಧ್ಯಕ್ಷ ಸ್ಥಾನ ತೊರೆಯುತ್ತಾರೆಂದು ಸದ್ಯ ಹೇಳಲು ಸಾಧ್ಯವಿಲ್ಲವೆನ್ನುತ್ತವೆ ಕೆಲವು ಮೂಲಗಳು. ಬಂಗಾಳ ಕ್ರಿಕೆಟ್ ಸಂಸ್ಥೆಯು ಬಿಸಿಸಿಐ ಎಜಿಎಂಗೆ ಗಂಗೂಲಿ ಅವರನ್ನೇ ನಾಮನಿರ್ದೇಶನ ಮಾಡಿದೆ. ಅವಿಷೇಕ್ ದಾಲ್ಮಿಯಾ ಹೆಸರನ್ನು ಸೂಚಿಸಿಲ್ಲ. ಕರ್ನಾಟಕದಿಂದ ರೋಜರ್ ಬಿನ್ನಿ, ಹಿಮಾಚಲಪ್ರದೇಶದಿಂದ ಅರುಣ ಧುಮಾಲ್, ಸೌರಾಷ್ಟ್ರದಿಂದ ಜಯದೇವ್ ಶಾ(ನಿರಂಜನ್ ಶಾ ಪುತ್ರ), ಗುಜರಾತ್‌ನಿಂದ ಜಯ್ ಶಾ, ಹರಿಯಾಣದಿಂದ ಅನಿರುದ್ಧ ಚೌಧರಿ, ವಿದರ್ಭ ಸಂಸ್ಥೆಯಿಂದ ಅದ್ವೈತ್ ಮನೋಹರ್ (ಮಾಜಿ ಅಧ್ಯಕ್ಷ ಶಶಾಂಕ್ ಮನೋಹರ್ ಪುತ್ರ), ಉತ್ತರಪ್ರದೇಶದಿಂದ ರಾಜೀವ್ ಶುಕ್ಲಾ ಹಾಗೂ ಮುಂಬೈನಿಂದ ಆಶಿಶ್ ಶಿಲಾರ್ ಪ್ರತಿನಿಧಿಸಲಿದ್ದಾರೆ.

ಕೆಎಸ್‌ಸಿಎಗೆ ಯಾರು?

ರೋಜರ್ ಬಿಸಿಸಿಐ ಪದಾಧಿಕಾರಿಯಾಗಿ ತೆರಳುವುದರಿಂದ ಅಧ್ಯಕ್ಷ ಕೆಎಸ್‌ಸಿಎ ಅಧ್ಯಕ್ಷ ಸ್ಥಾನ ತೆರವಾಗಲಿದೆ. ಅಲ್ಲದೇ ಸದ್ಯ ಇರುವ ಆಡಳಿತ ಸಮಿತಿಯೂ ನವೆಂಬರ್‌ನಲ್ಲಿ ಮೂರು ವರ್ಷ ಪೂರೈಸಲಿದೆ. ಅದರಿಂದಾಗಿ ಮುಂದಿನ ತಿಂಗಳು ಚುನಾವಣೆ ನಡೆಯುವುದು ಬಹುತೇಕ ಖಚಿತವಾಗಿದೆ.

‘ರಾಜ್ಯ ಸಂಸ್ಥೆಗೆ ಸದ್ಯ ಉಪಾ-ಧ್ಯಕ್ಷರಾಗಿರುವ ಜೆ. ಅಭಿರಾಮ್, ಕಾರ್ಯದರ್ಶಿ ಸಂತೋಷ್ ಮೆನನ್ ಹಾಗೂ ಖಜಾಂಚಿ ವಿನಯ್ ಮೃತ್ಯುಂಜಯ ಅವರಲ್ಲಿ ಒಬ್ಬರು ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸುವ ಸಾಧ್ಯತೆ ಇದೆ. ಇನ್ನೂ ಯಾವುದೇ ನಿರ್ಣಯವಾಗಿಲ್ಲ’ ಎಂದು ಹೆಸರು ಬಹಿರಂಗಪ-ಡಿಸಲು ಇಚ್ಛಿಸದ ಕೆಎಸ್‌ಸಿಎ ಸದಸ್ಯರೊಬ್ಬರು ತಿಳಿಸಿದ್ದಾರೆ.

ಗೆಲ್ಲುವ ಒತ್ತಡದಲ್ಲಿ ಶಿಖರ್ ಪಡೆ

ಭಾರತ– ದ. ಆಫ್ರಿಕಾ ಎರಡನೇ ಏಕದಿನ ಪಂದ್ಯ ಇಂದು



ಶಿಖರ್ ಧವನ್ ಹಾಗೂ ಕೋಚ್ ವಿವಿಎಸ್ ಲಕ್ಷಣ್ ಸಮಾಲೋಚನೆ –ಎಎಫ್‌ಪಿ ಚಿತ್ರ

ರಾಂಚಿ (ಪಿಟಿಐ): ಶಿಖರ್ ಧವನ್ ನಾಯಕತ್ವದ ಭಾರತ ತಂಡವು ಎಲ್ಲ ವಿಭಾಗಗಳಲ್ಲಿಯೂ ಲಯಕ್ಕೆ ಮರಳುವ ಸವಾಲಿನೊಂದಿಗೆ ಭಾನುವಾರ ದಕ್ಷಿಣ ಆಫ್ರಿಕಾ ಎದುರಿನ ಎರಡನೇ ಏಕದಿನ ಪಂದ್ಯದಲ್ಲಿ ಕಣಕ್ಕಿಳಿಯಬೇಕಿದೆ.

ಮೂರು ಪಂದ್ಯಗಳ ಸರಣಿಯ ಮೊದಲ ಪಂದ್ಯದಲ್ಲಿ ಜಯಿಸಿರುವ ಪ್ರವಾಸಿ ಬಳಗವು ಜಾರ್ಖಂಡ್ ಕ್ರಿಕೆಟ್ ಸಂಸ್ಥೆಯ ಕ್ರೀಡಾಂಗಣದಲ್ಲಿ ಮತ್ತೊಂದು ಗೆಲುವು ಸಾಧಿಸಿ ಸರಣಿ ಕೈವಶ ಮಾಡಿಕೊಳ್ಳುವ ಉತ್ಸಾಹದ-ಲ್ಲಿದೆ. ಲಖನೌನಲ್ಲಿ ನಡೆದ ಮೊದಲ ಪಂದ್ಯದಲ್ಲಿ ಆತಿಥೇಯ ಬಳಗವು ಡೆತ್ ಓವರ್ ಬೌಲಿಂಗ್‌ನಲ್ಲಿ ಎಡವಿತ್ತು. ಬ್ಯಾಟಿಂಗ್‌ನಲ್ಲಿ ಶ್ರೇಯಸ್ ಅಯ್ಯರ್ ಹಾಗೂ ಸಂಜು ಸ್ಯಾಮ್ಸನ್ ಅವರ ವಿರೋಚಿತ ಅರ್ಧಶತಕಗಳು ತಂಡದ ಸೋಲಿನ ಅಂತರ ಕಡಿಮೆ ಮಾಡಿದ್ದವು. ಆದರೆ ಅಗ್ರಕ್ರಮಾಂಕದ ಬ್ಯಾಟರ್‌ಗಳ ವೈಫಲ್ಯ ತಂಡವನ್ನು ಕಾಡಿತ್ತು.

ಇದೀಗ ಮಧ್ಯಮವೇಗಿ ದೀಪಕ್ ಚಾಹರ್ ಗಾಯಗೊಂಡು ಹೊರನಡೆ-ದಿರುವುದರಿಂದ ಶಾರ್ದೂಲ್ ಠಾಕೂರ್ ಮೇಲೆ ಹೆಚ್ಚು ಒತ್ತಡ ಬೀಳುವುದು ಖಚಿತ. ಮುಕೇಶ್ ಕುಮಾರ್‌ಗೆ ಪದಾರ್ಪಣೆಯ ಅವಕಾಶ ಸಿಗಬಹುದು. ಸ್ಫೋಟಕ ಶೈಲಿಯ ಬ್ಯಾಟರ್‌ಗಳಾದ ಡೇವಿಡ್ ಮಿಲ್ಲರ್ ಹಾಗೂ ಹೆನ್ರಿಚ್ ಕ್ಲಾಸನ್ ಅವರನ್ನು ಕಟ್ಟಿಹಾಕುವ ಸವಾಲು ಬೌಲರ್‌ಗಳಿಗೆ ಇದೆ. ಚಾಹರ್ ಬದಲು ವಾಷಿಂಗ್ಟನ್ ಸುಂದರ್ ಅವರಿಗೆ ತಂಡದಲ್ಲಿ ಸ್ಥಾನ ನೀಡಲಾಗಿದೆ.

ಆದರೆ ಬೌಲಿಂಗ್ ವಿಷಯದಲ್ಲಿ ದಕ್ಷಿಣ ಆಫ್ರಿಕಾಕ್ಕೆ ಅನುಭವಿಗಳ ಬಲವಿದೆ. ಕಗಿಸೊ ರಬಾಡ, ಲುಂಗಿ ಗಿಡಿ, ಸ್ಪಿನ್ನರ್ ತಬ್ರೇಜ್ ಹಾಗೂ ಕೇಶವ್ ಮಹಾರಾಜ ಉತ್ತಮ ಲಯದಲ್ಲಿದ್ದಾ-ರೆ. ಅವರನ್ನು ಎದುರಿಸಲು ಭಾರತದ ಬ್ಯಾಟಿಂಗ್ ಪಡೆ ಸಜ್ಜಾಗಬೇಕಿದೆ.

ತಂಡಗಳು: ಭಾರತ: ಶಿಖರ್ ಧವನ್ (ನಾಯಕ), ಶುಭಮನ್ ಗಿಲ್, ಋತುರಾಜ್ ಗಾಯಕವಾಡ, ಇಶಾನ್ ಕಿಶನ್, ಶ್ರೇಯಸ್ ಅಯ್ಯರ್, ಸಂಜು ಸ್ಯಾಮ್ಸನ್, ಶಾರ್ದೂಲ್ ಠಾಕೂರ್, ಕುಲದೀಪ್ ಯಾದವ್, ಆವೇಶ್ ಖಾನ್, ರವಿ ಬಿಷ್ಣೋಯಿ, ಮೊಹಮ್ಮದ್ ಸಿರಾಜ್, ಮುಕೇಶ್ ಕುಮಾರ್, ರಜತ್ ಪಾಟೀದಾರ್, ಶಹಬಾಜ್ ಅಹಮದ್, ರಾಹುಲ್ ತ್ರಿಪಾಠಿ

ದಕ್ಷಿಣ ಆಫ್ರಿಕಾ: ತೆಂಬಾ ಬವುಮಾ (ನಾಯಕ), ಜನ್ಮನ್ ಮಲಾನ್, ಕ್ವಿಂಟನ್ ಡಿಕಾಕ್, ಏಡನ್ ಮರ್ಕರಂ, ಹೆನ್ರಿಚ್ ಕ್ಲಾಸನ್, ಡೇವಿಡ್ ಮಿಲ್ಲರ್, ವೇನ್ ಪಾರ್ನೆಲ್, ಕೇಶವ್ ಮಹಾರಾಜ, ಕಗಿಸೊ ರಬಾಡ, ಲುಂಗಿ ಗಿಡಿ, ತಬ್ರೇಜ್ ಶಮ್ಸಿ, ರೀಜಾ ಹೆನ್ರಿಕ್ಸ್, ಮಾರ್ಕೊ ಜೆನ್ಸನ್, ಹೆನ್ರಿಚ್ ನಾಕಿಯಾ, ಆ್ಯಂಡಿಲೆ ಪಿಶುವಾಯೊ

ಪಂದ್ಯ ಆರಂಭ: ಮಧ್ಯಾಹ್ನ 1.30

ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಕುಸ್ತಿ: ಚಿನ್ನ ಗೆದ್ದ ಅರುಣ್, ಪ್ರಮೋದ

ತರೀಕೆರೆ (ಚಿಕ್ಕಮಗಳೂರು ಜಿಲ್ಲೆ): ಸ್ಥಳೀಯ ಪೈಲ್ವಾನ್ ಪ್ರಮೋದ, ಹೊಳೆಹೊನ್ನೂರಿನ ಅರುಣ್, ಮೈಸೂರಿನ ಯಶವಂತಕುಮಾರ ಮತ್ತು ದಾವಣಗೆರೆಯ ಪರಶುರಾಮ್ ಅವರು ಪಟ್ಟಣದಲ್ಲಿ ನಡೆದ ಜಂಗಿ-ಕುಸ್ತಿಯಲ್ಲಿ ಶನಿವಾರ ಚಿನ್ನದ ಪದಕ ಗೆದ್ದುಕೊಂಡರು.

ಗುರು ರೇವಣಸಿದ್ದೇಶ್ವರ ಕುರುಬ ಸಮಾಜ ಮತ್ತು ಗುರು ರೇವಣಸಿದ್ದೇ-ಶ್ವರ ಗರಡಿ ಕುಸ್ತಿ ಸಂಘದ ಆಶ್ರಯದಲ್ಲಿ ಏರ್ಪಡಿಸಿದ್ದ ಕುಸ್ತಿಯಲ್ಲಿ ಕೊಲ್ಲಾಪುರದ ಲೋಕೇಶ್, ಪುಣೆಯ ಮುಬಾರಕ್, ದಾವಣಗೆರೆಯ ದರ್ಶನ್, ಗಿರೀಶ್ ಮತ್ತು ಭದ್ರಾವತಿಯ ಪ್ರತೀಕ್ ಚಿನ್ನ ಗಳಿಸಿದರು.

ಲೋಕೇಶ್ ಅವರು ಶಿಕಾರಿಪುರದ ಸತೀಶ್ ವಿರುದ್ಧ, ಮುಬಾರಕ್, ಶಿಕಾರಿಪುರದ ಸುಹಾಸ್ ವಿರುದ್ಧ, ಪ್ರಮೋದ್, ಹೊಳೆಹೊನ್ನೂರಿನ ಮಹಮ್ಮದ್ ಗೌಸ್ ವಿರುದ್ಧ, ಯಶವಂತಕುಮಾರ, ಪುಣೆಯ ಪವನ್ ವಿರುದ್ಧ, ಪರಶುರಾಮ್, ಪುಣೆಯ ರೂಪೇಶ್ ವಿರುದ್ಧ, ದರ್ಶನ್, ಕೆರೆಬೀ-ರನಹಳ್ಳಿಯ ಪ್ರಜ್ವಲ್ ವಿರುದ್ಧ, ಗಿರೀಶ್, ಸಾಂಗ್ಲಿಯ ಸುನಿಲ್ ವಿರುದ್ಧ, ಅರುಣ್, ದಾವಣೆಗೆರೆಯ ರಘು ವಿರುದ್ಧ ಗೆದ್ದರು.

ಐಎಸ್‌ಎಲ್: ಮೂರು ವರ್ಷದ ನಂತರ ಕಂಠೀರವದಲ್ಲಿ ಫುಟ್‌ಬಾಲ್ ಸಡಗರ

ಅಲನ್ ಕಾಲ್ಚಳಕ; ಬಿಎಫ್‌ಸಿಗೆ ಜಯ

ಪ್ರಜಾವಾಣಿ ವಾರ್ತೆ



ಅಲನ್ ಕೋಸ್ತಾ (ಎಡದಿಂದ ಎರಡನೆಯವರು) ಸಹ ಆಟಗಾರರ ಜತೆ ಸಂಭ್ರಮಿಸಿದರು –ಪ್ರಜಾವಾಣಿ ಚಿತ್ರ/ ಎಸ್‌.ಕೆ.ದಿನೇಶ್

ಬೆಂಗಳೂರು: ನಗರದ ಕಂಠೀರವ ಕ್ರೀಡಾಂಗಣದಲ್ಲಿ ಶನಿವಾರ ಹಬ್ಬದ ಸಂಭ್ರಮ ಗರಿಗೆದರಿತ್ತು. ಮೂರು ವರ್ಷಗಳ ನಂತರ ಇಲ್ಲಿ ನಡೆದ ಇಂಡಿಯನ್ ಸೂಪರ್ ಲೀಗ್ ಪಂದ್ಯ ನೋಡಲು ನೂರಾರು ಅಭಿಮಾನಿಗಳು ಲಗ್ಗೆಯಿಟ್ಟಿದ್ದರು.

ಸ್ಥಳೀಯ ಅಭಿಮಾನಿಗಳ ಸಂತಸವನ್ನು ಸುನಿಲ್ ಚೆಟ್ರಿ ನಾಯಕತ್ವದ ಬೆಂಗಳೂರು ಫುಟ್‌ಬಾಲ್ ಕ್ಲಬ್ ತಂಡವು ಇಮ್ಮಡಿಗೊಳಿಸಿತು. ಅಲನ್ ಕೊಸ್ತಾ ಗಳಿಸಿದ ಏಕೈಕ ಗೋಲಿನಿಂದ ಬಿಎಫ್‌ಸಿಯು 1–0ಯಿಂದ ನಾರ್ತ್‌ಈಸ್ಟ್ ಯುನೈಟೆಡ್ ವಿರುದ್ಧ ಗೆದ್ದಿತು. ಇದರೊಂದಿಗೆ ಲೀಗ್‌ನಲ್ಲಿ ಶುಭಾರಂಭ ಮಾಡಿತು.

ಬೆಂಗಳೂರಿನಲ್ಲಿರುವ ಈಶಾನ್ಯ ರಾಜ್ಯಗಳ ಫುಟ್‌ಬಾಲ್ ಅಭಿಮಾನಿಗಳೂ ಕ್ರೀಡಾಂಗಣದಲ್ಲಿ ಸೇರಿದ್ದರು. ನಾರ್ತ್‌ಈಸ್ಟ್ ತಂಡದ ಜೊತೆಗೆ ಚೆಟ್ರಿಯನ್ನೂ ಅವರು ಹುರಿದುಂಬಿಸಿದ್ದು ವಿಶೇಷವಾಗಿತ್ತು.

ಈ ವಾತಾವರಣದಲ್ಲಿ ಉಭಯ ತಂಡಗಳ ಆಟಗಾರರೂ ಜಿದ್ದಾಜಿದ್ದಿನ ಆಟವಾಡಿದರು. ಇದರ ಫಲವಾಗಿ 87 ನಿಮಿಷಗಳವರೆಗೆ ಯಾವ ತಂಡವೂ ಗೋಲು ಗಳಿಸಲಿಲ್ಲ. ಭಾರತದ ತಾರಾ ವರ್ಚಸ್ಸಿನ ಗೋಲ್‌ಕೀಪರ್ ಗುರುಪ್ರೀತ್ ಸಿಂಗ್ ಸಂಧು ಬಿಎಫ್‌ಸಿ ಗೋಲುವಲಯಕ್ಕೆ ಕಲ್ಲಿನ ಗೋಡೆಯಂತೆ ನಿಂತಿದ್ದರು.

ಚೆಟ್ರಿಯೊಂದಿಗೆ ಸಂದೇಶ್ ಜಿಂಗಾನ್ ಮತ್ತು ಆರ್. ಕೃಷ್ಣ ಅವರೂ ತಂಡದ ಹೋರಾಟಕ್ಕೆ ಬಲ ತುಂಬಿದರು.

87ನೇ ನಿಮಿಷದಲ್ಲಿ ಬ್ರೆಜಿಲ್ ದೇಶದ ಡಿಫೆಂಡರ್ ಅಲನ್ ಕೋಸ್ತಾ ಕಾಲ್ಚಳಕ ಮೆರೆದರು. ನಾರ್ತ್ ಈಸ್ಟ್ ತಂಡದ ರಕ್ಷಣಾಗೋಡೆಯನ್ನು ದಾಟಿ ಮುನ್ನುಗ್ಗಿದರು. ಗೋಲ್‌ಕೀಪರ್ ಅರಿಂದಮ್ ಭಟ್ಟಾಚಾರ್ಯ ಅವರನ್ನು ವಂಚಿಸಿದ ಕೋಸ್ತಾ ಗೋಲು ಗಳಿಸಿದರು.

ಬೆಂಗಳೂರು ಅಭಿಮಾನಿಗಳ ಸಂಭ್ರಮ ಮುಗಿಲುಮುಟ್ಟಿತು. ನಂತರದ ಆಟದಲ್ಲಿ ಚೆಟ್ರಿ ಬಳಗವು ರಕ್ಷಣೆಗೆ ಹೆಚ್ಚು ಒತ್ತು ನೀಡಿತು. ಇದರಿಂದಾಗಿ ಜಯ ಒಲಿಯಿತು.

ವೇಟ್‌ಲಿಫ್ಟಿಂಗ್: ಹರ್ಷದಾಗೆ ಕಂಚು

ಮನಾಮ (ಪಿಟಿಐ): ಭಾರತದ ವೇಟ್‌ಲಿಫ್ಟರ್ ಹರ್ಷದಾ ಗರುಡ್ ಅವರು ಇಲ್ಲಿ ನಡೆಯುತ್ತಿರುವ ಏಷ್ಯನ್ ವೇಟ್‌ಲಿಫ್ಟಿಂಗ್ ಚಾಂಪಿಯನ್‌ಷಿಪ್‌ನ ಮಹಿಳೆಯರ 45 ಕೆ.ಜಿ. ವಿಭಾಗದಲ್ಲಿ ಕಂಚು ಗೆದ್ದರು. ಶನಿವಾರ ನಡೆದ ಸ್ಪರ್ಧೆಯಲ್ಲಿ 18 ವರ್ಷದ ಅವರು ಒಟ್ಟು 152 ಕೆ.ಜಿ ಭಾರ ಎತ್ತಿದರು.

ರಾಷ್ಟ್ರೀಯ ಕ್ರೀಡಾಕೂಟ: ಸೈಕ್ಲಿಂಗ್ ಟೈಮ್ ಟ್ರಯಲ್‌ನಲ್ಲಿ ನವೀನ್‌ಗೆ ಚಿನ್ನ

ಈಜು: ಕರ್ನಾಟಕ ತಂಡಕ್ಕೆ 39 ಪದಕ

ಪ್ರಜಾವಾಣಿ ವಾರ್ತೆ



ರಾಷ್ಟ್ರೀಯ ಕ್ರೀಡಾಕೂಟದ ಈಜು ಸ್ಪರ್ಧೆಯಲ್ಲಿ ಅತಿಹೆಚ್ಚು ಪದಕ ಜಯಿಸಿದ ಕರ್ನಾಟಕ ತಂಡದವರು ಸಂಭ್ರಮಿಸಿದರು

ಬೆಂಗಳೂರು: ಈಜು ಸ್ಪರ್ಧೆಯಲ್ಲಿ ತಮ್ಮ ಸಾಮರ್ಥ್ಯವನ್ನು ಮತ್ತೊಮ್ಮೆ ತೋರಿಸಿಕೊಟ್ಟ ಕರ್ನಾಟಕದ ಈಜುಪಟುಗಳು ಗುಜರಾತ್‌ನಲ್ಲಿ ನಡೆಯುತ್ತಿರುವ 36ನೇ ರಾಷ್ಟ್ರೀಯ ಕ್ರೀಡಾಕೂಟದಲ್ಲಿ ಒಟ್ಟು 39 ಪದಕಗಳನ್ನು ಗೆದ್ದು ಸಂಭ್ರಮಿಸಿದರು.

ರಾಜ್‌ಕೋಟ್‌ನ ಸರ್ದಾರ್ ಪಟೇಲ್ ಈಜು ಕಾಂಪ್ಲೆಕ್ಸ್‌ನಲ್ಲಿ ಆಯೋಜಿಸಿದ್ದ ಈಜು ಸ್ಪರ್ಧೆಗಳಿಗೆ ಶನಿವಾರ ತೆರೆಬಿತ್ತು. ರಾಜ್ಯದ ಈಜುಪಟುಗಳು 19 ಚಿನ್ನ, 8 ಬೆಳ್ಳಿ ಮತ್ತು 12 ಕಂಚು ಗೆದ್ದುಕೊಂಡರು.

ಕೊನೆಯ ದಿನ ನಡೆದ ಪುರುಷರ 100 ಮೀ. ಫ್ರೀಸ್ಟೈಲ್ ಸ್ಪರ್ಧೆಯಲ್ಲಿ ಶ್ರೀಹರಿ ನಟರಾಜ್ ಅವರು 50.41 ಸೆಕೆಂಡುಗಳಲ್ಲಿ ಗುರಿ ತಲುಪಿ ಕೂಟ ದಾಖಲೆಯೊಂದಿಗೆ ಚಿನ್ನ ಗೆದ್ದರು. ಆ್ಯರನ್ ಡಿಸೋಜಾ (50.97 ಸೆ.) ಹೆಸರಿನಲ್ಲಿದ್ದ ದಾಖಲೆಯನ್ನು ಅವರು ಮುರಿದರು.

ಎಸ್.ರುಜುಲಾ ಅವರು ಮಹಿಳೆಯರ 100 ಮೀ. ಫ್ರೀಸ್ಟೈಲ್ ಸ್ಪರ್ಧೆಯಲ್ಲಿ 59.17 ಸೆ.ಗಳಲ್ಲಿ ಗುರಿ ತಲುಪಿ ಕಂಚು ಗೆದ್ದರು. ಈ ವಿಭಾಗದ ಚಿನ್ನವನ್ನು ಅಸ್ಸಾಂನ ಶಿವಾಂಗಿ ವರ್ಮಾ (58.77 ಸೆ.) ಜಯಿಸಿದರು.

ಮಿಶ್ರ ವಿಭಾಗದ 4X100 ಮೀ. ಮೆಡ್ಲೆ ರಿಲೇನಲ್ಲಿ ಕರ್ನಾಟಕ ಬೆಳ್ಳಿ ಜಯಿಸಿತು. ಎಸ್.ಶಿವ, ಮಾನವಿ ವರ್ಮಾ, ನೀನಾ ವೆಂಕಟೇಶ್ ಮತ್ತು ಶ್ರೀಹರಿ ನಟರಾಜ್ ಅವರನ್ನೊಳಗೊಂಡ ತಂಡ 4 ನಿ. 12.30 ಸೆ.ಗಳಲ್ಲಿ ಗುರಿ ತಲುಪಿತು.



ನವೀನ್‌ಗೆ ಸೈಕ್ಲಿಂಗ್ ಚಿನ್ನ: ಕರ್ನಾಟಕದ ಸೈಕ್ಲಿಸ್ಟ್ ನವೀನ್ ಜಾನ್ ಅವರು ಪುರುಷರ ವೈಯಕ್ತಿಕ ಟೈಮ್ ಟ್ರಯಲ್ ಸ್ಪರ್ಧೆಯಲ್ಲಿ ಚಿನ್ನ ಗೆದ್ದರು. ಗಾಂಧಿನಗರದಲ್ಲಿ ನಡೆದ 38 ಕಿ.ಮೀ. ಸ್ಪರ್ಧೆಯಲ್ಲಿ ಅವರು ಗೆಲುವಿನ ನಗು ಬೀರಿದರು.

ಹಾಕಿ ತಂಡ ಸೆಮಿಗೆ: ಕರ್ನಾಟಕ ಪುರುಷರ ಹಾಕಿ ತಂಡದವರು ಸೆಮಿಫೈನಲ್ ಪ್ರವೇಶಿಸಿದರು. ರಾಜ್‌ಕೋಟ್‌ನ ಮೇಜರ್ ಧ್ಯಾನ್‌ಚಂದ್ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಕ್ವಾರ್ಟರ್ ಫೈನಲ್‌ನಲ್ಲಿ ಕರ್ನಾಟಕ 11–2 ರಲ್ಲಿ ಅತಿಥೇಯ ಗುಜರಾತ್ ತಂಡವನ್ನು ಮಣಿಸಿತು.

ಮುಂದಿನ ಕ್ರೀಡಾಕೂಟ ಗೋವಾದಲ್ಲಿ

ನವದೆಹಲಿ (ಪಿಟಿಐ): 37ನೇ ರಾಷ್ಟ್ರೀಯ ಕ್ರೀಡಾಕೂಟ 2023ರ ಅಕ್ಟೋಬರ್‌ನಲ್ಲಿ ಗೋವಾದಲ್ಲಿ ನಡೆಯಲಿದೆ ಎಂದು ಭಾರತ ಒಲಿಂಪಿಕ್ ಸಂಸ್ಥೆ (ಐಒಎ) ತಿಳಿಸಿದೆ.

‘37ನೇ ರಾಷ್ಟ್ರೀಯ ಕ್ರೀಡಾಕೂಟದ ಆತಿಥ್ಯಕ್ಕೆ ಪೂರ್ಣ ಬೆಂಬಲ ನೀಡುವುದಾಗಿ ಗೋವಾ ಸರ್ಕಾರ ನಮಗೆ ತಿಳಿಸಿದೆ. ಗುಜರಾತ್‌ನಲ್ಲಿ ನಡೆಯುತ್ತಿರುವ 36ನೇ ಕ್ರೀಡಾಕೂಟದ ಸಮಾರೋಪ ಸಮಾರಂಭದಲ್ಲಿ ಅ.12 ರಂದು ಗೋವಾದ ನಿಯೋಗಕ್ಕೆ ಐಒಎ ಧ್ವಜವನ್ನು ಹಸ್ತಾಂತರಿಸಲಾಗುವುದು’ ಎಂದು ಐಒಎ ಕಾರ್ಯದರ್ಶಿ ರಾಜೀವ್ ಮೆಹ್ತಾ ಅವರು ಗೋವಾ ಕ್ರೀಡಾ ಇಲಾಖೆ ಕಾರ್ಯದರ್ಶಿ ಅಜಿತ್ ರಾಯ್ ಅವರಿಗೆ ಬರೆದ ಪತ್ರದಲ್ಲಿ ತಿಳಿಸಿದ್ದಾರೆ.

ಪಂಕಜ್‌ಗೆ 25ನೇ ವಿಶ್ವ ಕಿರೀಟ



ಪಂಕಜ್ ಅಡ್ವಾಣಿ

ಕ್ವಾಲಾಲಂಪುರ (ಪಿಟಿಐ): ಬೆಂಗಳೂರಿನ ಪಂಕಜ್ ಅಡ್ವಾಣಿ ಅವರು ಕ್ವಾಲಾಲಂಪುರದಲ್ಲಿ ನಡೆದ ಬಿಲಿಯರ್ಡ್ಸ್ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿ ಗೆದ್ದುಕೊಂಡರು. ಅವರ ವೃತ್ತಿಜೀವನದ 25ನೇ ವಿಶ್ವ ಕಿರೀಟ ಇದಾಗಿದೆ.

ಶನಿವಾರ ನಡೆದ ಫೈನಲ್‌ನಲ್ಲಿ ಪಂಕಜ್, ಭಾರತದವರೇ ಆದ ಸೌರವ್ ಕೊಠಾರಿ ಅವರನ್ನು 4–0 ಫ್ರೇಮ್‌ಗಳಿಂದ ಮಣಿಸಿದರು. ವಿಶ್ವ ಬಿಲಿಯರ್ಡ್ಸ್‌ನಲ್ಲಿ ಅವರು ಸತತ ಐದನೇ ಸಲ ಪ್ರಶಸ್ತಿ ಗೆದ್ದ ಸಾಧನೆ ಮಾಡಿದರು.

‘ಬೆಸ್ಟ್ ಆಫ್ 7’ ಫ್ರೇಮ್‌ಗಳ ಫೈನಲ್‌ನಲ್ಲಿ ಸೊಗಸಾದ ಪ್ರದರ್ಶನ ನೀಡಿದ ಅಡ್ವಾಣಿ, ನೇರ ಫ್ರೇಮ್‌ಗಳಿಂದ ಗೆದ್ದರು. ‘150 ಅಪ್’ ಅಂದರೆ ಮೊದಲು 150 ಪಾಯಿಂಟ್ಸ್ ಗಳಿಸುವ ಆಟಗಾರ ಫ್ರೇಮ್ ಗೆಲ್ಲುವ ಮಾದರಿಯಲ್ಲಿ ನಡೆದ ಫೈನಲ್‌ನಲ್ಲಿ ಅವರು 151–0, 150–31, 153–12, 150–29 ರಲ್ಲಿ ಜಯಿಸಿದರು.

ಮೊದಲ ಫ್ರೇಮ್‌ನಲ್ಲಿ ಒಂದೇ ಬ್ರೇಕ್‌ನಲ್ಲಿ ಅವರು 149 ಪಾಯಿಂಟ್ಸ್ ಗಳಿಸಿದರೆ, ಮೂರನೇ ಫ್ರೇಮ್‌ನ 153 ಪಾಯಿಂಟ್ಸ್‌ಗಳನ್ನೂ ಒಂದೇ ಬ್ರೇಕ್‌ನಲ್ಲಿ ಗಳಿಸಿ ತಮ್ಮ ಸಾಮರ್ಥ್ಯ ಏನೆಂಬುದನ್ನು ತೋರಿಸಿಕೊಟ್ಟರು.

ಅಡ್ವಾಣಿ ಅವರು ನಾಲ್ಕು ಫ್ರೇಮ್‌ಗಳಿಂದ 600ಕ್ಕೂ ಅಧಿಕ ಪಾಯಿಂಟ್ಸ್ ಕಲೆಹಾಕಿದರೆ, ಕೊಠಾರಿ ಕೇವಲ 72 ಪಾಯಿಂಟ್ಸ್ ಮಾತ್ರ ಗಳಿಸಿದರು.

‘ವಿಶ್ವ ಬಿಲಿಯರ್ಡ್ಸ್ ಪ್ರಶಸ್ತಿಯನ್ನು ಸತತ ಐದೇ ಸಲ ಗೆದ್ದಿರುವುದು ಸಂತಸ ಉಂಟುಮಾಡಿದೆ. ಈ ವರ್ಷ ಆಡಿದ ಎಲ್ಲ ಟೂರ್ನಿಗಳಲ್ಲೂ ನನ್ನ ಪ್ರದರ್ಶನ ತೃಪ್ತಿ ನೀಡಿದೆ’ ಎಂದು ಅಡ್ವಾಣಿ ಪ್ರತಿಕ್ರಿಯಿಸಿದ್ದಾರೆ. ಅಡ್ವಾಣಿ ಅವರ ಕೊನೆಯ ವಿಶ್ವ ಕಿರೀಟ 12 ತಿಂಗಳ ಹಿಂದೆ ಕತಾರ್‌ನಲ್ಲಿ ನಡೆದಿದ್ದ ಐಬಿಎಸ್‌ಎಫ್ ಸ್ನೂಕರ್ ವಿಶ್ವಕಪ್‌ನಲ್ಲಿ ಬಂದಿತ್ತು.

ಆರ್ಚರಿ: 13 ರಂದು ಆಯ್ಕೆ ಟ್ರಯಲ್ಸ್

ಬೆಂಗಳೂರು: ಕರ್ನಾಟಕ ಅಮೆಚೂರ್ ಆರ್ಚರಿ ಸಂಸ್ಥೆಯು ಪಣಜಿಯಲ್ಲಿ ನ.3 ರಿಂದ 12ರ ವರೆಗೆ ನಡೆಯಲಿರುವ 42ನೇ ರಾಷ್ಟ್ರೀಯ ಜೂನಿಯರ್ ಆರ್ಚರಿ ಚಾಂಪಿಯನ್‌ಷಿಪ್‌ನಲ್ಲಿ ಪಾಲ್ಗೊಳ್ಳಲಿರುವ ರಾಜ್ಯ ತಂಡದ ಆಯ್ಕೆಗೆ ಅ.13 ರಂದು ಟ್ರಯಲ್ಸ್ ಆಯೋಜಿಸಿದೆ.


ಇಲ್ಲಿನ ಕಂಠೀರವ ಕ್ರೀಡಾಂಗಣದ ಆರ್ಚರಿ ಮೈದಾನದಲ್ಲಿ ಬೆಳಿಗ್ಗೆ 8.30 ರಿಂದ ಟ್ರಯಲ್ಸ್ ನಡೆಯಲಿದೆ. 2002ರ ಜ.1 ಹಾಗೂ ಆ ಬಳಿಕ ಜನಿಸಿದವರು ರಾಷ್ಟ್ರೀಯ ಚಾಂಪಿಯನ್‌ಷಿಪ್‌ನಲ್ಲಿ ಪಾಲ್ಗೊಳ್ಳುವ ಅರ್ಹತೆ ಹೊಂದಿದ್ದಾರೆ.

ಕರ್ನಾಟಕ ಆರ್ಚರಿ ಸಂಸ್ಥೆಗೆ ನೋಂದಾಯಿತ ಸ್ಪರ್ಧಿಗಳು ಅ.12ರ ಒಳಗಾಗಿ ಹೆಸರು ನೋಂದಣಿ ಮಾಡಬಹುದು ಎಂದು ಪ್ರಕಟಣೆ ತಿಳಿಸಿದೆ.

ವಿಳಾಸ: ಟಿ. ಅನಂತರಾಜು, ಕಾರ್ಯದರ್ಶಿ, ಕರ್ನಾಟಕ ಅಮೆಚೂರ್ ಆರ್ಚರಿ ಸಂಸ್ಥೆ, ಒಲಿಂಪಿಕ್ ಭವನ, ಕಂಠೀರವ ಕ್ರೀಡಾಂಗಣ, ಬೆಂಗಳೂರು 560001. ದೂ: 080–22275656

ಸಂಕ್ಷಿಪ್ತ ಸುದ್ದಿ

ಎಂಬಪೆ ಗಳಿಕೆ ₹1,060 ಕೋಟಿ!



ಎಂಬಪೆ

ನ್ಯೂಯಾರ್ಕ್ (ಎಎಫ್‌ಪಿ): ಫ್ರಾನ್ಸ್ ಆಟಗಾರ ಕಿಲಿಯಾನ್ ಎಂಬಪೆ ಅವರು ವಾರ್ಷಿಕವಾಗಿ ಅತಿಹೆಚ್ಚು ಹಣ ಸಂಪಾದಿಸುವ ಫುಟ್‌ಬಾಲ್ ಆಟಗಾರರ ಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿದ್ದಾರೆ.

ಪ್ಯಾರಿಸ್– ಸೇಂಟ್ ಜರ್ಮೈನ್ (ಪಿಎಸ್‌ಜಿ) ಕ್ಲಬ್‌ಗೆ ಆಡುವ 23 ವರ್ಷದ ಸ್ಟ್ರೈಕರ್ ಎಂಬಪೆ ಅವರ ವಾರ್ಷಿಕ ಗಳಿಕೆ ₹ 1,060 ಕೋಟಿಯಷ್ಟಿದೆ ಎಂದು ಫೋಬ್ಸ್ ನಿಯತಕಾಲಿಕೆ ವರದಿ ಮಾಡಿದೆ.

ದಿಗ್ಗಜ ಆಟಗಾರರಾದ ಅರ್ಜೆಂಟೀನಾದ ಲಿಯೊನೆಲ್ ಮೆಸ್ಸಿ ಮತ್ತು ಪೋರ್ಚುಗಲ್‌ನ ಕ್ರಿಸ್ಟಿಯಾನೊ ರೊನಾಲ್ಡೊ ಅವರನ್ನು ಎಂಬಪೆ ಹಿಂದಿಕ್ಕಿದ್ದಾರೆ.

ಎಂಬಪೆ ಅವರು ಮೇ ತಿಂಗಳಲ್ಲಿ ಪಿಎಸ್‌ಜಿ ಕ್ಲಬ್ ಜತೆಗಿನ ಒಪ್ಪಂದವನ್ನು ಮೂರು ವರ್ಷಗಳ ಅವಧಿಗೆ ವಿಸ್ತರಿಸಿದ್ದರು. ಈ ಒಪ್ಪಂದದಿಂದಾಗಿ ಅವರು ಶ್ರೀಮಂತ ಆಟಗಾರರಾಗಿ ಹೊರಹೊಮ್ಮಿದ್ದಾರೆ.

ಅವರು ವೇತನ ಮತ್ತು ಬೋನಸ್ ರೂಪದಲ್ಲಿ ವಾರ್ಷಿಕ ₹ 911 ಕೋಟಿ ಹಾಗೂ ಜಾಹೀರಾತು ಮೂಲಗಳಿಂದ ₹ 149 ಕೋಟಿ ಗಳಿಸುತ್ತಿದ್ದಾರೆ ಎಂದು ವರದಿ ತಿಳಿಸಿದೆ.

ಎಂಬಪೆ ಜತೆ ಪಿಎಸ್‌ಜಿ ಕ್ಲಬ್‌ಗೆ ಆಡುವ 35 ವರ್ಷದ ಮೆಸ್ಸಿ ₹ 993 ಕೋಟಿ ವಾರ್ಷಿಕ ಗಳಿಕೆಯೊಂದಿಗೆ ಪಟ್ಟಿಯಲ್ಲಿ ಎರಡನೇ ಸ್ಥಾನದಲ್ಲಿದ್ದರೆ, ಮ್ಯಾಂಚೆಸ್ಟರ್ ಯುನೈಟೆಡ್ ಕ್ಲಬ್‌ಗೆ ಆಡುವ 37 ವರ್ಷದ ರೊನಾಲ್ಡೊ ₹ 828 ಕೋಟಿ ಗಳಿಕೆಯೊಂದಿಗೆ ಮೂರನೇ ಸ್ಥಾನದಲ್ಲಿದ್ದಾರೆ.

ಐಒಎಗೆ ಕಾರ್ಯದರ್ಶಿ ಬದಲು ಸಿಇಒ: ಐಒಸಿ ಪ್ರಸ್ತಾವ

ನವದೆಹಲಿ (ಪಿಟಿಐ): ಭಾರತ ಒಲಿಂಪಿಕ್ ಸಂಸ್ಥೆಯು (ಐಒಎ) ‘ಚುನಾಯಿತ ಮಹಾಪ್ರಧಾನ ಕಾರ್ಯದರ್ಶಿ’ ಬದಲು ‘ನೇಮಕಗೊಂಡ ಸಿಇಒ’ ಅವರನ್ನು ಹೊಂದಿರಬೇಕು ಎಂಬ ಪ್ರಸ್ತಾವವನ್ನು ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿ (ಐಒಸಿ) ಮುಂದಿಟ್ಟಿದೆ.

ಐಒಎಯ ಪ್ರತಿನಿಧಿಗಳು ಇತ್ತೀಚೆಗೆ ಸ್ವಿಟ್ಜರ್‌ಲೆಂಡ್‌ನ ಲಾಸನ್‌ನಲ್ಲಿ ಐಒಸಿ ಮತ್ತು ಏಷ್ಯಾ ಒಲಿಂಪಿಕ್ ಸಮಿತಿಯ ಅಧಿಕಾರಿಗಳ ಜತೆಗೆ ನಡೆಸಿದ ಸಭೆಯ ವೇಳೆ ಈ ಪ್ರಸ್ತಾವ ಮುಂದಿಡಲಾಗಿದೆ ಎಂದು ಮೂಲಗಳು ತಿಳಿಸಿವೆ. ಒಲಿಂಪಿಕ್ ಚಿನ್ನದ ಪದಕ ವಿಜೇತ ಶೂಟರ್ ಅಭಿನವ್ ಬಿಂದ್ರಾ ಅವರೂ ಸಭೆಯಲ್ಲಿ ಪಾಲ್ಗೊಂಡಿದ್ದರು.

ಕಾರ್ಯಕಾರಿ ಸಮಿತಿಯು ಕಾರ್ಯದರ್ಶಿಯನ್ನು ಆಯ್ಕೆ ಮಾಡುವ ಬದಲು ಸಿಇಒ ಅವರನ್ನು ನೇಮಿಸಬೇಕು ಎಂಬುದು ಐಒಸಿ ಮುಂದಿಟ್ಟಿರುವ ಪ್ರಮುಖ ಪ್ರಸ್ತಾವಗಳಲ್ಲಿ ಒಂದಾಗಿದೆ.

ಐಒಸಿಯ ಮಾರ್ಗಸೂಚಿಗಳ ಪ್ರಕಾರ ಸ್ವತಂತ್ರ ನೀತಿಸಂಹಿತೆ ಸಮಿತಿ ಮತ್ತು ಸರಿಯಾಗಿ ಕಾರ್ಯನಿರ್ವಹಿಸುವ ಅಥ್ಲೀಟ್‌ಗಳ ಸಮಿತಿಯನ್ನೂ ಹೊಂದಿರಬೇಕು ಎಂದು ಐಒಸಿಯು ಸೂಚಿಸಿದೆ.

ಡಿಸೆಂಬರ್ ಒಳಗಾಗಿ ಚುನಾವಣೆ ನಡೆಸಿ ಹೊಸ ಆಡಳಿತ ಮಂಡಳಿ ಅಸ್ತಿತ್ವಕ್ಕೆ ಬರದಿದ್ದರೆ, ಐಒಎಯನ್ನು ಅಮಾನತು ಮಾಡುವುದಾಗಿ ಐಒಸಿ ಸೆ.8 ರಂದು ಎಚ್ಚರಿಕೆ ನೀಡಿತ್ತು.